Downloaded from https:// www.studiestoday.com



ತೆಲಂಗಾಣ ಸರಕಾರ

ಮಹಿಳಾ ಅಭಿವೃದ್ಧಿ ಮತ್ತು ಶಿಶು ಕಲ್ಯಾಣ ಖಾತೆ - ಚೈಲ್ಡ್‌ಲೈನ್ ಫೌಂಡೇಷನ್

ಶಾಲೆಯಲ್ಲಾಗಲಿ, ಶಾಲೆಯ ಹೊರಗಾಗಲಿ ವೇದನೆಗೆ ಗುರಿ ಆಗುತ್ತಿದ್ದರೆ

ಆಪತ್ತಿನಲ್ಲಿ, ಕಷ್ಟದಲ್ಲಿ ಇರುವ ಮಕ್ಕಳನ್ನು ರಕ್ಷಿಸಲು

CHILD LINE 1098 NIGHT & DAY

24 HOUR NATIONAL HELPLINE

ಮಕ್ಕಳಿಂದ ಕೆಲಸ ಮಾಡಿಸುತ್ತಿರುವ ಅವರನ್ನು ಶಾಲೆಗೆ ಕಳಿಸದ ಬೇರೆ ಕೆಲಸಗಳಲ್ಲಿ ಉಪಯೋಗಿಸುತ್ತಿದ್ದರೆ

ಕುಟುಂಬದ ಸದಸ್ಯರಾಗಲಿ ಬಂಧುಗಳಾಗಲಿ ಇಷ್ಟವಿಲ್ಲದವರಾಗಿ ಅಸಭ್ಯವಾಗಿ ವರ್ತಿಸುತ್ತಿದ್ದರೆ

1098 (ಹತ್ತು - ಒಂಬತ್ತು - ಎಂಟು) ಉಚಿತ ಟೆಲಿಫೋನ್ ಸೇವಾ ಸೌಕರ್ಯಕ್ಕಾಗಿ ಫೋನ್ ಮಾಡಿರಿ.

ಪ್ರಚುರಣೆ :

ತೆಲಂಗಾಣ ಸರ್ಕಾರ, ಹೈದರಾಬಾದು

ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ

ಗಣಿತ

ತರಗತಿ - VI




# ಗಣಿತ

FREE

## ತರಗತಿ - VI

**MATHEMATICS**

Kannada Medium Class VI



ಪ್ರಚುರಣೆ

ತೆಲಂಗಾಣ ಸರ್ಕಾರ, ಹೈದರಾಬಾದ್

ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ

SCERT TELANGANA

Downloaded from https:// www.studiestoday.com

Downloaded from https:// www.studiestoday.com

## Literacy Rate in India: Census 2011

| State/UT Code | India/State/UT | Literate Persons (%) | Males (%) | Females (%) |
|---|---|---|---|---|
| 01 | Jammu & Kashmir | 68.74 | 78.26 | 58.01 |
| 02 | Himachal Pradesh | 83.78 | 90.83 | 76.60 |
| 03 | Punjab | 76.68 | 81.48 | 71.34 |
| 04 | Chandigarh | 86.43 | 90.54 | 81.38 |
| 05 | Uttarakhand | 79.63 | 88.33 | 70.70 |
| 06 | Haryana | 76.64 | 85.38 | 66.77 |
| 07 | NCT of Delhi | 86.34 | 91.03 | 80.93 |
| 08 | Rajasthan | 67.06 | 80.51 | 52.66 |
| 09 | Uttar Pradesh | 69.72 | 79.24 | 59.26 |
| 10 | Bihar | 63.82 | 73.39 | 53.33 |
| 11 | Sikkim | 82.20 | 87.29 | 76.43 |
| 12 | Arunachal Pradesh | 66.95 | 73.69 | 59.57 |
| 13 | Nagaland | 80.11 | 83.29 | 76.69 |
| 14 | Manipur | 79.85 | 86.49 | 73.17 |
| 15 | Mizoram | 91.58 | 93.72 | 89.40 |
| 16 | Tripura | 87.75 | 92.18 | 83.15 |
| 17 | Meghalaya | 75.48 | 77.17 | 73.78 |
| 18 | Assam | 73.18 | 78.81 | 67.27 |
| 19 | West Bengal | 77.08 | 82.67 | 71.16 |
| 20 | Jharkhand | 67.63 | 78.45 | 56.21 |
| 21 | Orissa | 73.45 | 82.40 | 64.36 |
| 22 | Chattisgarh | 71.04 | 81.45 | 60.59 |
| 23 | Madhya Pradesh | 70.63 | 80.53 | 60.02 |
| 24 | Gujarat | 79.31 | 87.23 | 70.73 |
| 25 | Daman & Diu | 87.07 | 91.48 | 79.59 |
| 26 | Dadra & Nagar Haveli | 77.65 | 86.46 | 65.93 |
| 27 | Maharashtra | 82.91 | 89.82 | 75.48 |
| 28 | Andhra Pradesh | 67.66 | 75.56 | 59.74 |
| 29 | Karnataka | 75.60 | 82.85 | 68.13 |
| 30 | Goa | 87.40 | 92.81 | 81.84 |
| 31 | Lakshadweep | 92.28 | 96.11 | 88.25 |
| 32 | Kerala | 93.91 | 96.02 | 91.98 |
| 33 | Tamil Nadu | 80.33 | 86.81 | 73.86 |
| 34 | Pondicherry | 86.55 | 92.12 | 81.22 |
| 35 | Andaman & Nicobar Islands | 86.27 | 90.11 | 81.84 |
| | **INDIA** | 74.04 | 82.14 | 65.46 |

SCERT TELANGANA

Downloaded from https:// www.studiestoday.com

Downloaded from https:// www.studiestoday.com

# ಗಣಿತ

## 6ನೇ ತರಗತಿ

**Mathematics**

**Class - VI (Kannada Medium)**

## ಪಠ್ಯಪುಸ್ತಕ ಅಭಿವೃದ್ಧಿ ಮತ್ತು ಪ್ರಚುರಣಾ ಸಮಿತಿ

**ಪ್ರಧಾನ ನಿರ್ವಹಣಾಧಿಕಾರಿ**
**ಶ್ರೀಮತಿ ಬಿ. ಶೇಷುಕುಮಾರಿ**
ನಿರ್ದೇಶಕರು, ಎಸ್.ಸಿ.ಇ.ಆರ್.ಟಿ, ಹೈದರಾಬಾದ್.

**ವ್ಯವಹಾರ ನಿರ್ವಾಹಕರು**
**ಡಾ॥ ನನ್ನೂರು ಉಪೇಂದರ್ ರೆಡ್ಡಿ**
ಪ್ರೋಫೆಸರ್ ಕರಿಕುಲಮ್ ಮತ್ತು ಪಠ್ಯಪುಸ್ತಕ ವಿಭಾಗ
ಎಸ್.ಸಿ.ಇ.ಆರ್.ಟಿ., ಹೈದರಾಬಾದ್.

**ಪ್ರಧಾನ ವ್ಯವಹಾರ ನಿರ್ವಾಹಕರು**
**ಶ್ರೀ ಬಿ. ಸುಧಾಕರ,** ನಿರ್ದೇಶಕರು,
ಸರ್ಕಾರಿ ಪಠ್ಯಪುಸ್ತಕ ಮುದ್ರಣ, ಹೈದರಾಬಾದ್.

**ಸಹಾಯಕ ನಿರ್ವಾಹಕರು**
**ಶ್ರೀ ಕೆ. ಯಾದಗಿರಿ,** ಉಪನ್ಯಾಸಕರು,
ಎಸ್.ಸಿ.ಇ.ಆರ್.ಟಿ, ಹೈದರಾಬಾದ್.

**ಕೋಆರ್ಡಿನೇಟರ್**

**ಶ್ರೀ ಕೆ.ಕೆ.ವಿ.ರಾಯಲು,** ಉಪನ್ಯಾಸಕರು,
ಎಸ್.ಸಿ.ಇ.ಆರ್.ಟಿ, ಹೈದರಾಬಾದ್.

**ಶ್ರೀ ಕಾಕುಳವರಂ ರಾಜೇಂದರ್ ರೆಡ್ಡಿ,**
ಕೋಆರ್ಡಿನೇಟರ್, ಎಸ್.ಸಿ.ಇ.ಆರ್.ಟಿ. ಹೈದರಾಬಾದ್.

**ಸಂಪಾದಕರು**

**ಶ್ರೀಮತಿ ಬಿ. ಶೇಷುಕುಮಾರಿ,** ನಿರ್ದೇಶಕರು, ಎಸ್.ಸಿ.ಇ.ಆರ್.ಟಿ, ಹೈದರಾಬಾದ್.
**ಶ್ರೀ ಕೆ. ಬ್ರಹ್ಮಯ್ಯ,** ಪ್ರೋಫೆಸರ್, ಎಸ್.ಸಿ.ಇ.ಆರ್.ಟಿ, ಹೈದರಾಬಾದ್.
**ಶ್ರೀ ಪಿ. ಆದಿನಾರಾಯಣ,** ರಿಟೈರ್ಡ್ ಲೆಕ್ಚರರ್, ನ್ಯೂಸೈನ್ಸ್ ಕಾಲೇಜ್, ಅಮೀರಪೇಟ್, ಹೈದರಾಬಾದ್.

**ಚೈರ್ಮನ್, ಗಣಿತ ಆಧಾರ ಪತ್ರ, ಗಣಿತ ಪಠ್ಯಕ್ರಮ, ಪಾಠ್ಯಪುಸ್ತಕ ಅಭಿವೃದ್ಧಿ ಕಮಿಟಿ**
**ಪ್ರೋಫೆಸರ್. ವಿ. ಕನ್ನನ್,** ಗಣಿತ – ಸಂಖ್ಯಾಶಾಸ್ತ್ರ ವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ.

**ಮುಖ್ಯ ಸಲಹೆದಾರರು**
**ಡಾ॥ ಹೆಚ್.ಕೆ. ದಿವಾನ್,** ವಿದ್ಯಾ ಸಲಹಾದಾರರು, ವಿದ್ಯಾಭವನ್ ಸೊಸೈಟಿ, ರಿಸೋರ್ಸ್ ಸೆಂಟರ್,
ಉದಯಪುರ, ರಾಜಸ್ಥಾನ.



ಮುದ್ರಣ

**ತೆಲಂಗಾಣ ಸರ್ಕಾರದ, ಹೈದರಾಬಾದ್**

ಕಾನೂನನ್ನು ಗೌರವಿಸಿ
ಹಕ್ಕುಗಳನ್ನು ಪಡೆದುಕೊಳ್ಳಿ

ಶಿಕ್ಷಣದಿಂದ ಬೆಳೆಯಿರಿ
ವಿನಯಶೀಲರಾಗಿ ನಡೆದುಕೊಳ್ಳಿ



SCERT TELANGANA

Downloaded from https:// www.studiestoday.com

Downloaded from https:// www.studiestoday.com

© Government of Telangana, Hyderabad.

*First Published 2012*
*New Impressions 2013, 2014, 2015, 2016, 2017, 2018, 2019*

All rights reserved.

No part of this publication may be reproduced, stored in a retrieval system, or transmitted, in any form or by any means without the prior permission in writing of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purchaser.

The copy right holder of this book is the Director of School Education, Hyderabad, Telangana.

This Book has been printed on 70 G.S.M. Maplitho Title Page 200 G.S.M. White Art Card

ತೆಲಂಗಾಣ ಸರ್ಕಾರದ ಉಚಿತ ವಿತರಣೆ 2019-20

*Printed in India*
at the Telangana Govt. Text Book Press,
Mint Compound, Hyderabad,
Telangana.

— o —



Downloaded from https:// www.studiestoday.com

Downloaded from https:// www.studiestoday.com

# ಪಠ್ಯಪುಸ್ತಕ ಅಭಿವೃದ್ಧಿ ಸಮಿತಿ

## ಸದಸ್ಯರು

**ಡಾ॥ ಪಿ.ರಮೇಶ್,** ಉಪನ್ಯಾಸಕರು, ಸರ್ಕಾರ ಐ.ಎ.ಎಸ್.ಇ, ನೆಲ್ಲೂರು.

**ಶ್ರೀ ಎಂ. ರಾಮಾಂಜನೇಯಲು,** ಉಪನ್ಯಾಸಕರು, ಡಯಟ್, ವಿಕಾರಾಬಾದ್, ರಂಗಾರೆಡ್ಡಿ.

**ಶ್ರೀ ಟಿ.ವಿ. ರಾಮ್ ಕುಮಾರ್,** ಮುಖ್ಯಗುರುಗಳು, ಜಡ್.ಪಿ.ಹೆಚ್.ಎಸ್., ಮುಲುಮುಡಿ, ನೆಲ್ಲೂರು.

**ಶ್ರೀ ಪಿ. ಅಶೋಕ್,** ಮುಖ್ಯಗುರುಗಳು, ಜಡ್.ಪಿ.ಹೆಚ್.ಎಸ್., ಕುಮಾರಿ, ಆದಿಲಾಬಾದ್.

**ಶ್ರೀ ಪಿ. ಆಂಥೋನಿ ರೆಡ್ಡಿ,** ಮುಖ್ಯಗುರುಗಳು, ಸೆಂಟ್ ಪೀಟರ್ಸ್ ಪ್ರೌಢಶಾಲೆ, ಆರ್.ಎನ್.ಪೇಟ, ನೆಲ್ಲೂರು.

**ಶ್ರೀ ಎಸ್. ಪ್ರಸಾದ್‌ಬಾಬು,** ಪಿ.ಜಿ.ಟಿ, ಎ.ಪಿ.ಟಿ.ಡಬ್ಲ್ಯೂ.ಆರ್ ಶಾಲೆ, ಚಂದ್ರಶೇಖರಪುರಂ, ನೆಲ್ಲೂರು.

**ಶ್ರೀ ಜಿ.ವಿ.ಬಿ. ಸೂರುನಾರಾಯಣರಾಜು,** ಸಹಶಿಕ್ಷಕರು, ಮುನಿಸಿಪಲ್ ಪ್ರೌಢಶಾಲೆ, ಕಸ್ಬಾ, ವಿಜಯನಗರಂ.

**ಶ್ರೀ ಎಸ್. ನರಸಿಂಹಮೂರ್ತಿ,** ಸಹಶಿಕ್ಷಕರು, ಜಡ್.ಪಿ.ಹೆಚ್.ಎಸ್, ಮುದಿವರ್ತಿಪಾಲೆಂ,ನೆಲ್ಲೂರು.

**ಶ್ರೀ ಪಿ. ಸುರೇಶ್‌ಕುಮಾರ್,** ಸಹಶಿಕ್ಷಕರು, ಜಿ.ಹೆಚ್.ಎಸ್, ವಿಜಯನಗರ ಕಾಲೋನಿ, ಹೈದರಾಬಾದ್.

**ಶ್ರೀ ಕೆ.ವಿ.ಸುಂದರರೆಡ್ಡಿ,**ಸಹಶಿಕ್ಷಕರು, ಜಡ್.ಪಿ.ಹೆಚ್.ಎಸ್, ತಕ್ಕಶಿಲಾ ಅಲಂಪುರ್ ಮಂಡಲ, ಮಹಬೂಬ್‌ನಗರ್.

**ಶ್ರೀ ಜಿ.ವೆಂಕಟೇಶ್ವರುಲು,** ಸಹಶಿಕ್ಷಕರು, ಜಡ್.ಪಿ.ಹೆಚ್.ಎಸ್, ವೇಮುಲಕೋಟ, ಪ್ರಕಾಶಂ.

**ಶ್ರೀ ಚಿ.ರಮೇಶ್,** ಸಹಶಿಕ್ಷಕರು,ಯು.ಪಿ.ಎಸ್, ನಗರಂ ಮಂಡಲ, ಗುಂಟೂರು.

**ಶ್ರೀ ಪಿ.ಡಿ.ಎಲ್. ಗಣಪತಿ ಶರ್ಮ,** ಸಹಶಿಕ್ಷಕರು,ಜಿ.ಹೆಚ್.ಎಸ್, ಜಮಿಸ್ತಾನ್‌ಪುರ್, ಮಣಿಕೇಶ್ವರನಗರ, ಹೈದರಾಬಾದ್.

**ಶ್ರೀ ಕಾಕುಳಂ ರಾಜೇಂದರ್ ರೆಡ್ಡಿ,** ಕೋಆರ್ಡಿನೇಟರ್, ಎಸ್.ಸಿ.ಇ.ಆರ್.ಟಿ.ಹೈದರಾಬಾದ್.

### ಶೈಕ್ಷಣಿಕ ಸಹಾಯ ಸಮಿತಿ ಸದಸ್ಯರು

**ಶ್ರೀಮತಿ ನಮ್ರಿತಾ ಬಾತ್ರ,** ವಿದ್ಯಾಭವನ್ ಸೊಸೈಟಿ ಸಂಪನ್ಮೂಲ ಕೇಂದ್ರ, ಉದಯಪುರ್, ರಾಜಸ್ಥಾನ.

**ಶ್ರೀ ಇಂದ್ರಮೋಹನ್,** ವಿದ್ಯಾಭವನ್ ಸೊಸೈಟಿ ಸಂಪನ್ಮೂಲ ಕೇಂದ್ರ, ಉದಯಪುರ್, ರಾಜಸ್ಥಾನ.

**ಶ್ರೀ ಯಶವಂತ್ ಕುಮಾರ್ ದವೆ,** ವಿದ್ಯಾಭವನ್ ಸೊಸೈಟಿ ಸಂಪನ್ಮೂಲ ಕೇಂದ್ರ, ಉದಯಪುರ್, ರಾಜಸ್ಥಾನ.

**ಶ್ರೀಮತಿ ಪದ್ಮಪ್ರಿಯ ಶಿರಾಲಿ,** ಗಣಿತ ಸಮೂಹ ಕೇಂದ್ರ, ರಿಷಿವ್ಯಾಲಿ ಶಾಲೆ, ಚಿತ್ತೂರು.

**ಕು॥ ಎಂ. ಅರ್ಚನಾ,** ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ

**ಶ್ರೀ ಶರಣ್‌ಗೋಪಾಲ್,** ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ

**ಶ್ರೀ ಪಿ. ಚಿರಂಜೀವಿ,** ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ

**ಶ್ರೀ ಅಬ್ಬರಾಜು ಕಿಶೋರ್,** ಎಸ್.ಜಿ.ಟಿ, ಎಂ.ಪಿ.ಯು.ಪಿ.ಎಸ್, ಚಮಳ್ಳಮೂಡಿ, ಗುಂಟೂರು.

### ಕನ್ನಡ ಅನುವಾದಕರು

**ಶ್ರೀ ಪಿ. ನಾಗರಾಜ,** ಎಸ್.ಎ., ಜಡ್.ಪಿ.ಹೆಚ್.ಎಸ್. ಕೃಷ್ಣ, ಜಿಲ್ಲಾ ಮಹಬೂಬನಗರ್.

**ಶ್ರೀ ಸೋಮನಾಥ ರೆಡ್ಡಿ,** ಎಸ್.ಎ., ಜಡ್.ಪಿ.ಹೆಚ್.ಎಸ್. ಕೃಷ್ಣ, ಜಿಲ್ಲಾ ಮಹಬೂಬನಗರ್.

**ಶ್ರೀ ಹೆಚ್.ಕೆ. ರಂಗಾರಾವು,** ಎಸ್.ಎ., ಎಮ್.ಪಿ.ಯು.ಪಿ.ಎಸ್., ತಂಗಡ್ಗಿ.

### ರೇಖಾಚಿತ್ರ ಮತ್ತು ವಿನ್ಯಾಸ ಸಮಿತಿ

**ಶ್ರೀ ಕೆ. ಸುಧಾಕರಾಚಾರಿ,** ಮುಖ್ಯ ಶಿಕ್ಷಕರು, ಯು.ಪಿ.ಎಸ್. ನೀಲಿಕುರ್ತಿ ಮಂಡಲ ಮರಿಪೇಡ, ಜಿಲ್ಲಾ ವರಂಗಲ್.



SCERT TELANGANA

Downloaded from https:// www.studiestoday.com

Downloaded from https:// www.studiestoday.com

# ಮುನ್ನುಡಿ.

ಮಕ್ಕಳ ಪಾಠಶಾಲೆ ಜೀವನ ಅವರ ದೈನಂದಿನ ಜೀವನಕ್ಕೆ ಮೇಳೈಸಿರಬೇಕೆಂದು ರಾಜ್ಯ ಪ್ರಣಾಳಿಕೆ ಪರಿಧಿ ಪತ್ರ–2011 (SCF-2011) ಸೂಚಿಸುತ್ತಿದೆ. ಶಾಲೆಯಲ್ಲಿ ಸೇರಿದ ಪ್ರತಿ ವಿದ್ಯಾರ್ಥಿ ಆಯಾ ಹಂತಗಳಲ್ಲಿ ಅವಶ್ಯಕವಾಗಿರುವ ಕೌಶಲ್ಯಗಳನ್ನು ಪಡೆಯಬೇಕೆಂದು ವಿದ್ಯಾಹಕ್ಕು ಕಾಯಿದೆ–2009 ನಿರ್ದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ವಿದ್ಯೆಯಲ್ಲಿ ನಾಣ್ಯತೆಯನ್ನು ಸಾಧಿಸುವುದಕ್ಕಾಗಿ ಪ್ರತಿ ಪಠ್ಯ ವಿಷಯದಲ್ಲಿ ವಿದ್ಯಾಪ್ರಮಾಣಗಳನ್ನು ರೂಪಿಸಲಾಗಿದೆ. ರಾಷ್ಟ್ರೀಯ ವಿದ್ಯಾ ಪ್ರಣಾಳಿಕೆ ಕಾಯಿದೆ 2005 ಮುಖ್ಯ ಉದ್ದೇಶದ ಅನ್ವಯದ ಪ್ರಾಧಾನ್ಯತೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ರಾಜ್ಯ ವಿದ್ಯಾಪ್ರಣಾಳಿಕೆ ಪರಿಧಿ ಪತ್ರ 2011 ಆಧಾರವಾಗಿ ಗಣಿತ ಪಾಠ್ಯ ವಿಷಯ ಪ್ರಮಾಳಿಕೆ ಮತ್ತು ಪಾಠ್ಯಪುಸ್ತಕಗಳು ರೂಪೊಂದಿಸಲಾಗಿದೆ.

ಮಕ್ಕಳು ಪ್ರಾಥಮಿಕ ವಿದ್ಯೆಯನ್ನು ಮುಗಿಸಿಕೊಂಡು, ಪ್ರಾಥಮಿಕೋನ್ನತ ಹಂತಕ್ಕೆ ತಲುಪುತ್ತಾರೆ. ಈ ಹಂತದ ಸೆಕಂಡರೀ ವಿದ್ಯನು ಮುಂದುವರೆಸುವುದಕ್ಕೆ ಪ್ರಮುಖವಾದ ಸೇತುವೆ ಆಗಿರುತ್ತದೆ. ಮಕ್ಕಳು ಸ್ವತಂತ್ರ್ಯವಾಗಿ ಹಿರಿಯರೊಂದಿಗೆ, ಸಾಮಗ್ರಿಗಳೊಂದಿಗೆ, ಜತೆಗಾರರೊಂದಿಗೆ ಸಂವಹನೆ ನಡೆಸುವುದು, ವಿವಿಧ ಸನ್ನಿವೇಶಗಳಲ್ಲಿ ಪ್ರಕ್ರಿಯೆಗಳಲ್ಲಿ ಪರಸ್ಪರ ಸಹಕರಿಸಿಕೊಳ್ಳುತ್ತಾ ಭಾಗವಹಿಸುವ ಅವಕಾಶ ಲಭಿಸುವುದರಿಂದ, ಅನ್ವೇಷಣೆಯಿಂದ ನೂತನ ಜ್ಞಾನವನ್ನು ನಿರ್ಮಿಸಿಕೊಳ್ಳುವರು ಎಂದು ನಾವು ಗುರ್ತಿಸಿದ್ದೇವೆ. ಮಕ್ಕಳು ಕೇವಲ ನಿಷ್ಕ್ರೀಯಾತ್ಮಕ ಗ್ರಹೀತರಾಗಿ ಇರದೇ, ಅಭ್ಯಸನದಲ್ಲಿ ಭಾಗಸ್ವಾಮಿ ಎಂದು ಭಾವಿಸಿದಾಗ ಅವರಲ್ಲಿ ಸೃಜನಾತ್ಮಕತೆ ಮತ್ತು ಇತರೆ ಕೌಶಲ್ಯಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಮಕ್ಕಳು ಈ ಹಂತದಲ್ಲಿ ಉತ್ಸಾಹ, ಆಸಕ್ತಿ, ಪ್ರಶ್ನಿಸುವ ತತ್ವ, ಕಾರಣಗಳನ್ನು ಹುಡುಕುವುದು, ಸಮಸ್ಯೆಗಳನ್ನು ಎದುರಿಸುವ ಲಕ್ಷಣಗಳನ್ನು ಹೊಂದಿರುತ್ತಾರೆ. ಆದ್ದರಿಂದ ಆನಂದದಾಯಕವಾಗಿ ಮಕ್ಕಳು ವಿವಿಧ ಭಾವನೆಗಳನ್ನು ಅನ್ವೇಷಿಸುವುದಕ್ಕೆ ತಮ್ಮ ಸ್ವಂತ ಶೈಲಿಯಲ್ಲಿ ಸಮಸ್ಯಾಸಾಧನೆ ಮಾಡುವುದಕ್ಕೆ ಅನುಕೂಲವಾಗಿ ಗಣಿತಶಾಸ್ತ್ರ ಬೋಧನೆಯನ್ನು ಅಭಿವೃದ್ಧಿಗೊಳಿಸುವ ಅಗತ್ಯ ಇದೆ. ಅಮೂರ್ತ ಹಂತದಲ್ಲಿರುವ ಗಣಿತ ಭಾವನೆಗಳನ್ನು ಮಕ್ಕಳು ಅರ್ಥೈಸಿಕೊಂಡು, ಸ್ವಂತವಾಗಿ ಗಣಿತಜ್ಞಾನವನ್ನು ನಿರ್ಮಿಸಿಕೊಳ್ಳುವ ಸಾಮರ್ಥ್ಯಕ್ಕೆ ಸಹಾಯಕವಾಗುವ ಅಭಿವೃದ್ಧಿ ಕಾರ್ಯಕ್ರಮಕ್ಕೆ ನಾವು ಶ್ರೀಕಾರ ಹಾಕೋಣ.

ಗಣಿತದಲ್ಲಿನ ಪ್ರಧಾನ ಅಂಶಗಳಾದ ಸಂಖ್ಯಾವ್ಯವಸ್ಥೆ, ಬೀಜಗಣಿತ, ರೇಖಾಗಣಿತ, ಅಂಕಗಣಿತ, ಕ್ಷೇತ್ರಗಣಿತ ಮುಂತಾದವುಗಳನ್ನು ಪ್ರಾಥಮಿಕೋನ್ನತ ಹಂತದಲ್ಲಿ ಸೇರಿಸಲಾಗಿದೆ.

ಈ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಬೋಧಿಸುವುದರಿಂದ ಪರಿಷ್ಕಾರ, ತಾರ್ಕಿಕ ಆಲೋಚನೆಗಳು, ನಿತ್ಯಸತ್ಯಗಳನ್ನು ಗಣಿತ ಭಾಷೆಯಲ್ಲಿ ವ್ಯಕ್ತೀಕರಿಸುವುದು, ಶೇಕರಿಸಿದ ದತ್ತಾಂಶವನ್ನು ವಿಶ್ಲೇಷಿಸುವುದು, ವಿವಿಧ ರೂಪಗಳಲ್ಲಿ ಪ್ರದರ್ಶಿಸುವುದು, ನಿತ್ಯಜೀವನದಲ್ಲಿ ಗಣಿತವನ್ನು ಉಪಯೋಗಿಸುವುದು ತದಿತರ ನಿರ್ಣೀತ ಪ್ರಮಾಣಗಳು, ಕೌಶಲ್ಯಗಳು ಅಭಿವೃದ್ಧಿಯಾಗುತ್ತವೆ. ಪುಸ್ತಕದಲ್ಲಿ ಸೇರಿಸಿದ "ಇವು ಮಾಡಿರಿ", "ಪ್ರಯತ್ನಿಸಿ", ಪ್ರಾಕಲ್ಪನೆ ತದಿತರ ಅಂಶಗಳಿಗೆ ಅಧಿಕ ಪ್ರಾಧಾನ್ಯತೆ ಕೊಟ್ಟು ಮಕ್ಕಳು ಸ್ವಂತವಾಗಿ ಕಲಿಯುವಂತೆ ಮಾಡುವುದಕ್ಕೆ, ಗುಂಪುಗಳಲ್ಲಿ ಪ್ರಯತ್ನಿಸುವುದಕ್ಕೆ ಈ ಪಾಠ್ಯಪುಸ್ತಕ ಅವಕಾಶ ಕೊಡುತ್ತದೆ.



Downloaded from https:// www.studiestoday.com

Downloaded from https:// www.studiestoday.com

ಈ ಪುಸ್ತಕ ಸರಳವಾದ ಭಾಷೆ, ಪದಜಾಲ ಇರುವುದರಿಂದ ಮಕ್ಕಳ ಮೇಧಸ್ಸು, ಗಣಿತ ಭಾವನೆಗಳನ್ನು ಉಪಯೋಗಿಸುವುದಕ್ಕೆ ತಾವೇ ಸ್ವಯಂ ಗಣಿತ ಸ್ವರೂಪಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಅವಕಾಶವನ್ನು ಕೊಡುತ್ತದೆ. ಪುಸ್ತಕದಲ್ಲಿನ ವಿವಿಧ ಉದಾಹರಣೆಗಳು ಮಕ್ಕಳು ತಮ್ಮಷ್ಟಕ್ಕೆ ತಾವೇ ಸ್ವಂತವಾಗಿ ಸಮಸ್ಯೆಗಳನ್ನು ತಯಾರಿಸಿಕೊಳ್ಳುವುದಕ್ಕೆ ಸಹಾಯಕವಾಗಿದೆ. ಇವುಗಳನ್ನು ಈಡೇರಿಸುವುದಕ್ಕೆ ತರಗತಿಯಲ್ಲಿ ಶಿಕ್ಷಕರು ಅಗತ್ಯವದ ಸಂದರ್ಭಗಳನ್ನು ಏರ್ಪಡಿಸಿ, ಸಹಾಯ ಸಹಕಾರವನ್ನು ನೀಡುವುದು ಅತ್ಯಂತ ಅವಶ್ಯಕವಾಗಿದೆ. ಮೌಲ್ಯಮಾಪನ ಕೂಡಾ ಕಲಿಯಬೇಕೆನ್ನುವ ಉದ್ದೇಶದಿಂದ ಪ್ರತಿ ಅಭ್ಯಾಸದ ಅಂಶವನ್ನು ನಿರಂತರ ಸಮಗ್ರ ಮೌಲ್ಯಮಾಪನದಿಂದ ಅಂದಾಜಿಸುವ ಹಾಗೇ ಅಧ್ಯಾಯಗಳನ್ನು ರೂಪಿಸಲಾಗಿದೆ.

ಈ ಪುಸ್ತಕವನ್ನು ರೂಪಿಸುವುದಲ್ಲಿ ವಿಷಯತಜ್ಞರು, ಬಹಳ ಕಾಲದ ವರೆಗೆ ಪರಿಶ್ರಮಿಸಿದ್ದಾರೆ. ಅನುಭವ ಇರುವ ಶಿಕ್ಷಕರು ಭಾಗವಹಿಸಿದ್ದಾರೆ. ಅವರೆಲ್ಲ ಮಕ್ಕಳಲ್ಲಿರುವ ಗಣಿತದ ಭಯವನ್ನು ಹೋಗಲಾಡಿಸಲು ಕೃಷಿ ಮಾಡಿದ್ದಾರೆ. ಈ ಪುಸ್ತಕಕ್ಕೆ ಕೊನೆಯ ರೂಪ ನೀಡುವುದರಲ್ಲಿ ಸಹಾಯ ಸಹಕಾರ ನೀಡಿದ ರಾಷ್ಟ್ರೀಯ ವಿಷಯ ನಿಪುಣರಿಗೆ, ವಿಶ್ವವಿದ್ಯಾಲಯ ಆಚಾರ್ಯರಿಗೆ, ಪರಿಶೋಧಕ ವಿದ್ಯಾರ್ಥಿಗಳು, ಸರ್ಕಾರೇತರ ಸಂಸ್ಥೆಗಳು, ವಿದ್ಯಾಧಿಕಾರಿಗಳು, ಪ್ರಧಾನ ಶಿಕ್ಷಕರು, ಬರಹಗಾರರು, ವಿದ್ಯಾರ್ಥಿಗಳು, ಮುದ್ರಣೆ ಸಂಸ್ಥೆ ಅವರಿಗೆ ಪುಸ್ತಕ ರೂಪಕಲ್ಪನೆಯ ನಿಪುಣರಿಗೆ ಪ್ರತ್ಯೇಕ ಕೃತಜ್ಞತೆಗಳು. ಶಿಕ್ಷಕಲೋಕ, ಪುಸ್ತಕದಲ್ಲಿ ಸೇರಿಸಿದ ಅಂಶಗಳಿಂದ ವಿದ್ಯಾಪ್ರಮಾಣಗಳನ್ನು ಸಾಧಿಸುವ ಕ್ರಮದಲ್ಲಿ ಮನಃಪೂರ್ವಕ ಪ್ರಯತ್ನ ಮಾಡುವಿರೆಂದು ಆಶಿಸುತ್ತಿದ್ದೇನೆ. ಪುಸ್ತಕಾಭಿವೃದ್ಧಿ ನಿರಂತರವಾದ ಪ್ರಕ್ರಿಯೆ, ಎಲ್ಲರ ಕೃಷಿ ಫಲಿತವಾಗಿ ಈ ಪುಸ್ತಕ ತಯಾರಾಗಿದೆ. ರಾಜ್ಯವಿದ್ಯ, ಪರಿಶೋಧನೆ, ಶಿಕ್ಷಣ ಸಂಸ್ಥೆ ಒಂದು ವ್ಯವಸ್ಥಾಗತ ಸಂಸ್ಕರಣೆಯಿಂದ ಕೂಡಿದ ನಾಣ್ಯವಾದ ಪಠ್ಯಪುಸ್ತಕಗಳನ್ನು ನೀಡುವುದಕ್ಕೆ ಕೃಷಿ ಮಾಡುತ್ತಿದೆ. ಇದರಲ್ಲಿ ಭಾಗವಾಗಿ ಗಣಿತಪ್ರಿಯರಿಂದ ಸೂಕ್ತ ಸಲಹೆಗಳು, ಸೂಚನೆಗಳನ್ನು ಆಹ್ವಾನಿಸುತ್ತದೆ. ಇವುಗಳನ್ನು ಪರಿಗಣನೆಗೆ ತೆಗೆದುಕೊಂಡು ಇನಷ್ಟು ಗುಣಮಟ್ಟವನ್ನು ಆವಿಷ್ಕರಿಸುವುದಕ್ಕೆ ಕೃಷಿ ಮಾಡುತ್ತಿದೆ.

**ದಿನಾಂಕ : 28 ಜನವರಿ 2012**
**ಸ್ಥಳ : ಹೈದರಾಬಾದ್**

**ಶ್ರೀಮತಿ ಬಿ. ಶೇಷುಕುಮಾರಿ,**
**ರಾಜ್ಯ ವಿದ್ಯೆ, ಪರಿಶೋಧನೆ, ಶಿಕ್ಷಣ ಸಂಸ್ಥೆ,**
**ಹೈದರಾಬಾದ್.**



SCERT TELANGANA

Downloaded from https:// www.studiestoday.com

Downloaded from https:// www.studiestoday.com

# PREAMBLE

**THE PEOPLE OF INDIA, having solemnly resolved to constitute India into a SOVEREIGN SOCIALIST SECULAR DEMOCRATIC REPUBLIC and to secure to all its citizens:**

**JUSTICE, social, economic and political;**

**LIBERTY of thought, expression, belief, faith and worship;**

**EQUALITY of status and of opportunity; and to promote among them all**

**FRATERNITY assuring the dignity of the individual and the unity and integrity of the Nation;**

**IN OUR CONSTITUENT ASSEMBLY this twenty - sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.**

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ಗಣಿತ

### 6ನೇ ತರಗತಿ

| ಕ್ರ.ಸಂ | ಅಧ್ಯಾಯುಗಳು | ಮುಗಿಸುವ ಅವಧಿ | ಪುಟ ಸಂಖ್ಯೆ |
|---|---|---|---|
| 1. | ಸಂಖ್ಯೆಗಳನ್ನು ತಿಳಿದುಕೊಳ್ಳೋಣ | ಜೂನ್ | 1-15 |
| 2. | ಪೂರ್ಣಸಂಖ್ಯೆಗಳು | ಜುಲೈ | 16 - 28 |
| 3. | ಸಂಖ್ಯೆಗಳೊಂದಿಗೆ ಆಡೋಣ | ಜುಲೈ | 29 - 48 |
| 4. | ರೇಖಾಗಣಿತದ ಮೂಲ ಪರಿಕಲ್ಪನೆಗಳು | ಆಗಸ್ಟ್ | 49- 60 |
| 5. | ರೇಖೆ ಮತ್ತು ಕೋನಗಳ ಅಳತೆ | ಆಗಸ್ಟ್ | 61 - 72 |
| 6. | ಪೂರ್ಣಾಂಕಗಳು | ಸೆಪ್ಟಂಬರ್ | 73 - 84 |
| 7. | ಭಿನ್ನರಾಶಿ ಮತ್ತು ದಶಮಾಂಶಗಳು | ಅಕ್ಟೋಬರ್ | 85 - 106 |
| 8. | ದತ್ತಾಂಶ ನಿರ್ವಹಣೆ | ನವಂಬರ್ | 107 - 118 |
| 9. | ಬೀಜಗಣಿತದ ಪರಿಚಯ | ನವಂಬರ್ | 119 - 130 |
| 10. | ಸುತ್ತಳತೆ ಮತ್ತು ವಿಸ್ತೀರ್ಣ | ಡಿಸೆಂಬರ್ | 131 - 144 |
| 11. | ಅನುಪಾತ ಮತ್ತು ಸಮಾನುಪಾತ | ಡಿಸೆಂಬರ್ | 145 - 157 |
| 12. | ಸಮಮಿತಿ | ಜನವರಿ | 158 - 167 |
| 13. | ಪ್ರಯೋಗಿಕ ರೇಖಾಗಣೀತ | ಜನವರಿ/ಫೆಬ್ರವರಿ | 168- 177 |
| 14. | ಎರಡು ಮತ್ತು ಮೂರು ಆಯಾಮಗಳ ಕಲ್ಪನೆ | ಫೆಬ್ರವರಿ | 178- 185 |

SCERT TELANGANA



Downloaded from https:// www.studiestoday.com

Downloaded from https:// www.studiestoday.com

# ರಾಷ್ಟ್ರಗೀತೆ

–ರವೀಂದ್ರನಾಥ ಠಾಗೂರ್

ಜನಗಣ ಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥

ಪಂಜಾಬ ಸಿಂಧ್ ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ॥

ವಿಂಧ್ಯ ಹಿಮಾಚಲ ಯಮುನಾ ಗಂಗಾ ।
ಉಚ್ಛಲ ಜಲಧಿ ತರಂಗಾ ॥

ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ॥
ಗಾಹೇ ತವ ಜಯಗಾಥಾ ।

ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ॥

ಜಯ ಹೇ ಜಯ ಹೇ ಜಯ ಹೇ ॥
ಜಯ ಜಯ ಜಯ ಜಯ ಹೇ ॥

# ಪ್ರತಿಜ್ಞೆ

ಭಾರತ ದೇಶ ನನ್ನ ಮಾತೃಭೂಮಿ, ಭಾರತೀಯರೆಲ್ಲರೂ ನನ್ನ ಸಹೋದರರು. ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಅತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ ನನ್ನ ದೇಶವನ್ನೂ, ನನ್ನ ತಂದೆ ತಾಯಿಗಳನ್ನೂ, ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ.

ನನ್ನ ದೇಶದ ಬಗ್ಗೆ, ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡಿತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

# ನಮ್ಮ ಸಂಖ್ಯೆಗಳನ್ನು ತಿಳಿದುಕೋಳ್ಳೋಣ !

ಅಧ್ಯಾಯ-1

## 1.1 ಪರಿಚಯ :

ಲತ, ಉಮಾ ಈ ಮಧ್ಯೆ 6ನೇ ತರಗತಿಗೆ ಸೇರಿದರು. ಶಾಲೆ ಪ್ರಾರಂಭವಾದ ದಿನ ತರಗತಿಯಲ್ಲಿ ಗಣಿತ ಶಿಕ್ಷಕರು ಇತ್ತೀಚೆಗೆ ನಡೆದ ಜನಗಣತಿಯ ವಿವರಗಳು ನಮ್ಮ ದೇಶದ ಜನಸಂಖ್ಯೆ ರಾಜ್ಯದ ಜನಸಂಖ್ಯೆ ಜಿಲ್ಲೆಯ ಜನಸಂಖ್ಯೆಯ ಬಗ್ಗೆ ಚರ್ಚಿಸಿದರು.

ಈ ಚರ್ಚೆಯಲ್ಲಿ ಶಿಕ್ಷಕರು ಹೇಳಿದ ಕೆಲವು ಸಂಖ್ಯೆಗಳು ಉಮಾಳಿಗೆ ಅರ್ಥವಾಗಲಿಲ್ಲ. ಸಾಯಂಕಾಲ ಮನೆಗೆ ಹಿಂತಿರುಗಿ ಬಂದಾಗ ಅವಳ ಸ್ನೇಹಿತೆಯಾದ ಲತಾಳನ್ನು ಜನ ಸಂಖ್ಯೆಯ ವಿವರಗಳು ಬಗ್ಗೆ ಕೇಳಿದಳು.




ಉಮಾ : ನಮ್ಮ ಗ್ರಾಮದ ಜನಸಂಖ್ಯೆ ನಿನಗೆ ತಿಳಿದಿದೆಯೇ?

ಲತ : ಹೌದು ನನಗೆ ತಿಳಿದಿದೆ.

ಉಮಾ : ಹೇಗೆ ?

ಲತ : ನಮ್ಮ ಪಂಚಾಯ್ತಿ ಕಛೇರಿಯ ಗೋಡೆಯ ಮೇಲೆ ಬರೆದಿದೆಯಲ್ಲಾ !

ಉಮಾ : ಯಾವ ಯಾವ ವಿವರಗಳನ್ನು ಗೋಡೆಯ ಮೇಲೆ ಬರೆದಿದ್ದಾರೆ.?

ಲತ : ನಮ್ಮ ಗ್ರಾಮಕ್ಕೆ ಸಂಬಂಧಿಸಿದ ಅನೇಕ ವಿವರಗಳು ಇವೆ. ಅವುಗಳಲ್ಲಿ ಪ್ರಧಾನವಾಗಿ ನಮ್ಮ ಗ್ರಾಮದಜನಸಂಖ್ಯೆ ಪುರುಷರ ಸಂಖ್ಯೆ, ಸ್ತ್ರೀಯರ ಸಂಖ್ಯೆ, ಮಕ್ಕಳ ಸಂಖ್ಯೆ, ಗ್ರಾಮದಲ್ಲಿರುವ ಮನೆಗಳ ಸಂಖ್ಯೆ, ಅವುಗಳಲ್ಲಿ ಕಚ್ಚಾ ಮನೆಗಳು, ಪಕ್ಕಾ ಮನೆಗಳು ಮೊದಲಾದವಿವರಗಳಿವೆ.

ಉಮಾ : ಹಾಗದರೆ ಆ ವಿವರಗಳನ್ನು ನನಗೂ ಒಂದು ಬಾರಿ ತೋರಿಸು.

ಲತ : ತಪ್ಪದೇ ತೋರಿಸುವೆ.

ಇಬ್ಬರೂ ಸೇರಿ ದಾರಿಯಲ್ಲಿರುವ ಪಂಚಾಯಿತಿ ಕಛೇರಿಗೆ ಹೋಗಿ ಗೋಡೆಯ ಮೇಲಿನ ವಿವರಗಳನ್ನು ಓದಿದರು.

| | | |
|---|---|---|
| ಗ್ರಾಮ ಪಂಚಾಯ್ತಿಯ ಹೆಸರು | : | ಬಂಡ್ಲಗೂಡಂ |
| ಜಿಲ್ಲೆ | : | ವರಂಗಲ್ |
| ಗ್ರಾಮದ ಜನ ಸಂಖ್ಯೆ | : | 7,450 |
| ಪುರುಷರ ಸಂಖ್ಯೆ | : | 8,770 |
| ಸ್ತ್ರೀಯರ ಸಂಖ್ಯೆ | : | 3,950 |
| ಮಕ್ಕಳ ಸಂಖ್ಯೆ | : | 1,320 |
| ಗ್ರಾಮದಲ್ಲಿನ ಮನೆಗಳು | : | 1,100 |
| ಪಕ್ಕಾ ಮನೆಗಳು | : | 1,045 |
| ಕಚ್ಚಾ ಮನೆಗಳು | : | 55 |



Downloaded from https:// www.studiestoday.com

Downloaded from https:// www.studiestoday.com

ಉಮಾ ಕಾರ್ಯಾಲಯದ ಗೋಡೆಯ ಮೇಲಿನ ವಿವರಗಳನ್ನು ಓದಿ ಅರ್ಥ ಮಾಡಿಕೊಂಡಳು. ಆದರೆ ತರಗತಿಯಲ್ಲಿ ಶಿಕ್ಷಕರು ಹೇಳಿದ ಲಕ್ಷಗಳು, ಕೋಟಿಗಳ ಬಗ್ಗೆ ಲತಾಳನ್ನು ಕೇಳಿದಳು. ಏಕೆ ? ಆಲೋಚಿಸಿ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ.

ನಾವು ಹಿಂದಿನ ತರಗತಿಗಳಲ್ಲಿ ಸಾವಿರದ ವರೆಗೆ ಲೆಕ್ಕಗಳನ್ನು ಕಲಿತಿದ್ದೇವೆ. ನಾವು ಸಂಖ್ಯೆಗಳನ್ನು ಅನೇಕ ರೀತಿಯಲ್ಲಿ ಬಳಸುತ್ತೇವೆ ಸಂಖ್ಯೆಗಳಲ್ಲಿ ಯಾವುದು ದೊಡ್ಡದು ? ಯಾವುದು ಸಣ್ಣದು ? ಕೊಟ್ಟಿರುವ ಒಂದು ಸಂಖ್ಯೆಯಲ್ಲಿ ಯಾವುದು ಅತಿ ಹತ್ತಿರದ ಸಂಖ್ಯೆ ? ಯಾವುದು ಅತ್ಯಂತ ದೂರದ ಸಂಖ್ಯೆ? ಎಂದು ಹೋಲಿಸುವುದು. ಹಾಗೆಯೇ ಸಂಖ್ಯೆಗಳನ್ನು ಆರೋಹಣ, ಅವರೋಹಣ ಕ್ರಮದಲ್ಲಿ ಬರೆಯುವುದನ್ನು ಕಲಿಯುವುದು. ಅದೇ ರೀತಿ ಸಂಕೇತಗಳನ್ನುಪಯೋಗಿಸಿ ಸ್ಥಾನ ಬೆಲೆಗಳನ್ನು ಕಂಡು ಕೊಳ್ಳುವುದು. ಸಂಕಲನ, ವ್ಯವಕಲನಗಳಂಥ ಕ್ರಿಯೆಗಳನ್ನು ಹಲವಾರು ಮಾಡಿದ್ದೇವೆ. ನಮ್ಮ ನಿತ್ಯ ಜೀವನದಲ್ಲಿ ಸಂಖ್ಯೆಗಳನ್ನು ಸಾವಿರಗಳಲ್ಲಿ ಉಪಯೋಗಿಸಿದ ಯಾವುದಾದರೂ ಐದು ಸಂದರ್ಭಗಳನ್ನು ಹೇಳಬಲ್ಲೆಯಾ?

ಉದಾ : ಒಂದು ದೂರದರ್ಶನದ ಬೆಲೆ ₹12,500.

ಇವುಗಳಿಗೆ ಸಂಬಂಧಿಸಿದಂತೆ ಕಲಿತುಕೊಂಡವುಗಳನ್ನು ಮತ್ತೆ ಸ್ಮರಿಸಿ ಇನ್ನೂ ಇಂತಹ ದೊಡ್ಡ ಸಂಖ್ಯೆಗಳ ಬಗ್ಗೆ ತಿಳಿದುಕೊಂಡು ಆನಂದಿಸೋಣ.

**1.2 ಸಂಖ್ಯೆಗಳನ್ನು ಅಂದಾಜಿಸುವುದು, ಹೋಲಿಸುವುದು :**

ಈ ಕೆಳಗಿನ ಸಂಖ್ಯೆಗಳಲ್ಲಿ ದೊಡ್ಡ ಸಂಖ್ಯೆಗಳನ್ನು ಚಿಕ್ಕ ಸಂಖ್ಯೆಗಳನ್ನು ಕಂಡುಹಿಡಿ.

| ಕ್ರ.ಸಂ. | ಸಂಖ್ಯೆಗಳು | ದೊಡ್ಡ ಸಂಖ್ಯೆ | ಚಿಕ್ಕ ಸಂಖ್ಯೆ |
|---|---|---|---|
| 1. | 3845, 485, 34, 13845 | 13845 | 34 |
| 2. | 856, 1459, 35851, 23 | ..... | ..... |
| 3. | 585, 9535, 678, 44 | ..... | . .... |
| 4. | 39, 748, 19651, 7850 | ..... | . .... |

ಸಂಖ್ಯೆಗಳಲ್ಲಿನ ಅಂಕೆಗಳ ಸ್ಥಾನಗಳ ಆಧಾರದ ಮೇಲೆ ಸುಲಭವಾಗಿ ಅಂದಾಜಿಸಿ ದೊಡ್ಡ ಸಂಖ್ಯೆಯನ್ನು, ಚಿಕ್ಕ ಸಂಖ್ಯೆಯನ್ನು ಕಂಡುಹಿಡಿಯಬಹುದು. ಸಾಧಾರಣವಾಗಿ ಪರಿಶೀಲಿಸಿದರೆ ಐದು ಅಂಕೆಗಳಿಂದ ಕೂಡಿದ ಸಂಖ್ಯೆ ಯಾವಾಗಲೂ ಎರಡಂಕೆಯಿಂದ ಕೂಡಿದ ಸಂಖ್ಯೆಗಿಂತ ದೊಡ್ಡದಲ್ಲವೆ !

51845 ಮತ್ತು 41964 ಸಂಖ್ಯೆಗಳನ್ನು ಹೋಲಿಸು ಎಂದು ನಿನ್ನ ಸ್ನೇಹಿತರಿಗೆ ಹೇಳು. ಇವುಗಳನ್ನು ಕೂಡ ಹೋಲಿಸುವುದು ಸುಲಭವಾದ ಕೆಲಸವಲ್ಲವೆ ! ಹತ್ತು ಸಾವಿರದ ಸ್ಥಾನದಲ್ಲಿನ ಅಂಕೆಗಳನ್ನು ಹೋಲಿಸಿದರೆ ಸರಿ. 51845 ಸಂಖ್ಯೆಯ ಹತ್ತು ಸಾವಿರದ ಸ್ಥಾನದಲ್ಲಿ 5ಇದೆ, 41964 ಸಂಖ್ಯೆಯ ಹತ್ತು ಸಾವಿರದ ಸ್ಥಾನದಲ್ಲಿ 4 ಇದೆಯಲ್ಲವೇ ಆದ್ದರಿಂದ 51845> 41964 ಎಂದು ಹೇಳಬಹುದು.

ಆದರೆ ಈಗ ಹೇಳಿರಿ 58672 ಮತ್ತು 57875 ಯಲ್ಲಿ ಯಾವುದು ದೊಡ್ಡದು? ಇಲ್ಲಿ ಎರಡು ಸಂಖ್ಯೆ ಗಳಲ್ಲಿ ಅಂಕೆಗಳ ಸಂಖ್ಯೆ ಸಮಾನ ಮತ್ತು ಹತ್ತು ಸಾವಿರದ ಸ್ಥಾನದಲ್ಲಿನ ಅಂಕೆಗಳು ಸಹ ಸಮಾನವೇ ಅಲ್ಲವೇ! ಆದ್ದರಿಂದ ಎಂದು ಹೇಳಬಹುದು.

ನಾವು ಈಗ ಹಿಂದಿನ ಸ್ಥಾನ ಅಂದರೆ ಸಾವಿರದ ಸ್ಥಾನದಲ್ಲಿರುವ ಸಂಖ್ಯೆಯನ್ನು ಹೋಲಿಸೋಣ. ಸಾವಿರದ ಸ್ಥಾನದಲ್ಲಿರುವ ಅಂಕೆಗಳಲ್ಲಿ 8 > 7. ಆದ್ದರಿಂದ 58675 ದೊಡ್ಡ ಸಂಖ್ಯೆಯಾಗಿರುತ್ತದೆ. ಆದ್ದರಿಂದ 58672 > 57875.

ಒಂದು ವೇಳೆ ಸಾವಿರದ ಸ್ಥಾನದಲ್ಲಿನ ಅಂಕೆಗಳು ಸಹ ಸಮಾನವಾಗಿದ್ದರೆ ಏನು ಮಾಡಬಹುದು ? ನೂರರ ಸ್ಥಾನದಲ್ಲಿರುವ ಅಂಕೆಗಳನ್ನು ಮತ್ತು ಹತ್ತರ ಸ್ಥಾನದಲ್ಲಿರುವ ಅಂಕೆಗಳನ್ನು ಕೊನೆಯದಾಗಿ ಬಿಡಿ ಸ್ಥಾನದಲ್ಲಿನ ಅಂಕೆಗಳನ್ನು ಹೋಲಿಸುತ್ತ ಹೋಗಬೇಕು.



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ – 1.1

1. ಈ ಕೆಳಗಿನ ಸಂಖ್ಯೆಗಳಲ್ಲಿ ದೊಡ್ಡ ಸಂಖ್ಯೆಗಳನ್ನು ಚಿಕ್ಕ ಸಂಖ್ಯೆಗಳನ್ನು ತಿಳಿಸಿ.
   i. 15432, 15892, 15370, 15524 ii. 25073, 25289, 25800, 25623
   iii. 44687, 44645, 44670, 44602 iv. 75671, 75635, 75641, 75610
   v. 34895, 34891, 34899, 34893
2. ಈ ಕೆಳಗಿನ ಸಂಖ್ಯೆಗಳನ್ನು ಆರೋಹಣ ಕ್ರಮ (ಏರಿಕೆ ಕ್ರಮ) ದಲ್ಲಿ ಬರೆಯಿರಿ.
   i. 375, 1475, 15951, 4713 ii. 9347, 19035, 22570, 12300
3. ಕೆಳಗಿನ ಸಂಖ್ಯೆಗಳನ್ನು ಅವರೋಹಣ ಕ್ರಮ ( ಇಳಿಕೆ ಕ್ರಮ) ದಲ್ಲಿ ಬರೆಯಿರಿ.
   i. 1876, 89715, 45321, 89254 ii. 3000, 8700, 3900, 18500
4. ಕೆಳಗಿನ ಸಂಖ್ಯೆಗಳ ಮಧ್ಯೆ $<, >$ ಸಂಕೇತ ಬರೆದು ಹೋಲಿಸಿ.
   i. 3854 ....... 15200 ii. 4895 ....... 4864
   iii. 99454 ....... 99445 iv. 14500 ....... 14499
5. ಕೆಳಗಿನ ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆಯಿರಿ:
   i. 72642 = ..........................................
   ii. 55345 = ..........................................
   iii. 66600 = ..........................................
   iv. 30301 = ..........................................
6. ಕೆಳಗಿನ ಸಂಖ್ಯೆಗಳನ್ನು ಅಂಕೆಗಳಲ್ಲಿ ಬರೆಯಿರಿ.
   i. ನಲವತ್ತು ಸಾವಿರದ ಎರಡುನೂರ ಎಪ್ಪತ್ತು ....................................
   ii. ಹದಿನಾಲ್ಕು ಸಾವಿರದ ಅರವತ್ನಾಲ್ಕು ....................................
   iii. ಒಂಬತ್ತು ಸಾವಿರದ ಏಳುನೂರು ....................................
   iv. ಅರವತ್ತು ಸಾವಿರ ....................................
7. 4, 0, 3, 7 ಅಂಕೆಗಳಿಂದ ರಚಿಸಬಹುದಾದ ನಾಲ್ಕಂಕೆಯ ಸಂಖ್ಯೆಗಳನ್ನು ಬರೆಯಿರಿ ಅವುಗಳಲ್ಲಿ ಅತಿದೊಡ್ಡ ಅತಿ ಚಿಕ್ಕ ಸಂಖ್ಯೆಗಳನ್ನು ಗುರುತಿಸಿ.
8. ಕಂಡು ಹಿಡಿಯಿರಿ
   i. ನಾಲ್ಕು ಅಂಕೆಗಳುಳ್ಳ ಅತಿ ಚಿಕ್ಕ ಸಂಖ್ಯೆ ಯಾವುದು?
   ii. ನಾಲ್ಕು ಅಂಕೆಗಳುಳ್ಳ ಅತಿ ದೊಡ್ಡ ಸಂಖ್ಯೆ ಯಾವುದು ?
   iii. ಐದು ಅಂಕೆಗಳುಳ್ಳ ಅತಿ ಚಿಕ್ಕ ಸಂಖ್ಯೆ ಯಾವುದು ?
   iv. ಐದು ಅಂಕೆಗಳುಳ್ಳ ಅತಿ ದೊಡ್ಡ ಸಂಖ್ಯೆ ಯಾವುದು ?

### 1.3 ಅಂದಾಜಿಸುವುದು – ಸಂಖ್ಯೆಗಳನ್ನು ಸಮೀಪದ ಹತ್ತುಗಳ, ನೂರಗಳು, ಸಾವಿರದ ಸ್ಥಾನಗಳಿಗೆ ಅಂದಾಜು ಮಾಡಿ ಬರೆಯುವುದು.

ನಮ್ಮ ನಿತ್ಯ ಜೀವನದಲ್ಲಿ ಕೆಳಗಿನ ಕೆಲವು ಸಂದರ್ಭಗಳಲ್ಲಿ ಸಂಖ್ಯೆಗಳನ್ನು ಯಾವಾವರೀತಿ ಉಪಯೋಗಿಸುತ್ತೇವೆಯೋ ಗಮನಿಸಿರಿ.

- ನವಂಬರ್ ತಿಂಗಳಲ್ಲಿ 25,000 ಜನರು ಸಾಲಾರ್ ಜಂಗ್ ಮ್ಯೂಜಿಯಂನ್ನು ಸಂದರ್ಶಿಸಿದರು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

- ನಮ್ಮ ರಾಜ್ಯದಲ್ಲಿ ಈ ವರ್ಷ ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆಗೆ ( ಸುಮಾರು) 9 ಲಕ್ಷ ವಿದ್ಯಾರ್ಥಿಗಳು ಹಾಜರಾಗುತ್ತಿದ್ದಾರೆ.
- ವಿಶಾಖ ಪಟ್ಟಣದ ಬಂದರಿನಲ್ಲಿ ಈ ಮಧ್ಯೆ ಒಂದು ಹಡಗಿನಲ್ಲಿ ( ಸರಿಸುಮಾರು) 43,500 ಟನ್ ಕಬ್ಬಿಣದ ಅದಿರು ತುಂಬಿದ್ದರು.

ಮೇಲಿನ ಉದಾಹರಣೆಗಳಲ್ಲಿ ಬಳಸಿದ ಪದಗಳು ಸಾಮಾನ್ಯವಾಗಿ ಸರಿಸುಮಾರಾಗಿ ಪ್ರಜೆಗಳು ವಿದ್ಯಾರ್ಥಿಗಳು ಅಥವಾ ಸಾಮಗ್ರಿಗಳನ್ನು ಒಂದು ಅಂದಾಜಿನ ಸಂಖ್ಯೆಯಾಗಿ ತಿಳಿಸಿದೆ. ಆದರೆ ಸರಿಯಾಗಿ ನೋಡಿದಾಗ 25,000 ಸಂಖ್ಯೆ ಸುಮಾರಾಗಿ 24,975 ರ ಮಧ್ಯೆ 25,045ಯಾವುದಾದರೂ ಒಂದು ಸಂಖ್ಯೆ ಆಗಬಹುದು. ಖಚಿತವಾಗಿ 25,000 ಆಗಿರಬೇಕೆಂದಿಲ್ಲ. ಈ ರೀತಿಯಾಗಿ ಕೆಲವು ಸಂಖ್ಯೆಗಳನ್ನು ಸಮೀಪದಲ್ಲಿರುವ ಸಂಖ್ಯೆಗೆ ಸರಿಪಡಿಸಿ ಬರೆಯುವುದು. ಎಂಬುದನ್ನು ಒಂದು ರೀತಿಯ ಅಂದಾಜಾಗಿ ಭಾವಿಸಬಹುದು.

ಅಂದಾಜು ಎಂಬುದು ಉತ್ತರಗಳನ್ನು ಸುಲಭವಾಗಿ ಗುರ್ತಿಸಲು ಸರಿಪಡಿಸಲು ಸಹಾಯಕವಾಗುತ್ತದೆ.

ನಾವು ಸಾಧಾರಣವಾಗಿ ಸಂಖ್ಯೆಗಳನ್ನು ಹತ್ತಿರವಾಗಿ 10, 100, 1000, 10000 ...ಮುಂತಾದ ಸಂಖ್ಯೆಗಳನ್ನು ಸರಿಪಡಿಸಿ ಅಂದಾಜಿಸುತ್ತೇವೆ.

ಸಂಖ್ಯೆಗಳನ್ನು ಹತ್ತರ ಸ್ಥಾನಕ್ಕೆ ಅಂದಾಜು ಮಾಡುವ ವಿಧಾನವನ್ನು ಪರಿಶೀಲಿಸಿ.




ಮೇಲಿನ ಸಂಖ್ಯೆಗಳಲ್ಲಿ ದೊಡ್ಡ ಸಂಖ್ಯೆ 90, ಮಧ್ಯದ ಸಂಖ್ಯೆ 85, ಚಿಕ್ಕ ಸಂಖ್ಯೆ 80.

- 80 ಈ ಸಂಖ್ಯೆಯ 90 ಕ್ಕಿಂತ 80ಕ್ಕೆ ಹತ್ತಿರವಿದೆ. ಆದ್ದರಿಂದ 81ಕ್ಕೆ ಹತ್ತರ ಸ್ಥಾನದ ಸಮೀಪದ ಸಂಖ್ಯೆ 80 ಆಗುತ್ತದೆ.
- 87ಈ ಸಂಖ್ಯೆಯು 80 ಕ್ಕಿಂತ 90 ಕ್ಕೆ ಹತ್ತಿರವಿದೆ ಆದ್ದರಿಂದ 87ಕ್ಕೆ ಹತ್ತರ ಸ್ಥಾನದ ಸಮೀಪದ ಸಂಖ್ಯೆ 80 ಆಗುತ್ತದೆ.
- 85 ಈ ಸಂಖ್ಯೆ 80ಕ್ಕೆ, 90ಕ್ಕೆ ಸಮಾನ ದೂರದಲ್ಲಿದೆ ಅಲ್ಲವೇ! ಆದರೆ ಸಾಂಪ್ರಾದಾಯಕವಾಗಿ ನಾವು 85ನ್ನು 90ಕ್ಕೆ ಅಂದಾಜಿಸಿ ಬರೆಯುತ್ತೇವೆ.

ಸಂಖ್ಯೆಗಳನ್ನು ನೂರರ ಸ್ಥಾನಕ್ಕೆ ಸರಿಪಡಿಸಿ ಬರೆಯುವ ವಿಧಾನವನ್ನು ನೋಡೋಣ.




- ಇವುಗಳಲ್ಲಿ ಚಿಕ್ಕ ಸಂಖ್ಯೆ 200, ದೊಡ್ಡ ಸಂಖ್ಯೆ 300 ಮಧ್ಯದ ಸಂಖ್ಯೆ 250
- 220 ಈ ಸಂಖ್ಯೆಯನ್ನು ನೂರರ ಸಮೀಪಕ್ಕೆ ಹೋಲಿಸಿ ನೋಡಿದರೆ 300ಕ್ಕಿಂತ 200ಕ್ಕೆ ಸಮೀಪದಲ್ಲಿದೆ. ಆದ್ದರಿಂದ 220ಕ್ಕೆ ಸಮೀಪದ ಸಂಖ್ಯೆ 200 ಆಗುತ್ತದೆ.
- 280 ಈ ಸಂಖ್ಯೆ ನೂರರ ಸ್ಥಾನಕ್ಕೆ ಹೋಲಿಸಿ ನೋಡಿದರೆ 200ಕ್ಕಿಂತ 300ಕ್ಕೆ ಸಮೀಪದಲ್ಲಿದೆ. ಆದ್ದರಿಂದ 280ಕ್ಕೆ ಸಮೀಪ ಬೆಲೆ 300 ಆಗುತ್ತದೆ.
- ಹಾಗದರೆ 250ಕ್ಕೆ ಸರಿಹೋಂದುವ ಸಮೀಪದ ಬೆಲೆ ಗುರ್ತಿಸುವಿರಾ? ಏಕೆ ? ತಿಳಿಸಿ

ನಾವು ಇದೇ ರೀತಿಯಾಗಿ ಸಾವಿರದಲ್ಲಿನ ಸಂಖ್ಯೆಗಳನ್ನು ಕೂಡ ಸರಿಪಡಿಸುತ್ತೇವೆ. ನೀವು ಸಾವಿರದಲ್ಲಿನ ಕೆಲವು ಸಂಖ್ಯೆಗಳನ್ನು ತೆಗೆದುಕೊಂಡು ಸಮೀಪದ ಸಂಖ್ಯೆಗೆ ಸರಿಪಡಿಸಿ.ನಿಮ್ಮ ಸ್ನೇಹಿತರೊಡನೆ ಹೇಗೆ ಗುರ್ತಿಸುವಿರೋ ಚರ್ಚಿಸಿ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಇವು ಮಾಡಿರಿ.**



ಕೆಳಗಿನ ಸಂಖ್ಯೆಗಳನ್ನು ಸರಿಪಡಿಸಿ ಬರೆಯಿರಿ

1. 48, 62, 81, 94, 27 ಗಳನ್ನು ಹತ್ತರ ಸ್ಥಾನಕ್ಕೆ ಅಂದಾಜಿಸಿ ಬರೆಯಿರಿ.
2. 128, 275, 312, 695, 199 ಗಳನ್ನು ನೂರರ ಸ್ಥಾನಕ್ಕೆ ಅಂದಾಜಿಸಿ ಬರೆಯಿರಿ.
3. 7452, 8115, 3066, 7119, 9600 ಗಳನ್ನು ಸಾವಿರದ ಸ್ಥಾನಕ್ಕೆ ಅಂದಾಜಿಸಿ ಬರೆಯಿರಿ.

**ಆಲೋಚಿಸಿ, ಚರ್ಚಿಸಿ ಬರೆಯಿರಿ**



ಹತ್ತು ಸಾವಿರ ಸ್ಥಾನಕ್ಕೆ ಅಂದಾಜು ಮಾಡಬಲ್ಲ ಕೆಲವು ಸಂಖ್ಯೆಗಳನ್ನು ತೆಗೆದುಕೊಳ್ಳಿರಿ. ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ

### 1.4 ಸ್ಥಾನ ಬೆಲೆಗಳ ಪುನರಾವರ್ತನೆ.

ಒಂದು ಸಂಖ್ಯೆಯನ್ನು ಸ್ಥಾನ ಬೆಲೆಯ ಪ್ರಕಾರ ಯಾವ ರೀತಿ ವಿಸ್ತರಿಸಿ ಬರೆಯಬಹುದು ಎಂಬುದನ್ನು ನಾವು ಇದುವರೆಗೂ ಕಲಿತಿದ್ದೇವೆ. ಒಂದು ಸಾರಿ ನೀವು ಎರಡಂಕಿಯ, ಮೂರಂಕಿಯ ನಾಲ್ಕಂಕಿಯ, ಐದಂಕಿಯ ಸಂಖ್ಯೆಗಳನ್ನು ಹೇಗೆ ವಿಸ್ತರಿಸ ಬೇಕೋ ಸ್ಮರಿಸಿಕೊಳ್ಳಿ.

**1.** 64ನ್ನು ವಿಸ್ತರಿಸಿ

64 =

| ಹತ್ತು | ಬಿಡಿ |
|---|---|
| 6 | 4 |

= 6 × 10 + 4 × 1

= 60 + 4

**2.** 325 ನ್ನು ವಿಸ್ತರಿಸಿ

325 =

| ನೂರು | ಹತ್ತು | ಬಿಡಿ |
|---|---|---|
| 3 | 2 | 5 |

= 3 × 100 + 2 × 10 + 5 × 1

= 300 + 20 + 5

**3.** 5078ನ್ನು ವಿಸ್ತರಿಸಿ

5078 =

| ಸಾವಿರ | ನೂರು | ಹತ್ತು | ಬಿಡಿ |
|---|---|---|---|
| 5 | 0 | 7 | 8 |

= 5 × 1000 + 0 × 100 + 7 × 10 + 8 × 1 = 5000 + 0 + 70 + 8

= 5000 + 70 + 8

**4.** 29500ನ್ನು ವಿಸ್ತರಿಸಿ

29500 =

| ಹತ್ತು ಸಾವಿರ | ಸಾವಿರ | ನೂರು | ಹತ್ತು | ಬಿಡಿ |
|---|---|---|---|---|
| 2 | 9 | 5 | 0 | 0 |

= 2 × 10000 + 9 × 1000 + 5 × 100 + 0 × 10 + 0 × 1

= 20000 + 9000 + 500 + 0 + 0

= 20000 + 9000 + 500

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿರಿ :**

ಕೆಳಗೆ ಪಟ್ಟಿಯಲ್ಲಿ ನೀಡಿರುವ ಸಂಖ್ಯೆಗಳನ್ನು ಓದಿ, ಸ್ಥಾನ ಬೆಲೆಗಳೊಂದಿಗೆ ವಿಸ್ತರಿಸಿ ಬರೆಯಿರಿ. ಉದಾಹರಣೆಯನ್ನು ಪರಿಶೀಲಿಸಿರಿ.



| ಸಂಖ್ಯೆ | ವಿಸ್ತರಣೆ. | ವಿಸ್ತರಣಾ ರೂಪ |
|---|---|---|
| 21504 | $2 \times 10000 + 1 \times 1000 + 5 \times 100 + 0 \times 10 + 4 \times 1$ | $20000 + 1000 + 500 + 4$ |
| 3840 | | |
| 77888 | | |
| 20050 | | |
| 41501 | | |



**ಅಭ್ಯಾಸ–1.2**

1. ಕೆಳಗಿನ ಸಂಖ್ಯೆಗಳನ್ನು ಹತ್ತರ ಸಮೀಪದ ಸಂಖ್ಯೆಗೆ ಸರಿಪಡಿಸಿ ಬರೆಯಿರಿ.

   i. 89   ii. 415   iii. 3951   iv. 4409

2. ಕೆಳಗಿನ ಸಂಖ್ಯೆಗಳನ್ನು ನೂರರ ಸಮೀಪದ ಸಂಖ್ಯೆಗೆ ಸರಿಪಡಿಸಿ ಬರೆಯಿರಿ.

   i. 695   ii. 36152   iii. 13648   iv. 93618

3. ಕೆಳಗಿನ ಸಂಖ್ಯೆಗಳನ್ನು ಸಾವಿರದ ಸಮೀಪದ ಸಂಖ್ಯೆಗೆ ಸರಿಪಡಿಸಿ ಬರೆಯಿರಿ.

   i. 3415   ii. 70124   iii. 8765   iv. 4001

4. ಕೆಳಗಿನ ಸಂಖ್ಯೆಗಳನ್ನು ಸಂಕ್ಷಿಪ್ತ ರೂಪದಲ್ಲಿ ಬರೆಯಿರಿ.

   i. $3000 + 400 + 7$   ii. $10000 + 2000 + 300 + 50 + 1$

   iii. $30000 + 500 + 20 + 5$   iv. $90000 + 9000 + 900 + 90 + 9$

5. ಕೆಳಗಿನ ಸಂಖ್ಯೆಗಳನ್ನು ವಿಸ್ತರಣಾ ರೂಪದಲ್ಲಿ ಬರೆಯಿರಿ.

   i. 4348   ii. 30214   iii. 22222   iv. 75025

## 1.5 ಅತಿ ದೊಡ್ಡ ಸಂಖ್ಯೆಗಳ ಪರಿಚಯ

**ಐದಂಕಿ ಸಂಖ್ಯೆಗಳಲ್ಲಿ ಅತಿದೊಡ್ಡ ಸಂಖ್ಯೆ ಯಾವುದು?**

ಐದು ಅಂಕೆಗಳ ದೊಡ್ಡಸಂಖ್ಯೆಗೆ 1ನ್ನು ಸೇರಿಸಿದರೆ, ಯಾವ ಸಂಖ್ಯೆ ಬರುತ್ತದೆ.

ಐದಂಕಿಗಳ ದೊಡ್ಡ ಸಂಖ್ಯೆ = 99,999.

ಇದಕ್ಕೆ 1ನ್ನು ಸೇರಿಸಿದರೆ 99,999 + 1 = 1,00,000 ಬರುತ್ತದೆ.

ಈ ಸಂಖ್ಯೆಯನ್ನು ಒಂದು ಲಕ್ಷ ಎನ್ನುತ್ತಾರೆ. ಅಂದರೆ 99,999 ರ ನಂತರ ತಕ್ಷಣ ಬರುವ ಸಂಖ್ಯೆ ಒಂದು ಲಕ್ಷ ಎಂದರ್ಥ.

ಅಂದರೆ 1,00,000. ಈಗ ಹೇಳಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಒಂದು ಲಕ್ಷದಲ್ಲಿ ಎಷ್ಟು ಹತ್ತುಗಳಿವೆ ?
ಒಂದು ಲಕ್ಷದಲ್ಲಿ ಎಷ್ಟು ನೂರುಗಳಿವೆ?
ಒಂದು ಲಕ್ಷದಲ್ಲಿ ಎಷ್ಟು ಸಾವಿರಗಳಿವೆ ?

ಈಗ ಆರು ಅಂಕೆಗಳಿರುವ ಸಂಖ್ಯೆಯನ್ನು ವಿಸ್ತರಣಾ ರೂಪದಲ್ಲಿ ಹೇಗೆ ಬರೆಯುತ್ತಾರೋ ನೋಡೋಣ. ಉದಾಹರಣೆಗೆ 3, 15, 645 ನ್ನು ತೆಗೆದುಕೊಳ್ಳೋಣ.

$3, 15, 645 = 3 \times 100000 + 1 \times 10000 + 5 \times 1000 + 6 \times 100 + 4 \times 10 + 5 \times 1$

$= 300000 + 10000 + 5000 + 600 + 40 + 5$

**ಈ ಪಟ್ಟಿಯನ್ನು ಪರಿಶೀಲಿಸಿ.**

| ಲಕ್ಷ | ಹತ್ತು ಸಾವಿರ | ಸಾವಿರ | ನೂರು | ಹತ್ತು | ಬಿಡಿ |
|---|---|---|---|---|---|
| 3 | 1 | 5 | 6 | 4 | 5 |

ಈ ಸಂಖ್ಯೆಯಲ್ಲಿ ಬಿಡಿ ಸ್ಥಾನದಲ್ಲಿ '5', ಹತ್ತರ ಸ್ಥಾನದಲ್ಲಿ '4', ನೂರರ ಸ್ಥಾನದಲ್ಲಿ '6', ಸಾವಿರ ಸ್ಥಾನದಲ್ಲಿ '5', ಹತ್ತು ಸಾವಿರದ ಸ್ಥಾನದಲ್ಲಿ '1', ಲಕ್ಷದ ಸ್ಥಾನದಲ್ಲಿ '3' ಇರುವುದನ್ನು ಗಮನಿಸಬಹುದು. ಈಗ ನಾವು ಈ ಸಂಖ್ಯೆಯನ್ನು ಮೂರು ಲಕ್ಷದ ಹದಿನೈದು ಸಾವಿರದ ಆರು ನೂರ ನಲವತ್ತೈದು ಎಂದು ಬರೆಯುತ್ತೇವೆ.

ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಸಂಖ್ಯೆಗಳನ್ನು ಉದಾಹರಣೆಯಲ್ಲಿ ತೋರಿಸಿದ ಹಾಗೆ ಓದಿ ವಿಸ್ತರಣಾ ರೂಪದಲ್ಲಿ ಬರೆಯಿರಿ.

| **ಸಂಖ್ಯೆ** | **ವಿಸ್ತರಣಾ ರೂಪ** | **ಓದುವ ವಿಧಾನ** |
|---|---|---|
| 5,00,000 | $5 \times 100000$ | ಐದು ಲಕ್ಷ |
| 4,50,000 | $4 \times 100000 + 5 \times 10000$ | ನಾಲ್ಕು ಲಕ್ಷದ ಐವತ್ತು ಸಾವಿರ |
| 4,57,000 | .................................. | .................................................... |
| 3,05,400 | .................................. | .................................................... |
| 3,09,390 | .................................. | .................................................... |
| 2,00,035 | .................................. | .................................................... |

ಮತ್ತೆ ಕೆಲವು ಐದು ಅಂಕೆಗಳ ಮತ್ತು ಆರು ಅಂಕೆಗಳಿರುವ ಸಂಖ್ಯೆಗಳನ್ನು ಬರೆಯಿರಿ. ನಿಮ್ಮ ಸ್ನೇಹಿತನಿಗೆ ಓದಿ ವಿಸ್ತರಿಸಲು ತಿಳಿಸಿ. ಆರು ಅಂಕೆಗಳಿರುವ ಸಂಖ್ಯೆಯಲ್ಲಿ ಎಲ್ಲಾ ಅಂಕೆಗಳು'9'ಗಳಾದರೆ ಎಂತಹ ಸಂಖ್ಯೆ ಬರುತ್ತದೆ ? ಇದನ್ನು ಆರು ಅಂಕೆಗಳಿರುವ ಸಂಖ್ಯೆಗಳಲ್ಲಿ ಅತಿ ದೊಡ್ಡ ಸಂಖ್ಯೆ ಎನ್ನಬಹುದೇ ? ಅತಿ ದೊಡ್ಡ ಆರು ಅಂಕೆಯ ಸಂಖ್ಯೆಗೆ 1ನ್ನು ಸೇರಿಸಿ ನೋಡಿದಾಗ ಯಾವ ಸಂಖ್ಯೆ ಬರುತ್ತದೆಯೋ ನೋಡಿ.

9,99,999 + 1 = 10,00,000 **ಇದನ್ನು ' ಹತ್ತು ಲಕ್ಷಗಳು' ಎನ್ನುತ್ತಾರೆ.**

ಇದನ್ನು ಏಳು ಅಂಕಿಗಳಿರುವ ಸಂಖ್ಯೆಯಲ್ಲಿ ಅತಿ ಚಿಕ್ಕ ಸಂಖ್ಯೆ ಎನ್ನಬಹುದೆ?

ಈಗ ಕೆಳಗೆ ತಿಳಿಸಿದ ಸಂಖ್ಯೆಗಳ ಜೋಡಣೆ ಪೂರ್ಣ ಮಾಡಿ ಪರಿಶೀಲಿಸಿ.

9 + 1 = 10
99 + 1 = 100
999 + 1 = 1000
9999 + 1 = ...................................
99999 + 1 = ...................................



Downloaded from https:// www.studiestoday.com
SCERT TELANGANA

Downloaded from https:// www.studiestoday.com

999999 + 1 = ...................................

9999999 + 1 = 1,00,00,000

ಏಳು ಅಂಕೆಯ ಅತಿ ದೊಡ್ಡ ಸಂಖ್ಯೆಗೆ 1ನ್ನು ಸೇರಿಸಿದರೆ ಎಂಟು ಅಂಕೆಯ ಸಂಖ್ಯೆಗಳಲ್ಲಿನ ಅತಿ ಚಿಕ್ಕ ಸಂಖ್ಯೆ ಬರುತ್ತದೆಯೆಂಬುದನ್ನು ಗಮನಿಸಬಹುದು. ಈ ಸಂಖ್ಯೆಯನ್ನೇ **ಒಂದು ಕೋಟಿ** ಎನ್ನುತ್ತಾರೆ.

ಎಂಟು ಅಂಕಿಯ ಅತಿ ದೊಡ್ಡ ಸಂಖ್ಯೆಗೆ 1ನ್ನು ಸೇರಿಸಿದರೆ ಯಾವ ಸಂಖ್ಯೆ ಬರುತ್ತದೆಯೋ ಹೇಳಬಲ್ಲಿರಾ?

ನಮಗೆ ಅನೇಕ ಸಂದರ್ಭಗಳಲಿ ಅತಿ ದೊಡ್ಡ ಸಂಖ್ಯೆಯ ಪ್ರಸ್ತಾವನೆ ಬರುತ್ತದೆ. ಉದಾಹರಣೆಗೆ ನಮ್ಮ ದೇಶದ ವಿಸ್ತೀರ್ಣ 32,87,263 ಚದರ ಕಿಲೋ ಮೀಟರ್‌ಗಳು. ನಮ್ಮ ರಾಜ್ಯದ ಜನಸಂಖ್ಯೆ 8,46,65,533. ಅದೇ ರೀತಿ ಶಾಲೆಯ ಕೊಠಡಿ ನಿರ್ಮಾಣಕ್ಕೆ ಆಗುವ ಖರ್ಚು, ವ್ಯವಸಾಯದ ಉತ್ಪಾದನೆ, ಗ್ರಹಗಳ ಮಧ್ಯದ ದೂರ, ಮೂರಂಕೆಯ ಸಂಖ್ಯೆಯನ್ನು ಮತ್ತೊಂದು ಮೂರಂಕಿಯ ಇಲ್ಲವೇ ದೊಡ್ಡ ಸಂಖ್ಯೆಯೊಂದಿಗೆ ಗುಣಿಸಿದಾಗ ದೊಡ್ಡ ಸಂಖ್ಯೆಗಳು ಬರುತ್ತವೆ.

ಇಂತಹ ದೊಡ್ಡ ಸಂಖ್ಯೆಗಳ ಬಗ್ಗೆ ತಿಳಿದುಕೊಂಡಾಗ ಉಮಾಳಿಗೆ ತರಗತಿಯಲ್ಲಿ ಶಿಕ್ಷಕರು ಹೇಳಿದ ಜನಗಣತಿ ವಿವರಗಳು ಅರ್ಥವಾಗಿವೆ ಎಂದು ನೀವು ಭಾವಿಸುವಿರಾ! ಇತರ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ.

ಗಣಿತ ಶಿಕ್ಷಕನ ಜನಗಣತಿ 2001 ಮತ್ತು ಜನಗಣತಿ 2011ರ ವಿವರಗಳನ್ನು ಕೇಳಿ ತಿಳಿದುಕೊಂಡು ಅವುಗಳನ್ನು ಓದಿ ಚರ್ಚಿಸಿ ಬರೆಯಿರಿ. ಪಾಠ್ಯಪುಸ್ತಕದ ಕೊನೆ ಕೋಷ್ಟಕಗಳು ಪರಿಶೀಲಿಸಿರಿ.

ನಮ್ಮ ದೇಶದ ಜನ ಸಂಖ್ಯೆ ಎಷ್ಟು ?ಹಿಂದಿನ ಜನಸಂಖ್ಯೆಗೂ (2001), ಪ್ರಸ್ತುತ ಜನಸಂಖ್ಯೆಗೂ (2011) ಎಷ್ಟು ಹೆಚ್ಚಳ ಕಂಡುಬಂದಿದೆ? ಯಾವ ರಾಜ್ಯದಲ್ಲಿ ಜನಸಂಖ್ಯೆ ಅಧಿಕವಾಗಿದೆ ?ಜನಸಂಖ್ಯೆಯ ಆಧಾರದ ಮೇಲೆ ನಮ್ಮ ರಾಜ್ಯ ಎಷ್ಟನೇ ಸ್ಥಾನದಲ್ಲಿದೆ ?

**ಪ್ರಯತ್ನಿಸಿರಿ**

1. ನೀವು ನಿತ್ಯ ಜೀವನದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಆರು ಅಂಕೆಯ ಸಂಖ್ಯೆಗಳನ್ನು ಬಳಸುವ ಯಾವುದದರೂ ಐದು ಸಂದರ್ಭಗಳನ್ನು ಹೇಳಿರಿ.
2. ಎರಡು, ಮೂರು, ನಾಲ್ಕು, ಐದು ಮತ್ತು ಆರು, ಏಳು ಮತ್ತು ಎಂಟು ಅಂಕೆಯ ಸಂಖ್ಯೆಗಳಲ್ಲಿ ಅತಿ ಚಿಕ್ಕ, ಅತಿ ದೊಡ್ಡ ಸಂಖ್ಯೆಗಳನ್ನು ಬರೆಯಿರಿ.



### 1.5.1 ದೊಡ್ಡ ಸಂಖ್ಯೆಗಳ ಸ್ಥಾನ ಬೆಲೆಗಳು.

ಕೆಳಗಿನ ಸಂಖ್ಯೆಗಳನ್ನು ಓದುವುದಕ್ಕೆ ಪ್ರಯತ್ನಿಸಿ

a) 25240  b) 130407  c) 4504155  d) 12200320

ಓದುವುದು ಕಷ್ಟವೇ ? ಓದುವಾಗ ಅಂಕೆಗಳ ಸ್ಥಾನ ಕ್ರಮದಲ್ಲಿ ಕಷ್ಟವೇ ?

a) 25,240  b) 1,30,407  c) 45,04,155  d) 1,22,00,320

ಮೇಲಿನವುಗಳಿಗಿಂತ ಇವುಗಳನ್ನು ಓದುವುದು ಸುಲಭವೇ?

ಕಾಮಾಗಳಿಂದ ದೊಡ್ಡ ಸಂಖ್ಯೆಗಳನ್ನು ಓದುವುದು, ಬರೆಯುವುದು ಸುಲಭವಾಗುತ್ತದೆ.

ಅದೇವಿಧವಾಗಿ ಕೆಲವುಸಂದರ್ಭಗಳಲ್ಲಿ ಇಂಥ ದೊಡ್ಡ ಸಂಖ್ಯೆಗಳನ್ನು ಓದುವುದಕ್ಕೆ ಕೆಲವು ಸೂಚನೆಗಳನ್ನು ಬಳಸುತ್ತೇವೆ. ಉದಾಹರಣೆಗೆ ರಾಧಾ ಇಂತಹ ಸೂಚನೆಗಳನ್ನುಹೇಗೆ ತಿಳಿದು ದೊಡ್ಡ ಸಂಖ್ಯೆಗಳನ್ನು ಓದಿದಳೋ ತಿಳಿಯೋಣ. ಈ ಸೂಚನೆಗಳು ದೊಡ್ಡ ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆಯುವದಕ್ಕೆ ವಿಸ್ತರಿಸಲು ಯಾವರೀತಿ ಉಪಯೋಗವಾಗಿವೆಯೋ ಪರಿಶೀಲಿಸೋಣ.

ಉದಾಹರಣೆಗೆ 367 ಈ ಸಂಖ್ಯೆಯಲ್ಲಿ ಬಿಡಿಸ್ಥಾನ, ಹತ್ತರ ಸ್ಥಾನ ಮತ್ತು ನೂರರ ಸ್ಥಾನದಲ್ಲಿನ ಅಂಕೆಗಳನ್ನು ಗುರ್ತಿಸಿ, ಅವುಗಳಿಗೆ O, T ಮತ್ತು H ಎಂದು ಸೂಚಿಸಿ ಯಾವ ರೀತಿಯಲ್ಲಿ ಬರೆದಿದೆಯೋ ಪರಿಶೀಲಿಸಿ

| H | T | O |
|---|---|---|
| 3 | 6 | 7 |

ವಿಸ್ತರಣಾ ರೂಪ

$3 \times 100 + 6 \times 10 + 7 \times 1$

ಅದೇ ರೀತಿ ಮತ್ತೊಂದು ಸಂಖ್ಯೆ 1729ನ್ನು ಹೇಗೆ ಬರೆದಿದೆಯೋ ಪರಿಶೀಲಿಸಿ.



Downloaded from https:// www.studiestoday.com

Downloaded from https:// www.studiestoday.com

| Th | H | T | O |
|---|---|---|---|
| 1 | 7 | 2 | 9 |

ವಿಸ್ತರಣಾರೂಪ

$1 \times 1000 + 7 \times 100 + 2 \times 10 + 9 \times 1$

ಈ ರೀತಿಯಾಗಿ ಈ ಸೂಚನೆಗಳನ್ನು ದೊಡ್ಡ ಸಂಖ್ಯೆಗಳಾದ ಲಕ್ಷಗಳು, ಕೋಟಿಗಳಿಗೆ ಯಾವ ರೀತಿ ಉಪಯೋಗಿಸಬಹುದೋ ಪಟ್ಟಿಯನ್ನು ನೋಡಿದರೆ ತಿಳಿಯುತ್ತದೆ.

| ಸ್ಥಾನಗಳು | ಕೋಟಿಗಳು | | ಲಕ್ಷಗಳು | | ಸಾವಿರಗಳು | | | | |
|---|---|---|---|---|---|---|---|---|---|
| | ಹತ್ತು ಕೋಟಿ | ಕೋಟಿ | ಹತ್ತು ಲಕ್ಷ | ಲಕ್ಷ | ಹತ್ತು ಸಾವಿರ | ಸಾವಿರ | ನೂರು | ಹತ್ತು | ಬಿಡಿ |
| | (T. Cr) | (Cr) | (T. La) | (La) | (T.Th.) | (Th.) | H | T | O |
| ಸಂಖ್ಯೆ | 100000000 | 10000000 | 1000000 | 100000 | 10000 | 1000 | 100 | 10 | 1 |
| ಸಂಖ್ಯೆಯಲ್ಲಿನ ಅಂಕೆಗಳು | 9 | 8 | 7 | 6 | 5 | 4 | 3 | 2 | 1 |

1ಕೊಟಿ = 100 ಲಕ್ಷಗಳು
= 10,000 ಸಾವಿರಗಳು

1ಲಕ್ಷ = 100 ಸಾವಿರಗಳು
= 10,00 ನೂರುಗಳು

ನಾವು ಈಗ ದೊಡ್ಡ ಸಂಖ್ಯೆಗಳನ್ನು ಸ್ಥಾನ ಬೆಲೆಗಳ ಪಟ್ಟಿಯ ಪ್ರಕಾರ ಹೇಗೆ ಬರೆಯಬೇಕೋ, ಓದಬೇಕೋ ಉದಾಹರಣೆಯಲ್ಲಿ ತೋರಿಸಿದ ಹಾಗೆ ಬರೆಯಿರಿ.

| ಸಂಖ್ಯೆಗಳು | ಹತ್ತು | ಕೋಟಿ ಕೋಟಿ | ಹತ್ತು | ಲಕ್ಷ | ಹತ್ತು ಲಕ್ಷ | ಸಾವಿರ | ನೂರು ಸಾವಿರ | ಹತ್ತು | ಬಿಡಿ | ಓದುವ ವಿಧಾನ 0 |
|---|---|---|---|---|---|---|---|---|---|---|
| 41430495 | - | 4 | 1 | 4 | 3 | 0 | 4 | 9 | 5 | ನಾಲ್ಕು ಕೋಟಿ ಹದಿನಾಲು ಲಕ್ಷ ಮೂವತ್ತು ಸಾವಿರದ ನಾಲ್ಕು ನೂರ ತೊಂಬತ್ತೈದು |
| 304512031 | | | | | | | | | | |
| 241800240 | | | | | | | | | | |
| 69697100 | | | | | | | | | | |
| 100091409 | | | | | | | | | | |

ದೊಡ್ಡ ಸಂಖ್ಯೆಗಳನ್ನು ಬರೆದು, ಅವುಗಳನ್ನು ಸ್ಥಾನ ಬೆಲೆಗಳ ಪ್ರಕಾರ ಓದುವ ರೀತಿಯನ್ನು ಬರೆಯಿರಿ. ಈಗ ದೊಡ್ಡ ಸಂಖ್ಯೆಗಳ ವಿಸ್ತರಣಾ ರೂಪ ಎಷ್ಟು ಸುಲಭವಾಗಿ ಬರೆಯ ಬಹುದಲ್ಲವೇ?

ಉದಾಹರಣೆ : 12735045 ಈ ಸಂಖ್ಯೆಯನ್ನು ವಿಸ್ತರಿಸಿ

$$1,27,35,045 = 1 \times 10000000 + 2 \times 1000000 + 7 \times 100000 + 3 \times 10000 + 5 \times 1000 + 0 \times 100 + 4 \times 10 + 5 \times 1$$

$$= 1 \times 10000000 + 2000000 + 700000 + 30000 + 5\,000 + 4\,0 + 5$$

**ಪ್ರಯತ್ನಿಸಿ :**

ಕೆಳಗಿನ ಸಂಖ್ಯೆಗಳನ್ನು ಕಾಮಗಳಿಂದ ಬರೆದು, ವಿಸ್ತರಿಸಿರಿ.

a) 999999999 b) 34530678

c) 510010051 d) 9490026834





SCERT TELANGANA

Downloaded from https:// www.studiestoday.com

Downloaded from https:// www.studiestoday.com

### 1.5.2 ವಿರಾಮ ಚಿಹ್ನೆ ( ಕಾಮಾ) ಗಳ ಬಳಕೆ

ದೊಡ್ಡ ಸಂಖ್ಯೆಗಳನ್ನು ಬರೆಯುವ ಸಂದರ್ಭದಲ್ಲಿ ನೀವು ಆಗಾಗ ಅಲ್ಪವಿರಾಮಗಳನ್ನು ಬಳಸುವುದನ್ನು ನೀವು ಗಮನಿಸಿರಬಹುದು. ಹಿಂದೂ ಸಂಖ್ಯಾ ಪದ್ಧತಿಯಲ್ಲಿ ನಾವು ಬಿಡಿಗಳು, ಹತ್ತುಗಳು, ನೂರುಗಳು ಸಾವಿರ, ಲಕ್ಷ, ಕೋಟಿಗಳಂಥ ಸ್ಥಾನಗಳನ್ನು ಬರೆಯುತ್ತೇವೆ. ಸಾವಿರಗಳನ್ನು ಲಕ್ಷಗಳನ್ನು ಕೋಟಿಗಳನ್ನು ಓದುವಾಗ ಅಲ್ಪವಿರಾಮಗಳನ್ನು ಉಪಯೋಗಿಸುತ್ತೇವೆ. ಮೊದಲನೇ ಅಲ್ಪವಿರಾಮವನ್ನು ನೂರರ ಸ್ಥಾನದ ನಂತರ( ಅಂದರೆ ಬಲಗಡೆಯಿಂದ ಮೂರಂಕೆಯ ನಂತರ) ಬರೆದು ಮುಂದಿನ ಸಂಖ್ಯೆ ಸಾವಿರ ಎಂದು ಗುರುತಿಸುತ್ತೇವೆ. ಎರಡನೇ ಅಲ್ಪವಿರಾಮವನ್ನು ಮತ್ತೆರಡು ಅಂಕೆಗಳ ನಂತರ ಅಂದರೆ ಹತ್ತುಸಾವಿರದ ಸ್ಥಾನದ ನಂತರ (ಅಂದರೆ ಬಲಗಡೆಯಿಂದ ಐದು ಅಂಕೆಗಳ ನಂತರ) ಮುಂದಿನ ಸಂಖ್ಯೆಗಳನ್ನು 'ಲಕ್ಷಗಳು' ಎಂದು ಗುರುತಿಸುತ್ತೇವೆ. ಮೂರನೇ ಅಲ್ಪವಿರಾಮ ಚಿಹ್ನೆಯನ್ನು ಮತ್ತೆ ಎರಡು ಅಂಕೆಗಳ ನಂತರ ಅಂದರೆ ಹತ್ತು ಲಕ್ಷದ ಸ್ಥಾನದ ನಂತರ ( ಅಂದರೆ ಬಲಗಡೆಯಿಂದ ಏಳು ಅಂಕೆಗಳ ನಂತರ) ಬರೆದು ಮುಂದೆ ಉಳಿದ ಸಂಖ್ಯೆಗಳನ್ನು 'ಕೋಟಿ'ಗಳೆಂದು ಗುರ್ತಿಸುತ್ತೇವೆ. ಅಲ್ಪವಿರಾಮಗಳು ದೊಡ್ಡ ಸಂಖ್ಯೆಗಳನ್ನು ಸ್ಥಾನದ ಪ್ರಕಾರ ಓದುವುದಕ್ಕೆ, ಬರೆಯುವುದಕ್ಕೆ ಉಪಯೋಗವಾಗುತ್ತದೆ.

ಉದಾಹರಣೆಗೆ : ಏಳು ಕೋಟಿ ನಲವತ್ತೈದು ಲಕ್ಷದ ಹದಿನೇಳು ಸಾವಿರದ ಐದು ನೂರು ಈ ಸಂಖ್ಯೆಯನ್ನು ಅಲ್ಪ ವಿರಾಮ ಚಿಹ್ನೆ ಬಳಸಿ ಹೇಗೆ ಬರೆಯುತ್ತೇವೆಯೋ ಗಮನಿಸಿ

7,45 17, 500

ಇದೇ ರೀತಿ ಅಲ್ಪ ವಿರಾಮಗಳಿಂದ ವಿಭಜಿಸಿದ ದೊಡ್ಡ ಸಂಖ್ಯೆ 45,30,14,852 ನ್ನು ಸುಲಭವಾಗಿ ನಲವತ್ತೈದು ಕೋಟಿ, ಮೂವತ್ತು ಲಕ್ಷದ ಹದಿನಾಲ್ಕು ಸಾವಿರದ ಎಂಟು ನೂರ ಐವತ್ತೆರಡು ಎಂದು ಓದಬಹುದು.

**ಪ್ರಯತ್ನಿಸಿ**



ಕೆಳಗಿನ ಸಂಖ್ಯೆಗಳನ್ನು ಓದಿ ಅಕ್ಷರಗಳಲ್ಲಿ ಬರೆಯಿರಿ.

a) 5,06,45,075 b) 12,36,99,140 c) 2,50,00,350



**ಅಭ್ಯಾಸ –1.3**

1. ಕೆಳಗಿನ ಸಂಖ್ಯೆಗಳನ್ನು ಅಲ್ಪ ವಿರಾಮಗಳಿಂದ ವಿಂಗಡಿಸಿ ಬರೆಯಿರಿ.
   i. 11245670 ii. 22402151
   iii. 30608712 iv. 190308020
2. ಕೆಳಗಿನ ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆಯಿರಿ.
   i. 34,025 ii. 7,09,115
   iii. 47,60,00,317 iv. 6,18,07,000
3. ಕೆಳಗಿನವುಗಳನ್ನು ಸಂಖ್ಯೆಯಲ್ಲಿ ಬರೆಯಿರಿ.
   i. ನಾಲ್ಕು ಲಕ್ಷದ ಐವತ್ತೇಳು ಸಾವಿರದ ನಾಲ್ಕು ನೂರು.
   ii. ಅರವತ್ತೇಳು ಲಕ್ಷದ ಎರಡು ಸಾವಿರದ ಏಳು ನೂರ ಎಪ್ಪತ್ತೈದು.
   iii. ಎಂಟು ಕೋಟಿ ಐವತ್ತು ಲಕ್ಷದ ನಲವತ್ತು ಸಾವಿರದ ಮೂರು ನೂರ ಮೂರು.
   iv. ಅರವತ್ತುಕೋಟಿ, ಅರವತ್ತು ಲಕ್ಷದ ಅರವತ್ತು ಸಾವಿರದ ಆರುನೂರ ಅರವತ್ತಾರು.
4. ಕೆಳಗಿನ ಸಂಖ್ಯೆಗಳನ್ನು ವಿಸ್ತರಣಾ ರೂಪದಲ್ಲಿ ಬರೆಯಿರಿ.
   i) 6,40,156 ii) 63,20,500 iii) 1,25,30,275 iv) 75,80,19,202



SCERT TELANGANA

Downloaded from https:// www.studiestoday.com

Downloaded from https:// www.studiestoday.com

5. ಕೆಳಗಿನ ಸಂಖ್ಯೆಗಳ ವಿಸ್ತರಣಾ ರೂಪವನ್ನು ಸಂಕ್ಷಿಪ್ತ ರೂಪದಲ್ಲಿ ಬರೆಯಿರಿ.
   i. 50,00,000 + 4,00,000 + 20,000 + 8,000 + 500 + 20 + 4
   ii. 6,00,00,000 + 40,00,000 + 3,00,000 + 20,000 + 500 + 1
   iii. 3,00,00,000 + 3,00,000 + 7,000 + 800 + 80 + 1
   iv. 7,00,00,000 + 70,00,000 + 7000 + 70.

6. ಕೆಳಗಿನ ಸಂಖ್ಯೆಗಳಲ್ಲಿ ಯಾವುದು ದೊಡ್ಡದು? (>) ಚಿಹ್ನೆ ಉಪಯೋಗಿಸಿ ಬರೆಯಿರಿ.
   i. 4,67,612 ಅಥವಾ 18,71,964    ii. 14,35,10,300 ಅಥವಾ 14,25,10,300

7. ಕೆಳಗಿನ ಸಂಖ್ಯೆಗಳಲ್ಲಿ ಯವುದು ಚಿಕ್ಕದು? (<) ಚಿಹ್ನೆ ಉಪಯೋಗಿಸಿ ಬರೆಯಿರಿ.
   i. 2,00,015 ಅಥವಾ 99,999    ii. 13,50,050 ಅಥವಾ 13,49,785

8. ಕೋಟಿಗಳಲ್ಲಿ '5', ಲಕ್ಷಗಳಲ್ಲಿ '2', ಹತ್ತುಸಾವಿರಗಳಲ್ಲಿ '1', ಹತ್ತುಗಳಲ್ಲಿ '6', ಬಿಡಿಸ್ಥಾನದಲ್ಲಿ'3' ಅಂಕೆಗಳನ್ನು ತುಂಬಿ ಯಾವುದಾದರೂ 10 ಸಂಖ್ಯೆಗಳನ್ನು ಬರೆಯಿರಿ.(ಉಳಿದ ಸ್ಥಾನಗಳಲ್ಲಿ ಯಾವ ಸಂಖ್ಯೆಯಾದರೂ ಬರೆಯಬಹುದು)

### 1.6 ಅಂತರ್‌ರಾಷ್ಟ್ರಿಯ ಸಂಖ್ಯಾ ಪದ್ಧತಿ.

ನಾವು ಸಂಖ್ಯೆಗಳನ್ನು ಓದುವ ವಿಧಾನ ಬರೆಯುವ ವಿಧಾನ ಪ್ರಪಂಚದಲ್ಲಿ ಇತರೆ ದೇಶಗಳಿಗಿಂತ ಭಿನ್ನವಾಗಿದೆ. ನಾವು 6 ಅಂಕೆಗಳ ಸಂಖ್ಯೆಯನ್ನು ಲಕ್ಷಗಳಾಗಿಯೂ 7 ಅಂಕೆಗಳ ಸಂಖ್ಯೆಯನ್ನು ಹತ್ತು ಲಕ್ಷಗಳಾಗಿಯೂ ಅದೇ ರೀತಿ ನಂತರದ ಸ್ಥಾನದ ಸಂಖ್ಯೆಗಳನ್ನು ಕೋಟಿ, ಹತ್ತು ಕೋಟಿ ಎಂದು ಓದುತ್ತೇವೆ.

ಆದರೆ ಅಂತರ್‌ರಾಷ್ಟ್ರೀಯ ಸಂಖ್ಯಾ ಪದ್ಧತಿಯಲ್ಲಿ ಬಿಡಿಗಳು, ಹತ್ತುಗಳು, ನೂರುಗಳು ಸಾವಿರಗಳು ಹತ್ತುಸಾವಿರಗಳು ನಂತರ ನೂರು ಸಾವಿರಗಳು, ಮಿಲಿಯನ್‌ಗಳು ಎಂದು ಓದುತ್ತೇವೆ. ಒಂದು ಮಿಲಿಯನ್ ಎಂದರೆ ಸಾವಿರಸಾವಿರಗಳು ಇಲ್ಲವೇ ಹತ್ತು ಲಕ್ಷಗಳಿಗೆ ಸಮವಾಗಿದೆ. ಅದೇ ರೀತಿ ಹತ್ತು ಮಿಲಿಯನ್ ನೂರು ಮಿಲಿಯನ್ ನಂತರ ಒಂದು ಬಿಲಿಯನ್ ಎನ್ನುತ್ತಾರೆ. ಒಂದು ಬಿಲಿಯನ್ ಎಂದರೆ ಸಾವಿರ ಮಿಲಿಯನ್‌ಗಳಿಗೆ ಸಮ. ಬಿಡಿ ಸ್ಥಾನದಿಂದ ಪ್ರತಿ ಮೂರು ಸ್ಥಾನಗಳ ನಂತರ ಅಲ್ಪ ವಿರಾಮಗಳು ಇರುತ್ತವೆ.

ಉದಾಹರಣೆಗೆ ಒಂದು ಸಂಖ್ಯೆಯನ್ನು ಪರಿಶೀಲಿಸೋಣ 45690255

| ಹಿಂದೂ –ಅರೇಬಿಕ್ ಸಂಖ್ಯಾ ಪದ್ಧತಿಯಲ್ಲಿ | ಅಂತರರಾಷ್ಟ್ರೀಯ ಸಂಖ್ಯಾ ಪದ್ಧತಿಯಲ್ಲಿ |
|---|---|
| 4,56,90,255 | 45,690,255 |
| ನಾಲ್ಕು ಕೋಟಿ ಐವತ್ತಾರು ಲಕ್ಷದ ತೊಂಬತ್ತು ಸಾವಿರದ ಎರಡು ನೂರ ಐವತ್ತೈದು. | ನಲವತ್ತೈದು ಮಿಲಿಯನ್ ಆರುನೂರ ತೊಂಬತು ಸಾವಿರದ ಎರಡು ನೂರ ಐವತ್ತೈದು. |

ಈ ಎರಡು ಸಂಖ್ಯಾಮಾನ. ಪದ್ಧತಿಯಲ್ಲಿ ನೂರರ ಸ್ಥಾನದ ವರೆಗೂ ಯಾವುದೇ ವ್ಯತ್ಯಾಸವಿಲ್ಲ ಎಂಬುದನ್ನು ಗಮನಿಸುತ್ತೀರಿ. ನೀವು ಗಮನಿಸಿದ ಇತರೆ ಅಂಶಗಳನ್ನು ತಿಳಿಸಿ.

ನಾವು ಈಗ ಒಂದೇ ಸಾರಿ ಎರಡೂ ಸಂಖ್ಯಾ ಪದ್ಧತಿಗಳನ್ನು ಹೋಲಿಸೋಣ.

| ಹಿಂದೂಅರೇಬಿಕ್ ಸಂಖ್ಯಾ ಪದ್ಧತಿ | ನೂರು ಕೋಟಿ | ಹತ್ತು ಕೋಟಿ | ಕೋಟಿ | ಹತ್ತು ಲಕ್ಷ | ಲಕ್ಷ | ಹತ್ತು ಸಾವಿರ | ಸಾವಿರ | ನೂರು | ಹತ್ತು | ಬಿಡಿ |
|---|---|---|---|---|---|---|---|---|---|---|
| ಅಂತರರಾಷ್ಟ್ರೀಯ ಸಂಖ್ಯಾಪದ್ಧತಿ | ಬಿಲಿಯನ್ | ನೂರು ಮಿಲಿಯನ್ | ಹತ್ತು ಮಿಲಿಯನ್ | ಮಿಲಿಯನ್ | ನೂರು. ಸಾವಿರ | ಹತ್ತು ಸಾವಿರ | ಸಾವಿರ | ನೂರು | ಹತ್ತು | ಬಿಡಿ |



Downloaded from https:// www.studiestoday.com

Downloaded from https:// www.studiestoday.com

ಮೇಲಿನ ಸ್ಥಾನ ಬೆಲೆ ಕೊಷ್ಟಕದ ಆಧಾರದ ಮೇಲೆ ನಾವು ಈ ಸಂಖ್ಯಾ ಮಾನಗಳ ಮಧ್ಯೆ ಕೆಲವು ಸಂಬಂಧಗಳನ್ನು ಏರ್ಪಡಿಸಬಹುದು.

| | | |
|---|---|---|
| 10 ಲಕ್ಷ | = | 1 ಮಿಲಿಯನ್ |
| 1 ಕೋಟಿ | = | 10 ಮಿಲಿಯನ್ |
| 10 ಕೋಟಿ | = | 100 ಮಿಲಿಯನ್ |
| 100 ಕೋಟಿ | = | 1 ಬಿಲಿಯನ್ |



## ಅಭ್ಯಾಸ –1.4

1. ಕೆಳಗಿನ ಸಂಖ್ಯೆಗಳನ್ನು ಅಂತರರಾಷ್ಟ್ರೀಯ ಸಂಖ್ಯಾಮಾನ ಪದ್ಧತಿಯಲ್ಲಿ ಅಲ್ಪವಿರಾಮ ಚಿಹ್ನೆಯಿಂದ ವಿಂಗಡಿಸಿ ಓದುವ ಕ್ರಮವನ್ನು ಬರೆಯಿರಿ.
   i. 97645315  ii. 20048421  iii. 476356  iv. 9490026834
2. ನಿಮ್ಮ ಸ್ನೇಹಿತರ, ನಿಮ್ಮ ಕುಟುಂಬ ಸದಸ್ಯರುಗಳ ಮೊಬೈಲ್ ಫೋನ್ ನಂಬರಗಳನ್ನು ಸಂಗ್ರಹಿಸಿ ಅವುಗಳಿಗೆ ಅಲ್ಪವಿರಾಮ ಹಾಕಿ ವಿಂಗಡಿಸಿ ಅಂತರ್‌ರಾಷ್ಟ್ರೀಯ ಸಂಖ್ಯಾ ಪದ್ಧತಿಯಲ್ಲಿ ಓದಿ , ಬರೆಯಿರಿ.
3. ಕೆಳಗಿನ ಸಂಖ್ಯೆಗಳನ್ನು ಹಿಂದೂ ಅರೇಬಿಕ್ ಹಾಗೂ ಅಂತರ್‌ರಾಷ್ಟ್ರೀಯ ಸಂಖ್ಯಾ ಪದ್ಧತಿಗಳಲ್ಲಿ ಅಕ್ಷರಗಳಲ್ಲಿ ಬರೆಯಿರಿ.
   i. 123115027  ii. 89643092
4. ಕೆಳಗಿನ ಸಂಖ್ಯೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.
   302,179,468
   i. ಮಿಲಿಯನ್ ಸ್ಥಾನದಲ್ಲಿರುವ ಅಂಕೆ ____________
   ii. ನೂರರ ಸ್ಥಾನದಲ್ಲಿರುವ ಅಂಕೆ ____________
   iii. ಈ ಸಂಖ್ಯೆಯಲ್ಲಿರುವ ಮಿಲಿಯನ್‌ಗಳ ಸಂಖ್ಯೆ ____________
   iv. ಹತ್ತುಮಿಲಿಯನ್ ಸ್ಥಾನದಲ್ಲಿರುವ ಅಂಕೆ ____________

## 1.7 ನಿತ್ಯ ಜೀವನದ ಸಮಸ್ಯೆಗಳಲ್ಲಿ ದೊಡ್ಡ ಸಂಖ್ಯೆಗಳ ಬಳಕೆ

ಉದ್ದದ ಮೂಲ ಮಾನ 'ಮೀಟರ್' $(m)$ ತೂಕದ ಮೂಲಮಾನ 'ಕಿಲೋಗ್ರಾಂ'$(kg)$ ದ್ರವಗಳ ಸಾಂದ್ರತೆಯ ಮೂಲಮಾನ 'ಲೀಟರ್ '$(l)$ ಮತ್ತು ಸಮಯದ ಮೂಲಮಾನ 'ಸೆಕೆಂಡ್' $(s)$ ಬಳಸುವುದು ನಿಮಗೆ ತಿಳಿದಿದೆ. ಎ) ಉದಾಹರಣೆಗೆ ನಾವು ಪೆನ್ಸಿಲ್‌ನ ಉದ್ದವನ್ನು 'ಸೆಂಟಿಮೀಟರ್'ಗಳಲ್ಲಿ ಬಟ್ಟೆಯ ಉದ್ದವನ್ನು ಮೀಟರ್‌ಗಳಲ್ಲಿ ಅಳೆಯುತ್ತೇವೆ. ಅದೇ ರೀತಿ ಎರಡು ಪ್ರದೇಶಗಳ ನಡುವಿನ ದೂರವನ್ನು ಕಿಲೋಮೀಟರ್ ಗಳಲ್ಲಿ $(km)$ ಅಳಯುತ್ತೇವೆ. ಆದರ ಕಾಗದದ ದಪ್ಪವನ್ನು ಅಳೆಯುವಾಗ 'ಸೆಂಟಿಮೀಟರ್' ಪ್ರಮಾಣ ದೊಡ್ಡದಾಗುತ್ತದೆ ಎಂದು ಗಮನಿಸಬಹುದು. ಅಂತಹ ಸಂದರ್ಭದಲ್ಲಿ ನಾವು ಮಿಲಿಮೀಟರ್ $(mm)$ ಬಳಸುತ್ತೇವೆ.

| | | |
|---|---|---|
| 10 ಮಿಲಿಮೀಟರ್ | = | 1 ಸೆಂಟಿಮೀಟರ್ |
| 100 ಸೆಂಟಿಮೀಟರ್ | = | 1 ಮೀಟರ್ |
| 1000 ಮೀಟರ್ | = | 1 ಕಿಲೋಮೀಟರ್ |

ಹಾಗದರೆ 1ಕಿಲೋಮೀಟರ್ ಎಂದರೆ ಎಷ್ಟು ಮಿಲಿಮೀಟರ್‌ಗಳು ಹೇಳುವಿರಾ?

1ಕಿಲೋಮೀಟರ್ = 1000ಮೀ
= 1000 × 100 ಸೆಂ.ಮೀ
= 1000 × 100 × 10 ಮಿ.ಮೀ
= 10,00,000 ಮಿ.ಮೀ



Downloaded from https:// www.studiestoday.com

Downloaded from https:// www.studiestoday.com

ಇದೇ ವಿಧವಾಗಿ ನಾವು ಅಕ್ಕಿ ಅಥವಾ ಗೋಧಿಯನ್ನು ಕಿಲೋಗ್ರಾಂಗಳಲ್ಲಿ ಕೊಂಡುಕೊಳ್ಳುತ್ತೇವೆ. ಆದರೆ ಮಸಾಲೆ ಪದಾರ್ಥಗಳನ್ನು, ಖಾರದ ಪುಡಿ ಮುಂತಾದವುಗಳಿಗೆ ದೊಡ್ಡ ಪ್ರಮಾಣಗಳ ಅಗತ್ಯವಿಲ್ಲ. ಇವುಗಳನ್ನು (g)ಗಳಲ್ಲಿ ಅಳೆಯುತ್ತೇವೆ. 1000 ಗ್ರಾಂ=1 ಕಿಲೋಗ್ರಾಂ. ಅಲ್ಲವೇ! ಹಾಗಾದರೆ 1 ಕಿ.ಗ್ರಾಂ.ಎಂದರೆ ಎಷ್ಟು ಮಿಲ್ಲಿ ಗ್ರಾಂ.ಗಳೊ ಲೆಕ್ಕಿಸಿ.

ಅದೇರೀತಿ ಒಂದು ಬಕೆಟನಲ್ಲಿ ಸಾಧಾರಣವಾಗಿ 20 ಲೀಟರ್ ನೀರು ಹಿಡಿಯುತ್ತವೆ. ಆದರೆ ಕೊಬ್ಬರಿ ಎಣ್ಣೆ, ಗೊಂಬೆಗಳ ಬಣ್ಣಗಳು ಮೊದಲಾದವುಗಳನ್ನು ಮಿಲ್ಲಿ ಲೀಟರಗಳಲ್ಲಿ ಕಚ್ಚಾ ತೈಲದ ಟ್ಯಾಂಕರಗಳಲ್ಲಿನ ಕಚ್ಚಾತೈಲ, ರಿಜರ್ವಾಯರು ನೀರಿನಲ್ಲಿ ನಾವು ಕಿಲೋಲೀಟರಗಳಲ್ಲಿ (kl) ತಿಳಿಸುತ್ತೇವೆ.

1000 ಲೀಟರ್ = 1 ಕಿ.ಲೋ.ಲೀಟರ್

ಆದರೆ 1 ಕಿಲೋಲೀಟರಗೆ ಎಷ್ಟು ಮಿಲ್ಲಿ ಲೀಟರ್ ?

**ಪ್ರಯತ್ನಿಸಿರಿ :**



1. ನಿಮ್ಮ ಜಿಲ್ಲೆಯಲ್ಲಿರುವ ನಾಲ್ಕು ದೊಡ್ಡ ನಗರಗಳನ್ನು ಗುರುತಿಸಿ. ಈ ನಗರಗಳ ಮಧ್ಯೆ ಇರುವ ದೂರವನ್ನು ಕಿಲೋಮೀಟರ್‌ಗಳಲ್ಲಿ ಹೇಳಿ ಈ ದೂರವನ್ನು ಸೆಂಟಿಮೀಟರ್ ಗಳಲ್ಲಿಯೂ, ಮಿಲಿಮೀಟರ್‌ಗಳಲ್ಲಿಯು ತಿಳಿಸಿ.
2. ನಾವು ಮಿಲ್ಲಿಗ್ರಾಂ ಮೂಲ ಮಾನವನ್ನು ಉಪಯೋಗಿಸಿ ಅಳೆಯುವ ಕೆಲವು ವಸ್ತುಗಳನ್ನು ತಿಳಿಸಿ.
3. ಒಂದು ಔಷಧ ಡಬ್ಬಿಯಲ್ಲಿ 1,00,000 ಟ್ಯಾಬ್ಲೆಟ್ ( ಮಾತ್ರೆಗಳು ) ಇವೆ. ಪ್ರತಿಯೊಂದು ಮಾತ್ರೆಯು ತೂಕವು 20 ಮಿಲಿಗ್ರಾಂ ಹೊಂದಿದೆ. ಹಾಗಾದರೆ ಆ ಪೆಟ್ಟಿಗೆಯಲ್ಲಿನ ಒಟ್ಟು ಮಾತ್ರೆಗಳ ತೂಕವನ್ನು ಗ್ರಾಂ. ಗಳಲ್ಲಿ ಹಾಗೂ ಕಿ.ಗ್ರಾಂಗಳಲ್ಲಿ ತಿಳಿಸಿ.
4. ಒಂದು ಆಯಿಲ್ ಟ್ಯಾಂಕರ್‌ನಲ್ಲಿ 20000 ಲೀಟರ್ ಪೆಟ್ರೋಲ್ ಇದೆ. ಇದನ್ನು ಕಿಲೋ ಲೀಟರ್ ಹಾಗೂ ಮಿಲಿ ಲೀಟರ್‌ಗಳಲ್ಲಿ ತಿಳಿಸಿ

ದೊಡ್ಡ ಸಂಖ್ಯೆಗಳನ್ನು ಉಪಯೋಗಿಸಿ ಸಾಧಿಸುವ ಕೆಲವು ನಿತ್ಯ ಜೀವನದ ಸಮಸ್ಯೆಗಳನ್ನು ಪರಿಶೀಲಿಸೋಣ.

**ಉದಾ 1 :** ಸಚಿನ್ ತೆಂಡೂಲ್ಕರ್ ಪ್ರಸಿದ್ಧ ಕ್ರಿಕೆಟ್ ಆಟಗಾರ. ಅವನು ಇಲ್ಲಿಯವರೆಗೆ ಟೆಸ್ಟ್ ಮ್ಯಾಚ್‌ಗಳಲ್ಲಿ 15,030 ರನ್‌ಗಳನ್ನು ಏಕದಿನ ಪಂದ್ಯಗಳಲ್ಲಿ 18,111ಓಟಗಳನ್ನು ಗಳಿಸಿದ್ದಾನೆ. ಅವನು ಎರಡು ರೀತಿಯ ಪಂದ್ಯಗಳಲ್ಲಿ ಸಾಧಿಸಿದ ಒಟ್ಟು ರನ್‌ಗಳೆಷ್ಟು ?

ಪರಿಹಾರ: ತೆಂಡೂಲ್ಕರ್ ಟೆಸ್ಟ್ ಪಂದ್ಯಗಳಲ್ಲಿ ಗಳಿಸಿದ ರನ್‌ಗಳು = 15,030

ಏಕದಿನ ಪಂದ್ಯಗಳಲ್ಲಿ ಗಳಿಸಿದ ರನ್‌ಗಳು = 18,111

ಎರಡು ರೀತಿಯ ಪಂದ್ಯಗಳಲ್ಲಿ ಗಳಿಸಿದ ಒಟು ರನ್‌ಗಳು = **33,141**

**ಉದಾ 2 :** ಒಂದು ದಿನ ಪತ್ರಿಕೆ ಪ್ರತಿದಿನ 16 ಪುಟಗಳಲ್ಲಿ ಮುದ್ರಿತವಾಗುತ್ತದೆ. ಒಂದು ದಿನದಲ್ಲಿ 15,020 ಪ್ರತಿಗಳು ಮುದ್ರಿತವಾದರೆ ಒಂದು ದಿನದಲ್ಲಿ ಮುದ್ರಿತವಾದ ಪುಟಗಳ ಸಂಖ್ಯೆ ಎಷ್ಟು ?

ಪರಿಹಾರ: ಪ್ರತಿ ದಿನ ಮುದ್ರಿತವಾಗುವ ಪ್ರತಿಗಳ ಸಂಖ್ಯೆ = 15,020

ಪ್ರತಿಯೊಂದು ಪ್ರತಿಯಲ್ಲಿನ ಪುಟಗಳ ಸಂಖ್ಯೆ = 16

ಒಂದು ದಿನದಲ್ಲಿ ಮುದ್ರಿತವಾದ ಒಟ್ಟು ಪುಟಗಳ ಸಂಖ್ಯೆ = 15,020 × 16 ಪುಟಗಳು.

ಒಟ್ಟು ಪುಟಗಳು ಎಷ್ಟಿರುತ್ತವೆಯೋ ಲೆಕ್ಕ ಹಾಕಲು ಪ್ರಯತ್ನಿಸಿರಿ.ಇವುಸುಮಾರಾಗಿ2,00,000 ಪುಟಗಳಿರಬಹುದಲ್ಲವೇ ?.

ಹಾಗಾದರೆ ಗುಣಿಸಿ ನೋಡೋಣ = 15,020 × 16 = 2,40,320

ಹಾಗಾದರೆ ಪ್ರತಿದಿನ 2,40,320ಪುಟಗಳು ಮುದ್ರಣಗೊಳ್ಳುತ್ತವೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಉದಾ 3:** ಒಂದು ಹೋಟೆಲ್‌ನಲ್ಲಿ ಪ್ರತಿದಿನ 15 ಲೀಟರ್ ಹಾಲು ಕೊಳ್ಳಲಾಗುತ್ತದೆ. ಒಂದು ಲೋಟ ಟೀ ತಯಾರಿಸಲು 25 ಮೀ.ಲೀ. ಹಾಲು ಬೇಕು. ಹಾಗಾದರೆ 15 ಲೀಟರ್ ಹಾಲಿನಲ್ಲಿ ಎಷ್ಟು ಕಪ್ಪು ಟೀ ತಯಾರಿಸ ಬಹುದು.

**ಪರಿಹಾರ:** ಹೋಟೆಲ್‌ನಲ್ಲಿರುವ ಹಾಲು = 15 ಲೀ

= $15 \times 1000$

= 15000 ಮಿ.ಲೀ

ಒಂದು ಕಪ್ ಟೀ ತಯಾರಿಸಲು ಬೇಕಾದ ಹಾಲು = 25 ಮಿ.ಲೀ.

ಒಟ್ಟು ಹಾಲಿನಲ್ಲಿ ತಯಾರುಮಾಡಬಹುದಾದ ಟೀ = $15000 \div 25$

ಹಾಗಾದರೆ ಒಟ್ಟು 15 ಲೀ. ನಲ್ಲಿ ತಯಾರಿಸಬಹುದಾದ ಟೀ ಪ್ರಮಾಣ = 600 ಕಪ್‌ಗಳು.



## ಅಭ್ಯಾಸ –1.5

1. ನವದೆಹಲಿಯಲ್ಲಿ ಜರುಗಿದ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಮೊದಲ ನಾಲ್ಕು ದಿನಗಳಲ್ಲಿ ಹಾಜರಾದ ಪ್ರೇಕ್ಷಕರ ಸಂಖ್ಯೆ ಕ್ರಮವಾಗಿ 15,290, 14,181, 14,235ಮತ್ತು 10,578ಎಂದು ನಮೂದಿಸಲಾಗಿದೆ. ಈ ನಾಲ್ಕು ದಿನಗಳಲ್ಲಿ ಹಾಜರಾದ ಒಟ್ಟು ಪ್ರೇಕ್ಷಕರ ಸಂಖ್ಯೆ ಎಷ್ಟು ?
2. ಲೋಕಸಭೆಗೆ ನಡೆದ ಒಂದು ಎಲೆಕ್ಷನ್‌ನಲ್ಲಿ ಗೆಲುವು ಸಾಧಿಸಿದ ಅಭ್ಯರ್ಥಿಗೆ 5,87,500 ಓಟುಗಳು ಸೋತ ಅಭ್ಯರ್ಥಿಗೆ 3,52,768 ಓಟುಗಳು ಬಂದಿವೆ. ಗೆಲುವು ಸಾಧಿಸಿದ ಅಭ್ಯರ್ಥಿ ಎಷ್ಟು ಓಟುಗಳ ಅಂತರದಲ್ಲಿ ಗೆದ್ದರುವನೋ ಕಂಡುಹಿಡಿಯಿರಿ.
3. 5, 3, 4, 0 ಮತ್ತು 7 ಅಂಕೆಗಳಿಂದ ಏರ್ಪಡುವ ಐದಂಕೆಯ ಅತಿ ದೊಡ್ಡ ಸಂಖ್ಯೆ ಮತ್ತು ಅತಿಚಿಕ್ಕ ಸಂಖ್ಯೆಗಳ ನಡುವಿನ ವ್ಯತ್ಯಾಸ ತಿಳಿಸಿ. (ಒಂದಂಕೆಯನ್ನು ಒಂದು ಸಲ ಬಳಸಿ)
4. ಒಂದು ಸೈಕಲ್ ತಯಾರಿಸುವ ಕಂಪನಿ ಒಂದು ದಿನಕ್ಕೆ 3,125 ಸೈಕಲ್‌ಗಳನ್ನು ತಯಾರಿಸಿದರೆ ಒಂದು ತಿಂಗಳಲ್ಲಿ ಕಂಪನಿ ತಯಾರಿಸಿದ ಒಟ್ಟು ಸೈಕಲ್‌ಗಳ ಸಂಖ್ಯೆ ಎಷ್ಟು ?
5. ಒಂದು ಹೆಲಿಕಾಪ್ಟರ್ 1 ಗಂಟೆಗೆ 600 ಕಿ.ಮೀ. ಚಲಿಸಿದರೆ ಅದು 4 ಗಂಟೆಯಲ್ಲಿ ಪ್ರಯಾಣಿಸಿದ ದೂರ ಎಷ್ಟು ?
6. ಸಮ ಪ್ರಮಾಣದಲ್ಲಿರುವ ಐದು ಬಿಸ್ಕೆಟ್ ಪ್ಯಾಕೆಟ್ ಪೆಟ್ಟಿಗೆಯಲ್ಲಿ ತೂಕ 8 ಕಿ.ಗ್ರಾಂ. 400 ಗ್ರಾಂ ಆದರೆ ಪ್ರತಿ ಪ್ಯಾಕೆಟ್ ತೂಕ ಎಷ್ಟು ?
7. ಪ್ರತಿದಿನ ಗಾಯತ್ರಿ ಶಾಲೆಗೆ ನಡೆದು ಹೋಗಿ ಬರುತ್ತಾಳೆ. ಮನೆಯಿಂದ ಶಾಲೆಗೆ ಇರುವ ದೂರ 1 ಕಿ.ಮೀ 875 ಮೀ ಆದರೆ 6 ದಿನಗಳಲಿ ಅವಳು ನಡೆದ ಒಟ್ಟು ದೂರ ವೆಷ್ಟು ?
8. ಒಬ್ಬ ವಿದ್ಯಾರ್ಥಿಗೆ ಶಾಲಾ ಸಮವಸ್ತ್ರದ ಅಂಗಿ ತಯಾರಿಸಲು 1 ಮೀ 80 ಸೆಂ.ಮೀ ಉದ್ದದ ಬಟ್ಟೆ ಬೇಕು 40 ಮೀ ಉದ್ದದ ಬಟ್ಟೆಯಿಂದ ಎಷ್ಟು ಸಮವಸ್ತ್ರದ ಅಂಗಿಗಳನ್ನು ತಯಾರಿಸಬಹುದು ? ಇನ್ನೂ ಎಷ್ಟು ಬಟ್ಟೆ ಉಳಿಯುವುದು ?
9. ಒಂದು ಲೀ ಪೆಟ್ರೋಲಿನ ಬೆಲೆ ₹60 ಆಗಿದೆ.ಒಂದು ಪೆಟ್ರೋಲ್ ಬಂಕ್‌ನಲ್ಲಿ ಪ್ರತಿದಿನ 750 ಲೀ ಪೆಟ್ರೋಲನ್ನು ಮಾರಿದರೆ ದಿನದ ಅಂತ್ಯದಲ್ಲಿ ಅವರು ಗಳಿಸುವ ಹಣವೆಷ್ಟು?

## ಆಲೋಚಿಸಿ, ಚರ್ಚಿಸಿ ಬರೆಯಿರಿ



1. ಅಹ್ಮದಾಬಾದ್ ನಿವಸಿಸುವ ನೀವು 400 ಮೀ ದೂರದಲ್ಲಿರುವ ಸ್ಟೇಷನ್ ಗೆ ಬಸ್ಸಿನಲ್ಲಿ ಸೇರಿದ್ದೀಯ. ರೈಲಿನಲ್ಲಿ 15ಕಿ.ಮೀ ದೂರದಲ್ಲಿರುವ ಗಾಂಧೀನಗರ್ ಹೋಗಿದ್ದೀಯ. ಅಲ್ಲಿಂದ 8 ಕಿ.ಮೀ ದೂರದಲ್ಲಿರುವ ಅತ್ತೆ ಮನೆಗೆ ಕಾರಿನಲ್ಲಿ ಸೇರಿಕೊಂಡಿದ್ದೀಯ ಎಂದುಕೊಳ್ಳೋಣ.
   i) ನಿಮ್ಮ ಅತ್ತೆ ಮನೆಗೆ ಸೇರಲು ನೀನು ಒಟ್ಟು ಎಷ್ಟು ದೂರ ಪ್ರಯಾಣಿಸಿದ್ದೀಯ.
   ii) ಇದೇ ವಿಧವಾಗಿ ಏಳು ದಿನ ಪ್ರಯಾಣಿಸಿದರೆ ಒಟ್ಟು ಎಷ್ಟು ದೂರ ಪ್ರಯಾಣಿಸಿದ ಹಾಗೆ ಹೇಳಿರಿ.
2. ನಿಮ್ಮ ಪಾಠಶಾಲೆಯಲ್ಲಿ ಕುಡಿಯುವ ನೀರನ್ನು ಇಡುವ ಟ್ಯಾಂಕ್ 2 ಕಿಲೋ ಲೀಟರುಗಳ ಸಾಮರ್ಥ್ಯಇದೆ. ಒಂದು ದಿನ ಕೆಲವು ವಿದ್ಯಾರ್ಥಿಗಳು 2 ಲೀಟರ್‌ನಂತೆ ನೀರು ತಂದು ತುಂಬಿದ್ದಾರೆ. ಗಡಿಗೆ ತುಂಬಲು ಇನ್ನು 600ಲೀಟರ್ ಗಳ ನೀರು ಅವಶ್ಯಕವಾದರೆ ಎಷ್ಟು ಮಂದಿ ವಿದ್ಯಾರ್ಥಿಗಳು ಆ ದಿನ ನೀರನ್ನು ತಂದ ಹಾಗೆಯೋ ಹೇಳಿರಿ?



SCERT TELANGANA

Downloaded from https:// www.studiestoday.com

Downloaded from https:// www.studiestoday.com

## ನೆನಪಿನಲ್ಲಿಡಬೇಕಾದ ಅಂಶಗಳು

1. ಕೊಟ್ಟ ಎರಡು ಸಂಖ್ಯೆಗಳಲ್ಲಿ ಹೆಚ್ಚು ಅಂಕೆಗಳಿರುವ ಸಂಖ್ಯೆಗಳು ದೊಡ್ಡದು. ಎರಡರಲ್ಲಿ ಅಂಕೆಗಳ ಸಂಖ್ಯೆ ಸಮವಾದರೆ ಎಡಗಡೆ ಕೊನೆಯಲ್ಲಿರುವ ಅಂಕೆಗಳಲ್ಲಿ ದೊಡ್ಡದಿರುವ ಸಂಖ್ಯೆ ದೊಡ್ಡದು. ಎಡಗಡೆ ಇರುವ ಅಂಕೆಗಳೂ ಸಮನಾದರೆ ಅದಾದ ನಂತರ ಬರುವ ಅಂಕೆಗಳನ್ನು ಹೋಲಿಸಬೇಕು.
2. ಕೊಟ್ಟಿರುವ ಅಂಕೆಗಳಲ್ಲಿ ಅತಿ ದೊಡ್ಡ ಇಲ್ಲವೇ ಅತಿ ಚಿಕ್ಕ ಸಂಖ್ಯೆಗಳನ್ನು ಬರೆಯುವುದಕ್ಕೆ ಅತಿ ದೊಡ್ಡ ಅಂಕೆಯಿಂದ ಪ್ರಾರಂಭಿಸಿ ಅತಿ ಚಿಕ್ಕ ಅಂಕೆಯ (ಅತಿದೊಡ್ಡ ಸಂಖ್ಯೆ) ವರೆಗೆ ಎಡದಿಂದ ಬಲಕ್ಕೆ ಬರೆಯಬೇಕು.
3. ನಾಲ್ಕಂಕೆಯ ಅತಿ ಚಿಕ್ಕ ಸಂಖ್ಯೆ 1000 ಇದು ಮೂರಂಕಿಯ ಅತಿ ದೊಡ್ಡ ಸಂಖ್ಯೆಗೆ 1ನ್ನು ಸೇರಿಸಿದರೆ ಬರುತ್ತದೆ. ಅದೇ ರೀತಿಯಾಗಿ ನಾಲ್ಕಂಕಿಯ ಅತಿದೊಡ್ಡ ಸಂಖ್ಯೆ 9999ಕ್ಕೆ 1ನ್ನು ಸೇರಿಸಿದರೆ ಐದಂಕಿಯ ಅತಿ ಚಿಕ್ಕ ಸಂಖ್ಯೆ 10,000 ಬರುತ್ತದೆ. ಇದೇ ರೀತಿ ಐದು ಆರು ಏಳು ... ಅಂಕೆಗಳ ಸಂಖ್ಯೆಗಳೂ ಕೂಡ ವರ್ತಿಸುತ್ತವೆ.
4. ಹಿಂದೂ ಅರೇಬಿಕ್ ಸಂಖ್ಯಾ ಪದ್ಧತಿಯಲ್ಲಿ ಬಲಭಾಗದಿಂದ ಎಡಭಾಗಕ್ಕೆ 3,2,2,2 .......... ಸ್ಥಾನಗಳ ನಂತರ ಅಲ್ಪವಿರಾಮ ಹಾಕಿದ ಸಂಖ್ಯೆಗಳನ್ನು ಸುಲಭವಾಗಿ ಓದಬಹುದು.

   ಅಂತರರಾಷ್ಟ್ರೀಯ ಸಂಖ್ಯಾ ಪದ್ಧತಿಯಲ್ಲಿ ಬಲಭಾಗದಿಂದ ಎಡಕ್ಕೆ ಪ್ರತಿ ಮೂರು ಸ್ಥಾನಗಳಿಗೆ ಅಲ್ಪವಿರಾಮ ಹಾಕಿ ಓದುತ್ತೇವೆ.
5. ದೈನಂದಿನ ಜೀವನದಲ್ಲಿ ದೊಡ್ಡಸಂಖ್ಯೆಗಳನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸುತ್ತೇವೆ. ಜಿಲ್ಲೆಯಲ್ಲಿರುವ ವಿಧ್ಯಾರ್ಥಿಗಳ ಸಂಖ್ಯೆ, ಪಟ್ಟಣ ಜನಾಭಾ, ಆಸ್ತಿಗಳ ಪರಭಾರೆ, ದೇಶದಲ್ಲಿ ಪ್ರಧಾನ ನಗರಗಳ ಮಧ್ಯದೂರ ಮೊದಲಾದವು.
6. ಒಂದು ಸಾಧಾರಣ ಪ್ರಮಾಣಕ್ಕೆ 1000 ರಷ್ಟನ್ನು ಕಿಲೋದಿಂದಲೂ 100 ರಷ್ಟನ್ನು ಮೀಟರ್ ನಿಂದಲೂ 10 ರಷ್ಟನ್ನು ಮಿಲ್ಲಿಗಳಿಂದಲೂ ಅಳೆಯುತ್ತಾರೆ.

   1 ಸೆಂ.ಮೀ = 10 ಮಿ.ಮೀ. ; 1 ಮೀ= 100 ಸೆಂ.ಮೀ.ಅಥವಾ 1ಮೀ=1000 ಮಿ.ಮೀ.
7. ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ನಿರ್ದಿಷ್ಟವಾದ ಸಂಖ್ಯೆಯನ್ನು ಹೇಳಲಾರೆವು. ಊಹಿಸಿ ಸಂಖ್ಯೆ ಹೇಳುತ್ತೇವೆ. ಉದಾಹರಣೆಗೆ ಒಂದು ಅಂತರ್‌ರಾಷ್ಟ್ರೀಯ ಹಾಕಿ ಆಟಕ್ಕೆ ಬಂದಿರುವ ವೀಕ್ಷಕರನ್ನು ಊಹಿಸಿ ಸುಮಾರು 51,000 ಎಂದು ಹೇಳಬಹುದು.
8. ನಿತ್ಯ ಜೀವನದಲ್ಲಿ ರಾಶಿಗಳು, ಬೆಲೆಗಳನ್ನು ತಿಳಿಸುವಾಗ ಅವುಗಳನ್ನು ಸಮೀಪ ಸಂಖ್ಯೆಗೆ ಅಂದಾಜುಮಾಡಿ ಹೇಳುತ್ತೇವೆ.
9. ಸಂಖ್ಯಾ ಪ್ರಕ್ರಿಯೆಯಲ್ಲಿ ಕೆಲವು ಸಂದರ್ಭಗಳಲ್ಲಿ ಸುಲಭವಾಗಿ ಅಂದಾಜು ಮಾಡಲು ಸಂಖ್ಯೆಗಳನ್ನು ಸರಿಪಡಿಸುತ್ತೇವೆ.
10. ಸಂಖ್ಯೆಗಳನ್ನು ಹಿಂದೂ ಅರೇಬಿಕ್ ಸಂಖ್ಯಾ ಪದ್ಧತಿ ಹಾಗೂ ಅಂತರರಾಷ್ಟ್ರೀಯ ಸಂಖ್ಯಾ ಪದ್ಧತಿಯಲ್ಲಿ ಓದುವುದು, ಬರೆಯುವುದು.

**ಶ್ರೀನಿವಾಸ ರಾಮಾನುಜನ್ (ಭಾರತ)**

**1887–1920**



ಇವರು ಭಾರತದ ಪ್ರಸಿದ್ಧ ಗಣಿತಜ್ಞ, ಇಂಗ್ಲೇಂಡಿನ ಫೆಲೋ ರಾಯಲ್ ಸೊಸೈಟಿಗೆ ಆಯ್ಕೆಯಾದ ಪ್ರಥಮ ಭಾರತೀಯ ವ್ಯಕ್ತಿ. 1729 ಎಂಬುದು ರಾಮಾನುಜನ್ ಸಂಖ್ಯೆ ಎನ್ನುತ್ತಾರೆ. ಪ್ರತಿವರ್ಷ ಡಿಸೆಂಬರ್ 22ನ್ನು ಇವರ ಜನ್ಮ ದಿನದ ನೆನಪಿಗಾಗಿ ಗಣಿತ ದಿನಾಚರಣೆ ಎಂದು ಆಚರಿಸಲಾಗುತ್ತದೆ.




**ಇವರ ನೆನಪಿಗಾಗಿ ಭಾರತ ಸರ್ಕಾರವು 2011ರಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತು.**

**ಭಾರತ ಸರ್ಕಾರ 2012ನ್ನು ಗಣಿತ ವರ್ಷವಾಗಿ ಪ್ರಕಟಿಸಿದೆ.**

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ-2

# ಪೂರ್ಣ ಸಂಖ್ಯೆಗಳು

## (WHOLE NUMBERS)

### 2.1 ಪರಿಚಯ

ನಾವು ವಸ್ತುಗಳನ್ನು ಎಣಿಕೆಮಾಡುವುದನ್ನು ಹಿಂದಿನ ತರಗತಿಯಲ್ಲಿ ಕಲಿತು ಕೊಂಡಿದ್ದೇವೆ. ಎಣಿಕೆ ಮಾಡುವಾಗ 1, 2, 3, ..... ಎಂಬ ಸಂಖ್ಯೆಗಳು ಬೇಕಾಗುತ್ತವೆ. ಈ ಸಂಖ್ಯೆಗಳನ್ನು ಸ್ವಾಭಾವಿಕ ಸಂಖ್ಯೆಗಳು ಎನ್ನುವರು. ಸ್ವಾಭಾವಿಕ ಸಂಖ್ಯೆಗಳ ಗಣವನ್ನು N ನಿಂದ ಸೂಚಿಸುವರು N = {1, 2, 3, 4, .....} ಎಂದು ಬರೆಯುತ್ತೇವೆ.

ಸ್ವಾಭಾವಿಕ ಸಂಖ್ಯೆಗಳ ಬಗ್ಗೆ ಕಲಿಯುವಾಗ, ಯಾವುದೇ ಸ್ವಾಭಾವಿಕ ಸಂಖ್ಯೆಗೆ '1' ಅನ್ನು ಸೇರಿಸಿದರೆ ಆ ನಂತರದ ಸಂಖ್ಯೆ ಬರುವುದೆಂದು ತಿಳಿದುಕೊಂಡಿದ್ದೇವೆ. ಉದಾಹರಣೆಗೆ '16' ಕ್ಕೆ '1', ನ್ನು ಸೇರಿಸಿದರೆ 17 ಬರುವುದು. ಇದು ಕೂಡ ಒಂದು ಸ್ವಾಭಾವಿಕ ಸಂಖ್ಯೆ. ಇದೇ ರೀತಿಯಾಗಿ ಯಾವುದಾದರೂ ಒಂದು ಸ್ವಾಭಾವಿಕ ಸಂಖ್ಯೆಯಿಂದ 1ನ್ನು ಕಳೆದರೆ, ಸಾಧಾರಣವಾಗಿ ಸ್ವಾಭಾವಿಕ ಸಂಖ್ಯೆಗೆ ಬರುವುದು. ಉದಾಹರಣೆಗೆ 25 ಎಂಬ ಸ್ವಾಭಾವಿಕ ಸಂಖ್ಯೆಯಿಂದ 1ನ್ನು ಕಳೆದರೆ 24 ಬರುವುದು. ಇದು ಕೂಡ ಒಂದು ಸ್ವಾಭಾವಿಕ ಸಂಖ್ಯೆಯೇ.

ಯಾವುದಾದರೂ ಒಂದು ಸ್ವಾಭಾವಿಕ ಸಂಖ್ಯೆಯ ಮುಂದಿನ ಸಂಖ್ಯೆಯನ್ನು ಉತ್ತರ ಸಂಖ್ಯೆ ಎಂದು , ಹಿಂದಿನ ಸಂಖ್ಯೆಯನ್ನು ಪೂರ್ವ ಸಂಖ್ಯೆ ಎಂದು ಎನ್ನುವರು.

ಉದಾಹರಣೆಗೆ 9ಕ್ಕೆ ಉತ್ತರ ಸಂಖ್ಯೆ 10 ಹಾಗೆಯೇ 9ಕ್ಕೆ ಪೂರ್ವ ಸಂಖ್ಯೆ 8. ಈಗ ಕೊಟ್ಟಿರುವ ಸಂಖ್ಯೆಗಳಿಗೆ ಪೂರ್ವ ಸಂಖ್ಯೆ, ಉತ್ತರ ಸಂಖ್ಯೆಗಳಿಂದ ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿ.

| ಕ್ರ.ಸಂ. | ಸ್ವಾಭಾವಿಕ ಸಂಖ್ಯೆ | ಪೂರ್ವ ಸಂಖ್ಯೆ | ಉತ್ತರ ಸಂಖ್ಯೆ |
|---|---|---|---|
| 1. | 13 | | |
| 2. | 237 | | |
| 3. | 999 | | |
| 4. | 26 | | |
| 5 | 9 | | |
| 6 | 1 | | |

ನಿಮ್ಮ ಸ್ನೇಹಿತರೊಡನೆ ಚರ್ಚಿಸಿ.

1. ಯಾವ ಸ್ವಾಭಾವಿಕ ಸಂಖ್ಯೆಗೆ ಉತ್ತರ ಸಂಖ್ಯೆ ಇಲ್ಲ?
2. ಯಾವ ಸ್ವಾಭಾವಿಕ ಸಂಖ್ಯೆಗೆ ಪೂರ್ವ ಸಂಖ್ಯೆ ಇಲ್ಲ?

### 2.2 ಪೂರ್ಣಸಂಖ್ಯೆಗಳು

1 ಕ್ಕೆ ಪೂರ್ವ ಸಂಖ್ಯೆ ಇಲ್ಲ, ಎಂದು ತಿಳಿದುಕೊಂಡಿರುವಿರಿ. ಆದ್ದರಿಂದ 0 ನ್ನು ಸ್ವಾಭಾವಿಕ ಸಂಖ್ಯೆಗಳ ಗಣಕ್ಕೆ ಸೇರಿಸಿದಾಗ ಪೂರ್ಣಸಂಖ್ಯೆಗಳ ಗಣವಾಗಿ ಏರ್ಪಡುತ್ತದೆ. 0 ಯಿಂದ ಕೂಡಿದ ಸ್ವಾಭಾವಿಕ ಸಂಖ್ಯೆಗಳು ಪೂರ್ಣಸಂಖ್ಯೆಗಳ ಗಣವಾಗುತ್ತದೆ.

ಪೂರ್ಣ ಸಂಖ್ಯೆಗಳ ಗಣವನ್ನು ಕೆಳಗಿನಂತೆ ಸೂಚಿಸುತ್ತೇವೆ

W = {0, 1, 2, 3......}

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿ**



ಅತಿ ಚಿಕ್ಕ ಪೂರ್ಣಸಂಖ್ಯೆ ಯಾವುದು?

**ಆಲೋಚಿಸಿ, ಚರ್ಚಿಸಿ ಬರೆಯಿರಿ.**



1. ಸ್ವಾಭಾವಿಕ ಸಂಖ್ಯೆಗಳೆಲ್ಲವೂ, ಪೂರ್ಣಸಂಖ್ಯೆಗಳಾಗುವವೇ?
2. ಪೂರ್ಣಸಂಖ್ಯೆಗಳೆಲ್ಲವೂ ಸ್ವಾಭಾವಿಕ ಸಂಖ್ಯೆಗಳಾಗುವವೇ?

## 2.3 ಪೂರ್ಣಸಂಖ್ಯೆಗಳನ್ನು ಸಂಖ್ಯಾ ರೇಖೆಯ ಮೇಲೆ ತೋರಿಸುವುದು.

ಒಂದು ಸರಳ ರೇಖೆಯನ್ನು ಎಳೆಯಿರಿ. ಅದರ ಮೇಲೆ ಒಂದು ಬಿಂದುವನ್ನು ಗುರ್ತಿಸಿ. ಅದನ್ನು 0 ಯಿಂದ ಸೂಚಿಸಿ. 0 ಗೆ ಬಲಭಾಗಕ್ಕೆ ಸಾಧ್ಯವಾದಷ್ಟು ಬಿಂದುಗಳನ್ನು ಸಮದೂರದಲ್ಲಿ ಗುರ್ತಿಸಿ, ಅದಕ್ಕೆ 1, 2, 3, 4, .....ಗಳಾಗಿ ಸೂಚಿಸಿರಿ. ಯಾವುದೇ ಎರಡು ಕ್ರಮ ಬಿಂದುಗಳ ಮಧ್ಯದೂರವನ್ನು ಪ್ರಮಾಣದೂರ ಎನ್ನುವರು. ಸಂಖ್ಯೆಯ ರೇಖೆಯ ಮೇಲೆ ಎಷ್ಟು ಪೂರ್ಣಸಂಖ್ಯೆಗಳನ್ನಾದರು ಬಲಕ್ಕೆ ಗುರುತಿಸುತ್ತಾ ಹೋಗಬಹುದು.

ಪೂರ್ಣಸಂಖ್ಯೆಗಳ ಸಂಖ್ಯಾರೇಖೆ:




ಮೇಲೆ ಕೊಟ್ಟಿರುವ ಸಂಖ್ಯೆರೇಖೆಯನ್ನು ಗಮನಿಸಿ, ಅದರ ಮೇಲಿನ ಯಾವ ಸಂಖ್ಯೆಗಾಗಲಿ, ಉತ್ತರ ಸಂಖ್ಯೆ ಅದಕ್ಕೆ ಯಾವ ಕಡೆ ಇದೆ ಹೇಳಬಲ್ಲಿರಾ? 3 ರ ಉತ್ತರ ಸಂಖ್ಯೆ 4. 3 ಕಿಂತ 4 ದೊಡ್ಡ ಸಂಖ್ಯೆ ಇದು 3 ರ ಬಲಭಾಗಕ್ಕೆ ಇರುತ್ತದೆ.

ಹಾಗಾದರೆ, ಸಂಖ್ಯಾರೇಖೆಯ ಮೇಲಿನ ಒಂದು ಸಂಖ್ಯೆಯ ಬಲಕ್ಕಿರುವ ಎಲ್ಲಾ ಸಂಖ್ಯೆಗಳು ಯಾವಾಗಲೂ ಆ ಸಂಖ್ಯೆಗಿಂತ ದೊಡ್ಡ ಸಂಖ್ಯೆಗಳೆಂದು ಹೇಳಬಲ್ಲೆವೇ?

ನಿಮ್ಮ ಸ್ನೇಹಿತರೊಡನೆ ಚರ್ಚಿಸಿ ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿ.

| ಕ್ರ.ಸಂ | ಸಂಖ್ಯೆಗಳು | ಸಂಖ್ಯಾರೇಖೆಯ ಮೇಲಿನಸ್ಥಾನ | ಸಂಖ್ಯೆಗಳ ಮಧ್ಯ ಸಂಬಂಧ. |
|---|---|---|---|
| 1. | 12, 8 | 12 ,8 ಕ್ಕೆ ಬಲಭಾಗದಲ್ಲಿದೆ | 12 > 8 |
| 2. | 12, 16 | | |
| 3. | 236, 210 | | |
| 4. | 1182, 9521 | | |
| 5. | 10046, 10960 | | |

**ಸಂಖ್ಯಾರೇಖೆಯ ಮೇಲೆ ಸಂಕಲನ**

ಪೂರ್ಣಸಂಖ್ಯೆಗಳ ಸಂಕಲವನ್ನು ಸಂಖ್ಯಾರೇಖೆಯ ಮೇಲೆ ತೋರಿಸಬಹುದು. 2 ಮತ್ತು 3 ಸಂಖ್ಯೆಗಳ ಸಂಕಲನವನ್ನು ಕೆಳಗಿನ ರೇಖೆಯ ಮೇಲೆ ತೋರಿಸಲಾಗಿದೆ.




2 ಕ್ಕೆ 3 ನ್ನು ಸೇರಿಸಬೇಕು. ಆದ್ದರಿಂದ ಮೇಲೆ ತೋರಿಸಿದಂತೆ ಸಂಖ್ಯಾರೇಖೆಯ ಮೇಲೆ 2 ರಿಂದ ಪ್ರಾರಂಭಿಸಿ, ಅದರ ಬಲಕ್ಕೆ ಒಂದು ಪ್ರಮಾಣ ದೂರವನ್ನು 3 ಬಾರಿ ಚಲಿಸಿದರೆ 5 ನ್ನು ಸೇರುತ್ತೇವೆ.

ಆದ್ದರಿಂದ $2 + 3 = 5$

ಅದಕ್ಕಾಗಿ ಯಾವ ಸಂಖ್ಯೆಯನ್ನಾಗಲೀ ಸೇರಿಸಬೇಕಾದರೆ, ಸಂಖ್ಯಾರೇಖೆಯ ಮೇಲೆ ಬಲಕ್ಕೆ ಚಲಿಸುತ್ತೇವೆ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಸಂಖ್ಯಾರೇಖೆಯ ಮೇಲೆ ವ್ಯವಕಲನ**

6 ರಿಂದ 2ನ್ನು ಕಳೆಯುವುದು ಸಂಖ್ಯಾರೇಖೆಯ ಮೇಲೆ ಹೇಗೆ ತೋರಿಸಬೇಕೋ ಪರಿಶೀಲಿಸೋಣ.




6 ರಿಂದ 2 ನ್ನು ಕಳೆಯಬೇಕು ಆದ್ದರಿಂದ ಮೇಲೆ ತೋರಿಸಿದಂತೆ ಸಂಖ್ಯಾರೇಖೆಯ ಮೇಲೆ 6 ರಿಂದ ಪ್ರಾರಂಭಿಸಿ ಎಡಕ್ಕೆ ಒಂದು ಪ್ರಮಾಣ ದೂರವನ್ನು 2 ಬಾರಿ ಚಲಿಸಿದರೆ 4 ಕ್ಕೆ ಸೇರಿಕೊಳ್ಳುತ್ತವೆ.

ಆದ್ದರಿಂದ $6 - 2 = 4$ .

ಅಂದರೆ, ವ್ಯವಕಲನ ಮಾಡಬೇಕಾದರೆ ಸಂಖ್ಯಾರೇಖೆಯ ಮೇಲೆ ಎಡಕ್ಕೆ ಚಲಿಸುತ್ತೇವೆ.

**ಇವು ಮಾಡಿರಿ.**



ಕೆಳಗಿನವುಗಳನ್ನು ಸಂಖ್ಯಾರೇಖೆಯ ಮೇಲೆ ಸೂಚಿಸಿರಿ.

1. $5 + 3$ 2. $5 - 3$ 3. $3 + 5$ 4. $10 + 1$

**ಸಂಖ್ಯಾರೇಖೆಯ ಮೇಲೆ ಗುಣಾಕಾರ:**

ಈಗ ಸಂಖ್ಯಾರೇಖೆಯ ಮೇಲೆ ಪೂರ್ಣಸಂಖ್ಯೆಗಳ ಗುಣಾಕಾರವನ್ನು ಪರಿಶೀಲಿಸೋಣ. $4 \times 2$.ನ್ನು ಕಂಡುಕೊಳ್ಳೋಣ $4 \times 2$ ಅಂದರೆ 2 ಪ್ರಮಾಣಗಳನ್ನು 4 ಸಾರಿ ತೆಗೆದುಕೊಳ್ಳಬೇಕು. ಇದನ್ನು ಸಂಖ್ಯಾರೇಖೆಯ ಮೇಲೆ ನೋಡೋಣ




0 ಹತ್ತಿರದಿಂದ ಪ್ರಾರಂಭಿಸಿ, ಪ್ರತಿಬಾರಿಯೂ 2 ಪ್ರಮಾಣಗಳನ್ನು 4 ಬಾರಿ ಬಲಕ್ಕೆ ಚಲಿಸಬೇಕು. ಆಗ ನೀವು 8 ನ್ನು ಸೇರಿಸಿಕೊಳ್ಳುವಿರಿ.

ಆದ್ದರಿಂದ $2 \times 4 = 8$

**ಪ್ರಯತ್ನಿಸಿರಿ**



ಸಂಖ್ಯಾರೇಖೇಯನ್ನು ಉಪಯೋಗಿಸಿ ಕೆಳಗಿನವುಗಳನ್ನು ಕಂಡುಕೊಳ್ಳಿರಿ.

1. 5 ಬರಬೇಕಾದರೆ 8 ರಿಂದ ಯಾವ ಸಂಖ್ಯೆಯನ್ನು ಕಳೆಯಬೇಕು?
2. 1 ಬರಬೇಕಾದರೆ 8 ರಿಂದ ಯಾವ ಸಂಖ್ಯೆಯನ್ನು ಕಳೆಯಬೇಕು?
3. 16 ಬರಬೇಕಾದರೆ 8 ಕ್ಕೆ ಯಾವ ಸಂಖ್ಯೆಯನ್ನು ಸೇರಿಸಬೇಕು?
4. 30 ಬರಬೇಕಾದರೆ ಎಷ್ಟು 6 ಗಳು ಬೇಕಾಗುತ್ತವೆ.

ರಾಜು ಮತ್ತು ಗಾಯಿತ್ರಿ ಸೇರಿ ಸಂಖ್ಯಾರೇಖೆಯನ್ನು ತಯಾರಿಸಿದ್ದಾರೆ.




ರಾಜು ಮತ್ತು ಗಾಯಿತ್ರಿ ಒಂದು ಆಟ ಆಡುತ್ತಿದ್ದಾರೆ. ಮೊದಲು ಗಾಯಿತ್ರಿ ಸಂಖ್ಯಾರೇಖೆಯ ಮೇಲೆ 0 ಯಿಂದ ಪ್ರಾರಂಭಿಸಿ 3 ಬಾರಿ ಬಲಕ್ಕೆ ಚಲಿಸಬೇಕು. ಪ್ರಥಮಬಾರಿ 3 ಪ್ರಮಾಣಗಳು, ಎರಡನೇ ಬಾರಿ 8 ಪ್ರಮಾಣಗಳು ಮತ್ತು ಮೂರನೆ ಬಾರಿ 5 ಪ್ರಮಾಣಗಳಂತೆ ಚಲಿಸಿದರೆ ಕೊನೆಗೆ ಗಾಯಿತ್ರಿ ಸಂಖ್ಯಾರೇಖೆಯ ಮೇಲೆ ಎಲ್ಲಿಗೆ ಸೇರಿಸುತ್ತಾಳೆ?

ಗಾಯಿತ್ರಿ 16 ಪ್ರಮಾಣಗಳೆಂದು ಉತ್ತರಿಸುತ್ತಾಳೆ.ಗಾಯಿತ್ರಿ ಉತ್ತರ ಸರಿಯೆಂದು ನೀವು ಭಾವಿಸುವಿರೇ?

ಗಾಯಿತ್ರಿಯ ದಾರಿಯನ್ನು ಸಂಖ್ಯಾರೇಖೆಯ ಮೇಲೆ ತೋರಿಸಿ. ಸಂಕಲನ, ವ್ಯವಕಲನ ಆಧಾರದ ಮೇಲೆ ಈ ಆಟವನ್ನು ನಿಮ್ಮ ಸ್ನೇಹಿತರೊಡನೆ ಆಡಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ 2.1

1. ಕೆಳಗಿನ ವಾಕ್ಯಗಳಲ್ಲಿ ಯಾವುವು ಸತ್ಯ **(T)** ಯಾವುವು ಅಸತ್ಯ**(F)** ವಾಕ್ಯಗಳನ್ನು ಸರಿಯಾಗಿ ಬರೆಯಿರಿ.
   - i. ಪೂರ್ವ ಸಂಖ್ಯೆ ಇಲ್ಲದ ಒಂದು ಸ್ವಾಭಾವಿಕ ಸಂಖ್ಯೆ ಇದೆ.
   - ii. 0 ಅತಿ ಚಿಕ್ಕ ಪೂರ್ಣಸಂಖ್ಯೆ.
   - iii. ಪೂರ್ಣ ಸಂಖ್ಯೆಗಳೆಲ್ಲವೂ ಸ್ವಾಭಾವಿಕ ಸಂಖ್ಯೆಗಳು.
   - iv. ಸಂಖ್ಯಾ ರೇಖೆಯ ಮೇಲೆ ಬಲಕ್ಕಿರುವ ಪೂರ್ಣ ಸಂಖ್ಯೆಯು ಅದಕ್ಕೆ ಎಡಕ್ಕಿರುವ ಪೂರ್ಣ ಸಂಖ್ಯೆಗಿಂತ ದೊಡ್ಡದು.
   - v. ಸಂಖ್ಯಾರೇಖೆಯ ಮೇಲೆ ಎಡಕ್ಕಿರುವ ಪೂರ್ಣ ಸಂಖ್ಯೆಯು ಅದಕ್ಕೆ ಬಲಕ್ಕಿರುವ ಸಂಖ್ಯೆಗಿಂತ ಚಿಕ್ಕದು..
   - vi. ಸಂಖ್ಯಾರೇಖೆಯ ಮೇಲೆ ಕನಿಷ್ಠ ಪೂರ್ಣಸಂಖ್ಯೆಯನ್ನು ತೋರಿಸಲಾರೆವು.
   - vii. ಸಂಖ್ಯಾರೇಖೆಯ ಮೇಲೆ ಗರಿಷ್ಠ ಪೂರ್ಣ ಸಂಖ್ಯೆಯನ್ನು ತೋರಿಸಬಹುದು.
2. 27 ಮತ್ತು 46 ರ ನಡುವೆ ಎಷ್ಟು ಪೂರ್ಣಸಂಖ್ಯೆಗಳು ಇವೆ.
3. ಸಂಖ್ಯಾ ರೇಖೆಯನ್ನು ಉಪಯೋಗಿಸಿ ಕೆಳಗಿನವುಗಳನ್ನು ಕಂಡುಹಿಡಿಯಿರಿ.
   - i. $6 + 7 + 7$ ii. $18 - 9$ iii. $5 \times 3$
4. ಕೆಳಗಿನವುಗಳಲ್ಲಿ ಸಂಖ್ಯಾರೇಖೆಯ ಮೇಲೆ ಬಲಕ್ಕಿರುವ ಸಂಖ್ಯೆಯನ್ನು ತಿಳಿಸಿರಿ ಮತ್ತು ಗಣಿತ ಭಾಷೆಯಲ್ಲಿ ಬರೆಯಿರಿ.
   - i. 895, 239 ii. 1001, 10001 iii. 10015678, 284013
5. ಕನಿಷ್ಠ ಪೂರ್ಣಸಂಖ್ಯೆಯನ್ನು ಸಂಖ್ಯಾರೇಖೆ ಮೇಲೆ ಸೂಚಿಸಿರಿ.
6. $<, >$ ಗಳಲ್ಲಿ ಸರಿಯಾದುದನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ
   - i. 8 .......... 7 ii. 5 .......... 2
   - iii. 0 .......... 1 iv. 10 .......... 5
7. ಸಂಖ್ಯಾರೇಖೆಯ ಮೇಲೆ 11ರ ಉತ್ತರಸಂಖ್ಯೆಯನ್ನು ಮತ್ತು 5ರ ಪೂರ್ವ ಸಂಖ್ಯೆಯನ್ನು ತೋರಿಸಿ.

## 2.4 ಪೂರ್ಣಸಂಖ್ಯೆಗಳ ಗುಣಲಕ್ಷಣಗಳು

ಪೂರ್ಣಸಂಖ್ಯೆಗಳ ಗುಣಲಕ್ಷಣಗಳು ನಮಗೆ ಸಂಖ್ಯೆಗಳು ಇನ್ನೂ ಹೆಚ್ಚಾಗಿ ಅರ್ಥೈಸಿಕೊಳ್ಳಲು ಸಹಾಯವಾಗುತ್ತದೆ. ಪೂರ್ಣಸಂಖ್ಯೆಗಳ ಕೆಲವು ಗುಣಗಳನ್ನು ಪರಿಶೀಲಿಸೋಣ.

ಯಾವುದಾದರೂ ಎರಡು ಪೂರ್ಣಸಂಖ್ಯೆಗಳನ್ನು ಕೂಡಿದಾಗ ಅವುಗಳ ಮೊತ್ತವು ಸಹ ಪೂರ್ಣಸಂಖ್ಯೆ ಯಾಗುವುದೇ? ಕೆಲವು ಉದಾಹರಣೆಗಳೊಂದಿಗೆ ಪರಿಶೀಲಿಸಿ, ಸರಿನೋಡಿರಿ.

ನೀವು ಮಾಡುವ ಸಂಕಲನಗಳು ಹೀಗಿರಬೇಕು.

$2 + 3 = 5$, ಒಂದು ಪೂರ್ಣಸಂಖ್ಯೆ

$0 + 7 = 7$, ಒಂದು ಪೂರ್ಣಸಂಖ್ಯೆ

$20 + 51 = 71$, ಒಂದು ಪೂರ್ಣಸಂಖ್ಯೆ

$0 + 1 = 1$, ಒಂದು ಪೂರ್ಣಸಂಖ್ಯೆ

$0 + 0 = 0$, ಒಂದು ಪೂರ್ಣಸಂಖ್ಯೆ

ಇಲ್ಲಿ , ಯಾವುದೇ ಎರಡು ಪೂರ್ಣಸಂಖ್ಯೆಗಳ ಮೊತ್ತ ಯಾವಾಗಲೂ ಒಂದು ಪೂರ್ಣಸಂಖ್ಯೆ ಎಂದು ಗಮನಿಸುತ್ತೇವೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಇಲ್ಲಿ ಯಾವುದಾದರೂ ಒಂದು ಜೊತೆ ಪೂರ್ಣಸಂಖ್ಯೆಗಳನ್ನು ಕೂಡಿದಾಗ ಅದರ ಮೊತ್ತ ಪೂರ್ಣಸಂಖ್ಯೆಯಾಗಿಲ್ಲದ ಸಂಖ್ಯೆಗಳನ್ನು ನೋಡಿರುವಿರಾ? ಅಂತಹ ಪೂರ್ಣಸಂಖ್ಯೆಗಳ ಜೊತೆ ಇರಲಾರದು ಎಂಬುದು ನಮಗೆ ತಿಳಿದಿದೆ. ಆದ್ದರಿಂದ ಪೂರ್ಣಸಂಖ್ಯೆಗಳ ಈ ಗುಣಲಕ್ಷಣದಲ್ಲಿ ಸಂಕಲನದಲ್ಲಿ ಆವೃತಗುಣ ಎನ್ನುವರು.

ಹಾಗದಾರೆ, ಪೂರ್ಣಸಂಖ್ಯೆಗಳ ಗಣ ಗುಣಕಾರದಲ್ಲಿ ಕೂಡ ಆವೃತಗುಣ ಅನ್ವಯಿಸುತ್ತದೆಯಾ? ಪರಿಶೀಲಿಸೋಣ.

ನೀವು ಮಾಡುವ ಗುಣಕಾರಗಳು ಹೀಗಿರಬೇಕು.

| | | | | | |
|---|---|---|---|---|---|
| 5 | × | 6 | = | 30, | ಒಂದು ಪೂರ್ಣಸಂಖ್ಯೆ |
| 11 | × | 0 | = | 0, | ಒಂದು ಪೂರ್ಣಸಂಖ್ಯೆ |
| 16 | × | 5 | = | 80, | ಒಂದು ಪೂರ್ಣಸಂಖ್ಯೆ |
| 10 | × | 100 | = | 1000, | ಒಂದು ಪೂರ್ಣಸಂಖ್ಯೆ |
| 7 | × | 16 | = | 112, | ಒಂದು ಪೂರ್ಣಸಂಖ್ಯೆ |

ಯಾವುದೇ ಎರಡು ಪೂರ್ಣಸಂಖ್ಯೆಗಳ ಗುಣಲಬ್ದವೂ, ಒಂದು ಪೂರ್ಣ ಸಂಖ್ಯೆ ಎಂಬುದು ತಿಳಿಯುತ್ತದೆ. ಆದ್ದರಿಂದ, ಪೂರ್ಣಸಂಖ್ಯೆಗಳ ಗಣ ಗುಣಾಕಾರದಲ್ಲಿ ಕೂಡ ಅವೃತಗುಣ ಹೊಂದಿರುತ್ತದೆ.

ಆದ್ದರಿಂದ ಪೂರ್ಣಸಂಖ್ಯೆಗಳ ಗಣ ಸಂಕಲನ ಮತ್ತು ಗುಣಾಕಾರಗಳಲ್ಲಿ ಆವೃತಗುಣಗಳನ್ನು ಹೊಂದಿದೆ, ಎಂದು ಹೇಳಬಹುದು.

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**

1. ಪೂರ್ಣಸಂಖ್ಯೆಗಳ ಗಣ ವ್ಯವಕಲನದಲ್ಲಿ ಆವೃತಗುಣವನ್ನು ಪಾಲಿಸುತ್ತದೆಯೇ? ಉದಾಹರಣೆಯನ್ನು ಪರಿಶೀಲಿಸಿ ಖಾಲಿ ಸ್ಥಳಗಳನ್ನು ತುಂಬಿರಿ.



7 - 5 = 2, ಒಂದು ಪೂರ್ಣಸಂಖ್ಯೆ

5 - 7 = ?, ಒಂದು ಪೂರ್ಣಸಂಖ್ಯೆಯಲ್ಲ

..... - ..... = .....

..... - ..... = .....

ಇನ್ನೂ ಕೆಲವು ಉದಾರಣೆಗಳನ್ನು ತೆಗೆದುಕೊಂಡು ಸರಿನೋಡಿರಿ.

2. ಪೂರ್ಣಸಂಖ್ಯೆಗಳ ಗಣ ಭಾಗಕಾರದಲ್ಲಿ ಅವೃತಗುಣವನ್ನು ಸರಿಹೊಂದುತ್ತದೆಯೇ?

ಈ ಕೆಳಗಿನ ಪಟ್ಟಿಯನ್ನು ಪರಿಶೀಲಿಸಿ.

6 ÷ 3 = 2, ಒಂದು ಪೂರ್ಣಸಂಖ್ಯೆ

5 ÷ 2 = $\frac{5}{2}$ ಒಂದು ಪೂರ್ಣಸಂಖ್ಯೆ ಅಲ್ಲ

..... ÷ ..... = .....

..... ÷ ..... = .....

ಇನ್ನೂ ಕೆಲವು ಉದಾಹರಣೆಗಳನ್ನು ಪರಿಶೀಲಿಸಿ, ನಿರ್ಧರಿಸಿರಿ.

**ಸೊನ್ನೆ (0) ಯಿಂದ ಭಾಗಾಕಾರ**

$6 \div 2$ ನ್ನು ಕಂಡುಹಿಡಿಯೋಣ

6 ನ್ನು 2 ರಿಂದ ಭಾಗಿಸುವುದೆಂದರೆ 6 ರಿಂದ 2ನ್ನು ಮತ್ತೆ ಮತ್ತೆ ಕಳೆಯುವುದು ಎಂದರ್ಥ



Downloaded from https:// www.studiestoday.com

Downloaded from https:// www.studiestoday.com

6 - 2 = 4 1ನೇ ಬಾರಿ

4 - 2 = 2 2ನೇ ಬಾರಿ

2- 2 = 0 3ನೇ ಬಾರಿ

ಆದ್ದರಿಂದ $6 \div 2 = 3$

$3 \div 0$, ನ್ನು ಪರಿಶೀಲಿಸೋಣ

ಇಲ್ಲಿ ಮೂರರಿಂದ 0ನ್ನು ಮತ್ತೆ ಮತ್ತೆ 3 ಕಳೆಯಬೇಕು.

3- 0 = 3 1ನೇ ಬಾರಿ

3 - 0 = 3 2ನೇ ಬಾರಿ

3 - 0 = 3 3ನೇ ಬಾರಿ

ಇದೇ ರೀತಿ ಕಳೆಯುತ್ತಾ ಹೋದರೆ ಇದಕ್ಕೆ ಅಂತ್ಯವಿರುವುದಿಲ್ಲ. ಆದ್ದರಿಂದ $3 \div 0$, ಕ್ಕೆ ನಿಖರವಾದ ಉತ್ತರವನ್ನು ಪಡೆಯಲಾರೆವು. ಆದ್ದರಿಂದ ಸೊನ್ನೆಯಿಂದ ಭಾಗಕಾರವೂ ನಿರ್ವಚಿಸಲ್ಪಡುವುದಿಲ್ಲ.

**ಇವು ಮಾಡಿರಿ**



1. $12 \div 3$ ಮತ್ತು $42 \div 7$ ಗಳನ್ನು ಕಂಡುಹಿಡಿಯಿರಿ.
2. $6 \div 0$ ಮತ್ತು $9 \div 0$ ಗಳು ಸಮವಾಗುತ್ತವೆಯೇ?

**ಪೂರ್ಣಸಂಖ್ಯೆಗಳಲ್ಲಿ ಪರಿವರ್ತನೀಯ ಗುಣ**

ಇವುಗಳನ್ನು ಪರಿಶೀಲಿಸಿ.

2 + 3 = 5 ; 3 + 2 = 5

ಮೇಲಿನ ಸಂದರ್ಭಗಳಲ್ಲಿ 2 + 3 ಮತ್ತು 3 + 2 ಸಮ.

ಎರಡೂ ಸಂದರ್ಭದಲ್ಲಿ ಒಂದೇ ಬೆಲೆ 5 ಬಂದಿದೆ.

ಇದೇ ರೀತಿ 7+8 ಮತ್ತು 8+7 ಸಮ. ಇಲ್ಲಿ ಕೂಡ ಫಲಿತಾಂಶ 15ಬಂದಿದೆ.

7 + 8 = 15 ; 8 + 7

ಇಲ್ಲಿ ಒಂದು ಜೊತೆ ಪೂರ್ಣಸಂಖ್ಯೆಗಳನ್ನು ಕೂಡುವ ಕ್ರಮ ಬದಲಾದರೂ ಅವುಗಳ ಮೊತ್ತ ಒಂದೇ ವಿಧವಾಗಿ ಇದೆ.

ಇದನ್ನು ಮತ್ತೆ ಕೆಲವು ಉದಾಹರಣೆಗಳೊಂದಿಗೆ ಸರಿನೋಡಿರಿ 10 + 11, 25 + 10.

ಅಂದರೆ, ಎರಡು ಪೂರ್ಣಸಂಖ್ಯೆಗಳನ್ನು ಯಾವುದೇ ಕ್ರಮದಲ್ಲಿ ಕೂಡಿದರು ಒಂದೇ ಮೊತ್ತ ಬರುವುದು. ಆದ್ದರಿಂದ ಪೂರ್ಣಸಂಖ್ಯೆಗಳ ಗಣವು ಸಂಕಲನದಲ್ಲಿ ಪರಿವರ್ತನೀಯ ಗುಣವನ್ನು ಸರಿಹೊಂದಿದೆ. ಇದನ್ನೇ ಪೂರ್ಣಸಂಖ್ಯೆಗಳ ಗಣದಲ್ಲಿ ಸಂಕಲನದ **ಪರಿವರ್ತನೀಯ ಗುಣ** ಎನ್ನುವರು.

ಕೆಳಗಿನ ಚಿತ್ರಗಳನ್ನು ಪರಿಶೀಲಿಸಿ.




**4 × 3 = 12**




**3 × 4 = 12**

ಒಂದು ಜೊತೆ ಪೂರ್ಣಸಂಖ್ಯೆಗಳನ್ನು ಕ್ರಮ ಬದಲಾಯಿಸಿ ಗುಣಿಸಿದರೂ ಒಂದೇ ಗುಣಲಬ್ಧ ಬರುವುದನ್ನು ಗಮನಿಸಿದ್ದೇವಲ್ಲವೇ.

ಇದನ್ನೆ $6 \times 5, 7 \times 9$ ಮುಂತಾದ ಉದಾಹರಣೆಗಳಿಂದ ಪ್ರಯತ್ನಿಸಿ ನೋಡಿ.

ಆದ್ದರಿಂದ ಪೂರ್ಣಸಂಖ್ಯೆಗಳ ಗಣ ಸಂಕಲನ, ಗುಣಕಾರಗಳಲ್ಲಿ ಪರಿವರ್ತನೀಯ ಗುಣವನ್ನು ಹೊಂದಿರುತ್ತದೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿ**



1. ಪೂರ್ಣಸಂಖ್ಯೆಗಳ ಗಣವು ವ್ಯವಕಲನದಲ್ಲಿ ಪರಿವರ್ತನೀಯ ಗುಣವನ್ನು ಹೊಂದುತ್ತದೆಯೇ? ಕೆಲವು ಉದಾಹರಣೆಗಳೊಂದಿಗೆ ಪರಿಶೀಲಿಸಿ.
2. ಪೂರ್ಣಸಂಖ್ಯೆಗಳ ಗಣವು ಭಾಗಕಾರದಲ್ಲಿ ಪರಿವರ್ತನೀಯ ಗುಣವನ್ನು ಹೊಂದುತ್ತದಯೇ? ಕೆಲವು ಉದಾಹರಣೆಗಳೊಂದಿಗೆ ಪರಿಶೀಲಿಸಿ.

**ಸಂಕಲನ, ಗುಣಕಾರಗಳಲ್ಲಿ ಸಹವರ್ತನೀಯ ಗುಣ**

ಕೆಳಗಿನವುಗಳನ್ನು ಪರಿಶೀಲಿಸಿ

i. $(3 + 4) + 5 = 7 + 5 = 12$

ii. $3 + (4 + 5) = 3 + 9 = 12$

ಆದ್ದರಿಂದ $(3 + 4) + 5 = 3 + (4 + 5)$

ನಾವು (i) ರಲ್ಲಿ ಮೊದಲು 3, 4ಗಳನ್ನು ಕೂಡಿ, ಮೊತ್ತಕ್ಕೆ 5ನ್ನು ಸೇರಿಸಿದ್ದೇವೆ.(ii) ರಲ್ಲಿ ಮೊದಲು 4, 5ಗಳನ್ನು ಕೂಡಿ, ಮೊತ್ತಕ್ಕೆ 3ನ್ನು ಸೇರಿಸಿದ್ದೇವೆ. ಆದರೆ ಎರಡರ ಮೊತ್ತವು ಸಮವಾಗಿ ಬಂದಿದೆ.

ಇದನ್ನೇ ಪೂರ್ಣಸಂಖ್ಯೆಗಳಲ್ಲಿ **ಸಹವರ್ತನೀಯ ಗುಣ** ಎನ್ನುವರು. ಇಂತಹ 10 ಉದಾಹರಣೆಗಳೊಂದಿಗೆ ಮೇಲಿನ ಗುಣವನ್ನು ಸರಿನೋಡಿರಿ. ಯಾವುದರಲ್ಲಾಗಲಿ ಫಲಿತಾಂಶ ಸಮವಾಗಿ ಬಾರದೇ ಇರುವ ಸಂದರ್ಭಳಿವೆಯೇ ಗಮನಿಸಿ.

ಕೆಳಗಿನವುಗಳನ್ನು ಪರಿಶೀಲಿಸಿ.




$4 \times (3\times2) = (3\times2)$ ನಾಲ್ಕು ಬಾರಿ

ಚಿತ್ರ (a)

$2 \times (4\times3) = (4\times3)$ಎರಡರಷ್ಟು

ಚಿತ್ರ. (b)

ಚಿತ್ರ (a), ಮತ್ತು ಚಿತ್ರ (b)ಗಳಲ್ಲಿ ಚುಕ್ಕೆ ಇರುವ ಕೋಣೆಗಳನ್ನು ಲೆಕ್ಕಿಸಿ ಎಷ್ಟು ಬಂದಿದೆ. ಎರಡೂ ಚಿತ್ರಗಳಲ್ಲಿರುವ ಕೋಣೆಗಳ ಸಂಖ್ಯೆ ಸಮ.ಚಿತ್ರ (a) ರಲ್ಲಿ ಪ್ರತಿ ಭಾಗದಲ್ಲಿ $3 \times 2$ ಕೋಣೆಗಳಿವೆ. ಆದ್ದರಿಂದ ಒಟ್ಟು ಕೋಣೆಗಳ ಸಂಖ್ಯೆ $(3 \times 2) \times 4 = 24$

ಪ್ರತಿ ಚಿತ್ರದಲ್ಲಿ (b) ಪ್ರತಿಯೊಂದು ಭಾಗದಲ್ಲಿ $3 \times 4$ಕೋಣೆಗಳಿವೆ. ಆದ್ದರಿಂದ ಒಟ್ಟು ಕೋಣೆಗಳ ಸಂಖ್ಯೆ $2 \times (4 \times 3) = 24$

ಆದ್ದರಿಂದ $(3 \times 2) \times 4 = 2 \times (4 \times 3)$

ಗುಣಕಾರದಲ್ಲಿ ಕೂಡ ಫಲಿತಾಂಶ ಒಂದೇ ಎಂದು ತಿಳಿದುಕೊಂಡಿದ್ದೇವೆ.

ಇದನ್ನೆ ಪೂರ್ಣಸಂಖ್ಯೆಗಳಲ್ಲಿ ಗುಣಕಾರ ಸಹವರ್ತನೀಯ ಗುಣ ಎನ್ನುವರು.

ಆದ್ದರಿಂದ ಪೂರ್ಣಸಂಖ್ಯೆಗಳು ಸಂಕಲನ ಗುಣಕಾರಗಳಲ್ಲಿ ಸಹವರ್ತನೀಯ ಗುಣವನ್ನು ಪಾಲಿಸುತ್ತವೆ ಎಂದು ಹೇಳಬಹುದು.

**ಇವು ಮಾಡಿರಿ**



ಸರಿನೋಡಿರಿ

i. $(5 \times 6) \times 2 = 5 \times (6 \times 2)$

ii. $(3 \times 7) \times 5 = 3 \times (7 \times 5)$



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಉದಾಹರಣೆ-1.** 196 + 57 + 4.ರ ಬೆಲೆ ಕಂಡುಹಿಡಿಯಿರಿ

**ಪರಿಹಾರ :** 196 + (57 + 4)

= 196 + (4 + 57) [ಪರಿವರ್ತನೀಯ ಗುಣ]

= (196 + 4) + 57 [ಸಹವರ್ತನೀಯ ಗುಣ]

= 200 + 57 = 257

ಇಲ್ಲಿ, ಪರಿವರ್ತನೀಯ, ಸಹವರ್ತನೀಯ ಗುಣಗಳನ್ನು ಸಂಕಲನದಲ್ಲಿ ಉಪಯೋಗಿಸಿದ್ದೇವೆ.

ಹೀಗೆ ಪರಿವರ್ತನೀಯ, ಸಹವರ್ತನೀಯ ಗುಣಗಳನ್ನು ಉಪಯೋಗಿಸುವುದರಿಂದ ಸಮಸ್ಯೆಗಳ ಸಾಧನೆ ಸುಲಭವಾಗುವುದು ಎಂದು ನೀವು ಭಾವಿಸುತ್ತಿರುವಿರೇ?

**ಉದಾಹರಣೆ-2.** $5 \times 9 \times 2 \times 2 \times 3 \times 5$ ರ ಬೆಲೆ ಕಂಡುಹಿಡಿಯಿರಿ.

**ಪರಿಹಾರ :** $5 \times 9 \times 2 \times 2 \times 3 \times 5$

$= 5 \times 2 \times 9 \times 2 \times 5 \times 3$ [ಪರಿವರ್ತನೀಯ ಗುಣ]

$= (5 \times 2) \times 9 \times (2 \times 5) \times 3$ [ಸಹವರ್ತನೀಯ ಗುಣ]

$= 10 \times 9 \times 10 \times 3$

$= 90 \times 30 = 2700$

ಹೀಗೆ ಪರಿವರ್ತನೀಯ, ಸಹವರ್ತನೀಯ ಗುಣಗಳನ್ನು ಸೇರಿಸಿ ಗುಣಾಕಾರದಲ್ಲಿ ಉಪಯೋಗಿಸಿದ್ದೇವೆ. ಮತ್ತೆ,ಹೀಗೆ ಪರಿವರ್ತನೀಯ, ಸಹವರ್ತನೀಯ ಗುಣಗಳನ್ನು ಉಪಯೋಗಿಸುವುದರಿಂದ ಸಮಸ್ಯೆಗಳ ಸಾಧನೆ ಸುಲಭವಾಗುವುದು ಎಂದು ನೀವು ಭಾವಿಸುತ್ತಿರುವಿರೇ?

**ಇವು ಮಾಡಿರಿ**



ಪರಿವರ್ತನೀಯ, ಸಹವರ್ತನೀಯ ಗುಣಲಕ್ಷಣಗಳನ್ನು ಉಪಯೋಗಿಸಿ ಕೆಳಗಿನವುಗಳನ್ನು ಸೂಕ್ಷ್ಮೀಕರಿಸಿ.

i. 319 + 69 + 81 ii. 431 + 37 + 69 + 63

iii. $2\times(71\times5)$ iv. $50 \times 17 \times 2$

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**



$(16 \div 4) \div 2 = 16 \div (4 \div 2)$ ಆಗುವುದಾ?

ಭಾಗಕಾರಕ್ಕೂ ಸಹವರ್ತನೀಯ ಗುಣ ವರ್ತಿಸುವುದೇ?

ವ್ಯವಕಲನಕ್ಕೂ ಸಹವರ್ತನೀಯ ಗುಣ ವರ್ತಿಸುವುದೇನೂ ಸರಿನೋಡಿರಿ.

**ಕೆಳಗಿನವುಗಳನ್ನು ಪರಿಶೀಲಿಸಿ.**




ಇಲ್ಲಿ $5 \times 4$ ಚೌಕಳಿ ಕಾಗದವನ್ನು $2 \times 4$ ಮತ್ತು $3 \times 4$ ಎಂಬ ಎರಡು ಭಾಗಗಳಾಗಿ ವಿಭಾಗಿಸಲಾಗಿದೆ.



Downloaded from https:// www.studiestoday.com

Downloaded from https:// www.studiestoday.com

ಆದ್ದರಿಂದ $5 \times 4 = (2 \times 4) + (3 \times 4)$

$= 8 + 12 = 20$ ಮತ್ತು $5 = 2 + 3$,

$\therefore \quad 5 \times 4 = (2 + 3) \times 4$ ಎಂದು ಹೇಳಬಹುದು.

ಅದೇ ವಿಧವಾಗಿ $(5 + 6) \times 7 = (5 \times 7) + (6 \times 7)$

$11 \times 7 = 35 + 42 = 77$

ಇಲ್ಲಿ ಎರಡೂ ಸಮ ಎಂಬುವುದನ್ನೂ ಕಾಣಬಹುದು. ಇದನ್ನೆ ವಿತರಣಾ ನಿಯಮ ಅಥವಾ ವಿಭಾಜಕ ನಿಯಮ ಎನ್ನುವರು.

ವಿಭಾಜಕ ನಿಯಮವನ್ನುಪಯೋಗಿಸಿ ಕಂಡುಹಿಡಿಯಿರಿ. $2 \times (5 + 6)$; $5 \times (7 + 8)$, $19 \times 7 + 19 \times 3$

**ಉದಾಹರಣೆ-3.** $12 \times 75$ ನ್ನು ವಿಭಾಜಕ ನಿಯಮವನ್ನುಪಯೋಗಿಸಿ ಕಂಡುಹಿಡಿಯಿರಿ.

**ಪರಿಹಾರ :** $12 \times 75 = 12 \times (70 + 5)$ $\qquad = 12 \times (80 - 5)$

$= (12 \times 70) + (12 \times 5)$ ಅಥವಾ $= (12 \times 80) - (12 \times 5)$

$= 840 + 60 = 900$ $\qquad = 960 - 60 = 900$

**ಇವುಗಳನ್ನು ಮಾಡಿ**



$25 \times 78$; $17 \times 26$; $49 \times 68 + 32 \times 49$ ಗಳನ್ನು ವಿಭಾಜಕ ನಿಯಮವನ್ನು ಉಪಯೋಗಿಸಿ ಕಂಡುಹಿಡಿಯಿರಿ.

**ಅನನ್ಯತಾಂಶ (ಸಂಕಲನ, ಗುಣಕಾರ)**

ಸ್ವಾಭಾವಿಕ ಸಂಖ್ಯೆಗಳ ಗಣದಲ್ಲಿ 0 ಇರುವುದಿಲ್ಲ. ಆದರೆ ಪೂರ್ಣಸಂಖ್ಯೆಗಳ ಗಣದಲ್ಲಿ 0 ಒಂದು ಪ್ರತ್ಯೇಕವಾದ ಸಂಖ್ಯೆ. ಸಂಕಲನದಲ್ಲಿ 0 ಗೆ ಒಂದು ಪ್ರತ್ಯೇಕತೆ ಇದೆ. 7 ಮತ್ತು 5 ಗಳನ್ನು ಕೂಡಿದರೆ ನಮಗೆ 12 ಎಂಬ ಸಂಖ್ಯೆ ಬರುತ್ತದೆ. ಎರಡು ಪೂರ್ಣಸಂಖ್ಯೆಗಳನ್ನು ಕೂಡಿದರೆ, ಬರುವ ಮೊತ್ತವೂ ಸಹ ಪೂರ್ಣಸಂಖ್ಯೆಯಾಗುವುದು. ಇದು ಎಲ್ಲಾ ಸಂದರ್ಭದಲ್ಲಿ ಸತ್ಯವೇ ? ನೋಡೋಣ.

| | | | | |
|---|---|---|---|---|
| 2 | + | 0 | = | 2 |
| 9 | + | 0 | = | 9 |
| 0 | + | 11 | = | 11 |
| ..... | + | 25 | = | 25 |

ಒಂದು ಪೂರ್ಣಸಂಖ್ಯೆಗೆ 0ನ್ನು ಸೇರಿಸಿದರೆ, ಅದೇ ಪೂರ್ಣಸಂಖ್ಯೆ ಬರುತ್ತದೆ.
0ನ್ನು ಪೂರ್ಣಸಂಖ್ಯೆಗಳ ಸಂಕಲನಕ್ಕೆ ಅನನ್ಯತಾಂಶ ಅಥವಾ ಸಂಕಲನದ ಅನನ್ಯತಾಂಶ ಎನ್ನುವರು. ಗುಣಕಾರದಲ್ಲಿ 1 ರ ಪ್ರತ್ಯೇಕತೆಯನ್ನು ಕೆಳಗಿನ ವಿನ್ಯಾಸದಲ್ಲಿ ಪರಿಶೀಲಿಸೋಣ.
ಕೆಳಗಿನ ಪಟ್ಟಿಯನ್ನು ಪರಿಶೀಲಿಸಿ.

| | | | | |
|---|---|---|---|---|
| 1 | × | 9 | = | 9 |
| 6 | × | 5 | = | 30 |
| 6 | × | 4 | = | 24 |
| 5 | × | 1 | = | 5 |
| 11 | × | 1 | = | 11 |
| 2 | × | 3 | = | 6 |

ಮೇಲಿನ ಪಟ್ಟಿಯಿಂದ ಒಂದು ಪೂರ್ಣಸಂಖ್ಯೆಯನ್ನು 1 ರಿಂದ ಗುಣಿಸಿದರೆ ಅದೇ ಪೂರ್ಣಸಂಖ್ಯೆ ಬರುವುದನ್ನು ಗಮನಿಸುತ್ತೇವೆ. 1 ನ್ನು ಪೂರ್ಣಸಂಖ್ಯೆಗಳಲ್ಲಿ ಗುಣಕಾರ ಅನನ್ಯತಾಂಶ ಎನ್ನುವರು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ 2.2

1. ಕೆಳಗೆ ಕೊಟ್ಟಿರುವ ಸಮಾಚಾರದ ಆಧಾರವಾಗಿ, ಫಲಿತಾಂಶಗಳನ್ನು ಗುಣಿಸದೇ ಹೇಳಿರಿ.
   - i. 28 × 19 = 532 ಆದರೆ 19 × 28 =
   - ii. 1 × 47 = 47 ಆದರೆ 47 × 1 =
   - iii. a × b = c ಆದರೆ b × a =
   - iv. 58 + 42 = 100 ಆದರೆ 42 + 58 =
   - v. 85 + 0 = 85 ಆದರೆ 0 + 85 =
   - vi. a + b = d ಆದರೆ b + a =
2. ಅನುಕೂಲವಿಧವಾಗಿ ಬದಲಾಯಿಸಿಕೊಂಡು ಕೆಳಗಿನವುಗಳ ಮೊತ್ತವನ್ನು ಕಂಡುಹಿಡಿಯಿರಿ.
   - i. 238 + 695 + 162
   - ii. 154 + 197 + 46 + 203
3. ಸೂಕ್ತ ರೀತಿಯಲ್ಲಿ ಬದಲಾಯಿಸಿ ಗುಣಲಬ್ಧವನ್ನು ಕಂಡುಹಿಡಿಯಿರಿ.
   - i. 25 × 1963 × 4
   - ii. 20 × 255 × 50 × 6
4. ಕೆಳಗಿನವುಗಳ ಬೆಲೆಯನ್ನು ಕಂಡುಹಿಡಿಯಿರಿ
   - i. 368 × 12 + 18 × 368
   - ii. 79 × 4319 + 4319 × 11
5. ಸೂಕ್ತವಾದ ಗುಣಲಕ್ಷಣಗಳನ್ನು ಉಪಯೋಗಿಸಿ ಇವುಗಳ ಗುಣಲಬ್ಧವನ್ನು ಕಂಡುಹಿಡಿಯಿರಿ.
   - i. 205 × 1989
   - ii. 1991 × 1005
6. ಒಬ್ಬ ಹಾಲಿನ ವ್ಯಾಪಾರಿಯು ಬೆಳಿಗ್ಗೆ 57 ಲೀಟರ್‌ಗಳ ಹಾಲನ್ನು, ಸಾಯಂಕಾಲ 44 ಲೀಟರ್‌ಗಳ ಹಾಲನ್ನು ಒಂದು ವಸತಿ ನಿಲಯಕ್ಕೆ ಸರಬರಾಜು ಮಾಡುವನು. ಒಂದು ಲೀಟರ್ ಹಾಲಿನ ಬೆಲೆ ರೂ 30 ಆದರೆ ಅವನಿಗೆ ಒಂದು ದಿನಕ್ಕೆ ಎಷ್ಟು ಹಣ ಸಿಗುತ್ತದೆ.
7. ಚಂದನ 12 ನೋಟ್ ಬುಕ್‌ಗಳನ್ನು, ವೆನ್ನಲ 10 ನೋಟ್ ಬುಕ್‌ಗಳನ್ನು ಕೊಂಡು ಕೊಂಡರು. ಒಂದು ನೋಟ್ ಬುಕ್‌ನ ಬೆಲೆ ರೂ. 15 ಆದರೆ ಅಂಗಡಿಯವನಿಗೆ ಅವರು ಎಷ್ಟು ಹಣ ಕೊಡಬೇಕು.
8. ಹೊಂದಿಸಿ ಬರೆಯಿರಿ.

| | | |
|---|---|---|
| i. 3+1991+7 = 3+7+1991 | [ ] | a. ಸಂಕಲನದ ಅನನ್ಯತಾಂಶ |
| ii. 2×68×50 = 2×50×68 | [ ] | b. ಗುಣಾಕಾರದ ಅನನ್ಯತಾಂಶ |
| iii. 1 | [ ] | c. ಸಂಕಲನದಲ್ಲಿ ಪರಿವರ್ತನೀಯ ಗುಣ |
| iv. 0 | [ ] | d. ಸಂಕಲನದಲ್ಲಿ ಗುಣಾಕಾರ ವಿಭಾಜಕ ನಿಯಮ |
| v. 879×(100+30) = 879×100+879×30 | [ ] | e. ಗುಣಾಕಾರದಲ್ಲಿ ಪರಿವರ್ತನೀಯ ಗುಣ |

## 2.4 ಪೂರ್ಣಸಂಖ್ಯೆಗಳಲ್ಲಿ ಜೋಡಣೆ:

ಸಂಖ್ಯೆ ಬಿಂದುಗಳಿಂದ ರೇಖಾಗಣಿತದ ಮೂಲ ಪರಿಕಲ್ಪನೆಗಳನ್ನು ತೋರಿಸುವುದಕ್ಕೆ ಪ್ರಯತ್ನಿಸೋಣ. ಚುಕ್ಕೆಗಳನ್ನು ಚೌಕಳೀಹಾಳೆಯ ಮೇಲೆ ಎರಡು ಅಕ್ಷಗಳ ಮೇಲೆ ಸಮಾನದೂರದಲದಲಿ ಇಡಬೇಕು. (i) ರೇಖೆ (ii) ಆಯತ (iii) ಚೌಕ (iv) ತ್ರಿಭುಜ ಎಂಬ ಆಕಾರಗಳನ್ನು ತೆಗೆದುಕೊಳ್ಳೊಣ. ಪ್ರತಿ ಸಂಖ್ಯೆಯನ್ನು ಈ ಆಕಾರಗಳಲ್ಲಿ ಯಾವುದಾದರೋಂದು ಆಕಾರಕ್ಕೆ ಜೋಡಿಸೋಣ. ಇವಲ್ಲದೇ, ಬೇರೆ ಆಕಾರಗಳನ್ನು ತೆಗೆದುಕೊಳ್ಳಬಾರದು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಪೂರ್ಣಸಂಖ್ಯೆಗಳನ್ನು ಪ್ರಾಥಮಿಕ ಜ್ಯಾಮಿತಿಯ ಆಕೃತಿಗಳಾಗಿ ಚುಕ್ಕೆಗಳಿಂದ ಜೋಡಿಸಬಹುದು. ಕೆಳಗಿನವುಗಳನ್ನು ಪರಿಶೀಲಿಸಿ.

- ಪ್ರತಿ ಸಂಖ್ಯೆಯನ್ನು ಚುಕ್ಕೆಗಳ ರೇಖೆಯಾಗಿ ಜೋಡಿಸಬಹುದು.

  2ನ್ನು ಈ ರೀತಿ ತೋರಿಸಬಹುದು 

  3ನ್ನು ಈ ರೀತಿ ತೋರಿಸಬಹುದು  ಮುಂತಾದವು.

- ಕೆಲವು ಸಂಖ್ಯೆಗಳನ್ನು ಆಯತಗಳಾಗಿ ತೋರಿಸಬಹುದು.

  6ನ್ನು ಈ ರೀತಿ ತೋರಿಸಬಹುದು 

  ಈ ಆಯತದಲ್ಲಿ 2 ಅಡ್ಡ ಸಾಲು, 3 ಕಂಬ ಸಾಲುಗಳಿವೆ ಎಂಬುವುದನ್ನು ಗಮನಿಸಿ.

- 4 ಅಥವಾ 9ಗಳನ್ನು ಚೌಕಗಳಾಗಿ ಜೋಡಿಸಬಹುದು.

4  9 

ಈ ರೀತಿ, ಇನ್ನೂ ಯಾವ ಸಂಖ್ಯೆಗಳನ್ನು ಚೌಕಗಳಾಗಿ ಜೋಡಿಸಬಹುದು? ಇಲ್ಲಿ ಒಂದು ಅಂಶವನ್ನು ಗಮನಿಸಬಹುದು.

$4 = 2 \times 2$ ಇದು ಒಂದು ವರ್ಗ ಸಂಖ್ಯೆ

$9 = 3 \times 3$ ಇದು ಸಹ ಒಂದು ವರ್ಗಸಂಖ್ಯೆ

ಇದರ ನಂತರ ಚೌಕವಾಗಿ ಜೋಡಿಸಬಲ್ಲ ಸಂಖ್ಯೆ ಯಾವುದು?

ನಾವು 16 ಎಂದು ಸುಲಭವಾಗಿ ಹೇಳಬಹುದು. $4 \times 4 = 16$ ಇದು ಕೂಡ ಒಂದು ವರ್ಗಸಂಖ್ಯೆ. ನಂತರದ 3 ಸಂಖ್ಯೆಗಳನ್ನು ಚೌಕಗಳಾಗಿ ಜೋಡಿಸಲಬಲ ಸಂಖ್ಯಗಳನ್ನು ಸೂಚಿಸಿರಿ. ಚೌಕಗಳಾಗಿ ಅಲ್ಲದೆ ಆಯತಗಳಾಗಿ ಜೋಡಿಸುವ 5 ಸಂಖ್ಯೆಗಳನ್ನು ಬರೆಯಿರಿ.

- ಕೆಲವು ಸಂಖ್ಯೆಗಳನ್ನು ತ್ರಿಭುಜಗಳಾಗಿ ಜೋಡಿಸಬಹುದು.

3  6 

ತ್ರಿಭುಜದಲ್ಲಿನ ಎರಡು ಬಾಹುಗಳು ಸಮವಾಗಿ ಇರಬೇಕೆಂದು ಗಮನಿಸಿ. ಕೆಳಗಿನಿಂದ ಪ್ರತಿ ಸಾಲಿನಲ್ಲಿ ಚುಕ್ಕೆಗಳ ಸಂಖ್ಯೆ 4,3,2,1 ಗಳಾಗಿ ಇರಬೇಕು ಮೇಲಿನ ಸಾಲಿನಲ್ಲಿ ಮಾತ್ರ ಒಂದು ಇರುತ್ತದೆ. (ಒಂದೇ ಶೃಂಗ ಇದೆ ಆದ್ದರಿಂದ)

ಇಲ್ಲಿ ಯಾವುದಾದರೂ ಒಂದು ನಮೂನೆಯ ಜೋಡಣೆಯನ್ನು ಗಮನಿಸಿರುವಿರಾ? ಪ್ರತಿ ಸಾಲಿನಲ್ಲಿ ಚುಕ್ಕೆಗಳ ಸಂಖ್ಯೆಯನ್ನು ಪರಿಶೀಲಿಸಿ,ಜೋಡಣೆ ಕುರಿತು ಆಲೋಚಿಸಿರಿ.

ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿ.

| ಸಂಖ್ಯೆ | ರೇಖೆ | ಆಯತ | ಚೌಕ | ತ್ರಿಭುಜ |
|---|---|---|---|---|
| 2 | ಹೌದು | ಅಲ್ಲ | ಅಲ್ಲ | ಅಲ್ಲ |
| 3 | ಹೌದು | ಅಲ್ಲ | ಅಲ್ಲ | ಹೌದು |
| 4 | ಹೌದು | ಅಲ್ಲ | ಹೌದು | ಅಲ್ಲ |
| 5 | | | | |
| ..... | | | | |
| 25 | | | | |



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿರಿ**



1. ಯಾವ ಸಂಖ್ಯೆಗಳನ್ನು ಮಾತ್ರ ರೇಖೆಯಾಗಿ ತೋರಿಸಬಹುದು.
2. ಯಾವ ಸಂಖ್ಯೆಗಳನ್ನು ಆಯತಗಳಾಗಿ ತೋರಿಸಬಹುದು.
3. ಯಾವ ಯಾವ ಸಂಖ್ಯೆಗಳನ್ನು ಚೌಕಗಳಾಗಿ ತೋರಿಸಬಹುದು
4. ಯಾವ ಯಾವ ಸಂಖ್ಯೆಗಳನ್ನು ತ್ರಿಭುಜಗಳಾಗಿ ತೋರಿಸಬಹುದು.ಉದಾ. 3, 6, .....

**ಸಂಖ್ಯೆಗಳ ಜೋಡಣೆ**

ಜೋಡಣೆಗಳು ಸಮಸ್ಯೆಗಳ ಪರಿಹಾರಕ್ಕೆ ಸುಲಭ ಮಾರ್ಗಗಳನ್ನು ತೋರಿಸುತ್ತೇವೆ. ಕೆಳಗಿನವುಗಳನ್ನು ಪರಿಶೀಲಿಸಿ.

1. $296 + 9 = 296 + 10 - 1 = 306 - 1 = 305$
2. $296 - 9 = 296 - 10 + 1 = 286 + 1 = 287$
3. $296 + 99 = 296 + 100 - 1 = 396 - 1 = 395$
4. $296 - 99 = 296 - 100 + 1 = 196 + 1 = 197$

ಮತ್ತೊಂದು ಜೋಡಣೆಯನ್ನು ಪರಿಶೀಲಿಸೋಣ

1. $65 \times 99 = 65\ (100 - 1) = 6500 - 65 = 6435$
2. $65 \times 999 = 65\ (1000 - 1) = 65000 - 65 = 64935$
3. $65 \times 9999 = 65\ (10000 - 1) = 650000 - 65 = 649935$
4. $65 \times 99999 = 65\ (100000 - 1) = 6500000 - 65 = 6499935$ ಮುಂತಾದವುಗಳು..

ಇಲ್ಲಿ , ಒಂದು ಸಂಖ್ಯೆಯನ್ನು 9,99 ,999 ... ರೂಪದಲ್ಲಿರುವ ಸಂಖ್ಯೆಗಳಿಂದ ಸುಲಭ ಪದ್ಧತಿಗಳಿಂದ ಗುಣಿಸುವುದನ್ನು ಗಮನಿಸಬಹುದು. ಇಂತಹ ಸುಲಭ ಪದ್ಧತಿಗಳು ಬರವಣಿಗೆಯ ಸಮಸ್ಯೆಗಳನ್ನು ಮಾನಸಿಕವಾಗಿ ಸಾಧಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ.

ಕೆಳಗಿನ ಮತ್ತೊಂದು ಜೋಡಣೆಯನ್ನು ಪರಿಶೀಲಿಸಿ. ಇದು ಒಂದು ಸಂಖ್ಯೆಯನ್ನು 5, 15, 25 ......ಗಳಿಂದ ಗುಣಿಸುವ ಪದ್ಧತಿಯನ್ನು ತೋರಿಸುತ್ತದೆ. (ಇದನ್ನು ಇನ್ನೂ ಮುಂದಕ್ಕೆ ವಿಸ್ತರಿಸಲು ಪ್ರಯತ್ನಿಸಿ)

a. $46 \times 5 = 46 \times \frac{10}{2} = \frac{460}{2} = 230 \qquad = 230 \times 1$

b. $46 \times 15 = 46 \times (10 + 5)$
$= 46 \times 10 + 46 \times 5 = 460 + 230 = 690 = 230 \times 3$

c. $46 \times 25 = 46 \times (20 + 5)$
$= 46 \times 20 + 46 \times 5 = 920 + 230 = 1150 = 230 \times 5$ ...



**ಅಭ್ಯಾಸ 2.3**



1. ಕೆಳಗಿನ ಜೋಡಣೆಯನ್ನು ಪರಿಶೀಲಿಸಿ.

$1 \times 8 + 1 = 9$
$12 \times 8 + 2 = 98$
$123 \times 8 + 3 = 987$
$1234 \times 8 + 4 = 9876$
$12345 \times 8 + 5 = 98765$

ನಂತರ ಬರುವ ನಾಲ್ಕು ಹಂತಗಳನ್ನು ಬರೆಯಿರಿ. ಈ ಜೋಡಣೆನಂತರ ಸಂಖ್ಯೆಗಳಿಗೆ ಹೇಗೆ ಬರುತ್ತದೆಯೋ ಹೇಳಬಲ್ಲಿರಾ?



Downloaded from https:// www.studiestoday.com

Downloaded from https:// www.studiestoday.com

2. ಕೆಳಗಿನ ಜೋಡಣೆಯನ್ನು ಗಮನಿಸಿ.

$91 \times 11 \times 1 = 1001$

$91 \times 11 \times 2 = 2002$

$91 \times 11 \times 3 = 3003$

ನಂತರ ಬರುವ 7 ಹಂತಗಳನ್ನು ಬರೆಯಿರಿ. ಫಲಿತಾಂಶ ಸರಿಯಾಗುವುದೇ? ಸರಿ ನೋಡಿರಿ.

$143 \times 7 \times 1$, $143 \times 7 \times 2$ ....ಗಳಂತಹ ಜೋಡಣೆಗಳಿಗೆ ಪ್ರಯತ್ನಿಸಿರಿ.

3. 13680347, 35702369, 25692359ಸಂಖ್ಯೆಗಳನ್ನು 9 ರಿಂದ ಗುಣಿಸಿ, ಎಂತಹ ಜೋಡಣೆ ಬರುತ್ತದೆಯೋ ಪರಿಶೀಲಿಸಿ.

## ನೆನಪಿನಲ್ಲಿಡಬೇಕಾದ ಅಂಶಗಳು

1. ಗುಣಿಸಲು ಉಪಯೋಗಿಸುವ ಸಂಖ್ಯೆಗಳಾದ 1,2,3,..... ಗಳನ್ನು ಸ್ವಾಭಾವಿಕವಾಗಿ ಸಂಖ್ಯೆಗಳು ಎನ್ನುವರು.
2. ಪ್ರತಿ ಸ್ವಾಭಾವಿಕ ಸಂಖ್ಯೆಗೆ ಉತ್ತರ ಸಂಖ್ಯೆ ಇದೆ. 1 ಕ್ಕೆ ಮಾತ್ರ ಇರುವುದಿಲ್ಲ. ಸ್ವಾಭಾವಿಕ ಸಂಖ್ಯೆಗಳಿಗೆಲ್ಲವುಗಳಿಗೆ ಪೂರ್ವಸಂಖ್ಯೆ ಇದೆ.
3. ಸ್ವಾಭಾವಿಕ ಸಂಖ್ಯೆಗಳ ಗಣಕ್ಕೆ 0 ಯನ್ನು ಸೇರಿಸಿದರೆ, ಪೂರ್ಣಸಂಖ್ಯೆಗಳ ಗಣ w= 0,1,2,3,....ಬರುತ್ತದೆ.
4. ಪ್ರತಿ ಪೂರ್ಣಸಂಖ್ಯೆಗೆ ಉತ್ತರ ಸಂಖ್ಯೆ ಇದೆ. 0 ಗೆ ಮಾತ್ರ ಇರುವುದಿಲ್ಲ. ಪೂರ್ಣಸಂಖ್ಯೆಗಳಿಗೆಲ್ಲಾ ಪೂರ್ವಸಂಖ್ಯೆ ಇದೆ.
5. ಸ್ವಾಭಾವಿಕ ಸಂಖ್ಯೆಗಳೆಲ್ಲಾ ಪೂರ್ಣಸಂಖ್ಯೆಗಳಾಗುತ್ತವೆ. ಆದರೆ ಪೂರ್ಣಸಂಖ್ಯೆಗಳೆಲ್ಲ ಸ್ವಾಭಾವಿಕ ಸಂಖ್ಯೆಗಳಾಗಲಾರವು.
6. ಸಂಖ್ಯಾ ರೇಖೆಯ ಮೇಲೆ ಪೂರ್ಣಸಂಖ್ಯೆಗಳನ್ನು ತೋರಿಸಬಹುದು. ಸಂಕಲನ, ವ್ಯವಕಲನ, ಗುಣಾಕಾರ ಪ್ರಕ್ರಿಯೆಗಳನ್ನು ಸಂಖ್ಯಾರೇಖೆಯ ಮೇಲೆ ಸುಲಭವಾಗಿ ಮಾಡಬಹುದು.
7. ಸಂಖ್ಯಾರೇಖೆಯ ಮೇಲೆ ಸಂಕಲನ ಮಾಡಲು ಬಲಕ್ಕೆ, ವ್ಯವಕಲನ ಮಾಡಲು ಎಡಕ್ಕೆ ಚಲಿಸುತ್ತೇವೆ. ಗುಣಾಕಾರ ಮಾಡಲು ಸೊನ್ನೆಯಿಂದ ಸಮ ಪ್ರಮಾಣ ದೂರಗಳಲ್ಲಿ ಬಲಕ್ಕೆ ಚಲಿಸುತ್ತೇವೆ.
8. ಪೂರ್ಣಸಂಖ್ಯೆಗಳು ಸಂಕಲನ, ಗುಣಾಕಾರಗಳಲ್ಲಿ ಆವೃತಗುಣವನ್ನು ಪಾಲಿಸುತ್ತದೆ. ಆದರೆ ವ್ಯವಕಲನ, ಭಾಗಕಾರಗಳಲ್ಲಿ ಆವೃತಗುಣವನ್ನು ಪಾಲಿಸುವುದಿಲ್ಲ.
9. ಸೊನ್ನೆಯಿಂದ ಭಾಗಕಾರವನ್ನು ನಿರ್ವಚಿಸಲು ಆಗುವುದಿಲ್ಲ.
10. ಪೂರ್ಣಸಂಖ್ಯೆಗಳಲ್ಲಿ ಸಂಕಲನದ ಅನನ್ಯತಾಂಶ 0 ಮತ್ತು ಗುಣಾಕಾರದ ಅನನ್ಯತಾಂಶ 1.
11. ಪೂರ್ಣಸಂಖ್ಯೆಗಳು ಸಂಕಲನ, ಗುಣಾಕಾರಗಳಲ್ಲಿ ಪರಿವರ್ತನೀಯ ಗುಣವನ್ನು ಪಾಲಿಸುತ್ತವೆ.
12. ಪೂರ್ಣಸಂಖ್ಯೆಗಳು ಸಂಕಲನ,ಗುಣಾಕಾರಗಳಲ್ಲಿ ಸಹವರ್ತನೀಯ ಗುಣವನ್ನು ಪಾಲಿಸುತ್ತವೆ.
13. ಪೂರ್ಣಸಂಖ್ಯೆಗಳು ಸಂಕಲನದ ಮೇಲೆ ಗುಣಾಕಾರ ವಿಭಾಜಕ ನಿಯಮವನ್ನು ಹೊಂದಿರುತ್ತದೆ.
14. ಪೂರ್ಣಸಂಖ್ಯೆಗಳ ಪರಿವರ್ತನೀಯ, ಸಹವರ್ತನೀಯ, ವಿಭಾಜಕ ಗುಣಗಳು ಸಮಸ್ಯೆಗಳನ್ನು ಸುಲಭವಾಗಿ ಸಾಧಿಸಲು ಉಪಯೋಗವಾಗುತ್ತಯೆ. ನಮಗೆ ತಿಳಿಯದೆಯೇ ಗಣನೆಯಲ್ಲಿ ಅವುಗಳನ್ನು ಉಪಯೋಗಿಸುತ್ತೇವೆ.
15. ಸಂಖ್ಯೆಗಳ ಜೋಡಣೆ ಆಸಕ್ತಿಕರವಾಗಿರುವುದಲ್ಲದೇ, ಬರವಣಿಗೆ ಸಮಸ್ಯೆಗಳನ್ನು ಸಾಧಿಸಲು ಉಪಯೋಗವಾಗುವವು. ಹಾಗೆಯೇ ಸಂಖ್ಯೆಗಳ ಗುಣಗಳನ್ನು ಅಥವಾ ನಿಯಮಗಳನ್ನು ಇನ್ನೂ ಚೆನ್ನಾಗಿ ಅರ್ಥೈಸಿಕೊಳ್ಳಲು ಸಹಾಯಕವಾಗುವವು.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ-3

# ಸಂಖ್ಯೆಗಳಿಂದ ಆಡೋಣ

SCERT TELANGANA

## 3.1 ಪರಿಚಯ :

**ಸಂಖ್ಯೆಗಳಿಂದ ಆಡೋಣ**

ಹಾಸಿನಿ ತನ್ನ ಹುಟ್ಟಿದ ದಿನ ಚಾಕ್ಲೇಟ್‌ಗಳನ್ನು ತನ್ನ ಸ್ನೇಹಿತರಿಗೆ ಹಂಚಬೇಕೆಂದುಕೊಂಡನು. ಅವನ ತಂದೆ 125 ಚಾಕ್ಲೇಟ್‌ಗಳಿರುವ ಪೆಟ್ಟಿಗೆಯನ್ನು ತೆಗೆದುಕೊಂಡು ಬಂದರು. ಅವನು ತರಗತಿಯಲ್ಲಿ 25 ವಿದ್ಯಾರ್ಥಿಗಳಿದ್ದರು.

ರುತ್ವಿಕ್ ತನ್ನ ಪ್ರತಿ ಸ್ನೇಹಿತರೆಲ್ಲರಿಗೆ ಸಮನಾಗಿ ಚಾಕ್ಲೆಟ್ ಬರುವ ಹಾಗೆ ಹಂಚಬೇಕೆಂದುಕೊಂಡನು. ಆದರೆ ಪ್ರತಿಯೊಬ್ಬರಿಗೆ 2 ರಂತೆ ಹಂಚಿದಾಗ ಕೆಲವು ಚಾಕ್ಲೇಟ್ ಗಳು ಉಳಿಯುತ್ತವೆ. ಹಾಗೇಯೇ 3 ರಂತೆ ಹಂಚಿದಾಗಲೂ ಕೆಲವು ಚಾಕ್ಲೇಟ್‌ಗಳು ಉಳಿಯುವುದನ್ನು ಗಮನಿಸಿದಾಗ ಕೊನೇ ಬಾರಿ ಪ್ರತಿ ವಿದ್ಯಾರ್ಥಿಗೆ 5 ರಂತೆ ಚಾಕ್ಲೇಟ್ ಹಂಚಿದರೆ ಚಾಕ್ಲೆಟ್ ಉಳಿಯಲಿಲ್ಲ.



ಈ ಸಮಸ್ಯೆಗೆ ನೇರವಾಗಿ ಉತ್ತರ ಕಂಡು ಹಿಡಿಯುವ ಅವಕಾಶವಿದೆಯೇ? ಆಲೋಚಿಸಿ.

125÷25 ಮಾಡಿದಾಗ ನಮಗೆ ಸರಿಯಾಗಿ ಉತ್ತರ ಸಿಗುತ್ತದೆ. ಆದರೆ ಒಂದು ಸಂಖ್ಯೆಯನ್ನು ಕೊಟ್ಟಿರುವ ಸಂಖ್ಯೆಯಿಂದ ಭಾಗಿಸಲು ಲೆಕ್ಕ ಮಾಡದೇ ನಿಶ್ಶೇಷವಾಗಿ ಭಾಗವಾಗುತ್ತದೆಯೋ, ಇಲ್ಲವೋ ಎಂದು ತಿಳಿಯಲು ಭಾಜ್ಯತೆಯ ನಿಯಮವನ್ನು ಈಗಾಗಲೇ ಹಿಂದಿನ ತರಗತಿಯಲ್ಲಿ ಕಲಿತಿದ್ದೇವೆ. ಈ ಪಾಠದಲ್ಲಿ 2, 3, 5, 6, 9 ಮತ್ತು 10ರ ವಿಭಾಜ್ಯತೆಯ ನಿಯಮಗಳನ್ನು ಸ್ಮರಿಸಿಕೊಳ್ಳಣ. ಈ ತರಗತಿಯಲ್ಲಿ 4, 8, 11ರ ಭಾಜ್ಯತೆಯ ನಿಯಮಗಳನ್ನು ಉಪಯೋಗಿಸುವುದನ್ನು ತಿಳಿದುಕೊಳ್ಳೋಣ.

## 3.2 ಭಾಜ್ಯತೆಯ ನಿಯಮ.

29 ಈ ಸಂಖ್ಯೆಯನ್ನು ತೆಗೆದುಕೊಳ್ಳೋಣ. 29ನ್ನು 4 ರಿಂದ ಭಾಗಿಸಿದರೆ ನಮಗೆ 7 ಭಾಗಲಬ್ಧವಾಗಿ, 1ಶೇಷವಾಗಿ ಬರುತ್ತದೆ. 29 ಈ ಸಂಖ್ಯೆಯು 4 ರಿಂದ ನಿಶ್ಶೇಷವಾಗಿ ಭಾಗವಾಗುತ್ತದೆಂದು ನೀವು ಹೇಳಬಲ್ಲಿರಾ? ಏಕೆ?

24 ನ್ನು 4 ರಿಂದ ಭಾಗಿಸಿ ಭಾಗಲಬ್ಧ ಮತ್ತು ಶೇಷವನ್ನು ತಿಳಿಸಿ, 24, 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಟ್ಟಿದೇಯೇ? ಏಕೆ?

ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆಯಿಂದ ಭಾಗಿಸಿದಾಗ. ಶೇಷ ಉಳಿಯದಿದ್ದರೆ ಆ ಸಂಖ್ಯೆ ನಿಶ್ಶೇಷವಾಗಿ ಭಾಗವಾಗಿದೆ ಎಂದರ್ಥ. ಒಂದು ಸಂಖ್ಯೆಯಿಂದ ನಿಶ್ಶೇಷವಾಗಿ ಭಾಗವಾಗುತ್ತದೇಯೇ? ಇಲ್ಲವೇ? ಎಂದು ಪರೀಕ್ಷಿಸಲು ನಾವು ಉಪಯೋಗಿಸುವ ವಿಧಾನವನ್ನು ಭ್ಯಾಜ್ಯತೆಯ ನಿಯಮ ಎನ್ನುತ್ತೇವೆ.

ಹಿಂದಿನ ತರಗತಿಯಲ್ಲಿ ನಾವು ತಿಳಿದುಕೊಂಡ ವಿಭ್ಯಾಜ್ಯತೆಯ ನಿಯಮದ ಸೂತ್ರಗಳನ್ನು ಮತ್ತೊಮ್ಮೆ ಸ್ಮರಿಸೋಣ.



Downloaded from https:// www.studiestoday.com

Downloaded from https:// www.studiestoday.com

### 3.2.1 2ರ ಭಾಜ್ಯತೆಯ ನಿಯಮ

ಇಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯನ್ನು ನೋಡಿ.

**ಸಂಖ್ಯಾಪಟ್ಟಿ**

| | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 | 28 | 29 | 30 |
| 31 | 32 | 33 | 34 | 35 | 36 | 37 | 38 | 39 | 40 |
| 41 | 42 | 43 | 44 | 45 | 46 | 47 | 48 | 49 | 50 |
| 51 | 52 | 53 | 54 | 55 | 56 | 57 | 58 | 59 | 60 |
| 61 | 62 | 63 | 64 | 65 | 66 | 67 | 68 | 69 | 70 |
| 71 | 72 | 73 | 74 | 75 | 76 | 77 | 78 | 79 | 80 |
| 81 | 82 | 83 | 84 | 85 | 86 | 87 | 88 | 89 | 90 |
| 91 | 92 | 93 | 94 | 95 | 96 | 97 | 98 | 99 | 100 |

ಇದರಲ್ಲಿ 2ರ ಅಪವರ್ತ್ಯಗಳೆಲ್ಲವನ್ನು ಹೊಡೆದು ಹಾಕಿ. ನೀವು ಹೊಡೆದು ಹಾಕಿದ ಸಂಖ್ಯೆಗಳಲ್ಲಿ ಯಾವುದಾದೂ ಒಂದು ಕ್ರಮವನ್ನು ಗಮನಿಸಿದ್ದಿರಾ? ನೀವು ಜಾಗ್ರತ್ತೆಯಾಗಿ 2ರಿಂದ ಪರಿಶೀಲಿಸಿದರೆ ಭಾಗಿಸಲ್ಪಡುವ ಸಂಖ್ಯೆಗಳಲ್ಲಿ ಬಿಡಿ ಸ್ಥಾನದಲ್ಲಿರುವ ಅಂಕೆಗಳು 0, ), 4, 6, 8 ಇರುತ್ತದೆ.

ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿರುವ ಅಂಕೆಗಳು 0, 2, 4, 6, 8 ಆಗಿದ್ದರೆ ಆ ಸಂಖ್ಯೆ 2, ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತವೆ.

**ಇವು ಮಾಡಿರಿ**



953, 9534, 900, 452 ಈ ಸಂಖ್ಯೆಗಳು ಎರಡರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತವೆಯೇ? ನಿಮ್ಮ ಉತ್ತರವನ್ನು ಭಾಗಾಕಾರ ಪದ್ಧತಿ ಪ್ರಕಾರ ಪರೀಕ್ಷಿಸಿ.

### 3.2.2 3ರ ಭಾಜ್ಯತೆಯ ನಿಯಮ.

ಈಗ ಮೇಲಿನ ಪಟ್ಟಯಲ್ಲಿ 3ರ ಗುಣಕವನ್ನು ವೃತ್ತದಿಂದ ಸುತ್ತಿರಿ. ನೀವು 21, 36, 54 ಮೊದಲಾದ ಸಂಖ್ಯೆಗಳನ್ನು ವೃತ್ತದಿಂದ ಸುತ್ತಿರುತ್ತೀರಿ. ಈ ರೀತಿಯಲ್ಲಿ ತೋರಿಸಿದ ಸಂಖ್ಯೆಗಳಲ್ಲಿ ನೀವು ಯಾವುದಾದರೂ ಪ್ರತ್ಯೇಕ ವಿನ್ಯಾಸವನ್ನು ಗಮನಿಸಿರುವಿರಾ? ಇಲ್ಲವೇ! ಬಿಡಿ ಸ್ಥಾನದಲ್ಲಿ (ಒಂದೇ ಅಂಕೆ)ರುವ ಅಂಕೆಗಳಲ್ಲವೂ 3 ರಿಂದ ಭಾಗವಾಗಬಹುದು ಅಥವಾ ಭಾಗವಾಗದೇ ಇರಬಹುದು. ಉದಾಹರಣೆಗೆ 27 ಮತ್ತು 37 ಈ ಸಂಖ್ಯೆಗಳಲ್ಲಿ ಬಿಡಿ ಸ್ಥಾನದಲ್ಲಿ ಒಂದೇ ಅಂಕೆ 7 ಇರುವುದು 27, 3 ರಿಂದ ಭಾಗಿಸಲ್ಪಡುವುದು. ಆದರೆ 37, 3 ರಿಂದ ಭಾಗಿಸಲ್ಪಡುವುದಿಲ್ಲ.

21, 36, 54,63, 72, 117 ಸಂಖ್ಯೆಗಳಲ್ಲಿನ ಅಂಕೆಗಳಲ್ಲಿನ ಮೊತ್ತವನ್ನು ನೋಡಿರಿ.

2 + 1 = 3      5 + 4 = ______      7 + 5 = ______

3 + 6 = _____      6 + 3 = ______      1 + 1 + 7 = ______

ಮೇಲಿನ ಮೊತ್ತಗಳೆಲ್ಲವೂ 3 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ.

ಆದ್ದರಿಂದ **ಒಂದು ಸಂಖ್ಯೆಯಲ್ಲಿನ ಅಂಕೆಗಳ ಮೊತ್ತ 3 ರಿಂದ ನಿಶ್ಯೇಷವಾಗಿ ಭಾಗಿಸಲ್ಪಟ್ಟರೆ ಆ ಸಂಖ್ಯೆ 3 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ.** ನೀವು ವೃತ್ತದಲ್ಲಿ ತೋರಿಸಿದ ಸಂಖ್ಯೆಗಳನ್ನು ಈ ನಿಯಮದಿಂದ ಸರಿನೋಡಿರಿ.



Downloaded from https:// www.studiestoday.com

Downloaded from https:// www.studiestoday.com

**ಇವು ಮಾಡಿರಿ**



1. ಕೆಳಗೆ ಕೊಟ್ಟಿರುವ ಸಂಖ್ಯೆಗಳು 3 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತವೆಯೇ? ಮನಸ್ಸಿನಲ್ಲೆ ಭಾಗಿಸಿ ತಿಳಿಸಿ.

   i. 45986 ii. 36129 iii. 7874

### 3.2.3 6ರ ಭಾಜ್ಯತೆಯ ನಿಯಮ

ಸಂಖ್ಯೆ ಪಟ್ಟಿಯಲ್ಲಿ 6ರ ಅಪವರ್ತ್ಯಗಳನ್ನು (X) ಗುರುತಿನಿಂದ ಸೂಚಿಸಿ..

ಆ ಸಂಖ್ಯೆಯಲ್ಲಿ ಯಾವುದಾದರೂ ಪ್ರತ್ಯೇಕತೆಯನ್ನು ಗಮನಿಸಿರುವಿರೆ? ಹೌದು! ಎಲ್ಲಾಸಂಖ್ಯೆಗಳೂ 2, 3ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ.

2, 3 ರಿಂದ ನಿಶ್ಯೇಷವಾಗಿ ಭಾಗವಾಗುವ ಸಂಖ್ಯೆಗಳೆಲ್ಲವೂ 6ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ.

**ಪ್ರಯತ್ನಿಸಿ.**



1. 7224, 6 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆಯಾ ? ಹೇಗೆ ?
2. 6 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುವ ಯಾವುದಾದರು ನಾಲ್ಕಂಕೆಗಳ ಸಂಖ್ಯೆಗಳಿಗೆ ಎರಡು ಉದಾಹರಣೆಗಳನ
3. 6 ರಿಂದ ಭಾಗಿಸಲ್ಪಟ್ಟು, 2 ಮತ್ತು 3 ರಿಂದ ಭಾಗಿಸಲ್ಪಡುವ ಯಾವುದಾದರು ಸಂಖ್ಯೆ ಇದೆಯಾ ? ಏಕೆ ?

### 3.2.4 9ರ ಭಾಜ್ಯತೆಯ ನಿಯಮ

ಸಂಖ್ಯಾ ಪಟ್ಟಿಯಲ್ಲಿ 9ರ ಗುಣಕಗಳನ್ನು (□)" ಈ ಚಿಹ್ನೆಯಿಂದ ಸೂಚಿಸಿ. ಈ ಸಂಖ್ಯೆಯಲ್ಲಿ ಏನಾದರು ಪ್ರತ್ಯೇಕತೆ ಇರುವುದು. ಗಮನಿಸಿದ್ದೀರಾ?(ಸೂಚನೆ ಅಂಕೆಗಳ ಮೊತ್ತ)

9ರ ಅಪವರ್ತ್ಯಗಳಲ್ಲಿ ಅಂಕೆಗಳ ಮೊತ್ತ 9ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ.

ಉದಾಹರಣೆಗೆ 81 ನ್ನು ಪರಿಶೀಲಿಸಿದರೆ 81ರಲ್ಲಿ ಅಂಕೆಗಳ ಮೊತ್ತ $8+1=9$

**"ಒಂದು ಸಂಖ್ಯೆಯಲ್ಲಿನ ಅಂಕೆಗಳ ಮೊತ್ತ 9 ರಿಂದ ನಿಶ್ಯೇಷವಾಗಿ ಭಾಗಿಸಲ್ಪಟ್ಟರೆ ಆ ಸಂಖ್ಯೆ 9 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ."**

**ಇವು ಮಾಡಿರಿ**



1. 9846 9ರಿಂದ ನಿಶ್ಯೇಷವಾಗಿ ಭಾಗವಾಗುತ್ತದೆಯೆ? ಪರೀಕ್ಷಿಸಿ.
2. ಭಾಗಕಾರ ಪದ್ಧತಿ ಉಪಯೋಗಿಸದೇ 8998794, 9 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆಯೇ? ತಿಳಿಸಿ.
3. 786, 3 ಮತ್ತು 9 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆಯೇ?

### 3.2.5 5 ರ ಭಾಜ್ಯತೆಯ ನಿಯಮ

20, 25, 30, 35, 40, 45, 50 ಸಂಖ್ಯೆಗಳಲ್ಲವೂ 5ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತವೆಯೇ?

53, 5ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆಯೇ? ಏಕೆ?

ಬಿಡಿಸ್ಥಾನದಲ್ಲಿ 0 ಇಲ್ಲವೇ 5 ಇರುವ ಸಂಖ್ಯೆಗಳೆಲ್ಲವೂ 5ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತವೆ. ಎಂದು ಹೇಳಬಲ್ಲಿರಾ.5785, 6021, 1000, 9005 ಈ ಸಂಖ್ಯೆಗಳನ್ನು ತೆಗೆದುಕೊಂಡು 5ರಿಂದ ಭಾಗಿಸಲ್ಪಡುವ ಸಂಖ್ಯೆಗಳನ್ನು ಊಹಿಸಿ ಹಾಗೆಯೇ ಭಾಗಕಾರ ಪದ್ಧತಿಯ ಪ್ರಕಾರ ಉತ್ತರನ್ನು ಪರೀಕ್ಷಿಸಿರಿ.

### 3.2.6 10 ರ ವಿಭಾಜ್ಯತೆಯ ನಿಯಮ

10ರ ಅಪವರ್ತ್ಯಗಳೆಲ್ಲವನ್ನು ಸಂಖ್ಯಾ ಪಟ್ಟಿಯಲ್ಲಿ (✔)ಗುರುತಿನಿಂದ ಸೂಚಿಸಿರಿ. ನೀವು ಏನನ್ನು ಗಮನಿಸಿದಿರಿ.

1. ಸಂಖ್ಯೆಗಳು ಬಿಡಿಸ್ಥಾನದಲ್ಲಿ '0' ನ್ನು ಒಳಗೊಂಡಿದೆ.
2. ಸಂಖ್ಯೆಗಳೆಲ್ಲವೂ 2 ಮತ್ತು 5 ರಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತವೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ 3.1

1. ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳಲ್ಲಿ 2, 3, ಮತ್ತು 6ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ಸಂಖ್ಯೆಗಳಾವುವು?
   (i) 321729 (ii) 197232 (iii) 972132 (iv) 1790184
   (v) 312792 (vi) 800552 (vii) 4335 (viii) 726352

2. ಕೆಳಗೆ ಕೊಟ್ಟಿರುವ ಸಂಖ್ಯೆಗಳಲ್ಲಿ 5 ಮತ್ತು 10ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ಸಂಖ್ಯೆಗಳನ್ನುಗುರುತಿಸಿ.
   25, 125, 250, 1250, 10205, 70985, 45880

   10 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ಸಂಖ್ಯೆಗಳಲ್ಲವೂ 2 ಮತ್ತು 5 ರಿಂದ ನಿಶ್ಶೇಷವಾಗಿ ಭಾಗವಾಗುತ್ತವೆಯೋ? ಇಲ್ಲವೋ? ಪರೀಕ್ಷಿಸಿರಿ.

3. ಕೆಳಗೆ ಕೊಟ್ಟಿರುವ ಪಟ್ಟಿಯನ್ನು 3 ಮತ್ತು 9ರ ಭಾಜ್ಯತೆಯ ನಿಯಮವನ್ನುಪಯೋಗಿಸಿಪೂರ್ಣಗೊಳಿಸಿ.

| ಸಂಖ್ಯೆ | ಸಂಖ್ಯೆಯಲ್ಲಿನ ಅಂಕೆಗಳ ಮೊತ್ತ | ಭಾಗಿಸುವ ಸಂಖ್ಯೆ | |
|---|---|---|---|
| | | **3** | **9** |
| 72 | ........................................ | | |
| 197 | ........................................ | | |
| 4689 | ........................................ | | |
| 79875 | ........................................ | | |
| 988974 | 9 + 8 + 8 + 9 + 7 + 4 = 45 | ಹೌದು | ಹೌದು |

4. 1, 9, 8ಅಂಕೆಗಳನ್ನು ಒಂದು ಸಾರಿ ಮಾತ್ರವೇ ಉಪಯೋಗಿಸಿ, ಬರೆಯಬಹುದಾದ ಮೂರಂಕೆಯ ಸಂಖ್ಯೆಗಳನ್ನು ಬರೆಯಿರಿ. ಈ ಸಂಖ್ಯೆಗಳು 9 ರಿಂದ ನಿಶ್ಶೇಷವಾಗಿ ಭಾಗವಾಗುತ್ತವೆಯೋಇಲ್ಲವೋ ಪರಿಶೀಲಿಸಿ.

5. 2, 3 , 4, 5, 6, 9 ಅಂಕೆಗಳಲ್ಲಿ 12345ನ್ನು ನಿಶ್ಶೇಷವಾಗಿ ಭಾಗಿಸುವ ಸಂಖ್ಯೆಗಳನ್ನು ಬರೆಯಿರಿ.
   12345ನ್ನು ಹಿಂದಿನಿಂದ ಕ್ರಮವಾಗಿ ಬರೆದಾಗ ಸಿಗುವ ಸಂಖ್ಯೆಯು 2, 3 , 5, 6, 9 ರಲ್ಲಿ ಯಾವುದರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆಯೋ ತಿಳಿಸಿ.

6. 3 , 4, 5 ಅಂಕೆಗಳನ್ನುಪಯೋಗಿಸಿ ಬರೆಯಬಹುದಾದ ಎರಡಂಕೆಯ ಸಂಖ್ಯೆಗಳನ್ನು ಬರೆಯಿರಿ.
   ಆ ಸಂಖ್ಯೆಗಳು 2, 3 , 5, 6 ಮತ್ತು 9ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆಯೇ? ಇಲವೆ?ಪರಿಶೀಲಿಸಿ.

7. ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳಲ್ಲಿ 8 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವಂತೆ ಗರಿಷ್ಠ–ಕನಿಷ್ಠ ಬೆಲೆ ಹೊಂದಿದ ಅಂಕೆಗಳಿಂದ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.
   i. __ 6724 ii. 4765__ 2 iii. 7221__ 5

8. 123ಕ್ಕೆ ಯಾವ ಕನಿಷ್ಠ ಸಂಖ್ಯೆಯನ್ನು ಕೂಡಿಸಿದಾಗ ಬರುವ ಸಂಖ್ಯೆ 5 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ?

9. 256 ರಿಂದ ಯಾವ ಕನಿಷ್ಠ ಸಂಖ್ಯೆಯನ್ನು ಕಳೆದರೆ ಬರುವ ಸಂಖ್ಯೆ 10ರಿಂದ ನಿಶ್ಶೇಷವಾಗಿಭಾಗಿಸಲ್ಪಡುತ್ತದೆ?

### 3.3 ಅಪವರ್ತನಗಳು

ಪ್ರಸ್ತುತ ಪಾಠದಲ್ಲಿರುವ 2, 3 , 5, 6, 9, 10 ಸಂಖ್ಯೆಗಳ ಭಾಜ್ಯತೆಯ ನಿಯಮ ಕಲಿತಿದ್ದೇವೆ. ಈಗ ಅಪವರ್ತನಗಳು ಕಲ್ಪನೆಯನ್ನು ತಿಳಿಯೋಣ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ದೇವಿಯ ಹತ್ತಿರ 6 ನಾಣ್ಯಗಳಿವೆ. ಅವುಗಳನ್ನು ಕ್ರಮವಾಗಿ ಪ್ರತಿ ಸಾಲಿನಲ್ಲಿ ಸಮಾನ ಸಂಖ್ಯೆಯಲ್ಲಿ ನಾಣ್ಯಗಳಿರುವಂತೆ ಜೋಡಿಸಬೇಕು ಎಂದುಕೊಂಡಳು.6 ನಾಣ್ಯಗಳನ್ನು ದೇವಿ ಅನೇಕ ರೀತಿಯಲ್ಲಿ ಜೋಡಿಸಿದಳು ಅವುಗಳನ್ನು ಪರಿಶೀಲಿಸೋಣ.

**ಸಂದರ್ಭ :1** ಪ್ರತಿ ಕಂಬಸಾಲಿನಲ್ಲಿ ಒಂದು ನಾಣ್ಯವು ಇರುವ ಹಾಗೆ ಜೋಡಿಸಿದರೆ

ಕಂಬಸಾಲಿನ ಸಂಖ್ಯೆ $= 6$

ಒಟ್ಟು ಸಾಲುಗಳ ಸಂಖ್ಯೆ $= 1 \times 6 = 6$



**ಸಂದರ್ಭ :2** ಪ್ರತಿ ಕಂಬಸಾಳಿಲಿನಲ್ಲಿ ಎರಡರಂತೆ ನಾಣ್ಯಗಳು ಇರುವ ಹಾಗೆ ಜೋಡಿಸಿದರೆ



ಕಂಬಸಾಲಿನ ಸಂಖ್ಯೆ $= 3$

ಒಟ್ಟು ನಾಣ್ಯಗಳು $=2 \times 3 = 6$

**ಸಂದರ್ಭ :3** ಪ್ರತಿ ಕಂಬಸಾಲಿನಲ್ಲಿ ಮೂರು ನಾಣ್ಯಗಳಿರುವಂತೆ ಜೋಡಿಸಿದರೆ



ಕಂಬಸಾಲಿನ ಸಂಖ್ಯೆ $=2$

ಒಟ್ಟು ನಾಣ್ಯಗಳು $= 3 \times 2 = 6$



**ಸಂದರ್ಭ :4** ಪ್ರತಿ ಕಂಬಸಾಲಿನಲ್ಲಿ 6 ನಾಣ್ಯಗಳಿರುವ ರೀತಿ ಜೋಡಿಸಿದರೆ

ಕಂಬಸಾಲಿನ ಸಂಖ್ಯೆ $= 1$

ಒಟ್ಟು ನಾಣ್ಯಗಳು $= 6 \times 1 = 6$

ಮೇಲೆ ತಿಳಿಸಿದ ಸಂದರ್ಭಗಳಲ್ಲಿ ಮಾತ್ರವೇ 6 ನಾಣ್ಯಗಳನ್ನು ಜೋಡಿಸಬಹುದು.

ಈ ಜೋಡಣೆಯಿಂದ ನ್ನು ಎರಡು ಸಂಖ್ಯೆಗಳ ಗುಣಲಬ್ಧವಾಗಿ $6 = 1 \times 6$, $6 = 2 \times 3$, $6 = 3 \times 2$ $6 = 6 \times 1$ಯಾಗಿ ಬರೆಯಬಹುದೆಂದು ಯಾವುದನ್ನು ಗಮನಿಸಿದಳು.

$6 = 2 \times 3$ ರಿಂದ 2 ಮತ್ತು 3, 6ನ್ನು ನಿಶ್ಶೇಷವಾಗಿ ಭಾಗಿಸುತ್ತವೆ ಎಂದು ಹೇಳಬಹುದು. ಆದ್ದರಿಂದ 2, 3ನ್ನು 6ಕ್ಕೆ ಅಪವರ್ತನಗಳೆಂದು ಹೇಳಬಹುದು. $6 = 1 \times 6$,ರಿಂದ 6 ಮತ್ತು 1ನ್ನು 6ರ ಅಪವರ್ತನಗಳೆಂದು ಹೇಳಬಹುದು.

1, 2, 3, 6 ಮಾತ್ರವೇ 6ರ ಅಪವರ್ತನಗಳೆಂದು ಹೇಳಬಹುದು.

**"ಅಪವರ್ತನಗಳು ಎಂದರೆ ದತ್ತ ಸಂಖ್ಯೆಯನ್ನು ಪೂರ್ಣವಾಗಿ ಭಾಗಿಸುವ ಸಂಖ್ಯೆಗಳು"**

ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಒಂದು ಸಂಖ್ಯೆಯನ್ನು ನಿಶ್ಶೇಷವಾಗಿ ಭಾಗಿಸುವ ಸಂಖ್ಯೆಗಳನ್ನು ಆ ಸಂಖ್ಯೆಯ ಅಪವರ್ತನಗಳೆಂದು ಹೇಳಬಹುದು. ಇಲ್ಲಿ 1, 2, 3, 6 ಇವು 6ರ ಅಪವರ್ತನಗಳು. ಅದೇ ರೀತಿ 1, 19 ಇವು 19ರ ಅಪವರ್ತನಗಳು

5, 16ರ ಅಪವರ್ತನವಲ್ಲ ಏಕೆ?.

ಈ ಕೆಳಗಿನ ಪಟ್ಟಿಯನ್ನು ಪರಿಶೀಲಿಸಿ

| ಸಂಖ್ಯೆ | ಅಪವರ್ತನಗಳು |
|---|---|
| 12 | 1, 2, 3, 4, 6, 12 |
| 18 | 1, 2, 3, 6, 9, 18 |
| 20 | 1, 2, 4, 5, 10, 20 |
| 24 | 1, 2, 3, 4, 6, 8, 12, 24 |

ಮೇಲಿನ ಪಟ್ಟಿಯನ್ನು ಗಮನಿಸಿದರೆ ನಾವು ಈ ಕೆಳಗಿನ ಅಂಶಗಳನ್ನು ಗಮನಿಸಬಹುದು.

(i) ಪ್ರತಿಸಂಖ್ಯೆಗೆ 1 ಅಪವರ್ತನ. ಇದು ದತ್ತಸಂಖ್ಯೆಯ ಅಪವರ್ತನಗಳಲ್ಲಿ ಎಲ್ಲಕ್ಕಿಂತಲೂ ಚಿಕ್ಕದು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

(ii) ಪ್ರತಿಸಂಖ್ಯೆಯು ಅದಕ್ಕದೇ ಅಪವರ್ತನ ಇದು ದತ್ತ ಸಂಖ್ಯೆಯ ಅಪವರ್ತನಗಳೆಲ್ಲವುಗಳಲ್ಲಿ ದೊಡ್ಡದು.

(iii) ಪ್ರತಿ ಅಪವರ್ತನ ಆ ಸಂಖ್ಯೆಗೆ ಸಮ ಅಥವಾ ಆ ಸಂಖ್ಯೆಗಿಂತ ಚಿಕ್ಕದಾಗಿರುತ್ತದೆ.

(iv) ಪ್ರತಿಸಂಖ್ಯೆಗೆ ಅಪವರ್ತನಗಳು ಪರಿಮಿತವಾಗಿರುತ್ತದೆ. (ಲೆಕ್ಕಿಸುವಷ್ಟು)

**ಇವು ಮಾಡಿರಿ**



(i) 80ರ ಅಪವರ್ತನಗಳನ್ನು ಬರೆಯಿರಿ.

(ii) ಒಂದು ಸಂಖ್ಯೆಯ ಅಪವರ್ತನಗಳೆಲ್ಲವೂ ಆ ಸಂಖ್ಯೆಯನ್ನು ನಿಶ್ಶೇಷವಾಗಿ ಭಾಗಿಸುತ್ತವೆಯೇ?28ರ ಅಪವರ್ತನಗಳನ್ನು ಕಂಡುಹಿಡಿಯಿರಿ, ಭಾಗಕಾರ ಪದ್ಧತಿ ಪ್ರಕಾರ ಪರೀಕ್ಷಿಸಿ.

(iii) 15, 24 ಇವುಗಳ ಅಪವರ್ತನ 3, ಈ ಸಂಖ್ಯೆಗಳ ವ್ಯತ್ಯಾಸಕ್ಕೆ ಕೂಡ 3 ಅಪವರ್ತನವಾಗುತ್ತದೆಯೇ?

## 3.4. ಅವಿಭಾಜ್ಯ ಮತ್ತು ಭಾಜ್ಯ ಸಂಖ್ಯೆಗಳು (Prime and Composite Numbers)

ಕೆಳಗಿನ ಪಟ್ಟಿಯಲ್ಲಿ ಸಂಖ್ಯೆಗಳು ಮತ್ತು ಅಪವರ್ತನಗಳನ್ನು ಕೊಡಲಾಗಿದೆ ಅದೇ ರೀತಿ ಒಂದು ಸಂಖ್ಯೆಯಲ್ಲಿ ಎಷ್ಟು ಅಪವರ್ತನಗಳಿವೆ ಎಂದು ತಿಳಿಯುವ ಸಂಖ್ಯೆಯನ್ನು ಕೂಡ ಕೊಟ್ಟಿದೆ ಪರಿಶೀಲಿಸಿ.

| ಸಂಖ್ಯೆ | ಅಪವರ್ತನ | ಅಪವರ್ತನ ಸಂಖ್ಯೆಗಳು |
|---|---|---|
| 1 | 1 | 1 |
| 2 | 1, 2 | 2* |
| 3 | 1, 3 | 2* |
| 4 | 1, 2, 4 | 3 |
| 5 | 1, 5 | 2* |
| 6 | 1, 2, 3, 6 | 4 |
| 7 | 1, 7 | 2* |

ಮೇಲಿನ ಪಟ್ಟಿಯಲ್ಲಿ ಯಾವ ಸಂಖ್ಯೆಗಳು ಎರಡು ಅಪವರ್ತನಗಳನ್ನು ಮಾತ್ರ ಹೊಂದಿದೆ?

2, 3, 5, 7 ಸಂಖ್ಯೆಗಳು ಕೇವಲ ಎರಡು ಅಪವರ್ತನಗಳನ್ನು ಮಾತ್ರ ಹೊಂದಿವೆ.(*ಚಿಹ್ನೆಯಿಂದ ಸೂಚಿಸಿದವುಗಳು)

ಒಂದು ಮತ್ತು ಅದೇ ಸಂಖ್ಯೆ ಇವುಗಳಿಗೆ ಅಪವರ್ತನಗಳು

1 ಮತ್ತು ಅದೇ ಸಂಖ್ಯೆ ಅಪವರ್ತನಗಳಾಗಿರುವ ಸಂಖ್ಯೆಗಳನ್ನು "**ಅವಿಭಾಜ್ಯ ಸಂಖ್ಯೆಗಳು**" ಎನ್ನುವರು.

ಯಾವ ಸಂಖ್ಯೆಗಳು ಎರಡಕ್ಕಿಂತ ಹೆಚ್ಚು ಅಪವರ್ತನಗಳನ್ನು ಹೊಂದಿವೆ? 4, 6...ಮೊದಲಾದ ಸಂಖ್ಯೆಗಳು ಎರಡಕ್ಕಿಂತ ಹೆಚ್ಚು ಅಪವರ್ತನಗಳನ್ನು ಹೊಂದಿದೆ.ಅವುಗಳನ್ನು "**ಭಾಜ್ಯಸಂಖ್ಯೆಗಳು**" ಎನ್ನುವರು.

10 ಕಿಂತ ದೊಡ್ಡದಾದ 5 ಭಾಜ್ಯ ಸಂಖ್ಯೆಗಳನ್ನು ತಿಳಿಸಿರಿ?

ಒಂದೇ ಒಂದು ಅಪವರ್ತನ ಹೊಂದಿರುವ ಸಂಖ್ಯೆ ಯಾವುದು?

1 ಮಾತ್ರವೇ ಒಂದೇ ಒಂದು ಅಪವರ್ತನ ಹೊಂದಿದೆ. 1 ಅವಿಭಾಜ್ಯ ಸಂಖ್ಯೆಯೂ ಅಲ್ಲ ಮತ್ತು ಭಾಜ್ಯಸಂಖ್ಯೆಯೂ ಅಲ್ಲ.

**ಪ್ರಯತ್ನಿಸಿ**



1. ಅತ್ಯಂತ ಚಿಕ್ಕ ಅವಿಭಾಜ್ಯ ಸಂಖ್ಯೆ ಯಾವುದು?
2. ಅತ್ಯಂತ ಚಿಕ್ಕ ಭಾಜ್ಯಸಂಖ್ಯೆ ಯಾವುದು?
3. ಚಿಕ್ಕ ಬೆಸ ಭಾಜ್ಯಸಂಖ್ಯೆ ಯಾವುದು?
4. ಐದೈದು ಸರಿಭಾಜ್ಯಸಂಖ್ಯೆಗಳು, ಬೆಸ ಭಾಜ್ಯಸಂಖ್ಯೆಗಳನ್ನು ಬರೆಯಿರಿ.
5. 1 ಭಾಜ್ಯವೂ ಅಲ್ಲ ಅವಿಭಾಜ್ಯವೂ ಅಲ್ಲ ಎಂದು ಪರಿಗಣಿಸಲ್ಪಟ್ಟಿದೆ. ಏಕೆ?



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಗ್ರೀಕ್ ಗಣಿತಜ್ಞ ಎರಾಟೋಸ್ತನ್ಸ್ 3ನೇ ಶತಮಾನದಲ್ಲಿ ಬಳಸಿದ ಪದ್ಧತಿಯಿಂದ 1 ರಿಂದ 100ರ ವರೆಗಿನ ಅವಿಭಾಜ್ಯಸಂಖ್ಯೆಗಳನ್ನು ಗುರುತಿಸುತ್ತೇವೆ.

ಈ ಪದ್ಧತಿಯನ್ನು ಪರಿಶೀಲಿಸಲು 1 ರಿಂದ 100ರವರೆಗಿನ ಸಂಖ್ಯಾಪಟ್ಟಿಯನ್ನು ತಯಾರಿಸಿ.

| | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 | 28 | 29 | 30 |
| 31 | 32 | 33 | 34 | 35 | 36 | 37 | 38 | 39 | 40 |
| 41 | 42 | 43 | 44 | 45 | 46 | 47 | 48 | 49 | 50 |
| 51 | 52 | 53 | 54 | 55 | 56 | 57 | 58 | 59 | 60 |
| 61 | 62 | 63 | 64 | 65 | 66 | 67 | 68 | 69 | 70 |
| 71 | 72 | 73 | 74 | 75 | 76 | 77 | 78 | 79 | 80 |
| 81 | 82 | 83 | 84 | 85 | 86 | 87 | 88 | 89 | 90 |
| 91 | 92 | 93 | 94 | 95 | 96 | 97 | 98 | 99 | 100 |

**ಹಂತ 1 :** **1** ಭಾಜ್ಯ ಸಂಖ್ಯೆಯೂ ಅಲ್ಲ ಅವಿಭಾಜ್ಯ ಸಂಖ್ಯೆಯೂ ಅಲ್ಲ. ಆದ್ದರಿಂದ **1**ನ್ನು (X) ಗುರುತಿನಿಂದ ಹೊಡೆದುಹಾಕಿ.

**ಹಂತ 2 :** **2** ಕ್ಕೆ ದುಂಡುಸುತ್ತಿ ಮತ್ತು ಪಟ್ಟಿಯಲ್ಲಿರುವ **2**ರ ಅಪವರ್ತ್ಯಗಳನ್ನು (X) ಈ ಚಿಹ್ನೆಯಿಂದ ಹೊಡೆದುಹಾಕಿ.

**ಹಂತ 3 :** **3** ಕ್ಕೆ ದುಂಡುಸುತ್ತಿ ಮತ್ತು ಪಟ್ಟಿಯಲ್ಲಿರುವ **3**ರ ಅಪವರ್ತ್ಯಗಳನ್ನು (X) ಈ ಚಿಹ್ನೆಯಿಂದ ಹೊಡೆದುಹಾಕಿ.

**ಹಂತ 4 :** **5** ಮತ್ತು **7**ಕ್ಕೆ ದುಂಡುಸುತ್ತಿ ಇದೇಕ್ರಮ ಮುಂದುವರೆಸಿ.

**ಹಂತ 5 :** ಪಟ್ಟಿಯಲ್ಲಿನ ಎಲ್ಲಾ ಸಂಖ್ಯೆಗಳು ದುಂಡು ಸುತ್ತುವ ಅಥವಾ ಹೊಡೆದು ಹಾಕುವ ಕ್ರಿಯೆಗೆ ಒಳಪಡುವವರೆಗೆ ಈ ಕ್ರಿಯೆ ಮುಂದುವರೆಸಿ.

ದುಂಡುಸುತ್ತಿರುವ ಸಂಖ್ಯೆಗಳೆಲ್ಲವೂ ಅವಿಭಾಜ್ಯ ಸಂಖ್ಯೆಗಳು 1 ಅಲ್ಲದೇ (X) ಚಿಹ್ನೆಯಿಂದ ಸೂಚಿಸಿರುವ ಸಂಖ್ಯೆಗಳು ಭಾಜ್ಯ ಸಂಖ್ಯೆಗಳು

**ಪ್ರಯತ್ನಿಸಿರಿ :**



1) ನೀವು ಊಹಿಸುವಿರಾ? ಒಂದು ಅವಿಭಾಜ್ಯ ಸಂಖ್ಯೆಯನ್ನು ತಿರುಗಿಸಿ ಬರೆದಾಗ ಬರುವ ಸಂಖ್ಯೆಯೂ ಸಹ ಅವಿಬಾಜ್ಯ ಸಂಖ್ಯೆಯಾಗುತ್ತದೆಯೇ?(ಗಮನಿಸಿ–2 ಅಂಕೆಗಳ ಸಂಖ್ಯೆಗಳನ್ನು ತೆಗೆದುಕೊಂಡು ಪರಿಶೀಲಿಸಿ ಕಾರಣಗಳನ್ನು ಚರ್ಚಿಸಿ)

2)ನಿಮಗೆ ಗೊತ್ತೆ 31 ಅವಿಭಾಜ್ಯ ಸಂಖ್ಯೆ 31ರಲ್ಲಿ ಅಂಕೆಗಳನ್ನು ಹಿಂದು ಮುಂದು ಮಾಡಿ ಮತ್ತೆ ಎರಡು ಅವಿಭಾಜ್ಯ ಸಂಖ್ಯೆಗಳನ್ನು ಕಂಡುಹಿಡಿಯಿರಿ.

### 3.4.1 ಪರಸ್ಪರ ಅವಿಭಾಜ್ಯ ಅಥವಾ ಸಾಪೇಕ್ಷ ಅವಿಭಾಜ್ಯ ಸಂಖ್ಯೆಗಳು(Co -Prime Numbers)

3 ಮತ್ತು 8ನ್ನು ಪರಿಶೀಲಿಸಿರಿ.

3 ರ ಅಪವರ್ತನಗಳು 1 ಮತ್ತು 3

8 ರ ಅಪವರ್ತನಗಳು 1, 2, 4 ಮತ್ತು 8



Downloaded from https:// www.studiestoday.com

Downloaded from https:// www.studiestoday.com

3 ಮತ್ತು 8ರ ಸಾಮಾನ್ಯ ಅಪವರ್ತನ '1' ಮಾತ್ರವೇ.

**'1' ಮಾತ್ರವೇ ಸಾಮಾನ್ಯ ಅಪವರ್ತನವಾಗಿರುವ ಸಂಖ್ಯೆಗಳನ್ನು ಪರಸ್ಪರ ಅವಿಭಾಜ್ಯ ಸಂಖ್ಯೆಗಳು ಅಥವಾ ಸಾಪೇಕ್ಷ ಅವಿಭಾಜ್ಯ ಸಂಖ್ಯೆಗಳು** ಎಂದು ಕರೆಯುತ್ತಾರೆ.

ಎರಡು ಜೊತೆ ಪರಸ್ಪರ ಅವಿಭಾಜ್ಯ ಸಂಖ್ಯೆಗಳನ್ನು ಬರೆಯಿರಿ. ಅವುಗಳ ಸಾಮಾನ್ಯ ಅಪವರ್ತನ ತಿಳಿಸಿರಿ.

**ಉದಾಹರಣೆ 1:** ಎರಡು ಪರಸ್ಪರ ಅವಿಭಾಜ್ಯ ಸಂಖ್ಯೆಗಳು 4 ಮತ್ತು 5ನ್ನು ತೆಗೆದುಕೊಳ್ಳಿರಿ.

ಈ ಎರಡು ಸಂಖ್ಯೆಗಳು ಅವಿಭಾಜ್ಯ ಸಂಖ್ಯೆಗಳೇ?

**ಪರಿಹಾರ :** ಅಲ್ಲ, 4ಅವಿಭಾಜ್ಯ ಸಂಖ್ಯೆ ಅಲ್ಲ. 5 ಮಾತ್ರವೇ ಅವಿಭಾಜ್ಯ ಸಂಖ್ಯೆ

ಆದ್ದರಿಂದ **"ಅವಿಭಾಜ್ಯ ಸಂಖ್ಯೆಗಳೆಲ್ಲ ಪರಸ್ಪರ ಅವಿಭಾಜ್ಯ ಸಂಖ್ಯೆಗಳು. ಆದರೆ ಪರಸ್ಪರ ಅವಿಭಾಜ್ಯ ಸಂಖ್ಯೆಗಳಲ್ಲಿನ ಎಲ್ಲಾ ಸಂಖ್ಯೆಗಳು ಅವಿಭಾಜ್ಯಸಂಖ್ಯೆಗಳಲ್ಲ."**

**ಅವಳಿ ಅವಿಭಾಜ್ಯ ಸಂಖ್ಯೆಗಳು**

2 ವ್ಯತ್ಯಾಸವಾಗಿ ಇರುವ ಅವಿಭಾಜ್ಯಸಂಖ್ಯೆಗಳನ್ನು **'ಅವಳಿ ಅವಿಭಾಜ್ಯಸಂಖ್ಯೆ'**ಗಳೆನ್ನುವರು.ಉದಾಹರಣೆಗೆ (3, 5), (5, 7), (11, 13), (41, 43) ಮೊದಲಾದವುಗಳು.

**ಇವು ಮಾಡಿರಿ.:**



ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳಲ್ಲಿ ವಿವಿಧ ಸಾಪೇಕ್ಷ ಅಥವಾ ಪರಸ್ಪರ ಅವಿಭಾಜ್ಯ ಸಂಖ್ಯೆಗಳ ಜೋಡಿಯನ್ನು ಗುರುತಿಸಿ.

2, 3, 4, 5, 6, 7, 8, 9 ಮತ್ತು 10



**ಅಧ್ಯಾಯ 3.2**

1. ಕೆಳಗೆ ಕೊಟ್ಟಿರುವ ಸಂಖ್ಯೆಗಳಿಗೆ ಸಾಧ್ಯವಾದ ಎಲ್ಲಾ ಅಪವರ್ತನಗಳನ್ನು ಬರೆಯಿರಿ.
   i. 36 ii. 23 iii. 96 iv. 115
2. ಈ ಕೆಳಗಿನವುಗಳಲ್ಲಿ ಸಾಪೇಕ್ಷ ಅವಿಭಾಜ್ಯ ಸಂಖ್ಯೆಗಳಾವುವು.? ಕಾರಣ ಕೊಡಿ.
   i. 18 ಮತ್ತು 35 ii. 216 ಮತ್ತು 215
   iii. 30 ಮತ್ತು 415 iv. 17 ಮತ್ತು 68
3. 1 ಮತ್ತು 20ರ ನಡುವೆ ಇರುವ ಗರಿಷ್ಠ ಅವಿಭಾಜ್ಯ ಸಂಖ್ಯೆ ಯಾವುದು?
4. 10 ಮತ್ತು 30ರ ಮಧ್ಯೆ ಇರುವ ಅವಿಭಾಜ್ಯ ಮತ್ತು ಭಾಜ್ಯ ಸಂಖ್ಯೆಗಳನ್ನು ತಿಳಿಸಿ.
5. 17 ಮತ್ತು 71 ಇವು ಅವಿಭಾಜ್ಯ ಸಂಖ್ಯೆಗಳು. ಈ ಎರಡು ಸಂಖ್ಯೆಗಳು ಒಂದೇ ಅಂಕೆಗಳಾದ 1 ಮತ್ತು 7ನ್ನು ಹೊಂದಿದೆ. 1 ಮತ್ತು 100ರ ನಡುವೆ ಇರುವ ಈ ವಿಧವಾದ 2 ಜೊತೆ ಅವಿಭಾಜ್ಯ ಸಂಖ್ಯೆಗಳನ್ನು ತಿಳಿಸಿ.
6. 20 ಕ್ಕಿಂತ ಚಿಕ್ಕದಾಗಿರುವ 3 ಜೊತೆ ಅವಳಿ ಅವಿಭಾಜ್ಯ ಸಂಖ್ಯೆಗಳನ್ನು ಬರೆಯಿರಿ.
7. ಎರಡು ಅವಿಭಾಜ್ಯ ಸಂಖ್ಯೆಗಳ ಗುಣಲಬ್ದ 35 ಆದರೆ ಆ ಸಂಖ್ಯೆಗಳಾವುವು?
8. 36ನ್ನು 2 ಅವಿಭಾಜ್ಯ ಸಂಖ್ಯೆಗಳ ಮೊತ್ತವಾಗಿ ತಿಳಿಸಿ.
9. 100 ಕ್ಕಿಂತ ಕಡಿಮೆಯಿರುವ 7 ಅನುಕ್ರಮ ಭಾಜ್ಯ ಸಂಖ್ಯೆಗಳನ್ನು ಬರೆಯಿರಿ.
10. 53ನ್ನು 3 ಬೆಸ ಅವಿಭಾಜ್ಯ ಸಂಖ್ಯೆಗಳ ಮೊತ್ತವಾಗಿ ಬರೆಯಿರಿ.
11. ವ್ಯತ್ಯಾಸ 10ಬರುವ ಹಾಗೆ ಎರಡು ಅವಿಭಾಜ್ಯ ಸಂಖ್ಯೆಗಳನ್ನು ತಿಳಿಸಿ
12. 20ಕ್ಕಿಂತ ಕಡಿಮೆ ಇದ್ದು ಅವುಗಳ ಮೊತ್ತವು 5 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ರೀತಿಯಲ್ಲಿ ಇರುವ ಮೂರು ಜೊತೆ ಅವಿಭಾಜ್ಯ ಸಂಖ್ಯೆಗಳನ್ನು ಬರೆಯಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

### 3.5 ಅವಿಭಾಜ್ಯ ಅಪವರ್ತನಗಳ ವಿಭಜನೆ.

ಯಾವ ಸಂಖ್ಯೆಯಾದರು ಅದರ ಅಪವರ್ತನಗಳ ಗುಣಲಬ್ಧವಾಗಿ ಬರೆದರೆ ಆ ಸಂಖ್ಯೆಯ ಅಪವರ್ತನ ವಿಭಜನೆ ನಡೆದಿದೆ ಎಂದರ್ಥ. ಸಂಖ್ಯೆಯೊಂದರ ಅಪವರ್ತನಗಳನ್ನು ಕಂಡುಹಿಡಿಯುವ ಪದ್ಧತಿಯನ್ನು ಅಪವರ್ತನ ವಿಭಜನೆ ಎನ್ನುವರು.

ಒಂದು ಸಂಖ್ಯೆಯ ಅಪವರ್ತನ ವಿಭಜನೆಯನ್ನು ಅನೇಕ ರೀತಿಯಲ್ಲಿ ಮಾಡಬಹುದು.ಉದಾಹರಣೆಗೆ 24ನ್ನು ಈ ಕೆಳಗಿನಂತೆ ಅಪವರ್ತನಗಳ ಗುಣಲಬ್ಧವಾಗಿ ಬರೆಯಬಹುದು.

a. $24 = 1 \times 24$ b. $24 = 2 \times 12$ c. $24 = 3 \times 8$

d. $24 = 4 \times 6$ e. $24 = 2 \times 2 \times 2 \times 3$

(b), (c)ಗುಣಲಬ್ಧದಲ್ಲಿ ಒಂದು ಅಪವರ್ತನ ಅವಿಭಾಜ್ಯ ಸಂಖ್ಯೆ ಮತ್ತೊಂದು ಭಾಜ್ಯಸಂಖ್ಯೆ, (d) ಅಪವರ್ತನಗಳ ಗುಣಲಬ್ಧದಲ್ಲಿ 2 ಅಪವರ್ತನಗಳು ಭಾಜ್ಯಸಂಖ್ಯೆಗಳು ಅದೇ ರೀತಿಯಾಗಿ (e) ಅಪವರ್ತನ ಗುಣಲಬ್ಧದಲ್ಲಿ ಎಲ್ಲಾ ಅಪವರ್ತನಗಳು ಅವಿಭಾಜ್ಯ ಸಂಖ್ಯೆಗಳು. (a)ಅಪವರ್ತನಗಳ ಗುಣಲಬ್ಧದಲ್ಲಿ ಒಂದು, ಭಾಜ್ಯ ಸಂಖ್ಯೆ.

(e) ಅಪವರ್ತನಗಳ ಗುಣಲಬ್ಧದಲ್ಲಿ ಎಲ್ಲಾ ಅಪವರ್ತನಗಳು ಅವಿಭಾಜ್ಯ ಸಂಖ್ಯೆಗಳು ಆದ್ದರಿಂದ ಈ ಪದ್ಧತಿಯನ್ನು **"ಅವಿಭಾಜ್ಯ ಅಪವರ್ತನ ಪದ್ದತಿ"** ಎನ್ನುತ್ತಾರೆ.

ಅವಿಭಾಜ್ಯ ಅಪವರ್ತನ ವಿಭಜನೆಯಲ್ಲಿ ಅಪವರ್ತನಗಳನ್ನು ಮತ್ತೆ ಅಪವರ್ತನಗುಣಲಬ್ಧಗಳಾಗಿ ವಿಭಜನೆ ಮಾಡಲಾರೆವು.

### 3.5.1 ಅವಿಭಾಜ್ಯ ಅಪವರ್ತನ ವಿಭಜನೆ ಪದ್ಧತಿ.

1. **ಭಾಗಾಕಾರ ಪದ್ಧತಿ:** 42ನ್ನು ಅವಿಭಜ್ಯ ಅಪವರ್ತನ ವಿಭಜನೆ ಪದ್ಧತಿ ಮುಖಾಂತರ ಕಂಡುಕೊಳ್ಳುವ ಹಂತಗಳು ಈ ಕೆಳಗಿನಂತೆ ಇವೆ.
   ಅಪವರ್ತನ ವಿಭಜನೆ ಮಾಡಬೇಕಾದ ಸಂಖ್ಯೆಯಿಂದ ಕನಿಷ್ಠ ಅವಿಭಾಜ್ಯ ಅಪವರ್ತನ ದಿಂದ ಭಾಗಾಕಾರ ಮಾಡಬೇಕು.
   ಫಲಿತಾಂಶ 1 ಬರುವ ಹಾಗೆ ವಿವಿಧ ಅವಿಭಾಜ್ಯ ಸಂಖ್ಯೆಗಳಿಂದ ಭಾಗಾಕಾರವನ್ನು ಮಾಡುತ್ತಾ ಹೋಗಬೇಕು.
   $42 = 2 \times 3 \times 7$

| | |
|---|---|
| 2 | 42 |
| 3 | 21 |
| 7 | 7 |
| | 1 |

2. **ವೃಕ್ಷ ಪದ್ಧತಿ :** 60 ರ ಅಪವರ್ತನಗಳನ್ನು ಅವಿಭಾಜ್ಯ ಅಪವರ್ತನಗಳ ವಿಭಜನೆ ಪದ್ಧತಿಯಲ್ಲಿ ಅಪವರ್ತನಗಳ ವೃಕ್ಷವನ್ನು ಬರೆಯುವ ಮೂಲಕ ಮಾಡಬಹುದು.

**ಈ ಪದ್ಧತಿಯಲ್ಲಿ ಹಂತಗಳು:**

**ಹಂತ–1:** 60ನ್ನು ಎರಡು ಸಂಖ್ಯೆಗಳ ಗುಣಲಬ್ಧವಾಗಿ ಬರೆಯಿರಿ.

**ಹಂತ–2:** 4 ಮತ್ತು 15 ರ ಅಪವರ್ತನಗಳ ವಿಭಜನೆ ಮಾಡಬೇಕು. ಏಕೆಂದರೆ 4 ಮತ್ತು 15ಗಳು ಭಾಜ್ಯ ಸಂಖ್ಯೆಗಳು.

**ಹಂತ–3:** ಎಲ್ಲಾ ಅಪವರ್ತನಗಳೂ ಸಹ ಅವಿಭಾಜ್ಯ ಸಂಖ್ಯೆಗಳಾಗಿ ಬರುವವರೆಗೂ ಈ ಪದ್ಧತಿಯನ್ನು ಮುಂದುವರೆಸಬೇಕು.




60ರ ಅವಿಭಾಜ್ಯ ಅಪವರ್ತನ ವಿಭಜನೆ $60 = 2 \times 2 \times 3 \times 5$

**ಇವು ಮಾಡಿರಿ**



1. ಭಾಗಾಕಾರ ಪದ್ಧತಿ ಅನುಸರಿಸಿ 28 ಮತ್ತು 36ಕ್ಕೆ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ.
2. ಅಪವರ್ತನ ವೃಕ್ಷದ ಮುಖಾಂತರ 42ರ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ 3.3

1. 90ರ ಅಪವರ್ತನಗಳ ವೃಕ್ಷದಲ್ಲಿ ಬಿಟ್ಟಿರುವ ಸಂಖ್ಯೆಗಳನ್ನು ವೃತದಲ್ಲಿ ಬರೆಯಿರಿ.

i.




ii.




2. ಭಾಗಾಕಾರ ಪದ್ಧತಿಯಲ್ಲಿ 84ರ ಅಪವರ್ತಗಳ ಗುಣಲಬ್ಧವಾಗಿ ಬರೆಯಿರಿ.
3. ನಾಲ್ಕಂಕೆಯ ಅತಿದೊಡ್ಡ ಸಂಖ್ಯೆಯನ್ನು ಬರೆದು. ಅದರ ಅವಿಭಾಜ್ಯ ಅಪವರ್ತನಗಳಾಗಿ ಬರೆಯಿರಿ.
4. ನಾನು ಒಂದು ಕನಿಷ್ಟ ಸಂಖ್ಯೆ . ನಾನು ಎರಡು ಭಿನ್ನವಾದ ಅವಿಭಾಜ್ಯ ಅಪವರ್ತನಗಳ ಗುಣಲಬ್ಧ. ನಾನು ಯಾರೋ ಕಂಡುಹಿಡಿಯಿರಿ.ಹೇಗೋ ತಿಳಿಸಿರಿ.

### 3.6 ಸಾಮಾನ್ಯ ಅಪವರ್ತಗಳು (Common Factors)

ಕೆಳಗಿನ ಪಟ್ಟಿಯನ್ನು ಪರಿಶೀಲಿಸಿ.

| ಸಂಖ್ಯೆಗಳು | 12 | 18 |
|---|---|---|
| ಅಪವರ್ತನಗಳು | 1, 2, 3, 4, 6, 12 | 1, 2, 3, 6, 9, 18 |

12 ಮತ್ತು 18ರ ಸಾಮಾನ್ಯ ಅಪವರ್ತಗಳು 1, 2, 3, 6(ಇವುಗಳಲ್ಲದೇ ಎರಡಕ್ಕೂ ಇತರೆ ಅಪವರ್ತನಗಳು ಯಾವಾದರೂ ಇದ್ದರೆ ಪಟ್ಟಿಯಲ್ಲಿ ಪರಿಶೀಲಿಸಿರಿ.)

ಕೊಟ್ಟಿರುವ ಸಂಖ್ಯೆಗಳ ಅಪವರ್ತನಗಳಲ್ಲಿ ಸಾಮಾನ್ಯ ಇರುವ ಅಪವರ್ತನಗಳನ್ನು ಆ ಎರಡುಸಂಖ್ಯೆಗಳ **ಸಾಮಾನ್ಯ ಅಪವರ್ತನಗಳು** ಎನ್ನುವರು.

20 ಮತ್ತು 24ರ ಸಮಾನ್ಯ ಅಪವರ್ತನಗಳನ್ನು ತಿಳಿಸಿ

### 3.6.1. ಮಹತ್ತಮ ಸಾಮಾನ್ಯ ಅಪವರ್ತನ : (ಮ.ಸಾ.ಅ) (Highest Common Factor)

ಮೇಲಿನ ಪಟ್ಟಿಯಿಂದ 12 ಮತ್ತು 18ರ ಸಾಮಾನ್ಯ ಅಪವರ್ತನಗಳು 1, 2, 3, 6 ಈ ಅಪವರ್ತನಗಳಲ್ಲಿ ಗರಿಷ್ಠ (ದೊಡ್ಡ) ಅಪವರ್ತನ ಯಾವುದು? 6 ಅಲ್ಲದೇ? ಅದಕ್ಕಾಗಿ 12,18ರ ಗರಿಷ್ಠ ಸಾಮಾನ್ಯ ಅಪವರ್ತನ 6.

**ಎರಡು ಇಲ್ಲವೇ ಅದಕ್ಕಿಂತ ಹೆಚ್ಚು ಸಂಖ್ಯೆಗಳ ಸಾಮಾನ್ಯ ಅಪವರ್ತನಗಳಲ್ಲಿ ಗರಿಷ್ಠ ಸಂಖ್ಯೆಯನ್ನು ಮಹತ್ತಮ ಸಾಮಾನ್ಯ ಅಪವರ್ತನ (ಮ.ಸಾ.ಅ) ಇಲ್ಲವೇ ಮಹತ್ತಮ ಸಾಮನ್ಯ ಭಾಜಕ ಎನ್ನುವರು.**

### 3.6.2 ಮ.ಸಾ.ಅ ಕಂಡುಹಿಡಿಯುವ ಪದ್ಧತಿ

**1. ಅವಿಭಾಜ್ಯ ಅಪವರ್ತನ ವಿಧಾನದಿಂದ ಮ.ಸಾ.ಅ ಕಂಡುಹಿಡಿಯುವುದು**

12, 30, 36 ಈ ಸಂಖ್ಯೆಗಳ ಮ.ಸಾ.ಅ ವನ್ನು ಅವಿಭಾಜ್ಯ ಅಪವರ್ತನಗಳ ವಿಭಜನೆ ಪದ್ಧತಿಯ ಮೂಲಕ ಕಂಡುಹಿಡಿಯಿರಿ.

| | |
|---|---|
| 2 | 12 |
| 2 | 6 |
| 3 | 3 |
| | 1 |

| | |
|---|---|
| 2 | 30 |
| 3 | 15 |
| 5 | 5 |
| | 1 |

| | |
|---|---|
| 3 | 36 |
| 3 | 12 |
| 5 | 4 |
| 2 | 2 |
| | 1 |

ಆದ್ದರಿಂದ
$20 = 2 \times 2 \times 5$
$30 = 2 \times 3 \times 5$
$45 = 3 \times 3 \times 5$



SCERT TELANGANA

Downloaded from https:// www.studiestoday.com

Downloaded from https:// www.studiestoday.com

12, 30, 36 ರ ಸಾಮಾನ್ಯ ಅಪವರ್ತನ = $2 \times 3 = 6$

ಆದ್ದರಿಂದ 12, 30, 36ರ ಮಹತ್ತಮ ಸಾಮಾನ್ಯ ಅಪವರ್ತನ = 6

**ಇವು ಮಾಡಿರಿ**



12, 16 ಮತ್ತು 28ರ ಮ.ಸಾ.ಅ ವನ್ನು ಕಂಡುಹಿಡಿಯಿರಿ.

**2. ಭಾಗಾಕಾರ ಪದ್ಧತಿ ಮೂಲಕ ಮ.ಸಾ.ಅ ವನ್ನು ಕಂಡುಹಿಡಿಯುವುದು**

ಭಾಗಾಕಾರ ಪದ್ಧತಿಯ ಮೂಲಕ ಮ.ಸಾ.ಅ ಕಂಡುಹಿಡಿಯಬಹುದು. ಈ ಪದ್ಧತಿಯನ್ನು ಗ್ರೀಕ್ ಗಣೀತ ಶಾಸ್ತ್ರಜ್ಞ ಯೂಕ್ಲಿಡ್ ಕಂಡುಹಿಡಿದನು. ಕೊಟ್ಟಿರುವ ಸಂಖ್ಯೆಯಲ್ಲಿ ದೊಡ್ಡ ಸಂಖ್ಯೆಯನ್ನು ಚಿಕ್ಕ ಸಂಖ್ಯೆಯಿಂದ ಭಾಗಿಸಬೇಕು. ಎರಡನೆ ಶೇಷದಿಂದ ಎರಡನೆ ಭಾಜಕವನ್ನು ಭಾಗಿಸಬೇಕು. ಈ ವಿಧವಾಗಿ ಶೇಷ ಬರುವವರೆಗೂ ಭಾಗಾಕಾರ ಮಾಡಬೇಕು. ಕೊನೆಯ ಭಾಜಕವನ್ನು ಮಹತ್ತಮ ಸಾಮನ್ಯ ಅಪವರ್ತನೆವೆಂದು ಕರೆಯುತ್ತಾರೆ.

**ಉದಾಹರಣೆ 2:** 56 ಮತ್ತು 64ರ ಮ.ಸಾ.ಅ ಕಂಡುಹಿಡಿಯಿರಿ.

**ಪರಿಹಾರ :**

```
                56) 64 (1
                   -56
ಕೊನೆಯ ಭಾಜಕ          8) 56 ( 7
                    -56
           ಶೇಷ        0
```

ಕೊನೆಯ ಭಾಜಕ 8, ಶೇಷ 0

ಆದ್ದರಿಂದ 56 ಮತ್ತು 64ರ ಮ.ಸಾ.ಅ 8

**ಉದಾಹರಣೆ 3:** 40, 56, 60ರ ಮ.ಸಾ.ಅ ಕಂಡುಯಿಡಿಯಿರಿ.

**ಪರಿಹಾರ :**

**ಹಂತ–1** ಮೊದಲು ಯಾವುದಾದರೂ ಎರಡು ಸಂಖ್ಯೆಗಳ ಮಸಾಅ ಕಂಡುಹಿಡಿಯಿರಿ.

```
                40)  56 (1
                    -40
                    16) 40 (2
                       -32
     ಕೊನೆಯ ಭಾಜಕ    8)   16 (2
                        -16
               ಶೇಷ        0
```

40, 56,ರ ಮಸಾಅ 8.

**ಹಂತ–2 :** ಈಗ ಮೂರನೇ ಸಂಖ್ಯೆ ಹಾಗೂ ಮೊದಲೆರಡು ಸಂಖ್ಯೆಗಳ ಮ.ಸಾ.ಅದಿಂದ ಮತ್ತೆ ಮ.ಸಾ.ಅ ಕಂಡುಹಿಡಿಯ ಬೇಕು.

60 ಮತ್ತು 8ರ ಮಸಾಅ ಕಂಡುಹಿಡಿಯೋಣ.

```
                8)  60  (7
                   -56
                    4)  8  (2
                       -8
              ಶೇಷ       0
```

8 ಮತ್ತು 60 ರ ಮಸಾಅ 4

**ಹಂತ–3** ಕೊಟ್ಟಿರುವ ಮೂರು ಸಂಖ್ಯೆಗಳ ಮಸಾಅ 4

ಅಂದರೆ 40, 56 ಮತ್ತು 60ರ ಮಸಾಅ 4



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಇವು ಮಾಡಿರಿ.**



28, 35 ಮತ್ತು 49ರ ಮ.ಸಾ.ಅ ಕಂಡುಹಿಡಿಯಿರಿ.

**ಆಲೋಚಿಸಿ, ಚರ್ಚಿಸಿ ಬರೆಯಿರಿ**



(i) ಎರಡು ಅನುಕ್ರಮ ಸಂಖ್ಯೆಗಳು (ii) ಎರಡು ಅನುಕ್ರಮ ಸರಿಸಂಖ್ಯೆಗಳು

(iii) ಎರಡು ಅನುಕ್ರಮ ಬೆಸಸಂಖ್ಯೆಗಳು ಆಯ್ದುಕೊಂಡು ಅವುಗಳ ಮ.ಸಾ.ಅ ಕಂಡುಹಿಡಿಯಿರಿ. ನೀವು ಏನು ಗಮನಿಸಿದಿರಿ? ನಿಮ್ಮ ಸ್ನೇಹಿತರೊಡನೆ ಚರ್ಚಿಸಿ.

**ಉದಾಹರಣೆ–4:** ಎರಡು ಟ್ಯಾಂಕರ್‌ಗಳಲ್ಲಿ ಕ್ರಮವಾಗಿ 850 ಲೀಟರ್ ಮತ್ತು 680 ಲೀಟರ್ ಸೀಮೆ ಎಣ್ಣೆ ಇದೆ. ಎರಡೂ ಟ್ಯಾಂಕರ್ ಗಳಲ್ಲಿ ಇರುವ ಮಾಪನ ಪಾತ್ರೆಯ ಗರಿಷ್ಟ ಸಾಮರ್ಥ್ಯ ಎಷ್ಟು?

**ಪರಿಹಾರ :** ಎರಡು ಟ್ಯಾಂಕರ್ ಗಳಲ್ಲಿರುವ ಸೀಮೆ ಎಣ್ಣೆ ಅಳೆಯುವ ಸಾಧನವು ಟ್ಯಾಂಕರ್ ಗಳ ಸಾಮರ್ಥ್ಯವನ್ನು ನಿರ್ಧಿಷ್ಟವಾಗಿ ಭಾಗಿಸುವ ಭಾಜಕವಾಗಿರಬೇಕು. ಹಾಗೂ ಈ ಸಾಮರ್ಥ್ಯ ಗರಿಷ್ಠವಾಗಿರಬೇಕು. ಅಂದರೆ ಅಳೆಯುವ ಪಾತ್ರೆಯ ಗರಿಷ್ಟ ಸಾಮರ್ಥ್ಯ 850 ಮತ್ತು 680ರ ಮ.ಸಾ.ಅ ಆಗಿರಬೇಕು. 850, 680 ರ ಮ.ಸಾ.ಅ 170

ಆದ್ದರಿಂದ ಎರಡು ಟ್ಯಾಂಕರ್‌ಗಳಲ್ಲಿರುವ ಸೀಮೆ ಎಣ್ಣೆಯನ್ನು ಅಳೆಯುವ ಪಾತ್ರೆಯ ಗರಿಷ್ಟ ಸಾಮರ್ಥ್ಯ 170 ಲೀ ಮೊದಲನೇ ಟ್ಯಾಂಕರ್‌ನಲ್ಲಿರುವ ಸೀಮೆ ಎಣ್ಣೆಯನ್ನು 5 ಸಾರಿ 2ನೇ ಟ್ಯಾಂಕರ್‌ನಲ್ಲಿರುವ ಸೀಮೆ ಎಣ್ಣೆಯನ್ನು 4 ಸಾರಿ ಅಳೆಯಬಹುದು.



## ಅಭ್ಯಾಸ 3.4

1. ಈ ಕೆಳಗಿನ ಸಂಖ್ಯೆಗಳ ಮ.ಸಾ.ಅ ಅವಿಭಾಜ್ಯ ಅಪವರ್ತನ ವಿಭಜನೆ ಪದ್ದತಿ ಮತ್ತು ಭಾಗಾಕಾರ ಪದ್ಧತಿ ಮೂಲಕ ಕಂಡುಹಿಡಿಯಿರಿ.

   i. 18, 27, 36    ii. 106, 159, 265

   iii. 10, 35, 40    iv. 32, 64, 96, 128

3. 504, 792 ಮತ್ತು 108ರ ಸಾಮಾನ್ಯ ಅಪವರ್ತನದಲ್ಲಿ ಗರಿಷ್ಠ ಸಂಖ್ಯೆಯನ್ನು ಕಂಡುಹಿಡಿಯಿರಿ.

4. ಒಂದು ಕೋಣೆಯ ಅಳತೆಗಳು ಕ್ರಮವಾಗಿ ಉದ್ದ 12 ಮೀ, ಅಗಲ 15 ಮೀ, ಎತ್ತರ 18ಮೀ, ಕೋಣೆಗಳ ಅಳತೆಗಳೆಲ್ಲವನ್ನು ನಿಖರವಾಗಿ ಅಳೆಯಬಹುದಾದ ಟೇಪ್ ಒಂದರ ಗರಿಷ್ಠ ಉದ್ದವನ್ನು ಕಂಡುಹಿಡಿಯಿರಿ.

5. ಪರಸ್ಪರ ಅವಿಭಾಜ್ಯ ಸಂಖ್ಯೆಗಳು 4 ಮತ್ತು 15ರ ಮ.ಸಾ.ಅವನ್ನು ಈ ಕೆಳಗಿನಂತೆ ಕಂಡುಹಿಡಿಯಬಹುದು. $4 = 2 \times 2$ ಮತ್ತು $15 = 3 \times 5$ ಎರಡಕ್ಕೂ ಸಾಮಾನ್ಯ ಅಪವರ್ತನಗಳು ಇಲ್ಲ. 4, 15 ರ ಮ.ಸಾ.ಅ '0' ಈ ಉತ್ತರ ಸರಿಯಾಗಿದೇಯೇ? ಇಲ್ಲವಾದರೆ ಸರಿಯಾದ ಮ.ಸಾ.ಅ ತಿಳಿಸಿ.

## 3.7 ಸಾಮಾನ್ಯ ಅಪವರ್ತ್ಯಗಳು(Common Multiples)

4 ಮತ್ತು 6ರ ಅಪವರ್ತ್ಯಗಳು

4ರ ಅಪವರ್ತ್ಯಗಳು = 4, 8, 12, 16, 20, 24, 28, 32, 36, ....., ....., .....

6 ಗುಣಕಗಳು = 6, 12, 18, 24, 30, 36, 42, 48, ....., ....., .....

4 ಮತ್ತು 6ರ ಸಾಮಾನ್ಯ ಅಪವರ್ತ್ಯಗಳು = 12, 24, 36, ....., ....., .....



SCERT TELANGANA

Downloaded from https:// www.studiestoday.com

Downloaded from https:// www.studiestoday.com

### 3.7.1 ಲಘುತ್ತಮ ಸಾಮಾನ್ಯ ಅಪವರ್ತ್ಯ (ಲ.ಸಾ.ಅ) (Least Common Multiple)

4 ಮತ್ತು 6ರ ಸಾಮಾನ್ಯ ಅಪವರ್ತ್ಯಗಳು= 12, 24, 36, ....., ....., .....

ಲಘುತ್ತಮ ಸಾಮಾನ್ಯ ಅಪವರ್ತ್ಯ=12

ಅಂದರೆ ಸಾಮಾನ್ಯ ಅಪವತ್ಯಗಳ ಕನಿಷ್ಟ ಸಂಖ್ಯೆ 12

ಹಾಗದರೆ 4 ಮತ್ತು 6ರ ಲ.ಸಾ.ಅ =12

**ಉದಾಹರಣೆ 5:** 2 ಗಂಟೆಗಳು ಹೊಡೆದುಕೊಳ್ಳುತ್ತಿವೆ. ಮೊದಲನೆಯ ಗಂಟೆ ಪ್ರತಿ ಮೂರು ನಿಮಿಷಗಳಿಗೆ 2ನೇ ಗಂಟೆ ಪ್ರತಿ 4 ನಿಮಿಷಕ್ಕೆ ಹೊಡೆದುಕೊಳ್ಳುತ್ತವೆ. ಯಾವಾಗ ಎರಡೂ ಗಂಟೆಗಳು ಒಂದೇ ಬಾರಿ ಹೊಡೆದುಕೊಳ್ಳುತ್ತವೆ.

**ಪರಿಹಾರ :** ಮೊದಲನೆ ಗಂಟೆ ಪ್ರತಿ ಮೂರು ನಿಮಿಷಕ್ಕೊಮ್ಮೆ ಬಾರಿ ಹೊಡೆದುಕೊಳ್ಳುತ್ತದೆ.

ಅಂದರೆ ಮೊದಲನೆಯ ಗಂಟೆ 3, 6, 9, 12, 15, 18, 21, 24,.........,........, (3ರ ಅಪವರ್ತ್ಯಗಳು) ನಿಮಿಷಗಳಿಗೊಮ್ಮೆ ಹೊಡೆದುಕೊಳ್ಳುತ್ತದೆ. ಎರಡನೇ ಗಂಟೆ ಪ್ರತಿ 4 ನಿಮಿಷಕ್ಕೊಮ್ಮೆ ಹೊಡೆಯುತ್ತದೆ.

ಅಂದರೆ ಎರಡನೇ ಗಂಟೆ 4, 8, 12, 16, 20, 24,.......,.......,(4ರ ಅಪವರ್ತ್ಯಗಳು) ನಿಮಿಷಗಳಿಗೊಮ್ಮೆ ಹೊಡೆಯುತ್ತದೆ.

ಃ ಗಂಟೆಗಳು ಸೇರಿ 12, 24,......,.....,......, (3ಮತ್ತು 4ರ ಸಾಮಾನ್ಯ ಅಪವರ್ತ್ಯಗಳು)ಗಳಿಗೆ ಹೊಡೆದುಕೊಳ್ಳುತ್ತವೆ. ಮೇಲಿನ ಎರಡರಲ್ಲಿ ಕನಷ್ಟ ಬೆಲೆ (ಲ.ಸಾ.ಅ) = 12 ನಿಮಿಷಗಳು

ಆದ್ದರಿಂದ ಲ.ಸಾ.ಅ ವನ್ನು ಈ ಕೆಳಗಿನಂತೆ ಹೇಳಬಹುದು.

**ಎರಡು ಇಲ್ಲವೇ ಅದಕ್ಕಿಂತ ಹೆಚ್ಚುಸಂಖ್ಯೆಗಳ ಅಪವರ್ತ್ಯಗಳಲ್ಲಿ ಅತಿಚಿಕ್ಕ ಸಾಮಾನ್ಯ ಅಪವರ್ತ್ಯವನ್ನು ಆ ಸಂಖ್ಯೆಗಳ "ಲಘುತ್ತಮ ಸಾಮಾನ್ಯ ಅಪವರ್ತ್ಯ"ಎಂದು ಕರೆಯುತ್ತಾರೆ.**

ಪ್ರತಿಬಾರಿ ಎಲ್ಲಾ ಸಂಖ್ಯೆಗಳ ಅಪವರ್ತ್ಯಗಳು ಬರೆಯುವುದಕ್ಕೆ ಬದಲು ಕನಿಷ್ಟ ಸಾಮಾನ್ಯ ಅಪವರ್ತ್ಯವನ್ನು ಗುರ್ತಿಸಿ ಲ.ಸಾ.ಅ ಯಾಗಿ ಬರೆಯಬೇಕು.

### 3.7.2 ಲ.ಸಾ.ಅ ವನ್ನು ಕಂಡುಹಿಡಿಯುವ ವಿಧಾನ

**1. ಅವಿಭಾಜ್ಯ ಅಪವರ್ತನಗಳ ಪದ್ಧತಿಯಲ್ಲಿ ಲ.ಸಾ.ಅ**

36 ಮತ್ತು 60 ಈ ಸಂಖ್ಯೆಗಳ ಲ.ಸಾ.ಅ ವನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ದ ಪದ್ಧತಿಯಲ್ಲಿ ಕಂಡುಹಿಡಿಯುವ ವಿಧಾನವನ್ನು ಪರಿಶೀಲಿಸಿಸೋಣ.

**ಹಂತ–1 :** ಕೊಟ್ಟಿರುವ ಸಂಖ್ಯೆಗಳು 36 ಮತ್ತು 60 ಗಳನ್ನು ಅವಿಭಾಜ್ಯ ಸಂಖ್ಯೆಗಳ ಗುಣಲಬ್ದವಾಗಿ ಬರೆಯಬೇಕು.

36ರ ಅಪವರ್ತನಗಳು $= \boxed{2} \times \boxed{2} \times \boxed{3} \times 3$

60ರ ಅಪವರ್ತನಗಳು $= \boxed{2} \times \boxed{2} \times \boxed{3} \times 5$

**ಹಂತ–2:** ಈ ಎರಡರ ಸಾಮಾನ್ಯ ಅಪವರ್ತನಗಳನ್ನು ತೆಗೆದುಕೊಳ್ಳಬೇಕು $2 \times 2 \times 3$

**ಹಂತ–3:** ಎರಡರಲ್ಲೂ ಉಳಿದ ಅಪವರ್ತನಗಳನ್ನು ತೆಗೆದುಕೊಳ್ಳಬೇಕು 3, 2, 5

**ಹಂತ–4:** ಎರಡೂ ಸಂಖ್ಯೆಗಳ ಸಾಮಾನ್ಯ ಅಪರ್ವನಗಳು, ಉಳಿದ ಅಪವರ್ತನಗಳ ಗುಣಲಬ್ದವನ್ನು ಲ.ಸಾ.ಅ ಆಗಿ ತೆಗೆದುಕೊಳ್ಳಬೇಕು.

ಅಂದರೆ 36 ಮತ್ತು 60ರ ಲ.ಸಾ.ಅ $= (2 \times 2 \times 3) \times 3 \times 5 = 180$

**ಪ್ರಯತ್ನಿಸಿರಿ**



1. ಈ ಕೆಳಗಿನವುಗಳ ಲ.ಸಾ.ಅ ಕಂಡುಹಿಡಿಯಿರಿ.

i. 3, 4 ii. 10, 11 ii. 5, 6, 7

iv. 10, 30 v. 4, 12, 24 vi. 3, 12

ಮೇಲಿನ ಫಲಿತಾಂಶಗಳಿಂದ ನೀವು ಏನನ್ನು ಗಮನಿಸಿದ್ದಿರಾ?

SCERT TELANGANA



Downloaded from https:// www.studiestoday.com

Downloaded from https:// www.studiestoday.com

**"ದತ್ತ ಸಂಖ್ಯೆಗಳಲ್ಲಿ ಒಂದು ಸಂಖ್ಯೆ ಮತ್ತೊಂದರ ಅಪವರ್ತ್ಯವಾಗಿದ್ದಾಗ ಅ ಅಪವರ್ತ್ಯವೇ(ಗರಿಷ್ಠ ಸಂಖ್ಯೆಯೇ) ಅವುಗಳ ಲ.ಸಾ.ಅ ಆಗಿರುತ್ತದೆ."**

**ಗಮನಿಸಿ :** ಪರಸ್ಪರ ಅವಿಭಾಜ್ಯ ಸಂಖ್ಯೆಗಳ ಲ.ಸಾ.ಅ.ವು ಆ ಸಂಖ್ಯೆಗಳ ಗುಣಲಬ್ಧಕ್ಕೆ ಸಮನಾಗಿರುತ್ತದೆ.

**2. ಭಾಗಾಕಾರ ಪದ್ಧತಿಯಲ್ಲಿ ಲ.ಸಾ.ಅ**

24 ಮತ್ತು 90ರ ಲ.ಸಾ.ಅ.ವನ್ನು ಕಂಡುಹಿಡಿಯಿರಿ.

| | |
|---|---|
| 2 | 24, 90 |
| 3 | 12, 45 |
| | 4, 15 |

**ಹಂತ–1:** ಕೊಟ್ಟಿರುವ ಸಂಖ್ಯೆಗಳನ್ನು ಒಂದು ಅಡ್ಡ ಸಾಲಿನಲ್ಲಿ ಜೋಡಿಸಿ.

**ಹಂತ–2:** ಕನಿಷ್ಠ ಎರಡು ಸಂಖ್ಯೆಗಳನ್ನು ಭಾಗಿಸುವಂತಹ ಅತಿ ಚಿಕ್ಕ ಅವಿಭಾಜ್ಯ ಸಂಖ್ಯೆಯಿಂದ ಭಾಗಿಸಬೇಕು.ಭಾಗಿಸಲ್ಪಡದ ಸಂಖ್ಯೆಯನ್ನು ಕೆಳಗೆ ಹಾಗೇ ತೆಗೆದುಕೊಳ್ಳಬೇಕು.

**ಹಂತ–3:** ಹಾಗೇ ಅತಿ ಚಿಕ್ಕ ಅವಿಭಾಜ್ಯ ಸಂಖ್ಯೆಗಳಿಂದ ಭಾಗಿಸುತ್ತಾ, ಕೊನೆಯವರೆಗೆ ಒಂದು ಮಾತ್ರವೇ ಸಾಮಾನ್ಯ ಅಪವರ್ತನ ವಾಗುವವರೆಗೂ ಭಾಗಾಕಾರ ಮುಂದುವರೆಸಬೇಕು.

**ಹಂತ–4:** ಭಾಜಕಗಳು ಮತ್ತು ಕೊನೆಗೆ ಉಳಿದ ಸಂಖ್ಯೆಗಳ ಗುಣಲಬ್ದ ಕೊಟ್ಟಿರುವ ಸಂಖ್ಯೆಗಳ ಲ.ಸಾ.ಅ ಆದ್ದರಿಂದ ಲ.ಸಾ.ಅ $=2 \times 3 \times 4 \times 15 = 360$

**ಉದಾಹರಣೆ–6:** , 35, 42 ರ ಲ.ಸಾ.ಅ ಕಂಡುಹಿಡಿಯಿರಿ.

**ಪರಿಹಾರ:**

| | |
|---|---|
| 7 | 21, 35, 42 |
| 3 | 3, 5, 6 |
| | 1, 5, 2 |

21, 35, 42 ರ ಲ.ಸಾ.ಅ= $7 \times 3 \times 5 \times 2 = 210$

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**



ಯಾವ ಸಂದರ್ಭದಲ್ಲಿ ಎರಡೂ ಇಲ್ಲವೇ ಅದಕ್ಕಿಂತ ಹೆಚ್ಚು ಸಂಖ್ಯೆಗಳ ಲ.ಸಾ.ಅ ಆ ಸಂಖ್ಯೆಗಳ ಗುಣಲಬ್ದವಾಗಿರುತ್ತದೆ.



## ಅಭ್ಯಾಸ 3.5

1. ಈ ಸಂಖ್ಯೆಗಳ ಲ.ಸಾ.ಅ ವನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧ ಪದ್ಧತಿ ಉಪಯೋಗಿಸಿ ಕಂಡುಹಿಡಿಯಿರಿ.

   i. 12 ಮತ್ತು 15    ii. 15 ಮತ್ತು 25    iii. 14 ಮತ್ತು 21

   iv. 18 ಮತ್ತು 27    v. 48, 56ಮತ್ತು 72    vi. 26, 14 ಮತ್ತು 91.

2. ಈ ಕೆಳಗಿನ ಸಂಖ್ಯೆಗಳ ಲ.ಸಾ.ಅ.ವನ್ನು ಭಾಗಾಕಾರ ಪದ್ಧತಿಯಲ್ಲಿ ಕಂಡುಹಿಡಿಯಿರಿ.

   i. 84, 112, 196    ii. 102, 119, 153    iii. 45, 99, 132, 165

3. ಯಾವ ಕನಿಷ್ಠ ಸಂಖ್ಯೆಗೆ 5ನ್ನು ಕೂಡಿದರೆ ಆ ಸಂಖ್ಯೆ 12, 14 ಮತ್ತು 18 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ.

4. ಯಾವ ಗರಿಷ್ಠ ಮೂರಂಕೆಯ ಸಂಖ್ಯೆಯನ್ನು 75, 45 ಮತ್ತು 60 ರಿಂದ ಭಾಗಿಸಿದರೇ ಶೇಷ

   i) ಶೇಷ 0 ಬರುತ್ತದೆ    ii) ಶೇಷ ಪ್ರತಿ ಸಂದರ್ಭದಲ್ಲೂ 4 ಬರುತ್ತದೆ

5. ಮೂರು ಟೇಪುಗಳು 64 ಸೆಂ.ಮೀ, 72 ಸೆಂ.ಮೀ 96 ಸೆಂ.ಮೀ ಅಳತೆಯನ್ನು ಹೊಂದಿವೆ ಯಾವ ಕನಿಷ್ಠ ಅಳತೆ ಹೊಂದಿದ ಟೇಪು ಮೂರು ಟೇಪುಗಳ ಅಳತೆಯನ್ನು ಖಚಿತವಾಗಿ ಅಳೆಯಬಹುದು.

6. ಮೂರು ವಿಧವಾದ ಎಣ್ಣೆಗಳು 32 ಲೀ, 24 ಲೀ, 48 ಲೀ ಅಳತೆಯನ್ನು ಹೊಂದಿವೆ. ಮೂರು ಅಳತೆಯನ್ನು ಖಚಿತವಾಗಿ ಅಳೆಯಲು ಬೇಕಾದ ಅಳತೆ ಪಾತ್ರೆಯ ಗರಿಷ್ಟ ಘನ ಪರಿಮಾಣ ಎಷ್ಟು?

SCERT TELANGANA



Downloaded from https:// www.studiestoday.com

Downloaded from https:// www.studiestoday.com

7. ಪ್ರಸಾದ್, ರಾಜು ಮಾರ್ಕೆಟ್‌ನಲ್ಲಿ ಈ ತಿಂಗಳ ಮೊದಲನೆ ದಿನಾಂಕದಂದು ಭೇಟಿಯಾದರು. ಪ್ರಸಾದ್ ಮೂರು ದಿನಕ್ಕೊಮ್ಮೆ, ರಾಜು ನಾಲ್ಕು ದಿನಗಳಿಗೊಮ್ಮೆ ಮಾರುಕಟ್ಟೆಗೆ ಹೋಗುತ್ತಾರೆ. ಹಾಗದರೆ ಯಾವ ದಿನದಂದು ಪುನಃ ರಾಜು ಪ್ರಸಾದರು ಮಾರುಕಟ್ಟೆಯಲ್ಲಿ ಭೇಟಿಯಾಗುತ್ತಾರೆ.

### 3.8 ಲ.ಸಾ.ಅ ಮತ್ತು ಮ.ಸಾ.ಅ ನಡುವೆ ಇರುವ ಸಂಬಂಧ

18 ಮತ್ತು 27ನ್ನು ತೆಗೆದುಕೊಳ್ಳೋಣ

18ರ ಅಪವರ್ತನಗಳು $= 2 \times 3 \times 3$; 27ರ ಅಪವರ್ತನಗಳು $= 3 \times 3 \times 3$

18 ಮತ್ತು 27 ರ ಲ.ಸಾ.ಅ $= 3 \times 3 \times 3 \times 2 = 54$

18 ಮತ್ತು 27 ರ ಮ.ಸಾ.ಅ $= 3 \times 3 = 9$

ಲ.ಸಾ.ಅ × ಮ.ಸಾ.ಅ $= 54 \times 9 = 486$

18 ಮತ್ತು 27ರ ಗುಣಲಬ್ಧ $= 18 \times 27 = 486$

ನೀವು ಏನು ಗಮನಿಸಿದ್ದಿರಿ.

**ಎರಡು ಸಂಖ್ಯೆಗಳ ಗುಣಲಬ್ಧ, ಅವುಗಳ ಮ.ಸಾ.ಅ ಮತ್ತು ಲ.ಸಾ.ಅ ಗಳ ಗುಣಲಬ್ಧಕ್ಕೆ ಸಮ.**

**ಗಮನಿಸಿ:** ಈ ನಿಯಮ ಎರಡು ಸಂಖ್ಯೆಗಳಿಗೆ ಮಾತ್ರ ಅನ್ವಯಿಸುತ್ತದೆ.

**ಉದಾಹರಣೆ 7:** 8 ಮತ್ತು 12ರ ಲ.ಸಾ.ಅ ಕಂಡುಹಿಡಿದು, ಲ.ಸಾ.ಅ., ಮ.ಸಾ.ಅ ಗಳ ನಡುವೆ ಇರುವ ಸಂಬಂಧವನ್ನು ಉಪಯೋಗಿಸಿ ಮ.ಸಾ.ಅ ಕಂಡುಹಿಡಿಯಿರಿ.

**ಪರಿಹಾರ:** 8, 12ರ ಲ.ಸಾ.ಅ $= 2 \times 3 \times 4 = 24$

| | |
|---|---|
| 4 | 8, 12 |
| | 2, 3 |

ಲ.ಸಾ.ಅ ×ಮ.ಸಾಅ = ಆ ಎರಡು ಸಂಖ್ಯೆಗಳ ಗುಣಲಬ್ಧ ಎಂದು ನಮಗೆ ಗೊತ್ತು.

$$\text{ಮ.ಸಾ.ಅ} = \frac{\text{ಎರಡು ಸಂಖ್ಯೆಗಳ ಗುಣಲಬ್ಧ}}{\text{ಲ.ಸಾ.ಅ}}$$

$$\text{ಮ.ಸಾ.ಅ} = \frac{8 \times 12}{24} = 4$$

∴ 8, 12 ರ ಮ.ಸಾ.ಅ = 4

**ಆಲೋಚಿಸಿ, ಚರ್ಚಿಸಿ ಬರೆಯಿರಿ.**



1. ಅವಳಿ ಅವಿಭಾಜ್ಯ ಸಂಖ್ಯೆಗಳ ಲ.ಸಾ.ಅ ಮತ್ತು ಮ.ಸಾ.ಅ.ವನ್ನು ಕಂಡುಹಿಡಿಯಿರಿ.
2. ಯಾವುದಾದರು ಎರಡು ಸಂಖ್ಯಾಗತ ಲ.ಸಾ.ಅ. ಮತ್ತು ಮ.ಸಾ.ಅ.ಮಧ್ಯ ಇರುವ ಸಂಬಂಧವನ್ನು ವ್ಯಾಖ್ಯಾನಿಸಿ.



## ಅಭ್ಯಾಸ 3.6

**1.** ಈ ಕೆಳಗಿನ ಸಂಖ್ಯೆಗಳ ಲ.ಸಾ.ಅ ಮತ್ತು ಮ.ಸಾ.ಅ ಕಂಡು ಹಿಡಿಯಿರಿ.

i. 15, 24 ii. 8, 25 iii. 12, 48

ಅವುಗಳ ನಡುವೆ ಇರುವ ಸಂಬಂಧವನ್ನು ಪರೀಕ್ಷಿಸಿ.

2. ಎರಡು ಸಂಖ್ಯೆಗಳ ಲ.ಸಾ.ಅ 290, ಅವುಗಳ ಗುಣಲಬ್ಧ 7250 ಆದರೆ ಅವುಗಳ ಮ.ಸಾ.ಅ ಎಷ್ಟು?

3. ಎರಡು ಸಂಖ್ಯೆಗಳ ಗುಣಲಬ್ಧ 3276 ಅವುಗಳ ಮ.ಸಾ.ಅ 6 ಆದರೆ ಲ.ಸಾ.ಅ ಎಷ್ಟು?

4. ಎರಡು ಸಂಖ್ಯೆಗಳ ಮ.ಸಾ.ಅ 6 ಮತ್ತು ಲ.ಸಾ.ಅ 36 ಆ ಸಂಖ್ಯೆಗಳಲ್ಲಿ ಒಂದು ಸಂಖ್ಯೆ 12 ಆದರೆ ಎರಡನೇ ಸಂಖ್ಯೆ ಎಷ್ಟು?



SCERT TELANGANA

Downloaded from https:// www.studiestoday.com

Downloaded from https:// www.studiestoday.com

## 3.9 4, 8 ಮತ್ತು 11ರ ಭಾಜ್ಯತೆಯ ನಿಯಮಗಳು

ನಾವು 2, 3, 5, 6, 9 ಮತ್ತು 10 ರ ಭಾಜ್ಯತೆಯ ನಿಯಮಗಳನ್ನು ತಿಳಿದಿದ್ದೇವೆ. ಈಗ 4ರ ವಿಭಾಜ್ಯತೆಯ ನಿಯಮವನ್ನು ತಿಳಿಯೋಣ.

### 3.9.1 4ರ ಭಾಜ್ಯತೆಯ ನಿಯಮ

ಈ ಕೆಳಗಿನ ಕ್ರಮವನ್ನು ಗಮನಿಸಿ.

| ಸಂಖ್ಯೆ | ಈ ರೀತಿ ಬರೆದಾಗ | 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ? |
|---|---|---|
| 100 | 100 | ಹೌದು |
| 600 | 6 × 100 | ಹೌದು |
| 1000 | 10 × 100 | ಹೌದು |
| 10000 | 100 × 100 | ಹೌದು |
| 100000 | 1000 × 100 | ಹೌದು |

ಮೇಲಿನ ಪಟ್ಟಿಯನ್ನು ಗಮನಿಸಿದರೆ 100, 4 ರಿಂದ ಭಾಗಿಸಲ್ಪಟ್ಟಿದೆ (100=25×4) ಮತ್ತು 600, 1000, 10000, 100000 ಗಳನ್ನು 100ರ ಅಪವರ್ತ್ಯಗಳಾಗಿ ವ್ಯಕ್ತಪಡಿಸಲಾಗಿದೆ. ಆದ್ದರಿಂದ ಈ ಸಂಖ್ಯೆಗಳೆಲ್ಲವೂ 4 ರಿಂದ ಭಾಗಿಸಲ್ಪಡುತ್ತವೆ.

ಸರಿ ಸಂಖ್ಯೆಗಳೆಲ್ಲವೂ 2 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ ಎಂದು ತಿಳಿದಿದೆ.

ಸರಿಸಂಖ್ಯೆಗಳೆಲ್ಲವೂ 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೇಯಾ?

ಈ ಕೆಳಗಿನವುಗಳನ್ನು ಗಮನಿಸಿ

126 ಸರಿ ಸಂಖ್ಯೆ, 2ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ.

126 ನ್ನು 126=100+26 ಎಂದು ಬರೆಯಬಹುದು.

ನಿಮಗೆ ಗೊತ್ತಿರುವಂತೆ 100, 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಂದೂ, ಆದರೆ 26, 4ರಿಂದ ನಿಶ್ಶೇಷವಾಗಿ ಭಾಗವಾಗುವುದಿಲ್ಲ.

ಆದ್ದರಿಂದ ಸರಿ ಸಂಖ್ಯೆಗಳೆಲ್ಲವೂ 4 ರಿಂದ ನಿಶ್ಶೇಷವಾಗಿ ಭಾಗವಾಗುತ್ತವೆಯೆಂದು ಹೇಳಲಾರೆವು.

ಅದೇ ರೀತಿ ಬೆಸ ಸಂಖ್ಯೆಗಳು 4 ರಿಂದ ಭಾಗಿಸಲ್ಪಡವು ಆದ್ದರಿಂದ ನಾವು ಎಲ್ಲಾ ಸಂಖ್ಯೆಗಳಿಗೂ ವರ್ತಿಸುವ ಹಾಗೆ 4ರ ಭಾಜ್ಯತೆ ನಿಯಮದಿಂದ ಕೆಳಗೆ ಕೊಟ್ಟಿರುವ ಉದಾಹರಣೆಗಳನ್ನು ಪರಿಶೀಲಿಸಿ ತಿಳಿಯೋಣ.

ಉದಾಹರಣೆಗೆ 76532 ನ್ನು ಪರಿಶೀಲಿಸೋಣ!

76532= 70000+6000+500+30+2. ಎಂದು ಬರೆಯಬಹುದು.

100ರ ಅಪವರ್ತ್ಯಗಳಾದ 100, 1000, 10000 ಗಳು 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆ. ಆದ್ದರಿಂದ ಅವುಗಳನ್ನು ಪ್ರತಿ ಸಾರಿ 4ರಿಂದ ಭಾಗಿಸಲ್ಪಡುತ್ತವೇಯೆ? ಇಲ್ಲವೇ? ಎಂದು ಪರಿಶೀಲಿಸುವ ಅವಶ್ಯಕತೆ ಇಲ್ಲ. ಆದ್ದರಿಂದ ಸಂಖ್ಯೆಯೊಂದರ ಕೊನೆಯ ಎರಡು ಅಂಕೆಗಳಿಂದ ಉಂಟಾದ ಸಂಖ್ಯೆ ಎಂದರೆ 32ನ್ನು ಪರಿಶೀಲಿಸಿದರೆ, ಸರಿಹೊಗುತ್ತದೆ. 32, 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ? ನಮಗೆ ಗೊತ್ತು 32, 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ. 32 = 4×8.

ಆದ್ದರಿಂದ 76532 ಎಂಬುದು 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ.



Downloaded from https:// www.studiestoday.com

Downloaded from https:// www.studiestoday.com

**ಉದಾಹರಣೆ 8:** **56496 ಇದು 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ ಪರಿಶೀಲಿಸಿ.**

**ಪರಿಹಾರ:** 56496 = 50000 + 6000 + 400 + 96

50000, 6000, 400 ಸಂಖ್ಯೆಗಳು 100ರ ಅಪವರ್ತ್ಯಗಳು. ಈ ಸಂಖ್ಯೆಗಳು 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆ.

ನಾವು 96(ಕೊನೆಯ ಎರಡು ಅಂಕೆಗಳಿಂದ ಏರ್ಪಟ್ಟ ಸಂಖ್ಯೆ) 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ ಇಲ್ಲವೊ ಪರಿಶೀಲಿಸೋಣ.

96 = 4×24 ಆದ್ದರಿಂದ 96, 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ.

"ಒಂದು ಸಂಖ್ಯೆಯೊಂದರ ಕೊನೆಯ ಎರಡು ಅಂಕೆಗಳಿಂದ (ಬಿಡಿ, ಹತ್ತರ ಸ್ಥಾನದಲ್ಲಿನ) ಏರ್ಪಟ್ಟ ಸಂಖೆಯ 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಟ್ಟರೇ ಆ ಸಂಖ್ಯೆ 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ."

ಸೂಚನೆ: ಮೇಲಿನ ನಿಯಮ 100 ಕ್ಕಿಂತ ದೊಡ್ಡ ಸಂಖ್ಯೆಗಳಿಗೆ ಅನ್ವಯವಾಗುತ್ತವೆ. ಚಿಕ್ಕ ಸಂಖ್ಯೆಗಳಿಗೆ ಭಾಗಾಕಾರ ಪದ್ಧತಿಗಳಲ್ಲಿ ಭಾಜ್ಯತೆಯನ್ನು ಪರಿಶೀಲಿಸಬಹುದು.

**ಇವುಗಳನ್ನು ಮಾಡಿ**



1. 100000, 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ? ಏಕೆ?
2. 2 ರಿಂದ ಭಾಗಿಸಲ್ಪಟ್ಟು, 4 ರಿಂದ ಭಾಗಿಸಲ್ಪಡದ ಎರಡಂಕಿಯ ಸಂಖ್ಯೆಗಳಿಗೆ ಉದಹರಣೆ ಕೊಡಿ.

### 3.9.2 8ರ ವಿಭಾಜ್ಯತೆಯ ನಿಯಮ.

**4** ರ ವಿಭಾಜ್ಯತೆಯ ನಿಯಮವನ್ನು ಸಂಖ್ಯೆಗಳನ್ನು ವಿಸ್ತರಿಸಿ ಅದರ ಆಧಾರದ ಮೇಲೆ ಪರಿಶೀಲಿಸಿದ್ದೇವೆ. 10, 4 ರ ಅಪವರ್ತ್ಯ ಅಲ್ಲ. ಆದ್ದರಿಂದ 100ನ್ನು ತೆಗೆದುಕೊಂಡು 100ಕ್ಕಿಂತ ದೊಡ್ಡದಾದ ಸಂಖ್ಯೆಗಳನ್ನು 100 ರ ಅಪವರ್ತ್ಯಗಳಾಗಿ ವ್ಯಕ್ತಪಡಿಸುತ್ತೇವೆ. ಆದ್ದರಿಂದ ಕೊನೆಯ ಎರಡಂಕಿಯ ಸಂಖ್ಯೆ 4ರಿಂದ ಭಾಗಿಸಲ್ಪಟ್ಟರೆ ಆ ಸಂಖ್ಯೆ 4ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ. ಅದೇ ರೀತಿ 10, 8ರ ಅಪವರ್ತ್ಯ ಅಲ್ಲ. 100ನ್ನು ಕುರಿತು ಆಲೋಚಿಸೋಣ.

100, 8 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ? ಭಾಗಿಸಲ್ಪಡುವುದಿಲ್ಲ.

1000 ಎಂಬ ಸಂಖ್ಯೆ 8 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ? ಹೌದು.

ನಮಗೆ ಗೊತ್ತು 1000 ಕ್ಕಿಂತ ದೊಡ್ಡ ಸಂಖ್ಯೆಯನ್ನು 1000ದ ಅಪವರ್ತ್ಯವಾಗಿ ಇಲ್ಲವೇ 1000ದ ಅಪವರ್ತ್ಯಕ್ಕೆ ಸ್ವಲ್ಪ ಹೆಚ್ಚಾಗಿಯೂ ತೋರಿಸಬಲ್ಲೆವು.

ಉದಾಹರಣೆಗೆ 4825=4×1000+825

ಆದ್ದರಿಂದ ಕೊನೆಯ ಮೂರು ಅಂಕೆಗಳಿಂದ ಉಂಟಾದ ಸಂಖ್ಯೆಯು 8ರಿಂದ ಭಾಗಿಸಲ್ಪಟ್ಟರೆ ಆ ಸಂಖ್ಯೆ 8 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ.

**ಉದಾಹರಣೆ 9:** 93624 ಎಂಬುದು 8 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ? ಪರಿಶೀಲಿಸಿ.

**ಪರಿಹಾರ:** 93624=90000+3000+600+20+4

1000 ಎಂಬುದು 8ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ ಎಂದು ನಮಗೆ ಗೊತ್ತು.

ಅದೇ ರೀತಿ 90000 ಮತ್ತು 3000 , 1000ದ ಅಪವರ್ತ್ಯಗಳು ಆದ್ದರಿಂದ

ಈ ಎರಡು ಸಂಖ್ಯೆಗಳು ಸಹ 8ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆ,

ಆದ್ದರಿಂದ 8 ರ ವಿಭಾಜ್ಯತೆಯ ನಿಯಮವನ್ನು ಪರಿಶೀಲಿಸಬೇಕಾದರೇ ಒಂದು ಸಂಖ್ಯೆಯ ಕೊನೆಯ 3 ಅಂಕೆಗಳಿಂದ ಉಂಟಾದ ಸಂಖ್ಯೆಯನ್ನು ಪರಿಶೀಲಿಸಿದರೆ ಸರಿಯಾಗುತ್ತದೆ.

4 ಇಲ್ಲವೇ ಅದಕ್ಕಿಂತ ಹೆಚ್ಚಿನ ಅಂಕೆಗಳಿರುವ ಸಂಖ್ಯೆಯ ನೂರರ, ಹತ್ತರ, ಬಿಡಿಗಳಲ್ಲಿನ ಅಂಕೆಗಳಿಂದ ಉಂಟಾದ ಸಂಖ್ಯೆ 8 ರಿಂದ ನಿಶ್ಶೇಷವಾಗಿ ಭಾಗಿಸಲ್ಪಟ್ಟರೆ ಕೊಟ್ಟ ಸಂಖ್ಯೆಯೂ ಸಹ 4 ರಿಂದಲೂ ಸಹ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ ಎಂದರ್ಥ.



Downloaded from https:// www.studiestoday.com

Downloaded from https:// www.studiestoday.com

**ಇವುಗಳನ್ನು ಮಾಡಿ**

1. 76104ಎಂಬ ಸಂಖ್ಯೆಯು 8ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ?
2. 100 ಮತ್ತು 200 ನಡುವೆ ಇರುವ ಸಂಖ್ಯೆಗಳಲ್ಲಿ 8ರಿಂದ ಭಾಗಿಸಲ್ಪಡುವ ಸಂಖ್ಯೆಗಳನ್ನು ಬರೆಯಿರಿ.



### 3.9.3 11ರ ಭಾಜ್ಯತೆಯ ನಿಯಮ

ಈ ಕೆಳಗಿನ ಪಟ್ಟಿಯಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

| ಸಂಖ್ಯೆ | ಬೆಸ ಸ್ಥಾನದಲ್ಲಿರುವ ಅಂಕೆಗಳ ಮೊತ್ತ. (ಬಲಗಡೆಯಿಂದ) | ಸರಿ ಸ್ಥಾನದಲ್ಲಿರುವ ಅಂಕೆಗಳ ಮೊತ್ತ (ಬಲಗಡೆ ಯಿಂದ) | ವ್ಯತ್ಯಾಸ | 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪ ಡುತ್ತದೆಯೇ? |
|---|---|---|---|---|
| 1221 | | | | |
| 90002 | | | | |
| 80927 | | | | |
| 19091908 | 8+9+9+9=35 | 0+1+0+1=2 | 35-2=33 | ಹೌದು |
| 83568 | | | | |

ಮೇಲಿನ ಪಟ್ಟಿಯಲ್ಲಿ ಏನ್ನನು ಗಮನಿಸಿದ್ದಿರಿ?

ಮೊದಲನೇ ಮೂರು ಸಂಖ್ಯೆಗಳ ವ್ಯತ್ಯಾಸ 0 ಅಥವಾ 11ರ ಅಪವರ್ತ್ಯ ಆದ್ದರಿಂದ ಈ ಸಂಖ್ಯೆಗಳಲ್ಲವೂ 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆ.

ಆದರೆ 83568 ರಲ್ಲಿ ವ್ಯತ್ಯಾಸ 12 ಆದ್ದರಿಂದ 83568, 11 ರಿಂದ ನಿಶ್ಶೇಷವಾಗಿ ಭಾಗವಾಗುವುದಿಲ್ಲ.

**"ಒಂದು ಸ್ವಾಭಾವಿಕ ಸಂಖ್ಯೆಯಲ್ಲಿ ಬಲಗಡೆಯಿಂದ ಎಡಗಡೆಗೆ ಹೋಗುತ್ತಾ ಅಂಕೆ ಬಿಟ್ಟು ಅಂಕೆಯನ್ನು ತೆಗೆದುಕೊಂಡು ಆ ಅಂಕೆಗಳ ಮೊತ್ತವನ್ನು ಕಂಡುಹಿಡಿದು, ನಂತರ ಬಿಟ್ಟ ಅಂಕಗಳ ಮೊತ್ತವನ್ನು ಕಂಡುಕೊಳ್ಳಬೇಕು. ಈ ಮೊತ್ತಗಳ ವ್ಯತ್ಯಾಸ 11 ರಿಂದ ಭಾಗಿಸಲ್ಪಟ್ಟರೆ ಆ ಸಂಖ್ಯೆ 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ."**

**ಉದಾಹರಣೆ –10 :** 6535 ,11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ ?

**ಪರಿಹಾರ :** ಬೆಸ ಸ್ಥಾನದಲ್ಲಿರುವ ಅಂಕೆಗಳ ಮೊತ್ತ $= 5 + 5 = 10$

ಸರಿಸ್ಥಾನದಲ್ಲಿರುವ ಅಂಕೆಗಳ ಮೊತ್ತ $= 3 + 6 = 9$

ಈ ಎರಡು ಮೊತ್ತಗಳ ವ್ಯತ್ಯಾಸ $= 10 - 9 = 1$

1 ,11ರಿಂದ ಭಾಗಿಸಲ್ಪಡುತ್ತದೆಯೆ ? ಇಲ್ಲ

ಆದ್ದರಿಂದ 6535 ಎಂಬುದು 11 ರಿಂದ ನಿಶ್ಶೇಷವಾಗಿ ಭಾಗಿಲಸಲ್ಪಡದು.

**ಉದಾಹರಣೆ–11 :** 1221 ಎಂಬುದು 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆಯೇ ?

**ಪರಿಹಾರ :** ಬೆಸ ಸ್ಥಾನದಲ್ಲಿರುವ ಅಂಕೆಗಳ ಮೊತ್ತ $= 1 + 2 = 3$

ಸರಿಸ್ಥಾನದಲ್ಲಿರುವ ಅಂಕೆಗಳ ಮೊತ್ತ $= 2 + 1 = 3$

ಎರಡು ಮೊತ್ತಗಳ ವ್ಯತ್ಯಾಸ $= 3 - 3 = 0$

ಅದ್ದರಿಂದ 1221, 11ರಿಂದ ಪೂರ್ಣವಾಗಿ ಭಾಗಿಸಲ್ಪಡುತ್ತದೆ.



Downloaded from https:// www.studiestoday.com

Downloaded from https:// www.studiestoday.com

### ಪ್ರಯತ್ನಿಸಿ :



1221 ಎನ್ನುವುದು ದ್ವಿಮುಖ ಸಂಖ್ಯೆ (polyndrome number) ದ್ವಿಮು ಸಂಖ್ಯೆ ಎಂದರೆ ಯಾವುದೇ ಕಡೆಯಿಂದ ಅಂದರೆ ಬಲ ಅಥವಾ ಎಡದಿಂದ ಬಲಗಡೆ ಬದಲಾ ಯಿಸಿ ಬರೆದರೆ ಸಂಖ್ಯೆ ಬದಲಾಗದು. ಆದ್ದರಿಂದ ಪ್ರತಿ ಸರಿ ಅಂಕೆಗಳಿರುವ ದ್ವಿಮುಖ ಸಂಖ್ಯೆ 11 ರಿಂದ ನಿಶ್ಶೇಷವಾಗಿ ಬಾಗಿಸಲ್ಪಡುತ್ತದೆ.

6 ಅಂಕೆಗಳ ದ್ವಿಮುಖ ಸಂಖ್ಯೆ (polyndrome number) ಯನ್ನು ಬರೆಯಿರಿ



### ಅಭ್ಯಾಸ 3.7

1. ಈ ಕೆಳಗಿನವುಗಳಲ್ಲಿ 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ಸಂಖ್ಯೆಗಳಾವುವು ?
   i. 572  ii. 21,084  iii. 14,560
   iv. 1,700  v. 2150
2. ಈ ಕೆಳಗಿನ ಸಂಖ್ಯೆಗಳು 8ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆಯೇ ? ಪರೀಕ್ಷಿಸಿ.
   i. 9774  ii. 5,31,048  iii. 5500
   iv. 6136  v. 4152
3. ಈ ಕೆಳಗಿನವುಗಳಲ್ಲಿ 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತವೆಯೋ? ಪರೀಕ್ಷಿಸಿರಿ.
   i. 859484  ii. 10824  iii. 20801
4. ಈ ಕೆಳಗಿನ ಸಂಖ್ಯೆಗಳಲ್ಲಿ ಯಾವ ಸಂಖ್ಯೆಗಳು 4 ಮತ್ತು 8 ರಿಂದ ಭಾಗಿಸಲ್ಪಡುತ್ತವೆ ?
   i. 2104  ii. 726352  iii. 1800
5. 289279 ಯಾವ ಕನಿಷ್ಠ ಸಂಖ್ಯೆಯನ್ನು ಕೂಡಿದರೆ 8 ರಿಂದ ನಿಶ್ಶೇಷವಾಗಿ ಭಾಗವಾಗುತ್ತದೆ.
6. 1905 ಯಿಂದ ಯಾವ ಕನಿಷ್ಠ ಸಂಖ್ಯೆಯನ್ನು ಕಳೆದರೆ 4 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ.
7. 1000 ಮತ್ತು 1100ರ ಮಧ್ಯೆಯಲ್ಲಿರುವ ಸಂಖ್ಯೆಗಳಲ್ಲಿ 11ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ಸಂಖ್ಯೆಗಳನ್ನು ಬರೆಯಿರಿ .
8. 1240ಕ್ಕೆ ಸಮೀಪದಲ್ಲಿರುವ 11ರ ಅಪವರ್ತ್ಯಗಳನ್ನು ಬರೆಯಿರಿ.
9. 105 ಕ್ಕೆ ಸಮೀಪವಿರುವ ಸಂಖ್ಯೆಗಳಲ್ಲಿ ಯಾವ ಸಂಖ್ಯೆ 4ರಿಂದ ಪೂರ್ಣವಾಗಿ ಭಾಗಿಸಲ್ಪಡುತ್ತದೆ.

### ನೆನಪಿನಲ್ಲಿಡಬೇಕಾದ ಅಂಶಗಳು

1. ಅಪವರ್ತ್ಯಗಳು, ಅಪವರ್ತನಗಳು, ಭಾಜಕಗಳನ್ನು ಕುರಿತು ಕಲಿತಿದ್ದೇವೆ. ಕೊಟ್ಟಿರುವ ಸಂಖ್ಯೆಗಳಲ್ಲಿ ಅಪವರ್ತನಗಳನ್ನು ಅಪವರ್ತ್ಯಗಳನ್ನು ಗುರುತಿಸುವುದನ್ನು ಕಲಿತಿದ್ದೇವೆ.
2. ಈ ಕೆಳಗಿನ ಅಂಶಗಳನ್ನು ಕಂಡುಹಿಡಿದು, ಕಲಿತ್ತಿದ್ದೇವೆ.
   i. ಪ್ರತಿ ಸಂಖ್ಯೆಗೆ ಆ ಸಂಖ್ಯೆಯೇ ಅಪವರ್ತನ ಮತ್ತು '1' ಪ್ರತಿ ಸಂಖ್ಯೆಗೆ ಅಪವರ್ತನ.
   ii. ಒಂದು ಸಂಖ್ಯೆಯನ್ನು ನಿಶ್ಶೇಷವಾಗಿ ಭಾಗಿಸುವ ಸಂಖ್ಯೆ ಆ ಸಂಖ್ಯೆಯ ಅಪವರ್ತನ.
   iii. ಒಂದು ಸಂಖ್ಯೆಯ ಪ್ರತಿ ಅಪವರ್ತನ ಆ ಸಂಖ್ಯೆಗೆ ಸಮವಾಗಿ ಇಲ್ಲವೇ ಕಡಿಮೆಯಾಗಿರುತ್ತದೆ.
   iv. ಪ್ರತಿ ಸಂಖ್ಯೆ ಅದರ ಅಪವರ್ತನಕ್ಕೆ ಅಪವರ್ತ್ಯ.
   v. ಸಂಖ್ಯೆಯ ಪ್ರತಿ ಅಪವರ್ತ್ಯ ಆ ಸಂಖ್ಯೆಗೆ ಸಮವಾಗಿ ಇಲ್ಲವೇ ಅದಕ್ಕಿಂತ ದೊಡ್ಡದಾಗಿರುತ್ತದೆ.
   vi. ಪ್ರತಿ ಸಂಖ್ಯೆ ಅದಕ್ಕದೇ ಅಪವರ್ತ್ಯ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

3. i. 1ನ್ನು ಬಿಟ್ಟು, ಉಳಿದ ಸಂಖ್ಯೆಗಳಲ್ಲಿ 1 ಮತ್ತು ಅದೇ ಸಂಖ್ಯೆಯೆ ಅಪವರ್ತನಗಳಾಗಿರುವ ಸಂಖ್ಯೆಗಳನ್ನು ಅವಿಭಾಜ್ಯ ಸಂಖ್ಯೆಗಳೆನ್ನುವರು. ಎರಡಕ್ಕಿಂತ ಹೆಚ್ಚು ಅಪವರ್ತನಗಳನ್ನು ಹೊಂದಿರುವ ಸಂಖ್ಯೆಗಳನ್ನುಭಾಜ್ಯ ಸಂಖ್ಯೆಗಳೆನ್ನವರು. 1 ಅವಿಭಾಜ್ಯ ಸಂಖ್ಯೆಯೂ ಅಲ್ಲ, ಭಾಜ್ಯ ಸಂಖ್ಯೆಯು ಅಲ್ಲ.
   ii. 2 ಕನಿಷ್ಠ ಅವಿಭಾಜ್ಯ ಸಂಖ್ಯೆಯೆ ಹಾಗೂ 2ಸರಿ ಅವಿಭಾಜ್ಯ ಸಂಖ್ಯೆ 2ನ್ನು ಬಿಟ್ಟು ಉಳಿದ ಎಲ್ಲಾ ಅವಿಭಾಜ್ಯ ಸಂಖ್ಯೆಗಳು ಬೆಸ ಸಂಖ್ಯೆಗಳು.
   iii. 1 ಮಾತ್ರವೇ ಸಾಮಾನ್ಯ ಅಪವರ್ತನವಾಗಿರುವ ಸಂಖ್ಯೆಗಳನ್ನು ಪರಸ್ಪರ ಅವಿಭಾಜ್ಯ ಸಂಖ್ಯೆಗಳು ಎನ್ನುವರು ಅಥವಾ ಸಾಪೇಕ್ಷ ಅವಿಭಾಜ್ಯ ಸಂಖ್ಯೆಗಳೆನ್ನುವರು.
   iv. ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆ ನಿಶ್ಶೇಷವಾಗಿ ಬಾಗಿಸಿದರೆ ಆ ಸಂಖ್ಯೆಗಳನ್ನು ಒಂದುಕ್ಕೊಂದು ಅಪವರ್ತನಗಳೆನ್ನುವರು.
   v. ಒಂದು ಸಂಖ್ಯೆ ಎರಡು ಪರಸ್ಪರ ಅವಿಭಾಜ್ಯ ಸಂಖ್ಯೆಗಳಿಂದ ಭಾಗಿಸಲ್ಪಟ್ಟರೆ ಅವುಗಳ ಗುಣಲಬ್ಧದಿಂದ ಕೂಡ ಆ ಸಂಖ್ಯೆ ಭಾಗಿಸಲ್ಪಡುತ್ತದೆ.

4. 2,3,4,5,8,9,11ರ ಭಾಜ್ಯತೆಯ ನಿಯಮಗಳ ಬಗ್ಗೆ ಕಲಿತಿದ್ದೇವೆ.
   i. ಸಂಖ್ಯೆಯ ಕೊನೆ ಅಂಕೆ ಎಂದರೆ ಬಿಡಿಸ್ಥಾನದಲ್ಲಿನ ಅಂಕೆಯನ್ನು ಪರಿಶೀಲಿಸಿ 2,5,10 ರ ಭಾಜ್ಯತೆಯನ್ನು ಹೇಳಬಹುದು.
   ii. ಸಂಖ್ಯೆಯಲ್ಲಿನ ಅಂಕೆಗಳ ಮೊತ್ತವನ್ನು ಕಂಡುಹಿಡಿದು, 3, 9ರ ಭಾಜ್ಯತೆಯ ನಿಯಮ ಎಂದು ಹೇಳಬಹುದು.
   iii. ಸಂಖ್ಯೆಯಲ್ಲಿನ ಕೊನೆಯ ಎರಡಂಕಿಗಳು, ಮೂರಂಕಿಗಳನ್ನು ಪರಿಶೀಲಿಸಿ 4, 8 ರ ಭಾಜ್ಯತೆಯನ್ನು ಹೇಳಬಹುದು.
   iv. ಬೆಸ ಸ್ಥಾನದಲ್ಲಿರುವ ಅಂಕೆಗಳ ಮೊತ್ತ, ಸರಿಸ್ಥಾನದಲ್ಲಿರುವ ಅಂಕೆಗಳ ಮೊತ್ತಗಳ ವ್ಯತ್ಯಾಸವನ್ನು ಕಂಡುಕೊಂಡು 11 ರ ಭಾಜ್ಯತೆಯನ್ನು ಹೇಳಬಹುದು.

5. ಎರಡು ಸಂಖ್ಯೆಗಳು ಒಂದು ಸಂಖ್ಯೆಯಿಂದ ಭಾಗಿಸಲ್ಪಟ್ಟರೆ. ಆ ಸಂಖ್ಯೆಗಳ ಮೊತ್ತವು ಮತ್ತು ವ್ಯತ್ಯಾಸವೂ ಆ ಸಂಖ್ಯೆಯಿಂದ ಭಾಗಿಸಲ್ಪಡುತ್ತದೆ.
   i. ಎರಡು ಇಲ್ಲವೇ ಅದಕ್ಕಿಂತ ಹೆಚ್ಚಿನ ಸಂಖ್ಯೆಗಳ ಅಪವರ್ತನಗಳಲ್ಲಿ ಗರಿಷ್ಠವಾಗಿರುವ ಬೆಲೆಯನ್ನು ಗರಿಷ್ಠ ಸಾಮಾನ್ಯ ಅಪವರ್ತನ ಎನ್ನುವರು.
   ii. ಎರಡು ಇಲ್ಲವೇ ಅದಕ್ಕಿಂತ ಹೆಚ್ಚು ಸಂಖ್ಯೆಗಳ ಅಪವರ್ತ್ಯಗಳಲ್ಲಿ ಕನಿಷ್ಠವಾದ ಬೆಲೆಯನ್ನು ಲಘುತ್ತಮ ಸಾಮಾನ್ಯ ಅಪವರ್ತ್ಯ ಎನ್ನುವರು.

6. ಎರಡು ಸಂಖ್ಯೆಗಳಲ್ಲಿ ಒಂದು ಮತ್ತೊಂದಕ್ಕೆ ಅಪವರ್ತ್ಯವಾದರೆ, ದೊಡ್ಡ ಸಂಖ್ಯೆ ಆ ಸಂಖ್ಯೆಗಳಿಗೆ ಲ.ಸಾ.ಅ ಆಗುತ್ತದೆ.

7. ಲ.ಸಾ.ಅ ಮತ್ತು ಗ.ಸಾ.ಅ ಗಳ ನಡುವಿನ ಸಂಬಂಧ

8. ಲ.ಸಾ.ಅ $\times$ ಗ.ಸಾ.ಅ = ಎರಡು ಸಂಖ್ಯೆಗಳ ಗುಣಲಬ್ಧ

**ದತ್ತಾತ್ರೇಯ ರಾಮಚಂದ್ರ ಕಾಪ್ರೇಕರ್(ಭಾರತದೇಶ)**
**ಕ್ರಿ.ಶ. 1905–1986**
ಸಂಖ್ಯೆಗಳೊಂದಿಗೆ ಅನೇಕ ಪ್ರಯೋಗಗಳನ್ನು ಮಾಡಿದ ಶಿಕ್ಷಕ.
6174 ನ್ನು 'ಕಾಪ್ರೇಕರ್ ಸ್ಥಿರಾಂಕ' ಎನ್ನುತ್ತಾರೆ.
ಇವರ ಡೆಮ್ಲೋ ಸಂಖ್ಯೆಗಳು ಸೆಲ್ಫ್ ಸಂಖ್ಯೆಗಳನ್ನು ರೂಪೊಂದಿಸಿದ್ದಾರೆ.





Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ-4

# ರೇಖಾಗಣಿತದ ಮೂಲ ಪರಿಕಲ್ಪನೆಗಳು

## 4.1 ಪರಿಚಯ

ನಿತ್ಯ ಜೀವನದಲ್ಲಿ ನಾವು ಹಲವು ಬಗೆಯ ವಸ್ತುಗಳನ್ನು ನೋಡುತ್ತಿರುತ್ತೇವೆ. ನಮ್ಮ ಮನೆಯಲ್ಲಿರುವ ಬಗೆ ಬಗೆಯ ವಸ್ತುಗಳು ಅಡಿಗೆ ಸಾಮಾನುಗಳು, ಬೇರೆ ಬೇರೆ ಆಕಾರದಲ್ಲಿರುವ ಕಟ್ಟಡಗಳು, ಚಿತ್ರಗಳು, ಗೊಂಬೆಗಳು,... ಹೀಗೆ ಪ್ರತಿಯೊಂದು ನಮಗೆ ಪರಿಚಯವೇ. ಮನೆಮುಂದೆ ಹಾಕುವ ರಂಗೋಲಿಗಳನ್ನು ಗಮನಿಸಿದ್ದೀರಾ? ಕೈಗಳ ಮೇಲೆ ಹಾಕುವ ಮೆಹಂದಿ ಆಕೃತಿಗಳನ್ನು ಗಮನಿಸಿದ್ದೀರಾ? ಈ ಆಕೃತಿಗಳನ್ನು ಹೇಗೆ ಹಾಕುತ್ತಾರೆ.



ಈ ಎಲ್ಲ ವಸ್ತುಗಳು, ಆಕಾರಗಳು ವಿವಿಧ ಬಗೆಯ ರೇಖಾ ಗಣೀತದ ಆಕಾರಗಳಿಂದ ತಯಾರಿಸಲ್ಪಟ್ಟಿರುತ್ತವೆ.

ನಿಮ್ಮ ಮನೆಯಲ್ಲಿನ ದೂರದರ್ಶನವನ್ನು ಗಮನಿಸಿ, ಅದರ ಪರದೆಯ ಅಂಚು ಆಯತಾಕರಾದಲ್ಲಿರುತ್ತದೆ. ಇದೇ ರೀತಿ ಫ್ರಿಜ್, ಪೆನ್ಸಿಲ್ ಬಾಕ್ಸ್, ಬೆಂಕಿಪೊಟ್ಟಣ, ಇಟ್ಟಿಗೆ ಮುಂತಾದವುಗಳೆಲ್ಲವೂ ಆಯತಾಕಾರದಲ್ಲಿ ಇರುವುದನ್ನು ಗಮನಿಸಬಹುದು. ನಾವು ಕುಡಿಯುವ ನೀರಿನ ಗ್ಲಾಸು, ಹಣೆಬೊಟ್ಟು, ಚೆಂಡು ಮುಂತಾದವುಗಳೆಲ್ಲವೂ ಸಹ ಗಮನಿಸುತ್ತೀರಿ. ಅವು ಯಾವ ಆಕಾರವನ್ನು ಹೊಂದಿದೆ ? ಈ ಅಧ್ಯಾಯದಲ್ಲಿ ನಾವು ಹಲವು ಬಗೆಯ ರೇಖಾ ಗಣಿತದ ಭಾವನೆಗಳನ್ನು ಕಲಿತುಕೊಳ್ಳೋಣ..

## 4.2 ಬಿಂದು



ಒಂದು ಪೆನ್ಸಿಲ್‌ನಿಂದ ಕಾಗದದ ಮೇಲೆ ಒಂದು ಚುಕ್ಕೆಯನ್ನಿಡಿ. ಪೆನ್ಸಿಲನ್ನು ಮತ್ತಷ್ಟು ಚೂಪಾಗಿಸಿ ಕಾಗದಮೇಲೆ ಮತ್ತೊಂದು ಚುಕ್ಕೆಯನ್ನಿಟ್ಟರೆ ಮತ್ತಷ್ಟು ಚಿಕ್ಕದಾದ ಚುಕ್ಕೆ ಮಾಡುತ್ತದೆ. ಸುಮಾರು ಕಣ್ಣಿಗೆ ಕಾಣದಂತಹ ಅತಿ ಚಿಕ್ಕ ಬಿಂದುವನ್ನು ಪರಿಶೀಲಿಸಿ. ಅಂತಹ ಚಿಕ್ಕ ಚುಕ್ಕೆ ಬಿಂದುವನ್ನು ಸೂಚಿಸುತ್ತದೆ. ಬಿಂದುಗಳಿಗೆ ಕಲವು ಉದಾಹರಣೆ ಆಲೋಚಿಸಿರಿ. ಬಿಂದು ಎನ್ನುವುದು ಸ್ಥಾನವನ್ನು ಸೂಚಿಸುತ್ತದೆ.

ದೂರದಲ್ಲಿರುವ ಆಕಾಶದಲ್ಲಿನ ಚುಕ್ಕೆಗಳು ಬಿಂದುಗಳಂತೆ ಕಾಣುತ್ತವೆ. ಆಂಧ್ರಪ್ರದೇಶ್‌ರಾಜ್ಯದ ನಕ್ಷೆಯಲ್ಲಿ ಹೈದರಬಾದನ್ನು ನಾವು ಒಂದು ಬಿಂದುವಿನಿಂದ ಸೂಚಿಸುತ್ತೇವೆ. ಒಂದು ನಕ್ಷೆ ಅಥವಾ ಚಿತ್ರದಲ್ಲಿ ಬಿಂದುಗಳಿಂದ ಸ್ಥಾನವನ್ನು ಸೂಚಿಸುವ ಮತ್ತಷ್ಟು ಉದಾಹರಣೆಗಳನ್ನು ಆಲೋಚಿಸಿ.









ಬಿಂದುವನ್ನು ಆಂಗ್ಲ ವರ್ಣಮಾಲೆಯ ದೊಡ್ಡ ಅಕ್ಷರದಿಂದ ಸೂಚಿಸುತ್ತೇವೆ.

ಪಕ್ಕದ ಚಿತ್ರದಲ್ಲಿ A, B ಮತ್ತು C ಮೂರು ಬಿಂದುಗಳು. ಇವನ್ನು A ಬಿಂದು, B ಬಿಂದು, C ಬಿಂದು ಎಂದು ಓದುತ್ತೇವೆ.

**ಇವನ್ನು ಮಾಡಿ**



1. ಪಕ್ಕದಲ್ಲಿರುವ ಆಯತದಲ್ಲಿ ನಾಲ್ಕು ಬಿಂದುಗಳಿವೆ.ಅವುಗಳನ್ನು ಹೆಸರಿಸಿ..





SCERT TELANGANA

Downloaded from https:// www.studiestoday.com

Downloaded from https:// www.studiestoday.com

## 4.3 ರೇಖಾಖಂಡ




ಒಂದು ಹಾಳೆಯನ್ನು ತೆಗೆದುಕೊಂಡು ಪಕ್ಕದ ಚಿತ್ರದಲ್ಲಿ ತೋರಿಸಿದಂತೆ ಮಡಚಿ. ಹಾಳೆಯ ಮಡಿಕೆಯನ್ನು ಗಮನಿಸಿ ಈಗ ಹಾಳೆಯನ್ನು ಬಿಚ್ಚಿರಿ. ಹಾಳೆಯನ್ನು ಮಡಚಿರುವುದರಿಂದ ಉಂಟಾದ ರೇಖೆ ಕೂಡ ಒಂದು ರೇಖಾ ಖಂಡವನ್ನು ಸೂಚಿಸುತ್ತದೆ. ಎಂದು ಹೇಳಬಹುದು. ರೇಖಾಖಂಡವು ಪರಿಗಣನಗೆ ತೆಗೆದುಕೊಳ್ಳದಷ್ಟು ದಪ್ಪವನ್ನು ಹೊಂದಿರುತ್ತದೆ.



ಒಂದು ಹಾಳೆಯ ಮೇಲೆ ನಿಮ್ಮ ನೋಟ್‌ಪುಸ್ತಕವನ್ನು ಅಥವಾ ಪೆನ್ಸಿಲ್ ಬಾಕ್ಸ್‌ನಿಂದ ಒಂದು ರೇಖೆಯನ್ನು ಎಳೆಯಿರಿ. ನೀವು ಎಳೆದ ಈ ರೇಖೆ ಒಂದು ರೇಖಾ ಖಂಡವನ್ನು ಸೂಚಿಸುವುದು. ಈ ರೇಖಾ ಖಂಡವು ಎರಡು ಅಂತ್ಯ ಬಿಂದುಗಳನ್ನು ಹೊಂದಿರುತ್ತದೆ. ಅವುಗಳನ್ನು ಹೆಸರಿಸಿ.

ಒಂದು ದಾರವನ್ನು ತೆಗೆದುಲೊಂಡು ನಿಧಾನವಾಗಿ ಎಳೆಯಿರಿ. ಇದನ್ನು ರೇಖಾಖಂಡ ಭಾವನೆಯೊಂದಿಗೆ ಹೋಲಿಸಿ. ಇದರ ಕೊನೆಗಳನ್ನು ಗುರ್ತಿಸಿರಿ.




ಒಂದು ಹಾಳೆಯ ಮೇಲೆ ಯಾವುದಾದರೂ ಎರಡು ಬಿಂದುಗಳು A ಮತ್ತು B ನಿಮಗೆ ಅನುಕೂಲವಾದ ಎಲ್ಲ ಬಗೆಯಲ್ಲಿ A, B ಗಳನ್ನು ಸೇರಿಸಿ. ಇವುಗಳಲ್ಲಿ A ಯಿಂದ B ಗೆ ಇರುವ ಕನಿಷ್ಠ ದೂರ ಎಷ್ಟು ? ಈ ಕನಿಷ್ಠ ದೂರವನ್ನು ರೇಖಾಖಂಡ AB ಎಂದು ಎನ್ನುವರು. ಇದನ್ನು $\overline{AB}$ ಅಥವಾ $\overline{BA}$ ನಿಂದ ಸೂಚಿಸುತ್ತೇವೆ. "ಎರಡು ಬಿಂದುಗಳ ಮಧ್ಯೆಇರುವ ಕನಿಷ್ಠ ನೇರ ದೂರವನ್ನು ರೇಖಾ ಖಂಡ ಎಂದು ಹೇಳಬಹುದು"

## 4.4 ಸರಳರೇಖೆ




ರೇಖಾಖಂಡವೊಂದನ್ನು ತೆಗೆದುಕೊಳ್ಳಿ. ಈ ರೇಖಾ ಖಂಡದ ಎರಡು ಅಂತ್ಯ ಬಿಂದುಗಳನ್ನು A ಕಡೆ ಮತ್ತು B ಕಡೆ ಅನಿರ್ದಿಷ್ಟವಾಗಿ ವೃದ್ಧಿಸಿ. ಇದು ಒಂದು ಸರಳ ರೇಖೆಯನ್ನು ಸೂಚಿಸುತ್ತದೆ.

ಅನಿರ್ದಿಷ್ಟವಾಗಿ ರೇಖಾ ಖಂಡವನ್ನು ಎರಡೂ ಕಡೆ ವೃದ್ಧಿಸುವುದನ್ನು ನಾವು ಹಾಳೆಯ ಮೇಲೆ ಮಾಡಲಾರವು. ಆದ್ದರಿಂದ ರೇಖಾ ಖಂಡಕ್ಕೆ ಎರಡೂ ಕಡೆಯಲ್ಲಿ ಎರಡು ಬಾಣದ ಗುರ್ತುಗಳನ್ನು ಇಡುತ್ತೇವೆ. ಒಂದು ಸರಳ ರೇಖೆಯನ್ನು $\overleftrightarrow{AB}$ ಎಂದು ಬರೆಯುತ್ತೇವೆ. ಇದೇ ರೀತಿ $l$, $m$, $n$ ಮುಂತಾದ ಆಂಗ್ಲ ಮಾಲೆಯ ಚಿಕ್ಕ ಅಕ್ಷರಗಳಿಂದ ಸಹ ಸೂಚಿಸುತ್ತೇವೆ. ಸರಳರೇಖೆಯನ್ನು ಸಾಧಾರಣವಾಗಿ ರೇಖೆ ಎಂದು ಸಹ ಎನ್ನುವರು.

**ಇದನ್ನು ಮಾಡಿರಿ.**



ಒಂದು ಜಿಯೋ ಬೋರ್ಡ್‌ನ್ನು ತೆಗೆದುಕೊಳ್ಳಿ ಎರಡು ಮೊಳೆಗಳನ್ನು ಆಯ್ಕೆ ಮಾಡಿ ಒಂದು ದಾರವನ್ನು ಗಟ್ಟಿಯಾಗಿ ಕಟ್ಟಿರಿ. ನೀವು ಒಂದು ರೇಖಾ ಖಂಡವನ್ನು ರಚಿಸಿರುವಿರಿ. ಗಂಟುಹಾಕಿದ ಎರಡು ಮೊಳೆಗಳ ಕೊನೆಗಳು ರೇಖಾ ಖಂಡಕ್ಕೆ ಎರಡು ಅಂತ್ಯ ಬಿಂದುಗಳಾಗಿರುತ್ತವೆ. ಈಗ ಒಟ್ಟು ದಾರವು ಒಂದು ಸರಳ ರೇಖೆಯನ್ನು ಸೂಚಿಸುವುದು. ಏಕೆಂದರೆ ದಾರವನ್ನು ಎರಡೂ ಮೊಳೆಗಳ ಕೊನೆಯಿಂದ ಅದೇ ದಿಕ್ಕಿನಲ್ಲಿ ಎರಡು ಕಡೆ ವೃದ್ಧಿಸಬಹುದು.



## 4.5 ಕಿರಣ



ಒಂದು ಟಾರ್ಚ್‌ನಿಂದ ಹೊರಡುವ ಕಿರಣಗಳು, ಸೂರ್ಯನ ಕಿರಣಗಳು ಬೆಳಕಿನ ಕಿರಣಗಳು ಈ ಎಲ್ಲವೂ 'ಕಿರಣ' ಎಂಬ ರೇಖಾ ಗಣಿತದ ಭಾವನೆಯನ್ನು ಸೂಚಿಸುತ್ತವೆ. ಕಿರಣ ಎಂಬುದು ರೇಖೆಯಲ್ಲಿನ ಒಂದು ಭಾಗ. ಕಿರಣ ಒಂದು ಆದಿಬಿಂದುವಿನಿಂದ ಹೊರಟು ನಿಗದಿಪಡಿಸಿದ ದಿಕ್ಕಿನಲ್ಲಿ ಅನಿರ್ಧಷ್ಟವಾಗಿ ಸಾಗುತ್ತಾ ಹೋಗುತ್ತದೆ.



ಆದಕಾರಣ ಕಿರಣಕ್ಕೆ ಒಂದೇ ಬಿಂದು ಅಂತ್ಯಬಿಂದುವಾಗಿರುತ್ತದೆ.




A ಎಂಬುದು ರೇಖೆಯ ಮೇಲಿನ ಬಿಂದು ಎಂದುಕೊಳ್ಳೋಣ. B ಮತ್ತು C ಗಳು ಅದೇ ರೇಖೆಯ ಮೇಲೆ A ನಎರಡೂ ಕಡೆಯಲ್ಲಿರುವ ಬಿಂದುಗಳಾದರೆ , $\overrightarrow{AB}$ ಮತ್ತು $\overrightarrow{AC}$ ಗಳು ಎರಡು ಕಿರಣಗಳು ಆಗುತ್ತವೆ.



Downloaded from https:// www.studiestoday.com

Downloaded from https:// www.studiestoday.com

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**

ಇಲ್ಲಿ $\overrightarrow{OA}$ ಒಂದು ಕಿರಣ. ಇದು 'O'ನಿಂದ ಪ್ರಾರಂಭವಾಗಿ A ಮತ್ತು B ಮೂಲಕ ಹಾದುಹೋಗುತ್ತದೆ. ಈ $\overrightarrow{OA}$ ಕಿರಣವನ್ನು $\overrightarrow{OB}$ ? ಎಂದು ಬರೆಯಬಹುದೇ?




ಕಿರಣ $\overrightarrow{OA}$ ಇದನ್ನು $\overrightarrow{AO}$ ಎಂದು ಬರೆಯಬಹುದೇ ? ಏಕೆ ? ಕಾರಣಕೊಡಿ.





**ಅಭ್ಯಾಸ –4.1**

1. ಕೆಳಗೆ ಕೊಟ್ಟಿರುವ ಬಿಂದುಗಳನ್ನು ಸೇರಿಸಿ.ನಂತರ ಕಂಡುಬರುವ ರೇಖಾಖಂಡಗಳನ್ನು ಹೆಸರಿಸಿ.

   i. 


   ii. 


2. ಕೊಟ್ಟಿರುವ ಚಿತ್ರದ ಆಧಾರದ ಮೇಲೆ ಕೆಳಗಿನವುಗಳನ್ನು ಹೆಸರಿಸಿ.




   i. ಯಾವುದಾದರೂ 5 ಬಿಂದುಗಳು
   ii. ಯಾವುದಾದರೂ 5 ರೇಖಾಖಂಡಗಳು
   iii. ಯಾವುದಾದರೂ 5 ಕಿರಣಗಳು
   iv. ಯಾವುದಾದರೂ 5 ರೇಖೆಗಳು

3. ಕೆಳಗಿನ ಬಿಂದುಗಳ ಮೂಲಕ ಎಷ್ಟು ರೇಖೆಗಳನ್ನು ಎಳೆಯಬಹುದೋ ತಿಳಿಸಿ ಅದಕ್ಕೆ ಸರಿಹೊಂದುವ ಕಚ್ಚಾ ಚಿತ್ರವನ್ನು ಎಳೆಯಿರಿ.

   i. ಒಂದು ಬಿಂದು    ii. ಎರಡು ವಿಭಿನ್ನ ಬಿಂದುಗಳು

4. ಯಾವುದು ನಿರ್ದಿಷ್ಟವಾದ ಉದ್ದವನ್ನು ಹೊಂದಿರುತ್ತದೆ.

   i. ರೇಖೆ    ii. ಬಿಂದು    iii. ರೇಖಾಖಂಡ    iv. ಕಿರಣ

5. ಈ ಕೆಳಗಿನವುಗಳಿಗೆ ಎಷ್ಟು ಅಂತ್ಯಬಿಂದುಗಳಿರುತ್ತವೆ?

   i. ರೇಖಾ ಖಂಡ    ii. ಕಿರಣ    iii. ರೇಖೆ

6. ಸರಿ ಅಥವಾ ತಪ್ಪುಗಳನ್ನು ಗುರುತಿಸಿ ಬರೆಯಿರಿ.

   i. ರೇಖೆಗೆ ಅಂತ್ಯಬಿಂದುಗಳಿರುವುದಿಲ್ಲ ( )
   ii. ಕಿರಣ ರೇಖೆಯ ಒಂದು ಭಾಗ ( )
   iii. ರೇಖಾ ಖಂಡಕ್ಕೆ ನಿರ್ದಿಷ್ಟವಾದ ಉದ್ದಳತೆ ಹೊಂದಿರುವುದಿಲ್ಲ ( )
   iv. ರೇಖಾ ಖಂಡಕ್ಕೆ ಒಂದೇ ಅಂತ್ಯಬಿಂದು ಇರುತ್ತದೆ. ( )
   v. ಒಂದು ಬಿಂದುವಿನ ಮೂಲಕ ಹಲವು ರೇಖೆಗಳನ್ನು ಎಳೆಯಬಹುದು. ( )

7. ಚಿತ್ರವನ್ನು ಎಳೆದು ಹೆಸರಿನಿಂದ ಸೂಚಿಸಿರಿ.

   i. P ಬಿಂದುವನ್ನು ಹೊಂದಿರುವ ರೇಖೆ
   ii. R ಬಿಂದುವಿನ ಮೂಲಕ ಹಾದುಹೋಗುವ ರೇಖೆ.



Downloaded from https:// www.studiestoday.com

Downloaded from https:// www.studiestoday.com

### 4.6 ವಕ್ರರೇಖೆ

ಚಿಕ್ಕಮಕ್ಕಳು ಬಿಡಿಸಿದ ಚಿತ್ರಗಳನ್ನು ಗಮನಿಸಿದ್ದೀರಾ ? ಇಲ್ಲಿ ಕೆಲವು ಉದಾಹರಣೆಗಳಿವೆ.




(i) (ii) (iii) (iv) (v) (vi) (vii)

ಇವುಗಳೆಲ್ಲವೂ ವಕ್ರರೇಖೆಗಳಿಗೆ ಉದಾಹರಣೆಗಳು.

ಚಿತ್ರ (i) ಮತ್ತು (ii) ಚಿತ್ರಗಳನ್ನು ಗಮನಿಸಿ. ಅವುಗಳ ಮಧ್ಯ ಇರುವ ವ್ಯತ್ಯಾಸಗಳೇನು.

ಚಿತ್ರ (ii) ಆವೃತ ವಕ್ರರೇಖೆಎಂದೂ ಚಿತ್ರ (i) ತೆರೆದ ವಕ್ರರೇಖೆ ಎಂದು ಕರೆಯುತ್ತೇವೆ.

ಅದೇ ರೀತಿ ಚಿತ್ರ (iii) ಮತ್ತು (vii) ಗಳನ್ನು ಗಮಸಿದಾಗ ಅವು ಪರಸ್ಪರ ಛೇದಿಸಲ್ಪಟ್ಟ ವಕ್ರಗಳು. ಆದರೆ (i), (ii), (iv), (v) (vi)ಚಿತ್ರಗಳು ಛೇದಿಸಲ್ಪಡದ ವಕ್ರಗಳು. ಯಾವ ವಕ್ರರೇಖೆಗಳು ಪರಸ್ಪರ ಛೇಧಿಸಿಕೊಳ್ಳುವುದಿಲ್ಲವೋ ಅವನ್ನು ಸರಳವಕ್ರರೇಖೆ ಎನ್ನುವರು.

ನಿತ್ಯ ಜೀವನದಲ್ಲಿ ವಕ್ರರೇಖೆ ಎನ್ನುವುದು ಸರಳರೇಖೆಯೆಂದು ಪರಿಗಣಿಸುವುದಿಲ್ಲ. ಆದರೆ ಗಣಿತ ಶಾಸ್ತ್ರದಲ್ಲಿ ಸರಳ ರೇಖೆಯನ್ನೂ ವಕ್ರರೇಖೆ ಎಂದು ಪರಿಗಣಿಸುತ್ತೇವೆ.

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**



1. ಕೆಳಗೆ ಕೊಟ್ಟಿರುವ ಆಂಗ್ಲಮಾಲೆಯ ಅಕ್ಷರಗಳಲ್ಲಿ ಯಾವುವು ಆವೃತ ವಕ್ರ ಮತ್ತು ಯಾವುವು ತೆರೆದ ವಕ್ರಗಳನ್ನು ಗುರ್ತಿಸಿ ಬರೆಯಿರಿ.



2. ಮೇಲೆ ಕೊಟ್ಟಿರುವ ಆಂಗ್ಲ ಅಕ್ಷರಗಳಲ್ಲಿ ಯಾವುದು ಸರಳ ವಕ್ರ?



**ಪ್ರಯತ್ನಿಸಿರಿ :**

ಕೆಳಗಿನವುಗಳಲ್ಲಿ ಯಾವುವು ಸರಳವಕ್ರಗಳು? ಯಾವುವು ಅಲ್ಲ?



**ಬಹುಭುಜಾಕೃತಿಗಳು**

ಕೆಳಗಿನ ಚಿತ್ರಗಳನ್ನು ಗಮನಿಸಿರಿ.



(i) (ii) (iii) (iv) (v)

SCERT TELANGANA



Downloaded from https:// www.studiestoday.com

Downloaded from https:// www.studiestoday.com

ನೀವು ಏನನ್ನು ಗಮನಿಸಿದ್ದೀರಿ ? ಅವುಆವೃತ ಚಿತ್ರಗಳು, ಎಲ್ಲಾ ಚಿತ್ರಗಳನ್ನು ಒಂದಕ್ಕೊಂದು ಹೋಲಿಸಿ ನೋಡಿರಿ. (i), (ii), (iii)ಮತ್ತು (iv)ರಲ್ಲಿನ ಚಿತ್ರಗಳು, ಚಿತ್ರ (v)ರೊಂದಿಗೆ ಭಿನ್ನವಾಗಿವೆ. ಮೊದಲ ನಾಲ್ಕು ಚಿತ್ರಗಳು ಸೀಮಿತವಾದ ರೇಖಾ ಖಂಡಗಳಿಂದ ಉಂಟಾಗಿವೆ. ಈ ಚಿತ್ರಗಳನ್ನು ಬಹುಭುಜಾಕೃತಿಗಳು ಎಂದು ಎನ್ನುವರು.

"ಪರಿಮಿತವಾದ ರೇಖಾ ಖಂಡಗಳಿಂದ ಏರ್ಪಟ್ಟ ಸರಳ ಆವೃತ ಚಿತ್ರಗಳನ್ನು ಬಹುಭುಜಾಕೃತಿಗಳು ಎನ್ನುವರು."

ಯಾವುದಾದರೂ 10 ವಿಭಿನ್ನ ಆಕೃತಿಗಳುಳ್ಳ ಬಹುಭುಜಾಕೃತಿಗಳನ್ನು ಎಳೆಯಿರಿ.




ಒಂದು ಉದ್ಯಾನವನದ ಸೀಮಾರೇಖೆ ಗೋಡೆ ಸಮತಲವನ್ನು ಮೂರು ಭಾಗಗಳಾಗಿ ವಿಭಜಿಸುತ್ತದೆ. ಅವು ಉದ್ಯಾನವನದ ಅಂತರ, ಉದ್ಯಾನವನದ ಮೇರೆ, ಉದ್ಯಾನವದ ಬಾಹ್ಯ ಭಾಗಗಳು.

i. ಆಕೃತಿಯ ಒಳವಲಯ

ii. ಆಕೃತಿಯ ಸೀಮಾರೇಖೆ

iii. ಆಕೃತಿಯ ಹೊರವಲಯ

ಒಂದು ಆಕೃತಿಯ ಒಳವಲಯ ಮತ್ತು ಸೀಮಾರೇಖೆಯನ್ನು ಒಳಗೊಂಡ ಭಾಗವನ್ನು " ಪ್ರದೇಶ (ವಲಯ)" ಎನ್ನುವರು.

## ಅಭ್ಯಾಸ 4.2

1. ಕೆಳಗಿನವುಗಳಲ್ಲಿ ಸರಳ ವಕ್ರರೇಖೆಗಳನ್ನು ಗುರ್ತಿಸಿ



(i) (ii) (iii) (iv) (v)

2. ಕೆಳಗಿನವುಗಳಲ್ಲಿ ಆವೃತ ಮತ್ತು ಅನಾವೃತ ವಕ್ರಗಳನ್ನು ಬರೆಯಿರಿ.



(i) (ii) (iii) (iv) (v)

3. ಕೆಳಗಿನ ಚಿತ್ರದಲ್ಲಿ ಒಳ, ಹೊರ, ಸೀಮಾರೇಖೆ ಮೇಲಿರುವ ಬಿಂದುಗಳನ್ನು ಗುರ್ತಿಸಿ.




4. ಕೆಳಗಿನವುಗಳನ್ನು ಉಪಯೋಗಿಸಿ ಮೂರು ಆವೃತ ಚಿತ್ರಗಳನ್ನು ಬರೆಯಿರಿ.

i. ಸರಳರೇಖೆಗಳನ್ನುಪಯೋಗಿಸಿ ii. ರೇಖೆಗಳು ಮತ್ತು ವ್ರಕರೇಖೆಗಳು ಎರಡನ್ನೂ ಉಪಯೋಗಿಸಿ.



SCERT TELANGANA
Downloaded from https:// www.studiestoday.com

Downloaded from https:// www.studiestoday.com

## 4.7 ಕೋನ (ANGLE)

ಈ ಚಿತ್ರಗಳನ್ನು ಪರಿಶೀಲಿಸಿ.




ಚಿತ್ರ - 1



ಚಿತ್ರ - 2



ಚಿತ್ರ - 3

ಮೂಲೆಗಳಿರುವ ಪ್ರತಿ ಜಾಗದಲ್ಲಿ ಕೋನಗಳು ಉಂಟಾಗುತ್ತವೆ. ಒಂದನೇ ಚಿತ್ರದಲ್ಲಿ $\overrightarrow{OA}$ , $\overrightarrow{OB}$ ಕಿರಣಗಳನ್ನು ಊಹಿಸಿಕೊಳ್ಳಿ. ಈ ಎರಡು ಕಿರಣಗಳು ಒಂದು ಸಾಮಾನ್ಯ ಬಿಂದು 'O' ನ್ನು ಹೊಂದಿವೆ. ಆಗ ಈ ಎರಡು ಕಿರಣಗಳು ಒಂದು ಕೋನವನ್ನು ಉಂಟುಮಾಡುತ್ತವೆ ಎನ್ನುವರು. ಮೂರನೇ ಚಿತ್ರದಲ್ಲಿ ಬಾಗಿಲುಗಳನ್ನು ಗಮನಿಸಿ. ಬಾಗಿಲನು ಪೂರ್ತಿ ಮುಚ್ಚಿದಾಗ ಅದು ಚೌಕಟ್ಟಿನೊಂದಿಗೆ ಯಾವುದೇ ಕೋನವನ್ನುಂಟು ಮಾಡುವುದಿಲ್ಲ. ಬಾಗಿಲನ್ನು ತೆಗೆದಾಗ ಅದು ಚೌಕಟ್ಟಿನೊಂದಿಗೆ ಕೋನವನ್ನು ಉಂಟುಮಾಡುವ ದನ್ನು ಗಮನಿಸುತ್ತೇವೆ. ಬಾಗಿಲಿನ ಸ್ಥಾನ ಬದಲಾದಂತೆಲ್ಲಾ ಕೋನವು ಬದಲಾಗುವದನ್ನು ನಾವು ಗಮನಿಸಬಹುದು.




ಕೋನವನ್ನುಂಟುಮಾಡುವ ಎರಡುಕಿರಣಗಳನ್ನು ಆ ಕೋನದ ಬಾಹುಗಳು ಎನ್ನುವರು.




ಪಕ್ಕದ ಚಿತ್ರದಲ್ಲಿ $\overrightarrow{OA}$ ಮತ್ತು $\overrightarrow{OB}$ ಕಿರಣಗಳನ್ನು ಕೋನದ ಬಾಹುಗಳು ಎಂದು O ನ್ನು ಶೃಂಗಬಿಂದು ಎನ್ನುವರು. 'O' ಹತ್ತಿರ ಕೊನ ಉಂಟಾಗಿದೆ. ಆದ್ದರಿಂದ ಅದನ್ನು $\angle AOB$ ಅಥವಾ $\angle BOA$ ( $A\hat{O}B$ ಅಥವಾ $B\hat{O}A$ )ನಿಂದ ಸೂಚಿಸುವರು. ಅಥವಾ $\angle O$ ಎನ್ನುತ್ತಾರೆ.

ಪಕ್ಕದ ಚಿತ್ರದಲ್ಲಿ X ಬಿಂದು ಕೋನದ ಒಳವಲಯದಲ್ಲಿ, Z ಬಿಂದು ಕೋನದ ಹೊರವಲಯದಲ್ಲಿ ಮತ್ತು S ಬಿಂದು $\angle PQR$ ಕೋನದ ಬಾಹುಗಳ(ಸೀಮೆಯ) ಮೇಲಿವೆ ಎಂದು ಹೇಳುತ್ತೇವೆ.




ಆದ್ದರಿಂದ ಕೋನದಲ್ಲಿ ಮೂರು ಭಾಗಗಳು ಇವೆ ಎಂದು ಹೇಳಬಹುದು. ಅವು ಕೋನದ ಒಳವಲಯ, ಕೋನದ ಬಾಹುಗಳಮೇಲೆ, ಕೋನದ ಹೊರವಲಯ.

Y ಬಿಂದುವನ್ನು ಗಮನಿಸಿರಿ. ಈ ಬಿಂದು ಎಲ್ಲಿದೆ ?

$\overrightarrow{QP}$ ಮತ್ತು $\overrightarrow{QR}$ ಕಿರಣಗಳನ್ನು ವೃದ್ಧಿಸಿ ನೋಡಿದರೆ Y ಬಿಂದು ಕೋನದ ಒಳವಲಯದಲ್ಲಿ ಬರುತ್ತದೆಯೇ? ಅದೇ ವಿಧವಾಗಿ ಕೋನ ಬಾಹುಗಳನ್ನು ವೃದ್ಧಿಸಿದರೆ M ಬಿಂದು ಒಳವಲಯದಲ್ಲಿ ಬರುತ್ತದೆಯೇ?

### ಅಭ್ಯಾಸ 4.3

1. ಪಕ್ಕದ ಚಿತ್ರವನ್ನು ನೋಡಿ ಕೋನಗಳು, ಶೀರ್ಷಗಳು ಮತ್ತು ಭುಜಗಳನ್ನು ಪಟ್ಟಿಯಲ್ಲಿ ತುಂಬಿರಿ.

| | i | ii | iii | iv | v |
|---|---|---|---|---|---|
| ಕೋನ | $\angle AOB$ | | | | |
| ಶೃಂಗ | O | | | | |
| ಬಾಹುಗಳು | $\overrightarrow{OA}$ , $\overrightarrow{OB}$ | | | | |






SCERT TELANGANA

Downloaded from https:// www.studiestoday.com

Downloaded from https:// www.studiestoday.com

2. ಚಿತ್ರದಲ್ಲಿನ ಕೋನಗಳನ್ನು ಹೆಸರುಗಳಿಂದ ಸೂಚಿಸಿರಿ.




3. ಚಿತ್ರದಲ್ಲಿ ಕೆಳಗಿನ ನಿಬಂಧನೆಗಳನ್ನು ತೃಪ್ತಿಪಡಿಸುವ ಬಿಂದುಗಳನ್ನು ಗುರ್ತಿಸಿ.
   (i) ∠DOF ಕೋನದ ಅಂತರದಲ್ಲಿನ A ಮತ್ತು B ಬಿಂದುಗಳು.
   (ii) ∠EOF ಕೋನದ ಬಾಹ್ಯದಲ್ಲಿ A ಮತ್ತು C ಬಿಂದುಗಳು
   (iii) ∠DOE ಕೋನದ ಮೇಲಿನ ಬಿಂದು B.




4. ಕೆಳಗಿನ ಚಿತ್ರಗಳಲ್ಲಿ ಕೋನ ಏರ್ಪಟ್ಟ ಚಿತ್ರಗಳನ್ನು ಗುರುತಿಸಿ ಬರೆಯಿರಿ.



## 4.8 ತ್ರಿಭುಜ

**ಇವು ಮಾಡಿರಿ**



ಕೆಲವು ಬೆಂಕಿ ಕಡ್ಡಿಗಳನ್ನು ತೆಗೆದುಕೊಂಡು ಅವುಗಳ ಸಹಾಯದಿಂದ ಕೆಳಗೆತೋರಿಸಿ ದಂತೆ ಆವೃತ ಚಿತ್ರಗಳನ್ನು ತಯಾರುಮಾಡಿರಿ.



ಒಂದು ಆವೃತ ಚಿತ್ರವನ್ನು ತಯಾರಿಸಲು ಕನಿಷ್ಠ ಎಷ್ಟು ಬೆಂಕಿ ಕಡ್ಡಿಗಳು ಬೇಕು ?ಕನಿಷ್ಠ ಮೂರು ಆದರೆ ಎರಡು ಬೆಂಕಿಕಡ್ಡಿಗಳಿಂದ ಆವೃತ ಚಿತ್ರವನ್ನು ತಯಾರಿಸಲಾರೆವಾ ?

**" ಮೂರು ರೇಖಾ ಖಂಡಗಳಿಂದ ಉಂಟಾಗುವ ಆವೃತ ಆಕೃತಿಯನ್ನು ತ್ರಿಭುಜ ಎನ್ನುವರು" ಮತ್ತು ಆ ರೇಖಾಖಂಡಗಳನ್ನು ಬಾಹುಗಳು ಎನ್ನುತ್ತಾರೆ.**

$\overline{AB}$, $\overline{BC}$ ಮತ್ತು $\overline{CA}$. ರೇಖಾ ಖಂಡಗಳಿಂದ ಉಂಟಾದ ಈ ತ್ರಿಭುಜವನ್ನು ಗಮನಿಸಿ. ಇಲ್ಲಿ A, B ಮತ್ತು C ಗಳನ್ನು ತ್ರಿಭುಜ ABC ಯ ಶೃಂಗಬಿಂದುಗಳು ಎನ್ನುವರು. ABC ಶೃಂಗಗಳ ಹತ್ತಿರ ∠BAC, ∠ABC, ∠ACB ಕೋನಗಳು ಉಂಟಾಗಿವೆ. ತ್ರಿಭುಜ ABC ಯನ್ನು ΔABC ಎಂದು ಸಾಧಾರಣವಾಗಿ ಸೂಚಿಸುತ್ತೇವೆ.







ಬಹುಭುಜಾಕೃತಿಯಾದ ತ್ರಿಭುಜದಲ್ಲಿ ಕೂಡ ಒಳ(ಅಂತರ) ವಲಯ, ಹೊರ(ಬಾಹ್ಯ) ವಲಯಗಳು ಇರುತ್ತವೆ. ಪಕ್ಕದ ತ್ರಿಭುಜದಲ್ಲಿನ ಬಿಂದುಗಳನ್ನು ಪರಿಶೀಲಿಸಿರಿ, O ಎಂಬ ಬಿಂದು ತ್ರಿಭುಜದ ಅಂತರದಲ್ಲಿದೆ.ತ್ರಿಭುಜದ ಅಂತರದಲ್ಲಿರುವ ಉಳಿದ ಬಿಂದುಗಳು ಯಾವುವು? P ತ್ರಿಭುಜದ ಮೇಲೆ ಇದೆ. ತ್ರಿಭುಜದ ಮೇಲೆ ಅಂದರೆ ಅದರ ಸೀಮಾರೇಖೆಯ ಮೇಲೆ ಯಾವ ಯಾವ ಬಿಂದುಗಳಿವೆ?

SCERT TELANGANA



Downloaded from https:// www.studiestoday.com

Downloaded from https:// www.studiestoday.com

T ಎಂಬ ಬಿಂದು ತ್ರಿಭುಜದ ಬಾಹ್ಯದಲ್ಲಿದೆ. ಇದೇ ರೀತಿ ತ್ರಿಭುಜದ ಬಾಹ್ಯದಲ್ಲಿರುವ ಉಳಿದ ಬಿಂದುಗಳಾವುವು?

ಆದ್ದರಿಂದ ಒಂದು ಸಮತಲದಲ್ಲಿನ ತ್ರಿಭುಜವು ಒಂದು ಸಮತಲವನ್ನು ಮೂರು ಭಾಗಗಳಾಗಿ ವಿಭಜಿಸುತ್ತದೆ. ಅವುಗಳೆಂದರೆ.

(i) ತ್ರಿಭುಜದ ಒಳವಲಯ(ಅಂತರ )(ii) ತ್ರಿಭುಜದ ಸೀಮಾ ರೇಖೆ (iii) ತ್ರಿಭುಜದ ಹೊರುವಲಯ(ಬಾಹ್ಯ)

ತ್ರಿಭುಜದ ಸೀಮಾ ರೇಖೆ ಮತ್ತು ಒಳವಲಯಗಳನ್ನು ಸೇರಿಸಿ ತ್ರಿಭುಜದ ಪ್ರದೇಶ ಎನ್ನುವರು.

**ಇವು ಮಾಡಿರಿ :**



ಬೇರೆ ಬೇರೆ ಅಳತೆಗಳುಳ್ಳ ಕೆಲವು ಸ್ಟ್ರಾಗಳನ್ನು ತೆಗೆದುಕೊಳ್ಳಿರಿ. ಮೂರು ಸ್ಟ್ರಾಗಳ ಮಧ್ಯೆ ದಾರವನ್ನು ಸೇರಿಸಿ, ಬಗೆ ಬಗೆಯ ತ್ರಿಭುಜಗಳನ್ನು ತಯಾರಿಸಿ. ಆ ತ್ರಿಭುಜಗಳ ಚಿತ್ರಗಳನ್ನು ನೋಟ್ ಪುಸ್ತಕದಲ್ಲಿ ಎಳೆಯಿರಿ

**4.9 ಚತುರ್ಭುಜ**

ಪಕ್ಕದಲ್ಲಿರುವ ಆವೃತ ಚಿತ್ರಗಳನ್ನು ಪರಿಶೀಲಿಸಿ (i) ಮೂರು ರೇಖಾ ಖಂಡಗಳಿಂದ ಉಂಟಾದ ಆವೃತ ಚಿತ್ರವನ್ನು ತ್ರಿಭುಜ ಎನ್ನುವರು, ಎಂಬುದನ್ನು ತಿಳಿದುಕೊಂಡಿದ್ದೇವೆ. (ii) ನಾಲ್ಕು ರೇಖಾ ಖಂಡಗಳಿಂದ ಉಂಟಾದ ಆವೃತ ಬಹುಭುಜಾಕೃತಿಯನ್ನು ಚತುರ್ಭುಜ ಎನ್ನುವರು ಚಿತ್ರ (i) ತ್ರಿಭುಜಕ್ಕೆ, ಚಿತ್ರ (ii)ಚತುರ್ಭುಜಕ್ಕೆ ಉದಾಹರಣೆಗಳು.







ಇಲ್ಲಿ ABCD ಒಂದು ಚತುರ್ಭುಜ ಮತ್ತು $\overline{AB}$, $\overline{BC}$, $\overline{CD}$ $\overline{AD}$ ಗಳನ್ನು ಚತುರ್ಭುಜದ ನಾಲ್ಕು ಬಾಹುಗಳು ಎನ್ನುವರು. $\angle A$, $\angle B$, $\angle C$ ಮತ್ತು $\angle D$ ಗಳು ಚತುರ್ಭುಜದ ನಾಲ್ಕು ಕೋನಗಳು. ಪರಸ್ಪರ ಅಭಿಮುಖ ಶೃಂಗಗಳಾದ A, C ಮತ್ತು B, D ಗಳನ್ನು ಸೇರಿಸುವ ರೇಖಾಖಂಡಗಳನ್ನು ಕರ್ಣಗಳು ಎನ್ನುವರು.

ಪಕ್ಕದ ಚಿತ್ರದಲ್ಲಿನ ಚತುರ್ಭುಜದಲ್ಲಿ ಛಾಯೆಗೊಳಿಸಿದ ಪ್ರದೇಶವನ್ನು ಚತುರ್ಭುಜದ ಒಳವಲಯ, ಛಾಯೆಗೊಳಿಸದ ಪ್ರದೇಶವನ್ನು ಚತುರ್ಭುಜದ ಹೊರವಲಯ ಎನ್ನುವರು.




$\overline{AB}$ ಬಾಹುವಿನ ಅಭಿಮುಖ ಬಾಹು $\overline{DC}$ .

$\overline{BC}$ , $\overline{CD}$ $\overline{AD}$ ಬಾಹುಗಳ ಅಭಿಮುಖ ಬಾಹುಗಳಾವುವು ?

$\overline{AB}$ ಬಾಹುವಿನ ಪಾರ್ಶ್ವ(ಅನುಕ್ರಮ) ಬಾಹುಗಳು $\overline{BC}$ ಮತ್ತು $\overline{AD}$.

$\overline{BC}$ , $\overline{CD}$ ಮತ್ತು $\overline{AD}$ ಬಾಹುಗಳ ಪಾರ್ಶ್ವ ಬಾಹುಗಳಾವುವು ?

$\angle A$ ಯ ಅಭಿಮುಖ ಕೋನ $\angle C$ ಇದೇ ರೀತಿ ಉಳಿದ ಅಭಿಮುಖ ಕೋನಗಳ ಜೊತೆಗಳು ಯಾವುವು ?

$\angle A$ ಯ ಪಾರ್ಶ್ವ ಕೋನಗಳು $\angle B$ ಮತ್ತು $\angle D$. ಇದೇ ವಿಧವಾಗಿ ಇತರೆ ಪಾರ್ಶ್ವಕೋನಗಳ ಜೊತೆಗಳು ಯಾವುವು?

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**

A, B, C ಮತ್ತು D ಗಳು ಯಾವುದಾದರೂ ನಾಲ್ಕು ಬಿಂದುಗಳು. A, B, C ಗಳು ಮೂರು ಒಂದೇ ರೇಖೆ ಮೇಲೆ ಇವೆ.. ಈ ನಾಲ್ಕು ರೇಖಾಖಂಡಗಳು $\overline{AB}$ , $\overline{BC}$ , $\overline{CD}$ ಮತ್ತು $\overline{AD}$ ಗಳ ಬಿಂದುಗಳನ್ನು ಸೇರಿಸಿದರೆ ಒಂದು ಚತುರ್ಭುಜ ಉಂಟಾಗುವುದೇ? ಕಾರಣಗಳನ್ನು ತಿಳಿಸಿ.






SCERT TELANGANA

Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ 4.4

1. A, B, C , D ಎಂಬ ನಾಲ್ಕು ಬಿಂದುಗಳಿಂದ ಒಂದು ಚತುರ್ಭುಜವನ್ನು ರಚಿಸಿ,ಹೆಸರಿನಿಂದ ಸೂಚಿಸಿ.
2. PQRS ಒಂದು ಚತುರ್ಭುಜವಾದರೆ




   i. QR ಬಾಹುವಿನ ಅಭಿಮುಖ ಬಾಹು ____________.
   ii. $\angle$Pಯ ಅಭಿಮುಖ ಕೋನ____________.
   iii. PQ ನ ಪಾರ್ಶ್ವ ಬಾಹು ____________.
   iv. $\angle$S ನ ಪಾರ್ಶ್ವ ಕೋನ ____________.
3. ಚಿತ್ರದಲ್ಲಿ ತೋರಿಸಿರುವ ಬಿಂದುಗಳನ್ನು ಕೆಳಗಿನ ವಿಧವಾಗಿ ಗುರ್ತಿಸಿರಿ.




   i. ಚತುರ್ಭುಜದ ಒಳ ವಲಯದಲ್ಲಿನ ಬಿಂದುಗಳು.
   ii. ಚತುರ್ಭುಜದ ಸೀಮಾರೇಖೆಯ ಮೇಲಿನ ಬಿಂದುಗಳು.
   iii. ಚತುರ್ಭುಜದ ಹೊರ ವಲಯದಲ್ಲಿನ ಬಿಂದುಗಳು.

## 4.10 ವೃತ್ತ

ಕೆಳಗಿನ ಚಿತ್ರಗಳನ್ನು ನೋಡಿರಿ.



ಒಂದು ಕಾಗದದಮೇಲೆ ಕೈ ಬಳೆಯಿಂದ ಪೆನ್ಸಿಲನ್ನುಪಯೋಗಿಸಿ ಬಳೆಯ ಒಳ ಸುತ್ತಲೂ ಗೆರೆಯನ್ನು ಎಳೆಯಿರಿ. ನಮಗೆ ಒಂದು ಆಕಾರ ಸಿಗುವುದು. ಈ ಆಕಾರ ವೃತ್ತದ ಭಾವನೆಯನ್ನು ಸೂಚಿಸುತ್ತದೆ. ಈ ರೂಪದಲ್ಲಿರುವ ಆಕಾರವನ್ನು "ವೃತ್ತ" ಎನ್ನುವರು. ಈ ಆಕಾರದಲ್ಲಿರುವ ಮತ್ತೆ ಕೆಲವು ವಸ್ತುಗಳನನು ನೆನಪಿಸಿಕೊಳ್ಳಿ.

**"ಒಂದು ಸಮತಲದಲ್ಲಿ ಯಾವುದಾದರೊಂದು ಬಿಂದುವಿನಿಂದ ಸಮಾನ ದೂರದಲ್ಲಿರುವ ಬಿಂದುಗಳ ಗಣವನ್ನು ವೃತ್ತ ಎನ್ನುವರು."**




ಒಂದು ಸೈಕಲ್ ಚಕ್ರದಲ್ಲಿನ ಕಡ್ಡಿಗಳ ಉದ್ದಗಳನ್ನು ಅಳೆಯಿರಿ. ಎಲ್ಲಾ ಸೈಕಲ್ ಕಡ್ಡಿಗಳ ಉದ್ದಗಳು ಸಮಾನವಾಗಿ ಇವೆ. ಮಧ್ಯದಲ್ಲಿರುವ ಬಿಂದುವನ್ನು "ಕೇಂದ್ರ" ಎಂದು ಮತ್ತು ವಕ್ರದ ಪಥದ ಉದ್ದವನ್ನು **'ವೃತ್ತ ಪರಿಧಿ'** ಎಂದು, ಕೇಂದ್ರದಿಂದ ವೃತ್ತ ಪರಿಧಿಗೆ ಇರುವ ದೂರವನ್ನು **'ತ್ರಿಜ್ಯ'** ಎಂದು ಎನ್ನುವರು.

ವೃತ್ತಪರಿಧಿಯನ್ನು 'C' ಎಂಬ ಅಕ್ಷರದಿಂದ ತ್ರಿಜ್ಯವನ್ನು 'r' ಎಂಬ ಅಕ್ಷರದಿಂದ ಸೂಚಿಸುತ್ತೇವೆ.

ಪಕ್ಕದ ಚಿತ್ರದಲ್ಲಿನ ಕೇಂದ್ರವನ್ನು, ತ್ರಿಜ್ಯಗಳನ್ನು ಪರಿಶೀಲಿಸಿರಿ. ಎಲ್ಲಾ ತ್ರಿಜ್ಯಗಳು ಸಮಾನವಾಗಿವೆಯೇ? ಈ ಚಿತ್ರದಲ್ಲಿ 'O' ನ್ನು ಕೇಂದ್ರ ಎಂದು $\overline{OA}$, $\overline{OB}$ ಮತ್ತು $\overline{OC}$ ಗಳನ್ನು ವೃತ್ತದ ತ್ರಿಜ್ಯಗಳೆಂದು ಕರೆಯುವರು.

**ಇವು ಮಾಡಿರಿ:**



ಕಾಗದದ ಮೇಲೆ ಒಂದು ವೃತ್ತವನ್ನು ಎಳೆದು ಅದರ ಅಂಚಿನೊಂದಿಗೆ ಕತ್ತರಿಸಿರಿ. ಚಿತ್ರದಲ್ಲಿ ತೋರಿಸಿದಂತೆ ಅರ್ಧಕ್ಕೆ ಮಡಿಚಿ ಮತ್ತೆ $\frac{1}{4}$ ಭಾಗಕ್ಕೆ ಮಡಿಚಿರಿ.



ಕಾಗದವನ್ನು ಬಿಚ್ಚಿರಿ. ವೃತ್ತದಲ್ಲಿನ ಮಧ್ಯಬಿಂದುವನ್ನು ಗುರ್ತಿಸಿ. ಅದನ್ನು 'O' ನಿಂದ ಸೂಚಿಸಿ. ಈ ಬಿಂದುವನ್ನು ವೃತ್ತದ ಕೇಂದ್ರ ಎನ್ನುವರು. ಇದೇ ರೀತಿ ವೃತದಲ್ಲಿನ ತ್ರಿಜ್ಯಗಳನ್ನು ಗುರ್ತಿಸಿರಿ. ಒಂದು ವೃತ್ತದಲ್ಲಿ ಎಷ್ಟು ತ್ರಿಜ್ಯಗಳನ್ನು ಎಳೆಯಬಲ್ಲೆವು ?



SCERT TELANGANA

Downloaded from https:// www.studiestoday.com

Downloaded from https:// www.studiestoday.com




$\overline{AC}$ ಎಂಬುದು ವೃತ್ತಪರಧಿ ಮೇಲೆ ಇರುವ ಎರಡು ಬಿಂದುಗಳನ್ನು ಸೇರಿಸುವ ರೇಖಾ ಖಂಡ.

ಪಕ್ಕದ ಚಿತ್ರದಲ್ಲಿ. ಪರಧಿ ಮೇಲೆ ಇರುವ ಎರಡು ಬಿಂದುಗಳನ್ನು ಸೇರಿಸುವ ಇನ್ನೊಂದು ರೇಖಾಖಂಡವನ್ನು ಗುರ್ತಿಸಿ. $\overline{CD}$ ಸಹ ಇಂತಹುದೇ ಒಂದು ರೇಖಾ ಖಂಡ. ಒಂದು ವೃತ ಪರಿಧಿ ಮೇಲೆ ಇರುವ ಎರಡು ಬಿಂದುಗಳನ್ನು ಸೇರಿಸುವ ರೇಖಾ ಖಂಡವನ್ನು **"ಜ್ಯಾ"** ಎನ್ನುವರು. ಆದ್ದರಿಂದ ಈ ವೃತ್ತದಲ್ಲಿ $\overline{AC}$ ಮತ್ತು $\overline{CD}$ ಗಳು ಜ್ಯಾಗಳಾಗುತ್ತವೆ. ಆದರೆ $\overline{AC}$ ಜ್ಯಾಗೆ ಒಂದು ಪ್ರತ್ಯೇಕತೆ ಇದೆ. ಈ ಜ್ಯಾ ವೃತ ಕೇಂದ್ರ 'O' ಮುಖಾಂತರ ಹಾದು ಹೋಗುತ್ತದೆ. ವೃತ್ತಕೇಂದ್ರದ ಮೂಲಕ ಹಾದು ಹೋಗುವ ಜ್ಯಾವನ್ನು **'ವ್ಯಾಸ'** ಎನ್ನುವರು.

## ಇವು ಮಾಡಿರಿ



ಒಂದು ವೃತ್ತವನ್ನು ಎಳೆಯಿರಿ. ಅದರಲ್ಲಿ ಕನಿಷ್ಠ 5 ಜ್ಯಾಗಳನ್ನು ಎಳೆಯಿರಿ. ಇವುಗಳಲ್ಲಿ ಒಂದಾದರೂ ವೃತ್ತ ಕೇಂದ್ರದ ಮಾಲಕ ಹಾದು ಹೋಗುವಂತೆ ಎಳೆಯಿರಿ. ಜ್ಯಾಗಳನ್ನು ಹೆಸರುಗಳಿಂದ ಸೂಚಿಸಿರಿ ಮತ್ತು ಪಟ್ಟಿಯನ್ನು ಪೂರ್ಣಗೊಳಿಸಿ.

| ಕ್ರಮ ಸಂ | ಜ್ಯಾ | ಉದ್ದ | ಕೇಂದ್ರದ ಮೂಲಕ ಹೋಗುತ್ತದೆ. |
|---|---|---|---|
| 1. | | | |
| 2. | | | |
| 3. | | | |
| 4. | | | |
| 5. | | | |

ನೀವು ಏನನ್ನು ಗಮನಿಸಿದಿರಿ?

ವೃತ್ತ ಕೇಂದ್ರದ ಮೂಲಕ ಹಾದು ಹೋಗುವ ಜ್ಯಾ ಅಂದರೆ ವ್ಯಾಸ ಉಳಿದ ಎಲ್ಲ ಜ್ಯಾಗಳಿಗಿಂತ ಹೆಚ್ಚು ಉದ್ದ ಇರುವುದನ್ನು ಗಮನಿಸುತ್ತೇವೆ.

ಮತ್ತೆ ವೃತ್ತವನ್ನು ಗಮನಿಸೋಣ. $\overline{AC}$ ಎಂಬ ರೇಖಾಖಂಡದ ಮಧ್ಯಬಿಂದು O.

ಆದರೆ ಇದರಲ್ಲಿ $\overline{OA}$ ಮತ್ತು $\overline{OC}$ ಗಳು ಎರಡೂ ವೃತ್ತದ ತ್ರಿಜ್ಯಗಳೆಂದು ನಮಗೆ ತಿಳಿದಿದೆ.

ಆದ್ದರಿಂದ $\overline{OA}$ ಉದ್ದ + $\overline{OC}$ ಉದ್ದ = $\overline{AC}$ ಉದ್ದ ಎಂದು ನಾವು ಹೇಳಬಹುದು.

ಒಂದು ವೃತ್ತದ ವ್ಯಾಸ ಆ ವೃತದ ತ್ರಿಜ್ಯಕ್ಕೆ ಎರಡರಷ್ಟಿರುತ್ತದೆ.

## ಆಲೋಚಿಸಿ ಮತ್ತು ಚರ್ಚಿಸಿ.



ಒಂದು ವೃತ್ತದಲ್ಲಿ ನಾವು ಎಷ್ಟು ವ್ಯಾಸಗಳನ್ನು ಎಳೆಯಬಲ್ಲೆವು ? ಎಲ್ಲಾ ವ್ಯಾಸಗಳು ಸಮಾನವಾದ ಉದ್ದವನ್ನು ಹೊಂದಿರುತ್ತವೆಯಾ? ನಿಮ್ಮ ಶಿಕ್ಷಕರು ಮತ್ತು ಸ್ನೇಹಿತರೊಡನೆ ಚರ್ಚಿಸಿ, ಫಲಿತವನ್ನು ತಿಳಿಸಿರಿ.

ಪಕ್ಕದ ಚಿತ್ರವನ್ನು ಗಮನಿಸಿ. ಒಂದು ವೃತ್ತ ಪರಿಧಿ ಮೇಲೆ ಇರುವ ಎರಡು ಬಿಂದುಗಳು C ಮತ್ತು D ಗಳ ಮಧ್ಯ ಇರುವ ವೃತ್ತದ ಭಾಗವನ್ನು 'ಕಂಸ' ಎನ್ನುವರು. ಈ ಕಂಸವನ್ನು $\overset{\frown}{CD}$ ನಿಂದ ಸೂಚಿಸುತ್ತೇವೆ.




ವೃತ್ತದ ಮೇಲೆ ಮತ್ತಷ್ಟು ಕಂಸರೇಖೆಗಳನ್ನು ಎಳೆದು ಹೆಸರಿಸಿ.




ವೃತ್ತವು ಒಂದು ಆವೃತ ಚಿತ್ರವಾದ್ದರಿಂದ ಸಮತಲವನ್ನು ತನ್ನ ಸೀಮಾರೇಖೆಯೊಂದಿಗೆ(ಪರಿಧಿ) ಸೇರಿ ವೃತ್ತದ ಒಳವಲಯ ಮತ್ತು



Downloaded from https:// www.studiestoday.com

Downloaded from https:// www.studiestoday.com

ವೃತ್ತದ ಹೊರ ವಲಯವಾಗಿ ವಿಭಜಿಸುತ್ತದೆ. ವೃತ್ತದಿಂದ ಕೂಡಿದ ವೃತ್ತದ ಒಳವಲಯವನ್ನು ವೃತ್ತಾಕಾರ ಪ್ರದೇಶ ಎನ್ನುವರು.

**ವೃತ್ತದ ಇತರ ಭಾಗಗಳು :**

ಒಂದು ಕಂಸ ಹಾಗು ಎರಡು ತ್ರಿಜ್ಯಗಳಿಂದ ಆವೃತವಾದ ಪ್ರದೇಶವನ್ನು ತ್ರಿಜ್ಯಾಂತರಖಂಡ*(Sector)* ಎನ್ನುವರು.

ಒಂದು ಜ್ಯಾ ಮತ್ತು ಕಂಸದಿಂದ ಆವೃತವಾದ ವೃತ್ತ ಪ್ರದೇಶವನ್ನು ವೃತ್ತ ಖಂಡ ಎನ್ನುವರು. ವೃತ್ತದ ಜ್ಯಾ ವೃತ್ತವನ್ನು ಎರಡು ಖಂಡಗಳಾಗಿ ವಿಭಜಿಸುತ್ತದೆ.

ಒಂದು ವ್ಯಾಸ ಮತ್ತು ವ್ಯಾಸದಿಂದಾದ ಕಂಸಗಳಿಂದ ಆವೃತವಾದ ಪ್ರದೇಶವನ್ನು ಅರ್ಧವೃತ್ತ ಖಂಡ ಎನ್ನುವರು.










## ಅಭ್ಯಾಸ – 4.5

1. ಒಂದು ವೃತ್ತವನ್ನು ಎಳೆದು ಅದರಲ್ಲಿ ಕೇಂದ್ರ, ತ್ರಿಜ್ಯ, ವ್ಯಾಸ ಮತ್ತು ಕಂಸಗಳನ್ನು ಗುರ್ತಿಸಿರಿ.

2. ಒಂದು ವೃತ್ತದ ಪ್ರದೇಶವನ್ನು ಬಣ್ಣಗಳಿಂದ ಛಾಯೆಗೊಳಿಸಿ.
   i. ತ್ರಿಜ್ಯಾಂತರಖಂಡವನ್ನು ಕೆಂಪು ಬಣ್ಣದಿಂದ
   ii. ಲಘು ವೃತ್ತಖಂಡವನ್ನು ಹಳದಿ ಬಣ್ಣದಿಂದ




3. "ಸರಿ" ಅಥವಾ "ತಪ್ಪು" ಗಳನ್ನು ಗುರ್ತಿಸಿ
   i. ಒಂದು ವೃತ್ತದಲ್ಲಿ ಒಂದು ಕೇಂದ್ರ ಬಿಂದುವನ್ನು ಗುರ್ತಿಸುತ್ತೇವೆ. (     )
   ii. ವೃತ್ತದ ವ್ಯಾಸ, ತ್ರಿಜ್ಯಕ್ಕೆ ಎರಡರಷ್ಟು (     )
   iii. ಕಂಸವೆಂಬುದು ವೃತ್ತ ಪರಧಿಯಲ್ಲಿನ ಒಂದು ಭಾಗ (     )
   iv. ಎಲ್ಲಾ ಜ್ಯಾಗಳು ಒಂದೇ ಅಳತೆಯನ್ನು ಹೊಂದಿರುತ್ತದೆ. (     )
   v. ತ್ರಿಜ್ಯಗಳೆಲ್ಲವೂ ಸಮನಾದ ಉದ್ದವನ್ನು ಹೊಂದಿರುವುದಿಲ್ಲ (     )

4. ಒಂದು ವೃತ್ತಕಾರದ ಕಾಗದವನ್ನು ತೆಗೆದುಕೊಳ್ಳಿ. ಅದನ್ನು ಎರಡು ಸಮಾನ ಭಾಗಗಳಾಗಿ ಮಡಚಿ ಮತ್ತೆ ಕಾಗದವನ್ನು ಬಿಚ್ಚಿರಿ. ನಿಮಗೆ ವೃತ್ತದ ವ್ಯಾಸ ಕಾಣಿಸುತ್ತಿದೆಯಾ? ಇದೇ ಚಟುವಟಿಕೆಯನ್ನು ಬೇರೆ ಬೇರೆ ಬಗೆಯಲ್ಲಿ ವೃತ್ತವನ್ನು ಅರ್ಧಕ್ಕೆ ಮಡಚುವುದನ್ನು ಮಾಡಿರಿ. ಎಷ್ಟು ವ್ಯಾಸಗಳನ್ನು ಗಮನಿಸಿದ್ದೀರಿ?

## ನೆನಪಿನಲ್ಲಿಡಬೇಕಾದ ಅಂಶಗಳು

1. ಬಿಂದು ಒಂದು ಸ್ಥಾನವನ್ನು ಸೂಚಿಸುತ್ತದೆ. ಸಾಧಾರಣವಾಗಿ ಬಿಂದುವನ್ನು ಆಂಗ್ಲಬಾಷೆಯ ದೊಡ್ಡ ಅಕ್ಷರದಿಂದ ಸೂಚಿಸುತ್ತೇದೆ.

2. ಎರಡು ಬಿಂದುಗಳನ್ನು ಸೇರಿಸುವುದರಿಂದ ರೇಖಾಖಂಡ ಉಂಟಾಗುತ್ತದೆ. ಇದು ಒಂದು ನಿರ್ದಿಷ್ಟ ಉದ್ದವನ್ನು ಹೊಂದಿರುತ್ತದೆ.



Downloaded from https:// www.studiestoday.com

Downloaded from https:// www.studiestoday.com

3. ಒಂದು ರೇಖಾ ಖಂಡದ ಅಂತ್ಯಬಿಂದುಗಳನ್ನು ಅನಂತವಾಗಿ ವೃದ್ಧಿಸುವದರಿಂದ ಸರಳರೇಖೆ ಉಂಟಾಗುತ್ತದೆ. ಇದನ್ನು ಸರಳರೇಖೆ ಎಂದು ಸಹ ಕರೆಯುವರು.

4. ಒಂದು ಬಿಂದುವಿನಿಂದ ಪ್ರಾರಂಭವಾಗಿ ಒಂದು ದಿಶೆಯಲ್ಲಿ ಹೋಗುವ ಸರಳ ರೇಖೆಯಲ್ಲಿನ ಭಾಗವನ್ನು ಕಿರಣ ಎನ್ನುವರು.

5. ಪೆನ್ಸಿಲ್‌ನ ಕೊನೆ ಎತ್ತದಂತೆ ಎಳೆದ ಯಾವುದೇ ಚಿತ್ರವನ್ನು ಸಾಧಾರಣವಾಗಿ ವಕ್ರ ಎಂದು ಕರೆಯುವರು. ಇದೇ ರೀತಿ ಸರಳರೇಖೆ ಕೂಡ ಒಂದು ವಕ್ರವೇ .

6. ಒಂದು ವಕ್ರವು ಅದನ್ನದೇ ದಾಟದಿದ್ದರೆ ಅದು ಸಾಧಾರಣ ವಕ್ರ.

7. ವಕ್ರಗಳಲ್ಲಿ ಆವೃತ ( ಸಂವೃತ) ಮತ್ತು ಅನಾವೃತ ( ವಿವೃತ) ಎಂದು ಎರಡು ಬಗೆ.

8. ಒಂದು ಸಾಮಾನ್ಯ ಬಿಂದುವಿನಿಂದ ಪ್ರಾರಂಭವಾದ ಎರಡು ವಿಭಿನ್ನ ಕಿರಣಗಳು ಕೋನವನ್ನುಂಟು ಮಾಡುತ್ತದೆ. ಸಾಮಾನ್ಯ ಬಿಂದುವನ್ನು ಶೃಂಗ ಎನ್ನುವರು. ಎರಡು ಕಿರಣಗಳನ್ನು ಬಾಹುಗಳು ಎನ್ನುವರು.

9. ಪ್ರತಿ ಕೋನವು ಸಮತಲವನ್ನು ಒಳವಲಯ, ಸೀಮೆ ( ಸರಿಹದ್ದು ) ಮತ್ತು ಹೊರ ವಲಯ ಎಂಬ ಮೂರು ಭಾಗಗಳಾಗಿ ವಿಭಜಿಸುತ್ತದೆ..

10. ಮೂರು ರೇಖಾ ಖಂಡಗಳಿಂದ ಉಂಟಾದ ಆವೃತ ಚಿತ್ರವನ್ನು ತ್ರಿಭುಜ ಎನ್ನುವರು.

11. ತ್ರಿಭುಜಕ್ಕೆ ಮೂರು ಬಾಹುಗಳು, ಮೂರು ಶೃಂಗಗಳು, ಮೂರು ಕೋನಗಳಿರುತ್ತವೆ.

12. ಸೀಮಾರೇಖೆಗಳಿಂದ ಕೂಡಿದ ತ್ರಿಭುಜ ಮತ್ತು ತ್ರಿಭುಜದ ಒಳವಲಯವನ್ನು ತ್ರಿಭುಜದ ಪ್ರದೇಶ ಎನ್ನುವರು.

13. ಚತುರ್ಭುಜವು ನಾಲ್ಕು ರೇಖಾ ಖಂಡಗಳಿಂದ ಉಂಟಾದ ಆವೃತ ಆಕೃತಿ.

14. ಒಂದು ಸ್ಥಿರ ಬಿಂದುವಿಗೆ ಸಮದೂರದಲ್ಲಿರುವ ಎಲ್ಲಾ ಬಿಂದುಗಳ ಗಣವೇ ವಕ್ರವನ್ನು ವೃತ್ತ ಎನ್ನುವದು.

15. ವೃತ್ತವನ್ನು ಉಂಟುಮಾಡುವ ಅತ್ಯಂತ ಉದ್ದವಾದ ಕಂಸವನ್ನು ಪರಿಧಿ ಎನ್ನುವರು. ವೃತ್ತ ಪರಧಿ ಮೇಲಿನ ಸ್ವಲ್ಪ ಭಾಗವನ್ನು ಕಂಸ ಎನ್ನುವರು.

16. ವೃತ್ತದ ಮೇಲಿನ ಯಾವುದಾದರು ಎರಡು ಬಿಂದುಗಳನ್ನು ಸೇರಿಸುವ ಉಂಟಾದ ರೇಖಾ ಖಂಡವನ್ನು ಜ್ಯಾ ಎನ್ನುವರು. ವ್ಯಾಸ ಕೂಡ ಒಂದು ಜ್ಯಾ ಆಗುವುದು.

17. ವೃತ್ತದ ವ್ಯಾಸವು ತ್ರಿಜ್ಯಕ್ಕೆ ಎರಡರಷ್ಟಿರುತ್ತದೆ.

18. ವೃತ್ತದ ಕಂಸ ಮತ್ತು ಎರಡು ತ್ರಿಜ್ಯಗಳಿಂದ ಆವೃತವಾದ ಪ್ರದೇಶವನ್ನು ತ್ರಿಜ್ಯಾಂತರ ಖಂಡ ಅಥವಾ ಸೆಕ್ಟರ್ ಎನ್ನುವರು.

19. ವೃತ್ತದ ಜ್ಯಾ ಮತ್ತು ಕಂಸದಿಂದ ಆವೃತವಾದ ಪ್ರದೇಶವನ್ನು ವೃತ್ತಖಂಡ ಎನ್ನುವರು.

20. ಅರ್ಧ ವೃತ್ತವು ಒಂದು ವೃತ್ತಖಂಡವಾಗುವುದು ಮತ್ತು ತ್ರಿಜ್ಯಾಂತರವು ಆಗುತ್ತದೆ. ಪ್ರತಿ ವ್ಯಾಸ ವೃತ್ತವನ್ನು ಎರಡು ಅರ್ಧವೃತ್ತಗಳಾಗಿ ವಿಭಜಿಸುತ್ತದೆ.

**ಯೂಕ್ಲಿಡ್ (ಗ್ರೀಸ್) ಕ್ರಿ.ಪೂ. 365**

ಯೂಕ್ಲಿಡ್ ಪ್ರಸಿದ್ಧ ಗ್ರೀಕ್ ತತ್ವಜ್ಞಾನಿ ಹಾಗು ಗಣಿತ ಶಾಸ್ತ್ರಜ್ಞ. ಇವರನ್ನು ರೇಖಾಗಣಿತದ ಪಿತಾಮಹ ಎನ್ನುವರು. ಇವರು ರೇಖಾಗಣಿತದ ಮೂಲ ತತ್ವಗಳು ಎಂಬ ಮೂರು ಸಂಪುಟಗಳ ಕೃತಿಯಲ್ಲಿ ತಾರ್ಕಿಕ ಕ್ರಮದಲ್ಲಿ ರೇಖಾಗಣಿತವನ್ನು ಪರಿಚಯಿಸಿದ್ದಾರೆ. ಇವರ ರೇಖಾಗಣಿತವನ್ನು 'ಯೂಕ್ಲಿಡಿಯನ್ ಜಾಮೆಟ್ರಿ' ಎಂದು ಗುರ್ತಿಸಲಾಗುತ್ತದೆ.



SCERT TELANGANA



Downloaded from https:// www.studiestoday.com

Downloaded from https:// www.studiestoday.com

# ರೇಖೆಗಳು ಮತ್ತು ಕೋನಗಳ ಅಳತೆಗಳು

ಅಧ್ಯಾಯ – 5

## 5.1 ಪರಿಚಯ

'ರೇಖಾ ಗಣಿತದ ಮೂಲ ಪರಿಕಲ್ಪನೆಗಳು' ಎಂಬ ಅಧ್ಯಾಯದಲ್ಲಿ ನಾವು ರೇಖೆಗಳು, ಕೋನಗಳು, ತ್ರಿಭುಜಗಳು, ಚತುರ್ಭುಜಗಳು ಮತ್ತು ವೃತ್ತಗಳು ಎಂಬ ಕಲ್ಪನೆಗಳ ಬಗ್ಗೆ ತಿಳಿದುಕೊಂಡಿದ್ದೇವೆ. ಈ ಜ್ಯಾಮಿತಿಯ ಚಿತ್ರಗಳು ಅನೇಕ ರೇಖಾ ಖಂಡಗಳು ಮತ್ತು ಕೋನಗಳಿಂದ ಉಂಟಾಗಿವೆ. ಈ ಆಕೃತಿಗಳು, ಅವುಗಳಲ್ಲಿನ ರೇಖಾ ಖಂಡಗಳು, ಕೋನಗಳು ಬೇರೆ ಬೇರೆ ಪರಿಮಾಣಗಳಲ್ಲಿ ಇರುವವು. ಸಾಧಾರಣವಾಗಿ ನಾವು ರೇಖಾ ಖಂಡಗಳು ಮತ್ತು ಕೋನಗಳ ಅಳತೆಗಳನ್ನು ಅವುಗಳ ಪರಿಮಾಣಗಳನ್ನು ನೋಡಿ ಹೋಲಿಸುತ್ತೇವೆ.



ಚಿತ್ರ–5.1

ಆದರೆ ಎಲ್ಲಾ ಸಂದರ್ಭಗಳಲ್ಲಿ ಇದು ಸಾಧ್ಯವಾಗದಿರಬಹುದು. ಕೆಲವು ರೇಖಾ ಖಂಡಗಳು ಮತ್ತು ಕೋನಗಳು ಕಣ್ಣಿಂದ ನೋಡಿ ಹೋಲಿಸದಷ್ಟು ಹತ್ತಿರ ಹತ್ತಿರ ಇದ್ದಾಗ ಅವುಗಳನ್ನು ಅಳೆಯಲು ನಮಗೆ ಪ್ರತ್ಯೇಕವಾದ ಉಪಕರಣಗಳು ಬೇಕು. ಈ ಅಧ್ಯಾಯದಲ್ಲಿ ನಾವು ರೇಖಾ ಖಂಡಗಳನ್ನು ಮತ್ತು ಕೋನಗಳನ್ನು ಹೇಗೆ ಅಳೆಯಬೇಕೋ ತಿಳಿದುಕೊಳ್ಳೋಣ.

## 5.2 ರೇಖಾ ಖಂಡಗಳ ಅಳತೆ.

ಪುಸ್ತಕ, ಟಿ.ವಿ ಪರದೆ, ಇಟ್ಟಿಗೆ ಮುಂತಾದವುಗಳ ಅಂಚುಗಳೂ ಆ ವಸ್ತುಗಳ ಅಂಚುಗಳೊಂದಿಗೆ ಎಳೆದ ರೇಖಾ ಖಂಡಗಳಂತೆ ಇರುತ್ತವೆ. ನಾವು ಅನೇಕ ಆಕೃತಿಗಳಲ್ಲಿ ರೇಖಾಖಂಡಗಳನ್ನು ಎಳೆದಿದ್ದೇವೆ, ನೋಡಿದ್ದೇವೆ.

ತ್ರಿಭುಜವು ಮೂರು ರೇಖಾ ಖಂಡಗಳಿಂದ, ಚತುರ್ಭುಜವು ನಾಲ್ಕು ರೇಖಾ ಖಂಡಗಳಿಂದ ಆವೃತವಾಗಿವೆ ಎಂದು ನಮಗೆ ತಿಳಿದಿದೆ.

ರೇಖಾಖಂಡವು ಎರಡು ಅಂತ್ಯಬಿಂದುಗಳಿರುವ ಸರಳರೇಖೆಯಲ್ಲಿನ ಭಾಗ. ರೇಖಾಖಂಡಕ್ಕೆ ಎರಡು ಅಂತ್ಯ ಬಿಂದುಗಳಿರುವದರಿಂದ ಅದನ್ನು ನಾವು ಅಳೆಯಬಹುದು. ಆ ಅಳತೆಯನ್ನು ಅದರ "ಉದ್ದ" ಎಂದು ಕರೆಯುವರು. ನಾವು ಉದ್ದವನ್ನು ಎರಡು ರೇಖಾಖಂಡಗಳನ್ನು ಹೋಲಿಸಲು ಬಳಸುತ್ತೇವೆ. ಎರಡು ರೇಖಾಖಂಡಗಳನ್ನು ಮೂರು ವಿಧದಲ್ಲಿ ಹೋಲಿಸಬಹುದು. (ಎ)ಪರಿಶೀಲನೆಯಿಂದ. (ಬಿ) ಕಾಗದದ ಮೇಲೆ ಟ್ರೇಸ್ ಮಾಡುವ ವಿಧಾನ. (ಸಿ)ಜ್ಯಾಮಿಟ್ರಿಯ ಉಪಕರಣ ಉಪಯೋಗಿಸಿ ಚಿತ್ರ 5.2 ರಲ್ಲಿ $\overline{AB}$ , $\overline{CD}$ ರೇಖಾ ಖಂಡಗಳನ್ನು ಪರಿಶೀಲಿಸಿ ಯಾವ ರೇಖಾಖಂಡ ಹೆಚ್ಚು ಉದ್ದ ಇರುವುದೋ ಹೇಳಬಲ್ಲಿರಾ ?




ಚಿತ್ರ 5.2







ಚಿತ್ರ. 5.3



SCERT TELANGANA

Downloaded from https:// www.studiestoday.com

Downloaded from https:// www.studiestoday.com

$\overline{AB}$ ರೇಖಾ ಖಂಡ $\overline{CD}$ ರೇಖಾ ಖಂಡಕ್ಕಿಂತ ಹೆಚ್ಚು ಉದ್ದ ಇದೆ ಎಂದು ಸುಲಭವಾಗಿ ಹೇಳಬಹುದು.

ಆದರೆ ಚಿತ್ರ 5.3 ರಲ್ಲಿ $\overline{AB}$ , $\overline{CD}$ ರೇಖಾ ಖಂಡಗಳ ಜೊತೆಗಳನ್ನು ಸುಲಭವಾಗಿ ಹೋಲಿಸಲಾರೆವು. ಏಕೆ ?

ಈ ಎರಡು ರೇಖಾ ಖಂಡಗಳನ್ನು ಹೇಗೆ ಹೋಲಿಸಬಹುದು? ಆಲೋಚಿಸಿ ಮತ್ತು ಚರ್ಚಿಸಿರಿ

$\overline{AB}$ , $\overline{CD}$ ರೇಖಾ ಖಂಡಗಳನ್ನು ಟ್ರೇಸಿಂಗ್ ಕಾಗದ ಅಥವಾ ಪಾರದರ್ಶಕ ಕಾಗದದ ಮೇಲೆ ಎಳೆದು ಒಂದರ ಮೇಲೊಂದು ಇಡಿ. ಅವುಗಳ ಅಂತ್ಯಬಿಂದುಗಳು ಐಕ್ಯವಾಗಿವೆಯೇ ? .....

ಇದೇ ವಿಧವಾಗಿ $\overline{PQ}$ ಮತ್ತು $\overline{RS}$ ಗಳನ್ನು ಹೋಲಿಸಿ ಎರಡರ ಉದ್ದಗಳು ಸಮ ಎಂದು ಹೇಳಬಹುದು.

## 5.2 ಜ್ಯಾಮಿತಿ ಉಪಕರಣಗಳನ್ನುಪಯೋಗಿಸಿ ಹೋಲಿಸುವುದು

ಎರಡು ರೇಖಾ ಖಂಡಗಳನ್ನು ನಿಖರವಾಗಿ ಹೋಲಿಸಲು ನಮಗೆ ಸರಿಯಾದ ಉಪಕರಣದ ಅವಶ್ಯಕತೆ ಇದೆ. ನಿಮ್ಮ ಜಾಮಿಟ್ರಿ ಬಾಕ್ಸ್‌ನಲ್ಲಿನ ಸ್ಕೇಲು ಮತ್ತು ವಿಭಾಜಕಗಳನ್ನು ಉಪಯೋಗಿಸಿ ಉದ್ದವನ್ನು ಹೇಗೆ ಅಳೆಯ ಬೇಕೋ ಈಗ ತಿಳಿದು ಕೋಳ್ಳೋಣ.

ಈ ಉಪಕರಣಗಳನ್ನು ನೀವು ಎಂದಾದರೂ ನೋಡಿದ್ದೀರಾ? ಇವುಗಳನ್ನು ಉಪಯೋಗಿಸಿದ್ದೀರಾ ? ಇವುಗಳನ್ನು ಸೂಕ್ಷವಾಗಿ ಪರಿಶೀಲಿಸಿರಿ.



ಅಳತೆಪಟ್ಟಿ


ವಿಭಾಜಕ

ಸ್ಕೇಲ್ (ಅಳತೆಪಟ್ಟಿ )ನ ಒಂದು ಅಂಚು 15 ಸಮ ದೊಡ್ಡ ಭಾಗಗಳಾಗಿ ವಿಭಜಿಸಲಾಗಿರುತ್ತದೆ. ಇದರಲ್ಲಿನ ಪ್ರತಿ ಭಾಗವು 1 ಸೆಂಟಿಮೀಟರನ್ನು ತೋರಿಸುತ್ತದೆ. ಪ್ರತಿ ಸೆಂಟಿ ಮೀಟರು (ಸೆಂ.ಮೀ.) ಮತ್ತೆ 10 ಸಮ ಚಿಕ್ಕ ಭಾಗಗಳಾಗಿ ವಿಭಜಿಸಲಾಗಿರುತ್ತದೆ. ಪ್ರತಿ ಚಿಕ್ಕ ಭಾಗವನ್ನು 1 ಮಿಲ್ಲೀಮಿಟರು ಎಂದು ಕರೆಯುವರು.

ಸ್ಕೇಲನ್ನು ಉಪಯೋಗಿಸಿ ರೇಖಾಖಂಡದ ಉದ್ದವನ್ನು ಅಳೆಯುವುದನ್ನು ಈಗ ತಿಳಿದುಕೊಳ್ಳೊಣ.




ಸ್ಕೇಲಿನ ಸೊನ್ನೆ ವಿಭಾಗವನ್ನು A ಹತ್ತಿರ ಇಡಿ. ಈಗ B ಹತ್ತಿರ ಇರುವ ಸ್ಕೇಲಿನ ಭಾಗವನ್ನು ಗುರ್ತಿಸಿ. ಈ ಅಳತೆಯನ್ನು ರೇಖಾಖಂಡದ ಉದ್ದವಾಗಿ ಹೇಳಬಹುದು.

ಇಲ್ಲಿ AB ಉದ್ದ = 4.5 ಸೆಂ.ಮೀ

ಸೂಚನೆ: ಒಂದು ವೇಳೆ A ಬಿಂದುವನ್ನು ಸ್ಕೇಲಿನಮೇಲೆ 1 ಸೆಂ.ಮೀ ಹತ್ತಿರ ಇಟ್ಟರೆ B ಬಿಂದು 5.5 ಸೆಂ.ಮೀ ಹತ್ತಿರ ಏಕೀಭವಿಸುತ್ತದೆ. ಆಗ ಉದ್ದ = 5.5 - 1 = 4.5 ಸೆಂ.ಮೀ



### ಆಲೋಚಿಸಿ ! ಚರ್ಚಿಸಿ ಬರೆಯಿರಿ.

ಸ್ಕೇಲನ್ನುಪಯೋಗಿಸಿ ರೇಖಾ ಖಂಡವನ್ನು ಅಳೆಯುವಾಗ ಯಾವ ಯಾವ ದೋಷಗಳನ್ನು ಕಂಡು ಕೊಳ್ಳುವಿರಿ ?

ಒಂದು ಪುಸ್ತಕದ ಅಂಚಿನ ಉದ್ದವನ್ನು ನಾವು ಕಂಡುಕೊಳ್ಳೋಣ ಎಂದಾಗ! ಆಗ ಚಿತ್ರದಲ್ಲಿ ತೋರಿಸಿದಂತೆ ಕಣ್ಣಿನ ದೃಷ್ಟಿ ಸರಿಯಾದ ಸ್ಥಿತಿಯಲ್ಲಿರಬೇಕು. ಅಂದರೆ ಪುಸ್ತಕದ ಅಂಚಿನ ಕೊನೆಯ ಬಿಂದುಗಳ ಮಧ್ಯೆ ಲಂಬವಾಗಿ ಇರುವ ಸ್ಥಿತಿಯಲ್ಲಿ ನಮ್ಮ ಕಣ್ಣು ಇರಬೇಕು. ಕೋನೀಯವಾಗಿ ಒಂದು ವಸ್ತುವನ್ನು ನೋಡುವುದರಿಂದ ಉಂಟಾಗುವ ಅಳತೆಯಲ್ಲಿನ ದೋಷವನ್ನು ನಿವಾರಿಸಲು ನಾವು ಈ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತೇವೆ.




ಈ ದೋಷವನ್ನು ನಿವಾರಿಸಲು ನಾವು ವಿಭಾಜಕವನ್ನು ಉಪಯೋಗಿಸುತ್ತೇವೆ. ವಿಭಾಜಕವನ್ನು ಉಪಯೋಗಿಸಿ ಖಚಿತವಾದ ಅಳತೆಯನ್ನು ಹೇಗೆ ತಿಳಿದುಕೊಳ್ಳುವಿರೋ ಈಗ ನಾವು ಕಲಿತುಕೊಳ್ಳೋಣ.

SCERT TELANGANA



Downloaded from https:// www.studiestoday.com

Downloaded from https:// www.studiestoday.com




ಚಿತ್ರ –5.5

ವಿಭಾಜಕವನ್ನು ಹಿಗ್ಗಿಸಿ. ವಿಭಾಜಕದ ಒಂದು ಕೊನೆಯನ್ನು A ಹತ್ತಿರ ಇಡಿ. ಎರಡನೇ ಕೊನೆಯನ್ನು B ಹತ್ತಿರ ಬರುವಂತೆ ಹಿಗ್ಗಿಸಿ. ವಿಭಾಜಕವನ್ನು ಎಚ್ಚರಿಕೆಯಿಂದ ಮೇಲೆತ್ತಿ ಅದರ ಬಾಹುಗಳ ಸ್ಥಿತಿ ಬದಲಾಗದಂತೆ ಸ್ಕೇಲಿನ ಮೇಲೆ '0' ಹತ್ತಿರ ಒಂದು ಕೊನೆ ಇರುವಂತೆ, ಎರಡನೇ ಕೊನೆಯನ್ನು ಸ್ಕೇಲ್‌ನ ಮತ್ತೊಂದು ಭಾಗದ ಮೇಲಿರುವಂತೆ ಇಡಿ. ಎರಡು ಕೊನೆಗಳ ಮಧ್ಯ ದೂರವನ್ನು ಗುರ್ತಿಸಿ, AB ಯ ಉದ್ದವನ್ನು ಗುರ್ತಿಸಿ.

ಬೇರೆ ಬೇರೆ ರೇಖಾ ಖಂಡಗಳನ್ನು ತೆಗೆದುಕೊಂಡು ಅವುಗಳ ಉದ್ದಗಳನ್ನು ಅಳೆಯಿರಿ.

**ಪ್ರಯತ್ನಿಸಿರಿ**



1. ಒಂದು ಪೋಸ್ಟ್ ಕಾರ್ಡ್ ತೆಗೆದುಕೊಂಡು, ಅದರ ಉದ್ದ, ಅಗಲಗಳನ್ನು ಸ್ಕೇಲು, ಮತ್ತು ವಿಭಾಜಕಗಳನ್ನು ಪಯೋಗಿಸಿ ಅಳೆಯಿರಿ. ಎಲ್ಲಾ ಪೋಸ್ಟ್ ಕಾರ್ಡ್‌ಗಳು ಒಂದೇ ಅಳತೆಯಲ್ಲಿರುವವೇ?
2. ಚಿಕ್ಕ ಪೆನ್ಸಿಲ್, ರಬ್ಬರ್‌ಗಳಂತಹ ಯಾವುದಾದರೂ ಮೂರು ವಸ್ತುಗಳನ್ನು ತೆಗೆದುಕೊಂಡು, ಅವುಗಳ ಉದ್ದಗಳನ್ನು ಅಳೆಯಿರಿ.



**ಅಭ್ಯಾಸ 5.1**

1. ನಿಮ್ಮ ತರಗತಿ ಕೋಣೆಯಲ್ಲಿ ರೇಖಾಖಂಡಗಳನ್ನು ಹೊಂದಿರುವ ಯಾವುದಾದರೂ ಐದು ವಸ್ತುಗಳನ್ನು ಉದಾಹರಣೆಗಳಾಗಿ ಕೊಡಿರಿ.
   ಉದಾ : ಕಪ್ಪು ಹಲಗೆ ಅಂಚು.
2. ಎರಡು ರೇಖಾಖಂಡಗಳನ್ನು ಹೋಲಿಸುವಾಗ ಅಳತೆಪಟ್ಟಿಗಿಂತ ಹೆಚ್ಚಾಗಿ ವಿಭಾಜಕವನ್ನು ಬಳಸುವುದು ಒಳ್ಳೆಯದು. ಏಕೆ ?
3. ಕೆಳಗಿನ ಚಿತ್ರದಲ್ಲಿ ಕೊಟ್ಟಿರುವ ಸರಳ ರೇಖಾಖಂಡದಲ್ಲಿನ ರೇಖಾ ಖಂಡಗಳನ್ನು ಅಳೆಯಿರಿ. ಅಳತೆಯನ್ನಿಡಿದು ಆರೋಹಣ ಕ್ರಮದಲ್ಲಿ ಬರೆಯಿರಿ.




**ರೇಖಾ ಖಂಡಗಳು :** $\overline{AB}$ $\overline{AC}$ $\overline{AD}$ $\overline{AE}$ $\overline{BC}$ $\overline{BD}$ $\overline{BE}$ $\overline{CD}$ $\overline{CE}$ $\overline{DE}$

4. ಶ್ವೇತ ಮತ್ತು ರೇಷ್ಮ $\overline{AB}$ ರೇಖಾಖಂಡದ ಮಧ್ಯಬಿಂದುವನ್ನು ಈ ಕೆಳಗಿನಂತೆ ಸೂಚಿಸಿದರು.







ಈ ಇಬ್ಬರಲ್ಲಿ ಯಾರು ಸರಿಯಾಗಿ ಗುರ್ತಿಸಿದ್ದಾರೆ ? $\overline{AC}$, $\overline{CB}$ ಗಳ ಉದ್ದಗಳನ್ನು ಅಳೆದು ಸರಿನೋಡಿರಿ.

5. ಈ ಕೆಳಗಿನ ಚಿತ್ರಗಳಲ್ಲಿ ಕೆಲವುಗಳ ಅಂಚುಗಳು ರೇಖಾ ಖಂಡಗಳಂತಿದೆ. ಕಪಾಟುವಿನ ಒಂದು ಅಂಚು ರೇಖಾಖಂಡದಂತಿದೆ. ಇದೇ ರೀತಿ ಉಳಿದ ಚಿತ್ರಗಳಲ್ಲಿ ರೇಖಾಖಂಡಗಳನ್ನು ಕಂಡುಹಿಡಿಯಿರಿ.



### 5.2.2 ಕೋನದ ಅಳತೆ :

ನಿತ್ಯ ಜೀವನದಲ್ಲಿ ನಾವು ಕೋನದ ಆಕಾರಗಳುಳ್ಳ ಹಲವು ವಸ್ತುಗಳನ್ನು ನೋಡುತ್ತಿರುತ್ತೇವೆ.

ಕತ್ತರಿಯಲ್ಲಿನ ಮುಂಭಾಗಗಳು ದೂರಸರಿದಂತೆ ಅವುಗಳ ಮಧ್ಯೆ ಉಂಟಾಗುವ ಕೋನವನ್ನು ನೋಡಿರುತ್ತೇವೆ. ಎರಡು ರೇಖಾಖಂಡಗಳ ಮಧ್ಯೆ ಅಥವಾ ಎರಡು ಕಿರಣಗಳ ಮಧ್ಯ ಕೋನವು ಉಂಟಾಗುತ್ತದೆ. ಬೇರೆ ಬೇರೆ ಕೋನಗಳನ್ನು ಹೊಂದಿದ ವಿವಿಧ ಬಗೆಯ ಕೆಲವು ವಸ್ತುಗಳಿಗೆ ಉದಾಹರಣೆಗಳನ್ನು ಕೊಡಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com





ನಮ್ಮ ಎರಡು ಕೈಗಳನ್ನು ಕೆಳಗಿನ ಚಿತ್ರ (1)ರಲ್ಲಿ ತೋರಿಸಿದಂತೆ ದೇಹಕ್ಕೆ ಅನಿಸಿಕೊಂಡು ನಿಲ್ಲಿರಿ. ನಿಮ್ಮ ಎಡಗೈಯನ್ನು ಅಲುಗಿಸದೆ ಅದೇ ಸ್ಥಿತಿಯಲ್ಲಿಟ್ಟು ಎರಡನೇ ಕೈಯನ್ನು ಅಂದರೆ ಬಲಗೈಯನು ನಿಧಾನವಾಗಿ ಮೇಲಕ್ಕೆ ಎತ್ತಿರಿ. ನಿಮ್ಮ ಬಲಗೈ ಮೇಲಕೆತ್ತುತ್ತಿರುವಾಗ ನಿಮ್ಮ ದೇಹಕ್ಕೆ, ನಿಮ್ಮ ಬಲಗೈಗೆ ಮಧ್ಯ ಇರುವ ಕೋನ ಬದಲಾಗುತ್ತಿರುವುದನ್ನು ನೀವು ಗಮನಿಸಬಹುದು. ಈ ಕೋನಗಳನ್ನು ಯಾವ ಯಾವ ಹೆಸರುಗಳಿಂದ ಕರೆಯುವರೋ ಈಗ ತಿಳಿಯೋಣ.

**ಚಟುವಟಿಕೆ :**

ಕೆಳಗಿನ ಚಿತ್ರಗಳನ್ನು ಗಮನಿಸಿರಿ.




ಚಿತ್ರ (i)ರಲ್ಲಿ ದೇಹಕ್ಕೂ, ಕೈಗೂ ನಡುವೆ ಕೋನ ಏರ್ಪಡಿಲಿಲ್ಲ. ಈ ಕೋನವನ್ನು 'ಶೂನ್ಯಕೋನ' ಎನ್ನುತ್ತಾರೆ.

ಚಿತ್ರ (iii) ರಲ್ಲಿ ಕೈ ದೇಹಕ್ಕೆ ಲಂಬವಾಗಿದೆ. ದೇಹಕ್ಕೆ , ಕೈಗೆ ನಡುವಿನ ಕೋನ $90^0$. ಈ ಕೋನವನ್ನು 'ಲಂಬಕೋನ' ಎನ್ನುವರು.

ಚಿತ್ರ (ii)ರಲ್ಲಿ ನಿಮ್ಮ ದೇಹಕ್ಕೂ, ಕೈಗೂ ನಡುವಿನ ಕೋನ ಲಂಬಕೋನಕ್ಕಿಂತ ಕಡಿಮೆ. ಇಂತಹ ಕೋನಗಳನ್ನು 'ಲಘುಕೋನಗಳು' ಎನ್ನುವರು.

ಚಿತ್ರ (iv)ರಲ್ಲಿ ನಿಮ್ಮ ದೇಹಕ್ಕೂ, ಬಲಗೈ ನಡುವಿನ ಕೋನ ಲಂಬಕೋನಕ್ಕಿಂತ ಹೆಚ್ಚು, ಇಂತಹ ಕೋನಗಳನ್ನು 'ವಿಶಾಲಕೋನಗಳು' ಅಥವಾ ಅಧಿಕ ಕೋನಗಳು ಎನ್ನುವರು.

ಚಿತ್ರ (v) ರಲ್ಲಿ ದೇಹಕ್ಕೂ ಬಲಗೈಗೂ ನಡುವಿನ ಕೋನ ಎರಡು ಲಂಬಕೋನಗಳು, ಅಂದರೆ $180^0$. ಈ ಕೋನವನ್ನು 'ಸರಳಕೋನ' ಎನ್ನುವರು.

ಈಗ ನಾವು ಒಂದು ಗಡಿಯಾರದಲ್ಲಿನ ಮುಳ್ಳುಗಳ ನಡುವೆ ಉಂಟಾಗುವ ಕೋನಗಳನ್ನು ಪರಿಶೀಲಿಸೋಣ. ಗಂಟೆಯ ಮುಳ್ಳನ್ನು ಆಧಾರವಾಗಿಟ್ಟುಕೊಂಡು ಪ್ರದಕ್ಷಿಣೆ ದಿಶೆಯಲ್ಲಿ ಮುಳ್ಳುಗಳ ನಡುವಿನ ಕೋನವನ್ನು ಅಳೆಯೋಣ.

12 ಗಂಟೆಗಳ ಸಮಯದಲ್ಲಿ ಗಂಟೆಗಳ, ನಿಮಿಷಗಳ ಮಳ್ಳುಗಳು ಒಂದರ ಮೇಲೊಂದು ಐಕ್ಯವಾಗಿರುತ್ತವೆ ಆದ್ದರಿಂದ ಅವುಗಳನಡುವಿನ ಕೋನ $0^0$ಯಾಗಿ ತೆಗೆದುಕೊಳ್ಳೋಣ.




1. ಯಾವ ಗಡಿಯಾರದಲ್ಲಿನ ಮುಳ್ಳುಗಳ ನಡುವಿನ ಕೋನ ಲಘುಕೋನ ಇದೆ?
2. ಯಾವ ಗಡಿಯಾರದಲ್ಲಿನ ಮುಳ್ಳುಗಳು ವಿಶಾಲಕೋನವನ್ನು ಸೂಚಿಸುತ್ತಿವೆ?

(ಇಲ್ಲಿ ಸಣ್ಣಮುಳ್ಳನ್ನು ಆಧಾರವಾಗಿ ತೆಗೆದುಕೊಂಡು, ದೊಡ್ಡ ಮುಳ್ಳನ್ನು ಭ್ರಮಣ ಮಾಡುತ್ತಿದೆ ಎಂದು ಭಾವಿಸಬೇಕು)



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಚಟುವಟಿಕೆ :**

ಎರಡು ಸ್ಟ್ರಾಗಳನ್ನು ತೆಗೆದುಕೊಳ್ಳಿ.



ಚಿತ್ರ. 5.7

ಒಂದು ಸ್ಟ್ರಾನ ಒಂದು ಕೊನೆಯನ್ನು ಮತ್ತೊಂದು ಸ್ಟ್ರಾ ಕೋನೆಯ ಮೇಲೆ L ಆಕಾರ ಬರುವಂತೆ ಜೋಡಿಸಿ ಒಂದು ಗುಂಡುಸೂಜಿಯನ್ನು ಚುಚ್ಚಿರಿ. ಇದು ಲಂಬಕೋನವನ್ನು ಪರೀಕ್ಷಿಸುವ ಸಾಧನವಾಗಿ ಉಪಯೋಗವಾಗುತ್ತದೆ. ಈ ಉಪಕರಣವನ್ನು $\overrightarrow{OA}$ ಕಿರಣದೊಂದಿಗೆ ಚಿತ್ರದಲ್ಲಿ ತೋರಿಸಿದಂತೆ $\overrightarrow{OB}$ ಕಿರಣದ ಶೃಂಗಗಳು ಏಕೀಭವಿಸುವಂತೆ ಇಡಬೇಕು. $\angle AOB$ ಕೋನ ಲಂಬಕೋನಕ್ಕಿಂತ ಕಡಿಮೆ ಇದೆ. ಆದ್ದರಿಂದ ಇದು ಲಘು ಕೋನವೆಂದು ಹೇಳಬಹುದು.


ಚಿತ್ರ. 5.6

ಈ ಉಪಕರಣವನ್ನು $\overline{OC}$ ಮೇಲೆ ಶೃಂಗಗಳು ಐಕ್ಯವಾಗುವಂತೆ ಚಿತ್ರದಲ್ಲಿ ತೋರಿಸಿದ ವಿಧವಾಗಿ ಇಡಿರಿ. ಈಗ $\angle COD$ ನ್ನು ಗಮನಿಸಿರಿ. $\angle COD$ ಲಂಬಕೋನಕ್ಕಿಂತ ಹೆಚ್ಚು ಇದೆ. ಆದ್ದರಿಂದ ಇದು ವಿಶಾಲಕೋನ ಎಂದು ಹೇಳಬಹುದು.



ಚಿತ್ರ.5.8

**ಇವುಗಳನ್ನು ಮಾಡಿ.**



1. ಸ್ಟ್ರಾಗಳಿಂದ ಮಾಡಿದ ಲಂಬಕೋನ ಉಪಕರಣವನ್ನುಪಯೋಗಿಸಿಕೆಳಗಿನ ಕೋನಗಳನ್ನು ಹೋಲಿಸಿ ಲಘು, ವಿಶಾಲ, ಲಂಬಕೋನಗಳನ್ನು ಗುರ್ತಿಸಿರಿ.


(i) (ii) (iii) (iv)

2. ಲಘು ಕೋನಗಳು, ವಿಶಾಲಕೋನಗಳನ್ನೊಳಗೊಂಡ ಯಾವುದಾದರು ಐದು ನಿತ್ಯಜೀವನದ ಸಂದರ್ಭಗಳನ್ನಾಗಲಿ ಅಥವಾ ವಸ್ತುಗಳನ್ನಾಗಲಿ ಬರೆಯಿರಿ.
3. ಎರಡು ರೇಖಾಖಂಡಗಳಿಂದ ಏರ್ಪಡುವ ನಿಮಗೆ ತಿಳಿದ ಯಾವುದಾದರೂ ಕೆಲವು ಕೋನಗಳನ್ನು ಎಳೆಯಿರಿ. ಸ್ಟ್ರಾ ಲಂಬಕೋನ ಪರೀಕ್ಷಾ ಉಪಕರಣದಿಂದ ಯಾವುವು ಲಂಬಕೋನಗಳು, ಯಾವುವು ಲಘುಕೋನಗಳು, ಯಾವುವು ವಿಶಾಲಕೋನಗಳೋ ಗುರ್ತಿಸಿರಿ.

ಸತ್ಯ ಮತ್ತು ಶ್ವೇತಳಿಗೆ $\overline{OA}$ ಕಿರಣದೊಂದಿಗೆ 45° ಕೋನವನ್ನು ರಚಿಸುವಂತೆ ತಿಳಿಸಲಾಗಿದೆ. ಅವರು ಆ ಕೋನವನ್ನು ಈ ಕೆಳಗಿನಂತೆ ಬೇರೆ ಬೇರೆಯಾಗಿ ರಚಿಸಿದ್ದಾರೆ.



ಸತ್ಯ ($\angle AOB = 45°$)



ಶ್ವೇತ ($\angle AOB = 45°$)

ಸತ್ಯ ಮತ್ತು ಶ್ವೇತ ಎಳೆದ ಮೇಲಿನ ಎರಡು ಕೋನಗಳೂ ಸರಿಯಾಗಿವೆಯಾ?

ಸತ್ಯ ಎಳೆದ ಕೋನದಲ್ಲಿ $\overrightarrow{OA}$ ಅಪ್ರದಕ್ಷಣೇದಿಶೆಯಲ್ಲಿ ಚಲಿಸಿ $\overrightarrow{OB}$ನ್ನು 45°. ಕೋನದೊಂದಿಗೆ ಸೇರಿದೆ. ಇಂತಹ ಕೋನಗಳನ್ನು ಅಪ್ರದಕ್ಷಣೆದಿಶೆ ಕೋನಗಳು ಎನ್ನುವರು. ಇದನ್ನು ಧನಾತ್ಮಕ ಕೋನಗಳೆಂದು ಧನಗುರ್ತಿನಿಂದ ಸೂಚಿಸುವರು. ಸತ್ಯ ಎಳೆದ ಕೋನ +45°..

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಶ್ವೇತ ಎಳೆದ ಕೋನದಲ್ಲಿ $\overline{OA}$ ಪ್ರದಕ್ಷಣಾದಿಶೆಯಲ್ಲಿ ಚಲಿಸಿ 45° ಕೋನದೊಂದಿಗೆ $\overline{OB}$ ಸೇರಿದೆ, ಇಂತಹ ಕೋನಗಳನ್ನು ಪ್ರದಕ್ಷಣೆದಿಶೆ ಕೋನಗಳು ಎನ್ನುವರು.ಇವನ್ನು ಋಣಕೋನಗಳೆಂದು ಋಣಗುರ್ತಿನಿಂದ ಸೂಚಿಸುತ್ತೇವೆ. ಶ್ವೇತ ಎಳೆದ ಕೋನ - 45°.

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**

ಪಕ್ಕದ ಚಿತ್ರದಲ್ಲಿ $\overline{OA}$ ಕೊಡಲಾಗಿದೆ. ∠AOB ಮತ್ತು ∠AOC ಗಳು ಎರಡು ಕೋನಗಳಾದರೆ, ಯಾವುವು ಪ್ರದಕ್ಷಣೆದಿಶೆ ಕೋನ ? ಮತ್ತು ಯಾವುದು ಅಪ್ರದಕ್ಷಣೆದೀಶೆ ಕೋನ ? ನಿಮ್ಮ ಸ್ನೇಹಿರರೊಡನೆ ಚರ್ಚಿಸಿ




**ಚಟುವಟಿಕೆ**

1. ಒಂದು ಬಳೆಯನ್ನು ಉಪಯೋಗಿಸಿ ಕಾಗದದ ಮೇಲೆ ಒಂದು ವೃತ್ತಾವನ್ನು ಪೇಪರಿನ ಮೇಲೆ ಎಳೆದು ನಂತರ ಅದರ ಅಂಚುಗಳನ್ನಿಡಿದು ಕತ್ತರಿಸಿ.
2. ವೃತ್ತವನ್ನು ಎರಡು ಸಮಾನ ಭಾಗಗಳಾಗಿ ಕತ್ತರಿಸಿ. ಚಿತ್ರದಲ್ಲಿ ತೋರಿಸಿದಂತೆ ಆರ್ಧವೃತ್ತವನ್ನು ಮತ್ತೊಂದು ಸಾರಿ ಮಡಚಿರಿ(ಕಾಲು ಭಾಗಕ್ಕೆ). ಇದನ್ನು ವೃತ್ತಪಾದ ಎನ್ನುತ್ತಾರೆ.




3. ಮತ್ತೆ ಅರ್ಧವೃತ್ತ ಕಾಣುವಂತೆ ತೆರೆಯಿರಿ. ಅರ್ಧವೃತ್ತದಲ್ಲಿ ಚಿತ್ರದಲ್ಲಿ ತೋರಿಸಿದಂತೆ ಒಂದು ಮಡಕೆಯನ್ನು ಕಾಣುತ್ತೇವೆ. ಈ ಮಡಕೆ ವ್ಯಾಸಕೆ ಲಂಬವಾಗಿ $90^0$ ಕೋನವನ್ನುಂಟು ಮಾಡುತ್ತದೆ. ಮಡಕೆಯ ಹತ್ತಿರ $90^0$ ಎಂದು ಬರೆಯಿರಿ.
4. ಈಗ ಅರ್ಧವೃತ್ತವನ್ನು ಕಾಲುಭಾಗಕ್ಕೆ ಮಡಚಿ. ಈ ಕಾಲುಭಾಗವನ್ನು ಚಿತ್ರದಲ್ಲಿ ತೋರಿಸಿದಂತೆ ಮಡಚಿ. $45^0$ ಕೋನದೊಂದಿಗೆ ಒಂದು ಮಡಕೆಯನ್ನು ಗಮನಿಸುತ್ತೇವೆ. $90^0+45^0=135^0$ ಕೋನದ ಮತ್ತೊಂದು ಮಡಿಕೆಯನ್ನು ಸಹ ಗಮನಿಸುವಿರಿ.
5. ಕಾಗದವನ್ನು ಮತ್ತೆ ಅರ್ಧವೃತ್ತಾಕಾರಕ್ಕೆ ತೆರೆಯಿರಿ. $45^0$ ಗಳನ್ನು ಗುರ್ತಿಸಿ.
6. $90^0$ಗಳಿಗೆ ಮತ್ತೊಂದು ಕಡೆ ಅಪ್ರದಕ್ಷಣೆ ಪಥದಲ್ಲಿರುವ ಮಡಕೆ $135^0$ಯಾಗಿ ಗುರ್ತಿಸಿರಿ.
7. ಅರ್ದವೃತ್ತವನ್ನು ಮತ್ತೆ ಕಾಲುಭಾಗಕ್ಕೆ, ಕಾಲುಭಾಗವನ್ನು ಮತ್ತೆ ಎರಡುಬಾರಿ ಮಡಚಿ, ಹಾಳೆಯನ್ನು ಬಿಚ್ಚಿ ನೋಡಿರಿ.




8. 45° ಕೋನಕ್ಕೆ, ಪಾದಕ್ಕೆ ($0^0–0^0$ ರೇಖೆಗೆ) ನಡುವೆ ಒಂದು ಮಡಕೆ ಉಂಟಾಗುತ್ತದೆ. ಇದಕ್ಕೆ 22½°.ಗಳಾಗಿ ಗುರ್ತಿಸಿ. ಇದೇ ರೀತಿ 135° ಕೋನಕ್ಕೂ ಪಾದರೇಖೆಗೂ ನಡುವೆ ಉಂಟಾಗುವ ಮಡಕೆಗೆ 157½° ಆಗಿ ಗುರ್ತಿಸಿರಿ.




ಈಗ ನಾವು ಒಂದು ಕೋನಮಾಪಕವನ್ನು ತಯಾರಿಸಿದ್ದೇವೆ. ಇದರ ಸಹಾಯದಿಂದ ಮತ್ತೆ ಕೆಲವು ಕೋನಗಳನ್ನು ಅಳೆಯಬಹುದಾಗಿದೆ.

### 4.2.3 ಕೋನಮಾಪಕ :

ನಾವು ಸ್ಟ್ರಾಗಳಿಂದ , ಕಾಗದಗಳಿಂದ ತಯಾರುಮಾಡುವ ಕೋನಮಾಪಕ , ಕೋನಗಳನ್ನು ಲಂಬಕೋನ ಆಧಾರವಾಗಿ ಹೋಲಿಸುವುದಕ್ಕೆ , ಕೆಲವು ವಿಧಗಳ ಕೋನಗಳನ್ನು ಅಳೆಯಲು ಮಾತ್ರವೇ ಉಪಯೋಗವಾಗುತ್ತವೆ.

ಕೋನಗಳನ್ನು ಮತ್ತಷ್ಟು ನಿಖರವಾಗಿ, ಸುಲಭವಾಗಿ ಅಳೆಯಲು ನಮಗೆ ಒಂದು ಉಪಕರಣ ಅವಶ್ಯಕತೆ ಇದೆ. ಈ ಕೋನಗಳನ್ನು ಆಳೆಯುವ ಉಪಕರಣವನ್ನು **'ಕೋನಮಾಪಕ'** ಎನ್ನುವರು.



Downloaded from https:// www.studiestoday.com

Downloaded from https:// www.studiestoday.com



ಕೋನಮಾಪಕವನ್ನು ಒಂದು ಸಾರಿ ಜಾಗರೂಕತೆಯಿಂದ ಗಮನಿಸಿ. ಇದು ಅರ್ಧವೃತ್ತಾ ಕಾರದಲ್ಲಿರುತ್ತದೆ. ಕೆಳಗಿನ ಭಾಗದಲ್ಲಿ ವ್ಯಾಸದೊಂದಿಗೆ ಒಂದು ಸಮಾನಂತರ ರೇಖೆಯನ್ನು ಎಳೆದಿರುತ್ತದೆ. ಇದ್ದನ್ನು ಆಧಾರ ಎನ್ನುವರು.

ಆಧಾರರೇಖೆಗೆ ಲಂಬವಾಗಿರುವ ರೇಖೆಯ ಹತ್ತಿರ $90^\circ$ ನ್ನು ಗುರ್ತಿಸಲಾಗಿರುತ್ತದೆ. ಆಧಾರ ರೇಖೆ, ಲಂಬರೇಖೆಗಳು ಛೇದಿಸುವ ಬಿಂದುವನ್ನು ಕೇಂದ್ರಬಿಂದು ಎಂದು ಎನ್ನುವರು. ಕೋನಮಾಪಕದ ಕಂಸಭಾಗದಲ್ಲಿ $0^\circ$ ಯಿಂದ $180^\circ$ ವರೆಗೆ ಕೋನಗಳು ಪ್ರದಕ್ಷಿಣೆ ಮತ್ತು ಅಪ್ರದಕ್ಷಿಣೆ ದಿಶೆಯಲ್ಲಿ ಗುರ್ತಿಸಲಾಗಿರುತ್ತದೆ. ಪ್ರದಕ್ಷಿಣೆ ದಿಶೆಯಲ್ಲಿ ಕೋನಗಳು ಗುರ್ತಿಸಿರುವ ಸ್ಕೇಲನ್ನು ಹೊರಗಡೆ ಸ್ಕೇಲು ಎಂದೂ , ಅಪ್ರದಕ್ಷಿಣೆ ದಿಶೆಯಲ್ಲಿ ಕೋನಗಳು ಗುರ್ತಿಸಿರುವ ಸ್ಕೇಲನ್ನು ಒಳಗಡೆ ಸ್ಕೇಲು ಎನ್ನುತ್ತಾರೆ. ಹೊರಗಡೆ ಸ್ಕೇಲಿನ ಮೇಲೆ $0^\circ$ಯಿಂದ $180^\circ$ವರೆಗೆ 180 ಸಮಭಾಗಗಳಾಗಿ ವಿಂಗಡಿಸಿರುತ್ತಾರೆ. ಒಂದೊಂದು ಸಮಭಾಗವನ್ನು ($1^\circ$) ಎಂದು ಕರೆಯುವರು. ಹೊರಗಿನ ಅಳತೆಪಟ್ಟಿ ಮೇಲೆ $10^\circ$ ಕೋನವನ್ನು ಹೆಚ್ಚಿಸುತ್ತಾ ಬೆಲೆಗಳನ್ನು $180^\circ$ ವರೆಗೆ ಗುರ್ತಿಸಲ್ಪಟ್ಟಿರುತ್ತದೆ. ($0^\circ$) ಕೋನವು ಆಧಾರರೇಖೆಗೆ ಎರಡೂ ಕಡೆಯಲ್ಲಿರುತ್ತದೆ.

ಈಗ ಕೋನಮಾಪಕವನ್ನು ಪ್ರಯೋಗಿಸಿ ಕೋನಗಳನ್ನು ಹೇಗೆ ಅಳೆಯುವುದು ಎಂಬುದನ್ನು ತಿಳಿದುಕೊಳ್ಳೋಣ.

| ಪ್ರದಕ್ಷಣೆ ಕೋನ | ಹಂತಗಳು : | ಅಪ್ರದಕ್ಷಣೆಕೋನ |
|---|---|---|





1. ಕೊಟ್ಟಿರುವ ಕೋನವು ಲಘುಕೋನವೇ? ವಿಶಾಲ ಕೋನವೇ? ಗುರ್ತಿಸಿರಿ

2. ಕೋನಮಾಪಕದ ಕೇಂದ್ರಬಿಂದುವನ್ನು ಕೋನ ಶೃಂಗದ ಹತ್ತಿರ ಇಡಬೇಕು.





3. ಕೋನಮಾಪಕದ ಕೇಂದ್ರಬಿಂದು ಕೋನಶೃಂಗದಿಂದ ಅಲುಗಾಡಿಸದಂತೆ, ಕೋನಮಾಪಕದ ಆಧಾರ ರೇಖೆ ಮತ್ತು ಕೊಟ್ಟಿರುವ ಕೋನದ ಒಂದು ಕಿರಣ ಏಕೀಭವಿಸುವಂತೆ ಕೋನಮಾಪಕವನ್ನು ಸರಿಮಾಡಿರಿ.





4. ಕೋನಮಾಪಕದ ಅಳತೆಪಟ್ಟಿಯಲ್ಲಿ $0^\circ$ ಯಿಂದ ಮೇಲಕ್ಕೆ ಎಣಿಸುತ್ತಾ ಹೋಗಬೇಕು.

5. ಕೋನದ ಎರಡನೇ ಕಿರಣಕೋನಮಾಪಕದ ಸ್ಕೇಲನ್ನು ಎಲ್ಲಿ ಏಕೀಭವಿಸಿದೆಯೋ. ಆ ಕೋನದ ಬೆಲೆಯನ್ನು ಗುರ್ತಿಸಬೇಕು $\angle AOB = 50^\circ$

**ಕೆಳಗಿನ ಪಟ್ಟಿ ಓದಿರಿ**

| **ಕೋನದ ಬಗ್ಗೆ** | **ಅಳತೆ** |
|---|---|
| **ಶೂನ್ಯ ಕೋನ** | $0^0$ |
| **ಲಂಬ ಕೋನ** | $90^0$ |
| **ಸರಳ ಕೋನ** | $180^0$ |
| **ಪೂರ್ಣ ಕೋನ** | $360^0$ |
| **ಲಘು ಕೋನ** | $0^0$ ಮತ್ತು $90^0$ಗಳ ನಡುವೆ |
| **ವಿಶಾಲ ಕೋನ** | $90^0$ ಮತ್ತು $180^0$ಗಳ ನಡುವೆ |
| **ಸರಳಾಧಿಕ ಕೋನ** | $180^0$ ಮತ್ತು $360^0$ಗಳ ನಡುವೆ |



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿರಿ :**



1. ಕೆಳಗಿನವುಗಳಲ್ಲಿ ಯಾವುದು ದೊಡ್ಡ ಕೋನವಾಗುವುದೋ ಊಹಿಸಿ. ನಿಮ್ಮ ಸ್ನೇಹಿತರೊಡನೆ ಚರ್ಚಿಸಿ. ಕೋನಮಾಪಕವನ್ನು ಪ್ರಯೋಗಿಸಿ ಫಲಿತಾಂಶವನ್ನು ಸರಿನೋಡಿರಿ.




2. ಕೆಳಗಿನವುಗಳಲ್ಲಿ ಯಾವುವು ಲಘು ಕೋನಗಳು? ಅವುಗಳ ಬೆಲೆಗಳನ್ನು ಬರೆಯಿರಿ.




3. ಕೆಳಗಿನವುಗಳಲ್ಲಿ ಯಾವುವು ವಿಶಾಲಕೋನಗಳು ( ಅಧಿಕ ಕೋನಗಳು) ಕೋನಮಾಪಕವನ್ನು ಉಪಯೋಗಿಸದೇ ಗುರ್ತಿಸಿ.




4. ಯಾವುದಾದರೂ ಎರಡು ಲಘುಕೋನಗಳನ್ನು ಮತ್ತು ವಿಶಾಲಕೋನಗಳನ್ನು ಎಳೆಯಿರಿ.
5. ಕೆಳಗಿನ ಕೋನಗಳಲ್ಲಿ ಲಘುಕೋನಗಳನ್ನು, ವಿಶಾಲಕೋನಗಳನ್ನು ಲಂಬಕೋನಗಳನ್ನು, ಸರಳಕೋನಗಳನ್ನು, ಸರಳಾಧಿಕ ಕೋನಗಳನ್ನು ಬೇರೆ ಮಾಡಿ ಬರೆಯಿರಿ.

   40°, 140°, 90°, 210°, 44°, 215°, 345°, 125°,
   10°, 120°, 89°, 270°, 30°, 115°, 180°



## ಅಭ್ಯಾಸ 5.2

1. ಸತ್ಯ ಅಥವಾ ಅಸತ್ಯವಾದವುಗಳನ್ನು ಗುರ್ತಿಸಿರಿ. ಅಸತ್ಯ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.
   i. ಲಂಬಕೋನಕ್ಕಿಂತ ಕಡಿಮೆಯುಳ್ಳ ಕೋನ ಲಘುಕೋನ
   ii. 180° ಕೋನವು ಒಂದು ಲಂಬ ಕೋನ
   iii. 90° ಕೋನವು ಒಂದು ಸರಳ ಕೋನ
   iv. 180° ಗಿಂತ ಹೆಚ್ಚು ಮತ್ತು 360° ಕ್ಕಿಂತ ಕಡಿಮೆ ಇರುವ ಕೋನವನ್ನು ಸರಳಾಧಿಕ ಕೋನ ಎಂದು ಕರೆಯುವರು.
   v. ಪೂರ್ಣಕೋನವೆಂದರೆ 360°.



SCERT TELANGANA
Downloaded from https:// www.studiestoday.com

Downloaded from https:// www.studiestoday.com

2. ಪಕ್ಕದ ಚಿತ್ರದಲ್ಲಿ ಯಾವುವು ಲಘು, ವಿಶಾಲ, ಕೋನಗಳು. ಕೋನಮಾಪಕವನ್ನು ಉಪಯೋಗಿಸದೇ ಹೇಳಿರಿ. ನಂತರ ಕೋನಗಳನ್ನು ಅಳೆದು ಅವುಗಳ ಬೆಲೆ ಬರೆದು ಸರಿನೋಡಿರಿ.

3. ಕೆಳಗಿನ ಕೋನಗಳನ್ನು ಅಳೆಯಿರಿ. ಇವುಗಳಲ್ಲಿ ದೊಡ್ಡ ಕೋನಯಾವುದು? ಅವುಗಳ ಬೆಲೆ ಬರೆದು, ದೊಡ್ಡ ಕೋನಕ್ಕಿಂತ ಮತ್ತೊಂದು ದೊಡ್ಡ ಕೋನವನ್ನು ರಚಿಸಿ.




$\angle ABC =$ ..........




$\angle DEF =$ ..........




$\angle PQR =$ ..........

4. ಕೆಳಗಿನ ಗಡಿಯಾರಗಳ ಸಮಯದಲ್ಲಿ ಮುಳ್ಳುಗಳ ಮಧ್ಯಕೋನ ವೆಷ್ಟು ?ಯಾವ ಬಗೆಯ ಕೋನಗಳೋ ವರ್ಗೀಕರಿಸಿ. (ಚಿಕ್ಕಮುಳ್ಳನ್ನು ಆಧಾರವಾಗಿಟ್ಟುಕೊಂಡು)

i. ಬೆಳಗಿನ 9 ಗಂಟೆ
ii. ಸಂಜೆ 6 ಗಂಟೆ
iii. ಮಧ್ಯಾಹ್ನ 12 ಗಂಟೆ
iv. ಮಧ್ಯಾಹ್ನ 4 ಗಂಟೆ
v. ರಾತ್ರಿ 8 ಗಂಟೆ

5. ಕೆಳಗಿನ ಕೋನಗಳನ್ನು ಜೊತೆಗೂಡಿಸಿ ಮತ್ತು ಆ ಕೋನಗಳಿಗೆ ಸರಿಹೊಂದಿದ ಚಿತ್ರಗಳನ್ನು ಬರೆಯಿರಿ.

| ಗ್ರೂಪ್ – A | ಗ್ರೂಪ್ – B |
|---|---|
| ಲಘು ಕೋನ | 90° |
| ಲಂಬ ಕೋನ | 270° |
| ವಿಶಾಲ ಕೋನ | 45° |
| ಸರಳಾಧಿಕ ಕೋನ | 180° |
| ಸರಳ ಕೋನ | 150° |

## 5.4 ಛೇದಕ ರೇಖೆಗಳು, ಲಂಬರೇಖೆಗಳು ಮತ್ತು ಸಮಾನಾಂತರ ರೇಖೆಗಳು.

### 5.4.1 ಛೇಧಿಸುವ ರೇಖೆಗಳು (Intersecting lines)

ಕೆಳಗಿನ ಚಿತ್ರಗಳನ್ನು ಗಮನಿಸಿ.







ಮೇಲಿನ ಚಿತ್ರಗಳಲ್ಲಿ ಕೋಲುಗಳೂ, ರಸ್ತೆಗಳನ್ನು ಸರಳರೇಖೆಗಳಾಗಿ ಭಾವಿಸಿಕೊಂಡರೆ, ಮೇಲಿನ ಚಿತ್ರಗಳಲ್ಲಿ ಸರಳ ರೇಖೆಗಳನ್ನು ಛೇಧಿಸುವ ರೇಖೆಗಳುಎಂದು ಕರೆಯುತ್ತಾರೆ.

ಎರಡು ಬೇರೆ ಬೇರೆ ರೇಖೆಗಳು ಎಷ್ಟು ಸಾಮಾನ್ಯ ಬಿಂದುಗಳನ್ನು ಹೊಂದಿರುತ್ತವೆ?



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿರಿ :**



1. ಯಾವುದಾದರೊಂದು ಸಮತಲದಲ್ಲಿ ಎರಡು ಬೇರೆ ಬೇರೆ ರೇಖೆಗಳನ್ನು ಎಳೆಯಿರಿ. ಅವು ಒಂದಕ್ಕಿಂತ ಹೆಚ್ಚು ಬಿಂದುಗಳಲ್ಲಿ ಛೇದಿಸಿಕೊಳ್ಳುವವೇ?
2. ಎರಡು ಬೇರೆ ಬೇರೆ ರೇಖೆಗಳಿಗೆ ಎರಡು ಅಥವಾ ಮೂರು ಸಾಮಾನ್ಯ ಬಿಂದುಗಳು ಇರಲು ಸಾಧ್ಯವೇ ?

ಎರಡು ಬೇರೆ ಬೇರೆ ರೇಖೆಗಳು $l$ ,$m$ ಎಂಬುವವು P ಎಂಬ ಬಿಂದುವಿನ ಹತ್ತಿರ ಸೇರಿಕೊಂಡರೆ P ಹತ್ತಿರ $l$ ,$m$ ರೇಖೆಗಳು ಛೇಧಿಸಿಕೊಳ್ಳುತ್ತವೆ ಎಂದು ಹೇಳುತ್ತೇವೆ. ಎರಡು ಛೇಧನರೇಖೆಗಳಿಗೆ ಒಂದೇ ಸಾಮಾನ್ಯ ಬಿಂದು ಇರುತ್ತದೆ.




ಈ ರೇಖೆಗಳನ್ನು ಛೇಧಿಸುವ ರೇಖೆಗಳು ಎನ್ನುತ್ತೇವೆ.

ಎರಡು ರೇಖೆಗಳಿಗೆ ಒಂದು ಸಾಮಾನ್ಯಬಿಂದು ಹೊಂದಿಲ್ಲ ಎಂದುಕೊಳ್ಳಿರಿ.ಆ ರೇಖೆಗಳು ಹೇಗಿರುತ್ತವೆ ? ಆಲೋಚಿಸಿ.

ಎರಡು ರೇಖೆಗಳು ಒಂದು ಬಿಂದುವಿನಲ್ಲಿ ಛೇಧಿಸಿ ಕೊಂಡಾಗ ಅವು ಕೋನಗಳನ್ನು ಉಂಟುಮಾಡುತ್ತವೆ.

### 5.4.2 ಲಂಬರೇಖೆಗಳು : (Perpendicular lines)

ಕೆಳಗಿನ ಛೇಧಿಸುವ ರೇಖೆಗಳನ್ನು ಗಮನಿಸಿರಿ. ಅವು ಬಗೆಬಗೆಯ ಕೋನಗಳನ್ನು ಉಂಟುಮಾಡುತ್ತವೆ.



ಈ ಕೋನಗಳಲ್ಲಿ ಕೆಲವು ಲಘು ಕೋನಗಳು, ಕೆಲವು ವಿಶಾಲಕೋನಗಳು.ಛೇಧಕ ರೇಖೆಗಳು ಲಂಬಕೋನಗಳನ್ನು ಏರ್ಪಡಿಸಿದರೆ ಅವುಗಳನ್ನು ಲಂಬರೇಖೆಗಳು ಎನ್ನುತ್ತೇವೆ.



ಮೇಲಿನ ಚಿತ್ರಗಳಲ್ಲಿ ಅಂಚುಗಳೊಂದಿಗೆ ಇರುವ ರೇಖಾಖಂಡಗಳನ್ನು ಗಮನಿಸಿರಿ. ಅವು ಲಂಬಕೋನಗಳನ್ನುಂಟು ಮಡುತ್ತಿವೆಯಾ ? ಅವು ಒಂದನ್ನೊಂದು ಛೇದಿಸುಕೊಳ್ಳುತ್ತಿವೆಯಾ?




" ಎರಡು ರೇಖೆಗಳು $90^0$ ಕೊನದೊಂದಿಗೆ ಛೇಧಿಸಿಕೊಂಡರೆ ಅವನ್ನು ಪರಸ್ಪರ ಲಂಬರೇಖೆಗಳು ಎಂದು ಕರೆಯುತ್ತೇವೆ."

ಇಲ್ಲಿ '$l$' ಎಂಬುದು '$m$' ರೇಖಗೆ ಲಂಬವಾಗಿ ಇದೆ. ಇದನ್ನು $l \perp m$ ಎಂದು ಸೂಚಿಸುತ್ತೇವೆ.

**ಆಲೋಚಿಸಿ, ಚರ್ಚಿಸಿ, ಬರೆಯಿರಿ**



1. ಒಂದು ವೇಳೆ $l \perp m$ ಆದರೆ, ನಾವು $m \perp l$ ಎಂದು ಹೇಳಬಹುದೇ?
2. ಒಂದು ರೇಖೆಗೆ ಎಷ್ಟು ಲಂಬರೇಖೆಗಳನ್ನು ಎಳೆಯಬಹುದು.?

SCERT TELANGANA



Downloaded from https:// www.studiestoday.com

Downloaded from https:// www.studiestoday.com

3. ಆಂಗ್ಲ ಮಾಲೆಯಲ್ಲಿ ಯಾವ ಯಾವ ಅಕ್ಷರಗಳು ಲಂಬರೇಖೆಗಳನ್ನು ಹೊಂದಿವೆ

### 5.4.3 ಸಮಾನಾಂತರ ರೇಖೆಗಳು

ಕೆಳಗಿನ ಚಿತ್ರಗಳನ್ನು ಪರಿಶೀಲಿಸಿ








ರೈಲು ಹಳಿಗಳು, ಸ್ಕೇಲ್‌ನ ಅಂಚುಗಳನ್ನು, ವಿದ್ಯುತ್ ವೈರುಗಳನ್ನು ಗಮನಿಸಿ. ಈ ಜೊತೆಗಳಲ್ಲಿ ಇರುವ ಪ್ರತ್ಯೇಕತೆ ಏನು? ಅವುಗಳ ಅಂಚುಗಳನ್ನುಗಮನಿಸಿರಿ. ಇವುಗಳ ಪಥವನ್ನು ಬದಲಾಯಿಸದೇ ಅವುಗಳನ್ನು ವೃದ್ಧಿಸಿದರೆ ಅವು ಎಲ್ಲಿಯಾದರೂ ಛೇಧಿಸಿಕೊಳ್ಳುತ್ತವೆಯೇ?




ಒಂದೇ ಸಮತಲಕ್ಕೆ ಸೇರಿದ ಎರಡು ಛೇಧಿಸಿಕೊಳ್ಳದ ರೇಖೇಗಳನ್ನು ಸಮಾನಾಂತರ ರೇಖೆಗಳು ಎನ್ನುವರು.

ಈ ಚಿತ್ರದಲ್ಲಿ $l$ ಮತ್ತು $m$ ರೇಖೆಗಳು ಸಮಾನಾಂತರ ರೇಖೆಗಳು ಇವುಗಳನ್ನು $l \parallel m$ ಎಂದು ಬರೆದು. ($l$ , $m$ ಗೆ ಸಮಾನಾಂತರವಾಗಿದೆ ಎಂದು ಓದುತ್ತೇವೆ).

ನಿಮ್ಮ ತರಗತಿ ಕೊಣೆಯಲ್ಲಿ ಸಮಾನಾಂತರ ರೇಖೆಗಳನ್ನು ಸೂಚಿಸುವ ಕೆಲವು ಉದಾಹರಣೆಗಳನ್ನು ಬರೆಯಿರಿ.

**ಪ್ರಯತ್ನಿಸಿ**



ಒಂದು ಹಾಳೆಯ ಮೇಲೆ ಪಕ್ಕದಲ್ಲಿ ತೋರಿಸಿದಂತೆ ಎರಡು ರೇಖೆಗಳನ್ನು ಎಳೆಯಿರಿ. ಅವು ಒಂದಕ್ಕೊಂದು ಛೇಧಿಸಿಕೊಳ್ಳುತ್ತಿವೆಯೇ? ಅವುಗಳನ್ನು ಸಮಾನಾಂತರ ರೇಖೆಗಳು ಎನ್ನಬಹುದಾ? ಕಾರಣ ತಿಳಿಸಿರಿ.



ಎರಡು ಸಮಾನಾಂತರ ರೇಖೆಗಳನ್ನು ಎಳೆಯಿರಿ. ಅವುಗಳ ನಡುವಿನ ಕೋನವೇಷ್ಟು? ನಿಮ್ಮ ಶಿಕ್ಷಕರೊಡನೆ, ಸ್ನೇಹಿತರೊಡನೆ ಚರ್ಚಿಸಿ.



**ಅಭ್ಯಾಸ–5.3**

1. ಕೆಳಗಿನವುಗಳಲ್ಲಿ ಯಾವುವು ಲಂಬರೇಖೆಗಳನ್ನು, ಯಾವುವು ಸಮಾನಾಂತರ ರೇಖೆಗಳನ್ನು ಸೂಚಿಸುತ್ತವೆ. ಯಾವುವು ಎರಡನ್ನು ತೊರಿಸುತ್ತವೆ.
   i. ಕಿಟಕಿಯ ನೀಲವು ಕಡ್ಡಿಗಳು
   ii. ರೈಲು ಹಳಿಗಳು
   iii. ಆಂಗ್ಲ ಮಾಲೆಯ V ಅಕ್ಷರ
   iv. ಕಪ್ಪು ಹಲಗೆಯ ಎದುರೆದುರು ಅಂಚುಗಳು
   v. ಬಾಗಿಲಿನ ಪಕ್ಕ ಪಕ್ಕದ ಅಂಚುಗಳು




2. ನಿಮ್ಮ ಜಾಮಿಟ್ರಿ ಬಾಕ್ಸ್ ನಲ್ಲಿನ ಮೂಲೆ ಮಟ್ಟದ ಚಿತ್ರವನ್ನು ಹಾಳೆಯ ಮೇಲೆ ಚಿತ್ರಿಸಿರಿ. ಅದರಲ್ಲಿ ಲಂಬವಾಗಿರುವ ಅಂಚುಗಳನ್ನು ಗುರ್ತಿಸಿರಿ.

3. ABCD ಒಂದು ಆಯತ. $\overline{AC}$ ಮತ್ತು $\overline{BD}$ ಗಳು ಕರ್ಣಗಳು ಆದರೆ ಈ ಆಯತದಲ್ಲಿನ ಸಮಾನಾಂತರ, ಲಂಬ ಮತ್ತು ಛೇಧಕ ರೇಖೆಗಳ ಜೊತೆಗಳನ್ನು ಗುರ್ತಿಸಿ ಸಾಧ್ಯವಾದರೆ ಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ.
   a) ಸಮಾನಾಂತರ ರೇಖೆಗಳು b) ಲಂಬ ರೇಖೆಗಳು c) ಛೇಧಕ ರೇಖೆಗಳು



SCERT TELANGANA

Downloaded from https:// www.studiestoday.com

Downloaded from https:// www.studiestoday.com

## ನೆನಪಿನಲ್ಲಿಡಬೇಕಾದ ಅಂಶಗಳು

1. ಎರಡು ರೇಖಾಖಂಡಗಳನ್ನು ಪರಿಶೀಲನೆ, ನಕಲು ಮಾಡುವುದು ಮತ್ತು ಜ್ಯಾಮಿತಿಯ ಉಪಕರಣಗಳನ್ನು ಉಪಯೋಗಿಸುವ ಮೂಲಕ ಹೋಲಿಸಬಹುದು.
2. ಎರಡು ರೇಖಾಖಂಡಗಳನ್ನು ಸ್ಕೇಲ್ ಮತ್ತು ವಿಭಾಜಕವನ್ನು ಉಪಯೋಗಿಸಿ ಹೋಲಿಸಬಹುದು.
3. ರೇಖಾಖಂಡಗಳ ಉದ್ದಗಳನ್ನು ಸೆಂ.ಮೀ. ಮತ್ತು ಮಿ.ಮೀ. ಗಳಲ್ಲಿ ಅಳೆಯುವರು

   1 ಸೆಂ.ಮೀ. = 10 ಮಿ.ಮೀ.
4. ಕೋನ ಮಾಪಕವನ್ನು ಕೋನವನ್ನಳೆಯಲು ಉಪಯೋಗಿಸುತ್ತೇವೆ. ಕೋನಮಾಪಕ ಒಂದು ಅರ್ಧವೃತ್ತಾಕಾರ ಪರಿಕರ. ಇದರ ಕಂಸ 180° ಸಮ ಭಾಗಗಳಾಗಿ ಗುರ್ತಿಸಲಾಗಿರುತ್ತದೆ. ಒಂದೊಂದು ಭಾಗವನ್ನು ಒಂದು ಡಿಗ್ರೀ (1°)ಎನ್ನುತ್ತಾರೆ.
5. ಕೋನವನ್ನು ಅಳೆಯುವ ಪ್ರಮಾಣ ಡಿಗ್ರೀ(1°). ಇದು ಒಂದು ಭ್ರಮಣದಲ್ಲಿ $\frac{1}{360}$ನೇ ಭಾಗ.
6. 90° ಯನ್ನು ಲಂಬಕೋನವೆಂದು, 180° ಯನ್ನು ಸರಳಕೋನ ಎಂದು ಎನ್ನುವುರು.
7. 90° ಗಿಂತ ಕಡಿಮೆ ಇರುವ ಕೋನವನ್ನು ಲಘುಕೋನ ಎನ್ನುವರು.
8. 90° ಗಿಂತ ಹೆಚ್ಚು 180°ಗಿಂತ ಕಡಿಮೆ ಇರುವ ಕೋನವನ್ನು ವಿಶಾಲಕೋನ ಅಥವಾ ಅಧಿಕಕೋನ ಎನ್ನುವರು.
9. ಸರಳಕೋನಕ್ಕಿಂತ ಹೆಚ್ಚಿರುವ ಮತ್ತು ಸಂಪೂರ್ಣಕೋನಕ್ಕಿಂತ ಕಡಿಮೆಯಾಗಿರುವ ಕೋನವನ್ನು ಪರಾವರ್ತನಕೋನ ಎನ್ನವರು.
10. ಒಂದು ಸಾಮಾನ್ಯ ಬಿಂದು ಹೊಂದಿದ್ದು, ಒಂದೇ ಸಮತಲಕ್ಕೆ ಸೇರಿದ ಎರಡು ರೇಖೆಗಳನ್ನು ಛೇಧಕ ರೇಖೆಗಳು ಎನ್ನುವರು.
11. ಲಂಬಕೋನದೊಂದಿಗೆ ಛೇಧಿಸಿಕೊಳ್ಳುವ ಛೇಧನರೇಖೆಗಳನ್ನು ಲಂಬರೇಖೆಗಳು ಎನ್ನುವರು..
12. ಒಂದೇ ಸಮತಲಕ್ಕೆ ಸೇರಿದ್ದು, ಛೇಧಿಸಿಕೊಳ್ಳದ ರೇಖೆಗಳನ್ನು ಸಮಾನಾಂತರ ರೇಖೆಗಳು ಎನ್ನುವರು.
13. ಎರಡು ಸಮಾನಾಂತರ ರೇಖೆಗಳಿಗೆ ಸಾಮಾನ್ಯ ಬಿಂದು ಇರುವುದಿಲ್ಲ.

SCERT TELANGANA



Downloaded from https:// www.studiestoday.com

Downloaded from https:// www.studiestoday.com



# ಪೂರ್ಣಾಂಕಗಳು

## (INTEGERS)

### 6.1 ಪರಿಚಯ

ರಫೀಕ್‌ನ ತಂದೆ ಆತನಿಗೆ ಪ್ರತಿ ತಿಂಗಳು ₹ 100 ಪಾಕೆಟ್ ಮನಿ ನೀಡುತ್ತಾರೆ. ಆತ ಈ ಹಣವನ್ನು ತನ್ನ ತಾಯಿಗೆ ನೀಡಿ ಪ್ರತಿ ವಾರವೂ ಖರ್ಚಿಗೆ ತೆಗೆದುಕೊಳ್ಳುತ್ತಿರುತ್ತಾನೆ. ತನ್ನ ಹತ್ತಿರ ತೆಗೆದುಕೊಳ್ಳುತ್ತಿರುವ , ಕೊಡುತ್ತಿರುವ ಹಣದ ವಿವರಗಳನ್ನು ಆತನ ತಾಯಿ ಆಗಿಂದಾಗ್ಗೆ ಒಂದು ಕ್ರಮದಲ್ಲಿ ಒಂದು ಪುಸ್ತಕದಲ್ಲಿ ನಮೂದಿಸುತ್ತಿದ್ದರು.

ರಫೀಕ್ ಒಂದು ತಿಂಗಳಲ್ಲಿ ಮೊದಲ ವಾರದಲ್ಲಿ ₹50,ಎರಡನೆ ವಾರದಲ್ಲಿ ₹ 20, ಮೂರನೇ ವಾರದಲ್ಲಿ ₹30 ತೆಗೆದುಕೊಂಡನು. ಆತನಿಗೆ 4ನೇ ವಾರದಲ್ಲಿ ₹20 ಅವಶ್ಯಕವಾಯಿತು. ಆದರೆ ರಫೀಕ್ ನೀಡಿದ ಹಣ ಆಗಲೇ ಖರ್ಚಾಯಿತೆಂದು ಅತನ ತಾಯಿ ಹೇಳಿದರು. ಆಕೆ ಬರೆದುದನ್ನು ತೋರಿಸಿದಳು. ಆತನಿಗೆ ಈ ಬಾರಿ ಕೊಟ್ಟ ಹಣ್ಣವನ್ನು ಮುಂದಿನ ತಿಂಗಳ ಪಾಕೇಟ್ ಮನಿಯಲ್ಲಿ ಕಡಿಮೆಮಾಡಿ ಕೊಳ್ಳಬಹುದು ಎಂದಹೇಳಿ ₹20 ನ್ನು ಪಡೆದುಕೊಂಡನು. ಆತನ ತಾಯಿ ಅದಕ್ಕೆ ಒಪ್ಪಿ ಹಣವನ್ನು ನೀಡಿ ಅದನ್ನು ನಮೂದಿಸಿ ಕೊಂಡಳು.




**ಮೊದಲ ತಿಂಗಳು ನಮೂದಿಸಿದ ವಿವರಗಳು**

ಮುಂದಿನ ತಿಂಗಳು ಒಂದನೇ ತಾರೀಖು ರಫೀಕನ ತಂದೆ ಆತನಿಗೆ ₹. 100ನ್ನು ಯಥಾ ರೀತಿಯಾಗಿ ನೀಡಿದರು. ಅದನ್ನು ರಫೀಕ್ ತನ್ನ ತಾಯಿಗೆ ನೀಡಿದನು. ರಫೀಕ್ ತಾಯಿಯ ಬಳಿ ಆತನ ಹಣ ಎಷ್ಟಿದೆ ಎಂದು ಹೇಳಿ ? 80 ರೂಗಳಿವೆ ಅಲ್ಲವೆ ! ಏಕೆಂದರೆ ಕಳೆದ ತಿಂಗಳು ಮುಂಗಡವಾಗಿ ನೀಡಿದ ಹಣ ₹20 ಗಳನ್ನು 100 ರೂ. ಗಳಲ್ಲಿ ಕಳೆದರೆ ₹ 80 ಬರುತ್ತದಲ್ಲವೆ!

ಅದೇ ದಿನ ಸಂಜೆ ರಫೀಕ್‌ನ ಮಾವ ಬಂದರು. ಅವರು ತಿರುಗಿ ಹೋಗುವಾಗ ರಫೀಕ್‌ನಿಗೆ₹50.ಕೊಟ್ಟರು. ರಫೀಕ್ ತುಂಬಾ ಸಂತೋಷಗೊಂಡು ಅದನ್ನು ತನ್ನ ತಾಯಿಯ ಬಳಿ ಕೊಟ್ಟು ನಮೂದಿಸುವಂತೆ ಹೇಳಿದನು. ರಫಿಕ್‌ನ ತಾಯಿಯ ಬಳಿ ಆತನ ಹಣ ಎಷ್ಟು ಇದೆ ? ಹೇಳಿರಿ. ಒಟ್ಟು 130 ರೂ. ಆಯಿತಲ್ಲವೇ ? ಹೇಗೆ ? ಆಲೋಚಿಸಿ. ಮತ್ತೊಮ್ಮೆ ನಮೂದಿಸಿದ ವಿವರಗಳನ್ನು ಪರಿಶೀಲಿಸಿರಿ.




**ಎರಡನೇ ತಿಂಗಳು ನಮೂದಿಸಿದ ವಿವರಗಳು.**

ಮೇಲೆ ನೀಡಿದ ವಿವರಗಳನ್ನು ಪರಿಶೀಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿರಿ.

1. ರಫೀಕ್‌ನಿಗೆ ಆತನ ತಂದೆ ನೀಡುವ ಪಾಕೇಟ್ ಮನಿ ಎಷ್ಟು ?
2. ರಫೀಕ್ ಕಳೆದ ತಿಂಗಳ ನಾಲ್ಕುವಾರಗಳಲ್ಲಿ ಎಷ್ಟು ಖರ್ಚು ಮಾಡಿದ್ದಾನೆ ?
3. ರಫೀಕ್‌ನ ತಾಯಿ ನಾಲ್ಕನೆಯ ವಾರದಲ್ಲಿ ರಫೀಕ್‌ನಿಗೆ ಸಾಲವಾಗಿ ನೀಡಿದ ಹಣವೆಷ್ಟು?



Downloaded from https:// www.studiestoday.com

Downloaded from https:// www.studiestoday.com

4. ನಾಲ್ಕನೇ ವಾರದಲ್ಲಿ ರಫೀಕನಿಗೆ ಸಾಲವಾಗಿ ನೀಡಿರುವ ಹಣವನ್ನು ಆತನ ತಾಯಿ ಯಾವ ರೀತಿ ನಮೂದಿಸಿದ್ದಾರೆ?
5. ಸಂಖ್ಯಾ ರೇಖೆಯ ಮೇಲೆ "0" ಯ ಬಲಭಾಗಕ್ಕೆ ಗುರ್ತಿಸಿದ ₹. 20ಗಳನ್ನು ಎಡಭಾಗಕ್ಕೆ ಗುರ್ತಿಸಿದ ₹. 20 ಗಳಿಗೆ ವ್ಯತ್ಯಾಸವೇನು?
6. ರಫೀಕ್ ಈ ತಿಂಗಳಲ್ಲಿ ನೀಡಿದ ₹. 100ಗಳನ್ನು, ಅದೇ ವಿಧವಾಗಿ ₹. 50ಗಳನ್ನು ಸಂಖ್ಯಾರೇಖೆಯ ಮೇಲೆ ಅವನ ತಾಯಿ ಯಾವ ವಿಧವಾಗಿ ನಮೋದು ಮಾಡಿದ್ದಾಳೆ?

## 6.2 ಋಣ ಸಂಖ್ಯೆಗಳು ಯಾವ ರೀತಿ ಅಗತ್ಯವಾಗುತ್ತವೆ :

ಸಂಖ್ಯಾ ರೇಖೆಯ ಮೇಲೆ ಎರಡೂ ಭಾಗದಲ್ಲಿ ರಫೀಕ್‌ನ ತಾಯಿ ನಮೂದಿಸಿದ ₹. 20 ಒಂದೇ ಬೆಲೆಯನ್ನು ತಿಳಿಸುವುದಿಲ್ಲ ಎಂದು ತಿಳಿದುಕೊಂಡಿದ್ದೀರಿ ಅಲ್ಲವೇ! "0" ಗಿಂತ ಕಡಿಮೆ ಬೆಲೆಯಿರುವ ಸಂಖ್ಯೆಗಳು, ಹೆಚ್ಚು ಬೆಲೆಯಿರುವ ಸಂಖ್ಯೆಗಳು ಒಂದೇ ಅಲ್ಲವೆಂದು ನಾವು ಹಣ ಕೊಟ್ಟಾಗ, ಸಾಲವಾಗಿ ಪಡೆದಾಗ ಗಮನಿಸಿದ್ದೇವೆ.

ಈ ರೀತಿಯಾಗಿ ನಾವು ನಿತ್ಯಜೀವನದಲ್ಲಿ ಲಾಭನಷ್ಟಗಳನ್ನು, ಭೂತ ಭವಿಷ್ಯತ್ ಕಾಲಗಳಲ್ಲಿಯೂ, ಗರಿಷ್ಠ, ಕನಿಷ್ಠ ಉಷ್ಣಾಂಶವನ್ನು ನಮೂದುನಲ್ಲಿಯೂ ಇಂತಹ ಸಂಖ್ಯೆಗಳ ಅವಶ್ಯಕತೆಯನ್ನು ಗುರ್ತಿಸಬಹುದು.ಆದ್ದರಿಂದ ರಫೀಕ್ ತಾಯಿ ಸಂಖ್ಯಾರೇಖೇಯ ಮೇಲೆ "0" ಯ ಎಡಭಾಗಕ್ಕೆ ನಮೂದಿಸಿದ ಸಂಖ್ಯೆಗಳನ್ನು ( ಅಂದರೆ "0" ಗಿಂತ ಕಡಿಮೆಯಿರುವ ಸಂಖ್ಯೆಗಳನ್ನು ) ನಾವು ಋಣ ಸಂಖ್ಯೆಗಳೆನ್ನುತ್ತೇವೆ. ಇವುಗಳನ್ನು -1, -2, -3, -4 ....., (-10, -20,-30) ಎಂಬ ಚಿಹ್ನೆಗಳಿಂದ ಸೂಚಿಸುತ್ತೇವೆ.




**ಉದಾ–1** : ಒಂದು ವ್ಯಾಪಾರದಲ್ಲಿ ₹. 200 ನಷ್ಟವನ್ನು (-200) ಎಂದೂ, ₹. 200 ಲಾಭವನ್ನು (+200) ಎಂದೂ ಸೂಚಿಸುತ್ತೇವೆ.

**ಉದಾ–2:** $0^{\circ}c$ ಗಿಂತ ಕಡಿಮೆಯಿರುವ ಉಷ್ಣಾಂಶವನ್ನು ಋಣಾತ್ಮಕವಾಗಿಯೂ $0^{\circ}c$ ಗಿಂತ ಹೆಚ್ಚಾಗಿರುವ ಉಷ್ಣಾಂಶವನ್ನು ಧನಾತ್ಮಕವಾಗಿಯೂ ಗುರುತಿಸಿದರೆ

$0^{\circ}c$ ಉಷ್ಣಾಂಶಕ್ಕಿಂತ $3^{\circ}c$ ಕಡಿಮೆಯನ್ನು $-3^{\circ}c$ ಎಂದೂ

$0^{\circ}c$ ಉಷ್ಣಾಂಶಕ್ಕಿಂತ $3^{\circ}c$ ಹೆಚ್ಚಾಗಿರುವುದನ್ನು $+3^{\circ}c$ ಎಂದೂ ತಿಳಿಸುತ್ತಾರೆ.

**ಪ್ರಯತ್ನಿಸಿರಿ :**



ಮಾನಸ, ಶ್ವೇತಾ, ಅವರ ಅಣ್ಣನಿಂದ ₹. 50 ಮತ್ತು ₹. 20 ರಂತೆ ಸಾಲವಾಗಿ ಪಡೆದಿದ್ದಾರೆ. ಈವಿಷಯವನ್ನು ಸಂಖ್ಯಾರೇಖೆಯ ಮೇಲೆ ಹೇಗೆ ಸೂಚಿಸುತ್ತೀರಿ? ಒಂದು ವೇಳೆ ಅವರ ತಂದೆಯು ₹. 100 ಪಾಕೇಟ್ ಮನಿ ಕೊಟ್ಟರೆ ಸಾಲ ತೀರಿಸಿದ ನಂತರ ಯಾರ ಬಳಿ ಹೆಚ್ಚು ಹಣ ಇರುತ್ತದೆ?

## 6.3 ಋಣ ಸಂಖ್ಯೆಗಳನ್ನು ತಿಳಿಸುವ ಮತ್ತಷ್ಟು ಉದಾಹರಣೆಗಳು.




1.ಒಂದು ಪಕ್ಷಿ ಆಕಾಶದಲ್ಲಿ ಸಮುದ್ರಮಟ್ಟಕ್ಕಿಂತ 25ಮೀ ಎತ್ತರದಲ್ಲಿ ಹಾರುತ್ತಿರುವಾಗ ಒಂದು ಮೀನು ಸಮುದ್ರದಲ್ಲಿ 2ಮೀ ಆಳದಲ್ಲಿ ಈಜಾಡುತ್ತಿದೆ.






SCERT TELANGANA

Downloaded from https:// www.studiestoday.com

Downloaded from https:// www.studiestoday.com

2. ಒಂದು ಪರ್ವತದ ಮೇಲೆ 500ಮೀ ಎತ್ತರದಲ್ಲಿ ಒಂದು ಬಾವುಟ ಹಾರಾಡುತ್ತಿದೆ. ಅ ಪರ್ವತದ 25 ಮೀ ಕೆಳಗೆ ಒಂದು ಗುಡಾರ ಹಾಕಲ್ಪಟ್ಟಿದೆ.
3. ದೆಹಲಿಯ ಒಂದು ರಾತ್ರಿಯ ಉಷ್ಣಾಂಶ 5$^{o}$C ಇದ್ದರೆ ಹಿಮಾಚಲ ಪ್ರದೇಶದಲ್ಲಿರುವ ಕುಫ್ರಿಯಲ್ಲಿ 0$^{o}$C ಗಿಂತ 6$^{o}$C ಗಳು ನಮೂದಾಗಿದೆ.

**ಆಲೋಚಿಸಿ – ಚರ್ಚಿಸಿರಿ.**

ಧನಾತ್ಮಕ, ಋಣಾತ್ಮಕ ಸಂಖ್ಯೆಗಳನ್ನು ತಿಳಿಸುವ ಇನ್ನೂ ಕೆಲವು ನಿತ್ಯ ಜೀವನದ ಸಮಸ್ಯೆಗಳನ್ನು ತಿಳಿಸಿ ಚರ್ಚಿಸಿರಿ.



ನಾವು ಈ ವಿಧವಾಗಿ ಪೂರ್ಣಸಂಖ್ಯೆಗಳು ಮತ್ತು ಋಣ ಸಂಖ್ಯೆಗಳನ್ನು ಒಳಗೊಂಡ ಸಂಖ್ಯಾಸಮೂಹವನ್ನು **ಪೂರ್ಣಾಂಕಗಳು** ಎನ್ನುತ್ತೇವೆ. ಈ ಸಂಖ್ಯೆಗಳ ಗಣವನ್ನು "Z" ಎಂಬ ಅಕ್ಷರದಿಂದ ಸೂಚಿಸುತ್ತೇವೆ.
Z = {....., -3, -2, -1, 0, 1, 2, 3, .....}

**ಪ್ರಯತ್ನಿಸಿರಿ :**



ಭಾರತದೇಶದಲ್ಲಿ ಜನವರಿ ತಿಂಗಳಲ್ಲಿ ವಿವಿಧ ಪ್ರಾಂತಗಳಲ್ಲಿ ನಮೂದಾದ ಉಷ್ಣೋಗ್ರತೆಯ ವಿವರಗಳನ್ನು ಸೇಕರಿಸಿ, ಅವುಗಳನ್ನು ಪೂರ್ಣಾಂಕಗಳಲ್ಲಿ ಸೂಚಿಸಿರಿ.

## 6.4 ಪೂರ್ಣಾಂಕಗಳನ್ನು ಸಂಖ್ಯಾರೇಖೆಯ ಮೇಲೆ ಸೂಚಿಸುವುದು.

ಈಗ ರಫೀಕ್ ತಾನು ಬಚ್ಚಿಟ್ಟುಕೊಂಡ ಹಣವನ್ನು, ಮತ್ತೆ ತೆಗೆದುಕೊಂಡಾಗ ಯಾವವಿಧವಾಗಿ ನಮೂದಿಸಿದ್ದಾಳೆಂದು ಅರ್ಥಮಾಡಿಕೊಂಡಿದ್ದಾನೆ ಅಲ್ಲವೇ?




ಸೊನ್ನೆಯ ಎಡಭಾಗಕ್ಕಿರುವ ಸಂಖ್ಯೆಗಳನ್ನು ಋಣ ಪೂರ್ಣಾಂಕಗಳೆಂದೂ, ಬಲಕ್ಕಿರುವ ಸಂಖ್ಯೆಗಳನ್ನು ಧನ ಪೂರ್ಣಾಂಕಗಳೆಂದು ಕರೆಯುತ್ತಾರೆ. ಸೊನ್ನೆ (0) ಎನ್ನುವುದು ಧನಾತ್ಮಕವೂ ಅಲ್ಲ, ಋಣಾತ್ಮಕವೂ ಅಲ್ಲ. ನೀವು ಸಹಒಪ್ಪುವಿರಾ? ಏಕೆ ?

ಮೇಲೆ ತೋರಿಸಿದ ಸಂಖ್ಯಾರೇಖೆಯನ್ನಾಧರಿಸಿ ಉತ್ತರ ನೀಡಿರಿ.

1. ಸೊನ್ನೆಗೆ ಅತಿ ಹತ್ತಿರವಾಗಿರುವ ಧನಪೂರ್ಣಾಂಕ ಯಾವುದು ?
2. ಸೊನ್ನೆಗೆ ಎಡಭಾಗದಲ್ಲಿ ಎಷ್ಟು ಋಣಸಂಖ್ಯೆಗಳಿರುತ್ತವೆ?
3. (–2) ಅಥವಾ (–1) ರಲ್ಲಿ ಯಾವುದು ದೊಡ್ಡದು ?
4. 3 ಮತ್ತು (–5) ರಲ್ಲಿ ಯಾವುದು ಚಿಕ್ಕದು?
5. ಧನಾತ್ಮಕ, ಋಣಾತ್ಮಕ ಅಲ್ಲದ ಪೂರ್ಣಾಂಕ ಯಾವುದು?

**ಇವು ಮಾಡಿರಿ**

ಒಂದು ನಿಲುವು ರೇಖೆಯನ್ನೆಳೆದು ಅದರ ಮೇಲೆ ಪೂರ್ಣಾಂಕಗಳನ್ನು ಗುರ್ತಿಸಿರಿ.
-5, 4, -7, -8, -2, 9, 5, -6, 2.





## ಅಭ್ಯಾಸ –6.1

1. ಕೆಳಗಿನ ವಾಕ್ಯಗಳನ್ನು ಚಿಹ್ನೆಗಳನ್ನುಪಯೋಗಿಸಿ ಪೂರ್ಣಂಕಗಳಾಗಿ ಬರೆಯಿರಿ.
   (i) 3000ಮೀ ಎತ್ತರದಲ್ಲಿ ವಿಮಾನ ಹಾರುತ್ತಿದೆ. (      )
   (ii) ಒಂದು ಮೀನು ನೀರಿನ ಮಟ್ಟಕ್ಕೆ 5ಮೀ ಕೆಳಗೆ ಇದೆ. (      )



SCERT TELANGANA

Downloaded from https:// www.studiestoday.com

Downloaded from https:// www.studiestoday.com

(iii) ಹೈದರಾಬಾದಿನಲ್ಲಿ ಉಷ್ಣೋಗ್ರತೆ 0°c ಗಿಂತ 35°c ಹೆಚ್ಚು ಇದೆ ( )

(iv) 0° C ಉಷ್ಣೋಗ್ರತೆಹತಿರ ನೀರು ಘನೀಕರಿಸುತ್ತದೆ. ( )

(v) ಎವರೆಸ್ಟ್ ಶಿಖರದ ಮೇಲೆ ಜನವರಿ ತಿಂಗಳಲ್ಲಿ ಸರಾಸರಿ ಉಷ್ಣೋಗ್ರತೆ 0° C ಗಿಂತ 36° C ಕಡಿಮೆ ( )

(vi) ಜಲಾಂತರ್ಗಾಮಿ ಸಮುದ್ರಮಟ್ಟಕ್ಕೆ 500 ಮೀ. ಕೆಳಗೆ ಇದೆ. ( )

(vii) ಡಾರ್ಜಿಲಿಂಗ್‌ನಲ್ಲಿ ಜುಲೈ ತಿಂಗಳಲ್ಲಿ ಸರಾಸರಿ ಉಷ್ಣೋಗ್ರತೆ 0°c ಗಿಂತ19°c ಕಡಿಮೆ ( )

(viii) ಜನವರಿ ತಿಂಗಳಲ್ಲಿ ವಿಶಾಖಪಟ್ಟಣದಲ್ಲಿ ಸರಾಸರಿ ಅತ್ಯಲ್ಪ ಉಷ್ಣೋಗ್ರತೆ 18°c ( )

2. ಯಾವುದಾದರೂ ಐದು ಋಣ ಪೂರ್ಣಾಂಕಗಳನ್ನು ಬರೆಯಿರಿ.

3. ಯಾವುದಾದರೂ ಐದು ಧನಪೂರ್ಣಾಂಕಗಳನ್ನು ಬರೆಯಿರಿ.

4. ಕೆಳಗಿನ ಪೂರ್ಣಾಂಕಗಳನ್ನು ಸಂಖ್ಯಾ ರೇಖೆಯ ಮೇಲೆ ಗುರ್ತಿಸಿರಿ. -4, 3, 2, 0, -1, 5



5. ಸತ್ಯವೋ, ಅಸತ್ಯವೋ ತಿಳಿಸಿರಿ. ಅಸತ್ಯ ಹೇಳಿಕೆಯನ್ನು ಸತ್ಯ ಹೇಳಿಕೆಯಾಗಿ ಬರೆಯಿರಿ.

(i) ಸಂಖ್ಯಾರೇಖೆಯ ಮೇಲೆ (–7) ಸಂಖ್ಯೆ (–6)ಗೆ ಬಲಭಾಗದಲ್ಲಿರುತ್ತದೆ ( )

(ii) ಸೊನ್ನೆ ಎನ್ನುವುದು ಧನ ಪೂರ್ಣಾಂಕ ( )

(iii) 9 ಎನ್ನುವುದು ಸಂಖ್ಯಾರೇಖೆಯ ಮೇಲೆ ಸೊನ್ನೆಗೆ ಬಲಭಾಗದಲ್ಲಿರುವ ಸಂಖ್ಯೆ ( )

(iv) –1 ಎಂಬ ಪೂರ್ಣಾಂಕ (–2)ಕ್ಕೂ ಹಾಗೂ 0ಗೂ ನಡುವೆ ಇರುತ್ತದೆ ( )

### 6.5 ಪೂರ್ಣಾಂಕಗಳ ಕ್ರಮ




ಪವನ್, ಹರೀಶ್ ಎಂಬ ಇಬ್ಬರು ಸ್ನೇಹಿತರು ಅವರು ಗ್ರಾಮದಲ್ಲಿರುವ ಬಾವಿಯಲ್ಲಿರುವ ನೀರನ್ನು ಪರಿಶೀಲಿಸುತ್ತಿದ್ದಾರೆ ! ಅದರಲ್ಲಿರುವ ಮೆಟ್ಟಿಲುಗಳ ಆಧಾರದ ಮೇಲೆ ಬೇಸಿಗೆ ಕಾಲದಲ್ಲಿ ನೀರಿನ ಪ್ರಮಾಣ ಹೇಗೆ ಕಡಿಮೆಯಾಗುತ್ತದೆ.? ಮಳೆಗಾಲದಲ್ಲಿ ಹೇಗೆ ಹೆಚ್ಚಾಗುತ್ತದೆ? ಎಂದು ಪರಿಶೀಲಿಸಿದರು. ಈ ನೀರಿನ ಮಟ್ಟವನ್ನು ಯಾವರೀತಿ ಗುರುತಿಸಿದರೆ ಚೆನ್ನಾಗಿರುತ್ತದೆ ಎಂದು ಚರ್ಚಿಸುವಾಗ ಅವರಿಗೆ ಒಂದು ಒಳ್ಳೆಯ ಆಲೋಚನೆ ಬಂದಿತು. ಬಾವಿಯನ್ನು ಹೋಲುವ ಒಂದು ಬೀಕರನ್ನು ತೆಗೆದುಕೊಂಡು ಅದರಿಂದ ಬಾವಿಯ ನಮೂನೆಯನ್ನು ತಯಾರಿಸಿದರು. ಹೆಚ್ಚಾಗಿ ಸ್ಥಿರವಾಗಿರುವ ನೀರಿನ ಮಟ್ಟವನ್ನು 0 ಯಿಂದ ಗುರ್ತಿಸಿ, ನಂತರ ಮೆಟ್ಟಿಲ ಸಂಖ್ಯೆಗಳ ಆಧಾರದ ಮೇಲೆ ಕೆಳಗೆ –1, –2, –3..... ವಿಧವಾಗಿಯೂ, ಮೇಲೆ +1, +2, +3,... ಎಂದು ಗುರುತಿಸಿದ ಒಂದು ಕಾಗದವನ್ನು ಬೀಕರಿಗೆ ಅಂಟಿಸಿದರು. ಈ ಬೀಕರಿನ ನೀರಿನ ಮಟ್ಟವನ್ನು ಹೆಚ್ಚಿಸಲು ಮತ್ತು ಕಡಿಮೆ ಮಾಡಲು ಇಂಕ್ ಫಿಲ್ಲರ್ ಉಪಯೋಗಿಸಿದರು. ಈಗ ಹೇಳಿರಿ.

1. ಬೀಕರಿನಲ್ಲಿ ನೀರನ್ನು ಹಾಕಿದರೆ ಏನಾಗುತ್ತದೆ?

2. 0 ಮಟ್ಟದಿಂದ ನೀರನ್ನು ತೆಗೆದರೆ ನೀರಿನ ಮಟ್ಟ ಹೇಗೆ ಬದಲಾಗುತ್ತದೆ.?

ಇನ್ನೊಮ್ಮೆ ಸಂಖ್ಯಾರೇಖೆಯ ಮೇಲೆ ಪೂರ್ಣಾಂಕಗಳನ್ನು ಹೇಗೆ ಗುರುರ್ತಿಸುತ್ತಾರೋ ಪರಿಶೀಲಿಸೋಣ




ಸಂಖ್ಯಾರೇಖೆಯ ಆಧಾರದ ಮೇಲೆ 4 > 2 ಅಂದರೆ 4 ಎಂಬುದು 2 ಕ್ಕೆ ಬಲಬದಿಯಲ್ಲಿ 2 > 0 ಎಂದರೆ 2 ಸಂಖ್ಯೆ 0 ಯ ಬಲಭಾಗದಲಿರುವಂತೆ. ಹಾಗೆಯೇ 0 ಯು –3ರ ಬಲಭಾಗದಲ್ಲಿದೆ. ಆದ್ದರಿಂದ 0 > -3.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಇದರ ಆಧಾರದ ಮೇಲೆ ಬಲಭಾಗಕ್ಕೆ ಹೋದಂತೆ ಸಂಖ್ಯೆಯ ಬೆಲೆ ಹೆಚ್ಚುತ್ತಾ ಹೋಗುತ್ತದಲ್ಲವೇ! ಅದೇ ವಿಧವಾಗಿ ಎಡಕ್ಕೆ ಹೋದಂತೆ ಬೆಲೆಗಳು ಕಡಿಮೆಯಗುವುದೆಂದು ಭಾವಿಸಬಹುದು.

ಆದ್ದರಿಂದ -3 < -2, -2 < -1, -1 < 0 ಮತ್ತು 0 < 1, 1 < 2, 2 < 3 ಹೀಗೆ ಬರೆಯಬಹುದು.

**ಇವುಗಳನ್ನು ಮಾಡಿರಿ.**



ಮೇಲೆ ತಿಳಿಸಿದ ವಿಷಯಗಳನ್ನಾಧರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.

(– ಚಿಹ್ನೆ < ಅಥವಾ > ಉಪಯೋಗಿಸಿ.)

0..........-1    -3..........-2    5.......... 6    -4..........



**ಅಭ್ಯಾಸ–6.2**

1. ಎರಡು ಪೂರ್ಣಾಂಕಗಳ ನಡುವೆ > ಅಥವಾ < ಗುರ್ತುಗಳಿಂದ ಹೋಲಿಸಿರಿ.
   (i) -1 .......... 0    (ii) -3 .......... -7
   (iii) -10 .......... +10    (iv) 0 .......... -5
   (v) -100 .......... 99    (vi) 0 .......... 100

2. ಕೆಳಗಿನ ಪೂರ್ಣಾಂಕಗಳನ್ನು ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಬರೆಯಿರಿ.
   (i) -7, 5, -3    (ii) -1, 3, 0
   (iii) 1, 3, -6    (iv) -5, -3, -1

3. ಸರಿಯೋ, ತಪ್ಪೋ ತಿಳಿಸಿರಿ. ತಪ್ಪಿದ್ದಲ್ಲಿ ಸರಿಪಡಿಸಿ ಬರೆಯಿರಿ.
   (i) ಸಂಖ್ಯಾರೇಖೆಯ ಮೇಲೆ ಸೊನ್ನೆಯು -3 ರ ಬಲಭಾಗದಲ್ಲಿರುತ್ತದೆ. ( )
   (ii) (-12) ಮತ್ತು (+12) ಎನ್ನುವುವು ಸಂಖ್ಯಾರೇಖೆಯ ಮೇಲೆ ಒಂದು ಪೂರ್ಣಾಂಕವನ್ನು ಸೂಚಿಸುತ್ತವೆ. ( )
   (iii) ಪ್ರತಿ ಧನ ಪೂರ್ಣಾಂಕ 0 ಗಿಂತ ದೊಡ್ಡದು ( )
   (iv) -5 < 8 ( )
   (v) (-100) > (+100) ( )
   (vi) -1 < -8 ( )

4. ಕೆಳಗೆ ಕೊಟ್ಟ ಸಂಖ್ಯೆಗಳ ನಡುವೆ ಇರುವ ಪೂರ್ಣಾಂಕಗಳನ್ನು ತಿಳಿಸಿರಿ. ಸಂಖ್ಯಾರೇಖೆಯ ಮೇಲೆ ಗುರ್ತಿಸಿರಿ.
   (i) -1 ಮತ್ತು 1    (ii) -5 ಮತ್ತು 0    (iii) -6 ಮತ್ತು -8    (iv) 0 ಮತ್ತು -3

5. ಒಂದು ದಿನ ಸಿಮ್ಲಾದಲ್ಲಿ ಉಷ್ಣೋಗ್ರತೆ -4° c ಮತ್ತು ಅದೇ ದಿನ ಕುಪ್ರಿಯಲ್ಲಿ -6°c ಯಾಗಿ ನಮೂದಾಗಿದೆ. ಆ ದಿನ ಯಾವ ನಗರದಲ್ಲಿ ಅತಿ ಹೆಚ್ಚು ಚಳಿ ಇದೆ? ಹೇಗೆ?

**ಪ್ರಯತ್ನಿಸಿರಿ :**




ರಾಜೇಷ್‌ಗೆ ಇರುವ ಕಿರಾಣಿ ಅಂಗಡಿಯ ಭವನದ ಮೇಲ್ಭಾಗಕ್ಕೆ ಹೋಗಿ ಆಡಿಕೊಳ್ಳುವುದಕ್ಕೆ ಇಲ್ಲವೇ ಸುತ್ತಮುತ್ತ ಇರುವ ಪ್ರದೇಶ ನೋಡುವುದಕ್ಕೆ ಮೆಟ್ಟಿಲುಗಳಿವೆ. ಅದೇ ವಿಧವಾಗಿ ಕಿರಾಣಿ ಸಾಮಾನುಗಳನ್ನು ಸಂಗ್ರಹಿಸಿಡಲು ನೆಲಮಾಳಿಗೆ ಇದೆ. ಅಲ್ಲಿಗೆ ಹೋಗುವುದಕ್ಕೂ ಸಹ ಮೆಟ್ಟಿಲುಗಳು ಇವೆ. ಪ್ರತಿದಿನ ರಾಜೇಷ್ ಮಗಳು ಹಾಸಿನಿ, ಶಾಲೆಯಿಂದ ಬಂದನಂತರ, ಮೆಟ್ಟಿಲುಗಳೇರಿ ಮಾಳಿಗೆಯಲ್ಲಿ ಆಡಿಕೊಳ್ಳುತ್ತಾಳೆ. ಅದೇ ವಿಧವಾಗಿ ರಾತ್ರಿವೇಳೆಯಲ್ಲಿ ಸಾಮಾನುಗಳನ್ನು ಗೌಡನ್‌ನಲ್ಲಿ ಜೋಡಿಸಿಲು ತನ್ನ ತಂದೆಗೆ ಸಹಾಯಪಡುತ್ತಾಳೆ. ಪಕ್ಕದ ಚಿತ್ರದಲ್ಲಿ ಯಾವ ವಿಧವಾಗಿ ಮೇಲಕ್ಕೆ, ಕೆಳಕ್ಕೆ ಇರುವ ಮೆಟ್ಟಿಲುಗಳನ್ನು ಪೂರ್ಣಾಂಕಗಳಿಂದ ಗುರ್ತಿಸಿದ ವಿಧವನ್ನು ಗಮನಿಸಿರಿ. ಕೆಳಗಿನ ವಾಕ್ಯಗಳಿಗೆ ಸರಿಹೊಂದುವ ಪೂರ್ಣಾಂಕಗಳಿಂದ ಗುರ್ತಿಸಿರಿ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

(a) ಅಂಗಡಿಯಿಂದ 7 ಮೆಟ್ಟಿಲು ಮೇಲೆ ಹೋಗಿದ್ದಾಳೆ.
(b) ಅಂಗಡಿಯಿಂದ 3 ಮೆಟ್ಟಿಲು ಕೆಳಗೆ ಇಳಿದಿದ್ದಾಳೆ.
(c) ಮೇಲಕ್ಕೆ 5 ಮೆಟ್ಟಿಲು ಹತ್ತಿ, ಮತ್ತೆ ಹಾಗೆ 3 ಮೆಟ್ಟಿಲು ಮೇಲೆ ಹತ್ತಿದ್ದಾಳೆ.
(d) ಕೆಳಗಿನ ನೆಲಮಾಳಿಗೆಗೆ 4 ಮೆಟ್ಟಿಲು ಇಳಿದು, ಮತ್ತೆ 3 ಮೆಟ್ಟಿಲು ಕೆಳಗೆ ಇಳಿದಿದ್ದಾಳೆ.
(e) ಕೆಳಗೆ 5 ಮೆಟ್ಟಿಲು ಇಳಿದು, ಅಲ್ಲಿಂದ 10 ಮೆಟ್ಟಿಲು ಮೇಲೆ ಹತ್ತಿದ್ದಾಳೆ.
(f) ಮೇಲ್ಗಡೆಗೆ 8 ಮೆಟ್ಟಿಲುಗಳು ಹತ್ತಿ , ಅಲ್ಲಿಂದ 9 ಮೆಟ್ಟಿಲು ಕೆಳಗೆ ಇಳಿದಿದ್ದಾಳೆ.

ನೀವು ಬರೆದ ಉತ್ತರಗಳನ್ನು ನಿಮ್ಮ ಸ್ನೇಹಿತರ ಉತ್ತರಗಳೊಂದಿಗೆ ಪರಿಶೀಲಿಸಿಕೊಂಡು, ಚರ್ಚಿಸಿರಿ.

### 6.6 ಪೂರ್ಣಾಂಕಗಳ ಸಂಕಲನ ಮತ್ತು ವ್ಯವಕಲನ.

**ಆಟ ಆಡಿಕೊಳ್ಳೋಣ**




ಚಿತ್ರದಲ್ಲಿ ತೋರಿಸಿದಹಾಗೆ 10 ತಂಪು ಪಾನೀಯಗಳ ಮುಚ್ಚಳಗಳನ್ನು ಕೆಳಮುಖ ಮತ್ತು ಮೇಲ್ಮುಖವಾಗಿ ಜೋಡಿಸಿ. ಬಣ್ಣ ಹಾಕಿ ಮೇಲ್ಮುಖ ಮುಚ್ಚಳಕ್ಕೆ (+1) ಆದರೆ ಕೆಳಮುಖ ಮುಚ್ಚುಳಕ್ಕೆ (–1)ಯಾಗಿ ಗುರ್ತಿಸಿರಿ.

ಈ ಹತ್ತು ಮುಚ್ಚಳಗಳನ್ನು ಸೇರಿಸಿ ಒಂದೇಬಾರಿ ಹಾಕಲು ನಿಮ್ಮ ಸ್ನೇಹಿತನಿಗೆ ತಿಳಿಸಿ. ಮುಚ್ಚಳಗಳು ಕೆಳಗೆ ಬೀಳುತ್ತಲೇ,  ಅಂದರೆ (+1) ಮತ್ತು (–1) ಯಾಗಿರುವ ಮುಚ್ಚಳಗಳ ಜೋತೆಗಳನ್ನು ತೊಲಗಿಸಿ ಎಂದು ಹೇಳಿರಿ. ಉಳಿದ ಮುಚ್ಚಳಗಳನ್ನು ಲೆಕ್ಕಿಸಿರಿ. ಉದಾಹರಣೆಗೆ ಇಲ್ಲಿ 4 ಜೊತೆಗಳು ಏರ್ಪಟ್ಟರೆ, ಉಳಿದ ಮುಚ್ಚಳಗಳನ್ನು ಲೆಕ್ಕಿಸಿರಿ.ಉದಾಹರಣೆಗೆ 4 ಜೊತೆಗಳು ಏರ್ಪಟ್ಟರೆ, ಉಳಿದ 2 ಮುಚ್ಚಳಗಳು ಮೇಲ್ಮುಖವಾಗಿದ್ದರೆ ನಿನ್ನ ಸ್ನೇಹಿತನಿಗೆ ಅದಕ್ಕೆ (+2) ಬಂದಂತೆ ಲೆಕ್ಕ.



ಒಂದು ವೇಳೆ 3ಜೊತೆಗಳೇರ್ಪಟ್ಟಿದ್ದರೆ 4 ಮುಚ್ಚಳಗಳು ಕೆಳಮುಖವಾಗಿದ್ದರೆ ಅವುಗಳಿಗೆ (–4) ಪಾಯಿಂಟ್‌ಗಳು ಬಂದತೆ.



ನಿನಗೆ ಹಾಗೂ ನಿನ್ನ ಸ್ನೇಹಿತರಿಗೆ ಬಂದ ಪಾಯಿಂಟ್‌ಗಳನ್ನು ಸಂಖ್ಯಾರೇಖೆಮೇಲೆ ನಮೂದಿಸಿರಿ. ಯಾರಿಗೆ ಮೊದಲು 10 ಅಂಕಗಳು ಬರುತ್ತವೆಯೋ ಅವರು ಗೆದ್ದಂತೆ.




ನಿನ್ನ ರೆಕಾರ್ಡ್




ನಿನ್ನ ಸ್ನೇಹಿತನ ರೆಕಾರ್ಡ್

ಸಂಖ್ಯಾರೇಖೆಗಳನ್ನು ಪರಿಶೀಲಿಸಿದಿರಾ?



Downloaded from https:// www.studiestoday.com

SCERT TELANGANA

Downloaded from https:// www.studiestoday.com

ಎರಡು ಧನಪೂರ್ಣಾಕಗಳು ಬಂದಾಗ (13) + (+1) = 4 ಹಾಗೆ, ಎರಡು ಋಣಪೂರ್ಣಂಕಗಳು ಬಂದಾಗ (-3) + (-2) = -5 ಹಾಗೆ ಸೇರಿಸಿದ್ದೀರಿ ಅಲ್ಲವೆ? ಈಗ ಒಂದು ಧನ ಪೂರ್ಣಾಂಕ ಹಾಗೂ ಒಂದು ಋಣ ಪೂರ್ಣಾಂಕಗಳನ್ನು ಹೇಗೆ ಕೂಡುತ್ತೀರೋ ಮುಚ್ಚಳ ಆಟದಿಂದ ನೋಡೋಣ. (+1)+(–1)=0 ಆದ್ದರಿಂದ (+1), (–1) ಬರುವ ಜೋಡಿಗಳನ್ನು ತೆಗೆದು ನಂತರ ಉಳಿದ ಮುಚ್ಚಳಗಳನ್ನು ಪರಿಶೀಲಿಸಿರಿ.

ಉದಾ –1: (-3) + (+2) = (-1) + [(-2)+(+2)]

= -1+0

= -1 




(+4) + (-2) = (+2) + [(+2) + (-2)]

= (+2) + 0

= +2 




ಈ ರೀತಿ ಮಾಡುವುದರಿಂದ ಸಂಖ್ಯಾರೇಖೆಯ ಅವಶ್ಯಕತೆ ಇಲ್ಲದೆಯೇ ಆಟದಿಂದ ಸುಲಭವಾಗಿ ಸಂಕಲನ ಮಾಡಬಲ್ಲರು.

**ಪ್ರಯತ್ನಿಸಿರಿ**

ಕೆಳಗಿನವುಗಳ ಮೊತ್ತವನ್ನು ಕಂಡುಕೊಳ್ಳಿರಿ.

(i) -7 + 8 (ii) -3 + 5

(iii) -3 - 2 (iv) +7 - 10



### 6.6.1 ಸಂಖ್ಯಾರೇಖೆಯ ಮೇಲೆ ಪೂರ್ಣಾಂಕಗಳನ್ನು ಸಂಕಲನ ಮಾಡುವುದು

ಸಂಖ್ಯಾರೇಖೆಯಮೇಲೆ ಪೂರ್ಣಾಂಕಗಳನ್ನು ಯಾವ ವಿಧವಾಗಿ ಸಂಕಲನ ಮಾಡುತ್ತಾರೋ ತಿಳಿದುಕೊಳ್ಳೋಣ.

1. ಸಂಖ್ಯಾರೇಖೆಯ ಮೇಲೆ 2 ಮತ್ತು 3 ನ್ನು ಕೂಡಿರಿ




ಸಂಖ್ಯಾರೇಖೆಯ ಮೇಲೆ ಸೊನ್ನೆಯಿಂದ 2 ಸ್ಥಾನಗಳು ಬಲಕ್ಕೆ ಚಲಿಸಿದರೆ 2ಕ್ಕೆ ಸೇರುತ್ತೇವೆ ಅಲ್ಲಿಂದ 3 ಸ್ಥಾನಗಳು ಬಲಕ್ಕೆ ಚಲಿಸಿದಾಗ 5ಕ್ಕೆ ಸೇರುತ್ತೇವೆ. ಆದ್ದರಿಂದ 2 + 3 = 5.

2. (-4) ಮತ್ತು (-3)ನ್ನು ಕೂಡೋಣ.




ಸಂಖ್ಯಾರೇಖೆಯ ಮೇಲೆ ಮೊದಲು ನಾವು ಸೊನ್ನೆಯಿಂದ 4 ಸ್ಥಾನ ಎಡಕ್ಕೆ ಚಲಿಸಿದರೆ (-4), ಅಲ್ಲಿಂದ 3 ಸ್ಥಾನ ಅದೇರೀತಿ ಎಡಕ್ಕೆ ಚಲಿಸಿದರೆ (-7) ಸೇರುತ್ತೇವೆ. ಆದ್ದರಿಂದ (-4) + (-3) = (-7) ಆಗುತ್ತದೆ.



Downloaded from https:// www.studiestoday.com

Downloaded from https:// www.studiestoday.com

3. (+ 6) ಮತ್ತು (-2) ಗಳನ್ನು ಕೂಡಿಸೋಣ. ಸಂಖ್ಯಾರೇಖೆಯ ಮೇಲೆ ಮೊದಲು ನಾವು ಸೊನ್ನೆಯಿಂದ ಬಲಕ್ಕೆ 6 ಸ್ಥಾನಗಳು ಚಲಿಸಿ. ಅಲ್ಲಿಂದ 2 ಸ್ಥಾನಗಳು ಎಡಕ್ಕೆ ಚಲಿಸಿದರೆ 4ರ ಹತ್ತಿರ ಸೇರುತ್ತೇವೆ.




ಆದ್ದರಿಂದ (+6) + (-2) = (+4) ಆಗುತ್ತದೆ.

4. (-5) ಮತ್ತು (+3)ನ್ನು ಕೂಡಿಸೋಣ. ಸಂಖ್ಯಾರೇಖೆಯ ಮೇಲೆ ಮೊದಲು 5 ಸ್ಥಾನ ಎಡಕ್ಕೆ ಚಲಿಸಿದರೆ –5ನ್ನು ಸೇರುತ್ತವೆ. ಅಲ್ಲಿಂದ 3 ಸ್ಥಾನ ಬಲಕ್ಕೆ ಚಲಿಸಿದರೆ (+3) ನಾವು –2ಕ್ಕೆ ಸೇರುತ್ತೇವೆ.

ಆದ್ದರಿಂದ (-5) + (+3) = -2 ಆಗುತ್ತದೆ.




5. ಸುನೀತ 3ಕ್ಕೆ –3ನ್ನು ಸೇರಿಸಿದಳು. ಮೊದಲು 0 ಯಿಂದ ಬಲಭಾಗಕ್ಕೆ 3 ಸ್ಥಾನಗಳು (+3) ಕ್ಕೆ ತಲುಪಿದಳು. ಅಲ್ಲಿಂದ ಎಡಕ್ಕೆ 3 ಸ್ಥಾನಗಳು (–3) ತಲುಪಿದಳು. ಆಕೆ ಈಗ ಎಲ್ಲಿಗೆ ತಲುಪಿದ ಹಾಗೆ ಭಾವಿಸಬೇಕು.




ಸಂಖ್ಯಾರೇಖೆಯ 3 + (-3) = 0 ಎಂದು ತಿಳಿಯುತ್ತದೆ.

ಇದೇ ರೀತಿಯಾಗಿ ನಾವು 5ಕ್ಕೆ –5ನ್ನು ಕೂಡಿದರೂ ಮೊತ್ತ ಸೊನ್ನೆಯೇ ಆಗುತ್ತದೆ. ಆದ್ದರಿಂದ 1 ಮತ್ತು -1; 2 ಮತ್ತು -2; 3 ಮತ್ತು – 3 ಗಳಂತಹ ಸಂಖ್ಯೆಗಳನ್ನು ಪರಸ್ಪರ ಕೂಡಿದರೆ ಸೊನ್ನೆಯೇ ಬರುತ್ತದೆ. ಇವುಗಳನ್ನು ಪರಸ್ಪರ ಸಂಕಲನ ವಿಲೋಮಗಳು ಎನ್ನುತ್ತೇವೆ.

7 ರ ಸಂಕಲನ ವಿಲೋಮ ಯಾವುದು?

– 8 ರ ಸಂಕಲನ ವಿಲೋಮ ಯಾವುದು?

**ಪ್ರಯತ್ನಿಸಿರಿ.**



1. ಸಂಖ್ಯಾರೇಖೆಯನ್ನುಪಯೋಗಿಸಿ ಕೆಳಗಿನವುಗಳ ಮೊತ್ತವನ್ನು ಕಂಡುಹಿಡಿಯಿರಿ.

   (i) (-3) + 5 (ii) (-5) + 3

   ನೀವು ಇಂತಹ ಇನ್ನೆರಡು ಪ್ರಶ್ನೆಗಳನ್ನು ರಚಿಸಿ ಸಂಖ್ಯಾರೇಖೆಯೊಂದಿಗೆ ಬಿಡಿಸಿ.

2. ಕೆಳಗಿನವುಗಳ ಮೊತ್ತವನ್ನು ಸಂಖ್ಯಾರೇಖೆಯನ್ನುಪಯೋಗಿಸದೇಯೇ ಕಂಡುಹಿಡಿಯಿರಿ.

   (i) (+5) + (-5) (ii) (+6) + (-7) (iii) (-8) + (+2)

   ಇಂತಹ ಇನ್ನು ಐದು ಪ್ರಶ್ನೆಗಳನ್ನು ತಯಾರಿಸಿ ಪುನರಾವರ್ತಿಸಿ.



Downloaded from https:// www.studiestoday.com

Downloaded from https:// www.studiestoday.com

ಕೆಳಗಿನವುಗಳನ್ನು ಪರಿಶೀಲಿಸಿರಿ.

| | | |
|---|---|---|
| 3 + 2 = 5 | 20 + 6 = 26 | 30 + 22 = 52 |
| 8 + 16 = 24 | 9 + 10 = 19 | 20 + 14 =3 |

ಏನನ್ನು ಗಮನಿಸಿದಿರಿ? **'ಎರಡು ಧನ ಪೂರ್ಣಾಂಕಗಳ ಮೊತ್ತ ಧನ ಪೂರ್ಣಾಂಕವೇ ಆಗಿರುತ್ತದೆ.'**

| | | |
|---|---|---|
| -4 + (-6) = -10 | -8 + (-12) = -20 | -3 + (-9) = -12 |

ಏನನ್ನು ಗಮನಸಿದಿರಿ? **'ಎರಡು ಋಣ ಪೂರ್ಣಾಣಕಗಳ ಮೊತ್ತ ಋಣ ಪೂರ್ಣಾಂಕವೇ ಆಗಿರುತ್ತದೆ'.**

| | |
|---|---|
| 15 + (-17) = -2 | -23 + 4 = -9 |
| -11 + 16 = 5 | -12 + 12 = 0 |

ಮೇಲಿನ ಸಮಸ್ಯೆಗಳನ್ನು ಗಮನಿಸಿದರೆ **'ಒಂದು ಧನ ಪೂರ್ಣಾಂಕ ಮತ್ತು ಒಂದು ಋಣ ಪೂರ್ಣಾಂಕಗಳ ಮೊತ್ತ ಒಂದು ಧನ ಪೂರ್ಣಾಂಕ ಅಥವಾ ಒಂದು ಋಣ ಪೂರ್ಣಾಂಕ ಅಥವಾ ಸೊನ್ನೆ ಆಗಿರಬಹುದು.'**

ಒಂದು ಧನ, ಒಂದು ಋಣ ಪೂರ್ಣಾಂಕಗಳನ್ನು ಕೂಡಿಸಿದಾಗ ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆದು ದೊಡ್ಡ ಸಂಖ್ಯೆಯ ಗುರುತನ್ನು ಹಾಕುತ್ತೇವೆ.

ಕೆಲವು ಉದಾಹರಣೆಗಳನ್ನು ನೋಡೋಣ.

**ಉದಾ–1 :** (–10) + (+14) + (–5) + (+8) ಮೊತ್ತ ವೆಷ್ಟು?

**ಪರಿಹಾರ :** ಧನ ಪೂರ್ಣಾಂಕಗಳನ್ನು ಮತ್ತು ಋಣಪೂರ್ಣಾಂಕಗಳನ್ನು ಗುಂಪುಗಳನ್ನಾಗಿ ಮಾಡಿ ಕೂಡೋಣ.

(–10) + (+14) + (–5) + (+8) = (-10) + (–5) + (+14) + (+8)

= -15 + 22 = +7.

**ಉದಾ–2 :** (–20) , (–82), (–28) ಮತ್ತು (-14) ಮೊತ್ತವನ್ನು ಕಂಡುಹಿಡಿಯಿರಿ.

**ಪರಿಹಾರ :** (–20) + (-82) + (-28) + (-14) = –144

**ಉದಾ–3 :** 25 + (-21) + (-20) + (+17) + (-1) ಗಳ ಮೊತ್ತವೆಷ್ಟು?

**ಪರಿಹಾರ :** 25 + (-21) + (-20) + (+17) + (-1) = 25 + (+17) + (–21) + (-20) + (-1)

= 42 – 42 = 0

## ಅಭ್ಯಾಸ–6.3

1. ಕೆಳಗಿನ ಪೂರ್ಣಾಂಕಗಳನ್ನು ಸಂಖ್ಯಾರೇಖೆಯನ್ನು ಬಳಸಿಕೊಂಡು ಕೂಡಿರಿ.

   (i) 7 + (-6) (ii) (-8) + (-2) (iii) (-6) + (-5) + (+2)

   (iv) (-8) + (-9) + (+17) (v) (-3) + (-8) + (-5) (vi) (-1) + 7 + (-3)

2. ಕೆಳಗಿನ ಪೂರ್ಣಾಂಕಗಳನ್ನು ಸಂಖ್ಯಾರೇಖೆ ಬಳಸದಯೇ ಕೂಡಿರಿ.

   (i) 10 + (-3) (ii) -10 + (+16) (iii) (-8) + (+8)

   (iv) -215 + (+100) (v) (-110) + (-22) (vi) 17 + (-11)

3. ಸಂಕಲನ ಮಾಡಿರಿ.

   (i) 120 ಮತ್ತು -274 (ii) -68 ಮತ್ತು 28

   (iii) -29, 38 ಮತ್ತು 190 (iv) -60, -100 ಮತ್ತು 300.

SCERT TELANGANA



Downloaded from https:// www.studiestoday.com

Downloaded from https:// www.studiestoday.com

4. ಸಂಕ್ಷೇಪಿಸಿರಿ.

(i) (-6) + (-10) + 5 + 17 (ii) 30 + (-30) + (-60) + (-18)

(iii) (-80) + (+40) + (-30) + (+6) (iv) 70 + (-18) + (-10) + (-17)

### 6.6.2 ಪೂರ್ಣಾಂಕಗಳ ವ್ಯವಕಲನ

ನಾವು ಎರಡು ಪೂರ್ಣಾಂಕಗಳು 5 ಮತ್ತು (–2)ಗಳನ್ನು ಸಂಖ್ಯಾರೇಖೆಯ ಮೇಲೆ ಕೂಡಿಸಿದಾಗ 5 ರಿಂದ 2 ಸ್ಥಾನ ಎಡಕ್ಕೆ ಚಲಿಸಿದ್ದೇವೆ.

ಆಗ ನಾವು 3ನ್ನು ತಲುಪಿದ್ದೇವೆ. ಆದ್ದರಿಂದ 5 + (-2) = 3




ಅಂದರೆ ಧನ ಪೂರ್ಣಾಂಕಗಳನ್ನು ಕೂಡಿಸುವಾಗ ಬಲಕ್ಕೂ, ಋಣ ಪೂರ್ಣಾಂಕಗಳನ್ನು ಕೂಡಿಸುವಾಗ ಎಡಕ್ಕೂ ಸಂಖ್ಯಾರೇಖೆಯ ಮೇಲೆ ಸಂಖ್ಯೆಗಳನ್ನು ಬದಲಾಯಿಸುತ್ತೇವೆ. ಇದೇ ವಿಧವಾಗಿ ಪೂರ್ಣಾಂಕಗಳ ವ್ಯವಕಲನದಲ್ಲಿ ಕೂಡ 5 ರಿಂದ 2ನ್ನು ಕಳೆಯುವಾಗ ನಾವು ಎಡಕ್ಕೆ ಬದಲಾಯಿಸಿದೆವು. ಆದ್ದರಿಂದ 5-2=3 ಆಗುತ್ತದೆ. ನಾವು ಈಗ ಕೆಳಗಿನ ಉದಾಹರಣೆಯನ್ನು ಪರಿಶೀಲಿಸೋಣ.

**ಉದಾ–4 :** 6 ರಿಂದ –5 ನ್ನು ಕಳೆಯಿರಿ.

**ಪರಿಹಾರ :** 6 ರಿಂದ –5 ನ್ನು ಕಳೆಯುವುದೆಂದರೆ (–5)ಕ್ಕೆ ಎಷ್ಟನುಕ ಕೂಡಿದರೆ 6 ಬರುತ್ತೆದೆಂಬುದನ್ನು ತಿಳಿದುಕೊಳ್ಳುವುದೇ.

ಕೆಳಗಿನ ಸಂಖ್ಯಾರೇಖೆಯನ್ನು ಪರಿಶೀಲಿಸಿ..




-5 ಎಂಬುದು 6 ರಿಂದ 11 ಯೂನಿಟ್‌ಗಳಷ್ಟು ದೂರದಲ್ಲಿದೆ. ಆದ್ದರಿಂದ –5 ಕ್ಕೆ 11 ನ್ನು ಕೂಡಿದರೆ ಮೊತ್ತ 6 ಆಗುತ್ತದೆ.

ಆದ್ದರಿಂದ 6 - (-5) = 11

6 ರಿಂದ –5ನ್ನು ಕಳೆಯಬೇಕೆಂದರೆ, 6ಕ್ಕೆ 5ನ್ನು (–5ರ ಸಂಕಲನ ವಿಲೋಮ)ಕೂಡುವುದೇ ಆಗುತ್ತದೆ.

ಆದ್ದರಿಂದ 6 - (-5) = 6 + 5 = 11

ಆದ್ದರಿಂದ ಒಂದು ಪೂರ್ಣಾಂಕವನ್ನು ಕಳೆಯುವುದು ಎಂದರೆ ಅದರ ಸಂಕಲನ ವಿಲೋಮವನ್ನು ಕೂಡುವುದೇ ಆಗಿರುತ್ತದೆ.

ಇದೇ ವಿಧವಾಗಿ 4-(-2) ಎಷ್ಟಾಗುತ್ತದೆ? ಇದನ್ನು ಸಂಖ್ಯಾರೇಖೆಯ ಮೇಲೆ ಎಡಕ್ಕೆ ಅಥವಾ ಬಲಕ್ಕೆ ಸೂಚಿಸುತ್ತೀರಾ? ನೀವು ಎಡಕ್ಕೆ 2 ಸ್ಥಾನಗಳು ಚಲಿಸಿದರೆ 2 ಕ್ಕೆ ಸೇರುತ್ತೀರಿ. ಆಗ 4-(-2)=2 ಎಂದು ಹೇಳಬೇಕು. ಆದ್ದರಿಂದ ಇದು ಸತ್ಯವಲ್ಲ. ಏಕೆಂದರೆ 4-2=2 ಮತ್ತು $4 - (-2) \neq 4 - 2$ ಆಗುತ್ತದೆ. ಆದ್ದರಿಂದ 4-(-2)ಕ್ಕೆ ನಾವು 4 ರಿಂದ ಬಲಕ್ಕೆ 2 ಸ್ಥಾನಗಳು ಚಲಿಸುತ್ತೇವೆ. ಇದು ನಾವು 4-(-2)ಕ್ಕೆ ವಿರುದ್ಧವಾಗಿದೆ. ಒಂದು ಸಂದರ್ಭದಲ್ಲಿ ನಾವು 6 ನ್ನು ತಲುಪಿದರೆ ಇನ್ನೊಂದು ಸಂದರ್ಭದಲ್ಲಿ 2 ನ್ನು ತಲುಪುತ್ತೇವೆ.



Downloaded from https:// www.studiestoday.com

Downloaded from https:// www.studiestoday.com

**ಉದಾ–5:** (-7) - (-9) ಯನ್ನು ಸಂಖ್ಯಾರೇಖೆ ಬಳಸಿ ಕಂಡುಹಿಡಿಯಿರಿ.

**ಪರಿಹಾರ :** (-7) - (-9) ಆದ್ದರಿಂದ (-7) + 9 (-9 ರ ಸಂಕಲನ ವಿಲೋಮ 9)




ಆದ್ದರಿಂದ ಸಂಖ್ಯಾರೇಖೆಯ ಮೇಲೆ (-7) ರಿಂದ 9 ಯುನಿಟ್‌ಗಳು ಬಲಕ್ಕೆ ಚಲಿಸಿದರೆ ನಾವು 2ನ್ನು ಸೇರುತ್ತೇವೆ.

ಆದ್ದರಿಂದ (-7)-(-9) = -7 + 9 = 2 ಆಗುತ್ತದೆ.

**ಇವು ಮಾಡಿರಿ.**



| | | | | | |
|---|---|---|---|---|---|
| 1. | -5 - (-3) | 2. | -7 - (+2) | 3. | -7 - (-5) |
| 4. | 3 - (-4) | 5. | 5 - (+7) | 6. | 4 - (-2) |

**ಆಲೋಚಿಸಿ, ಚರ್ಚಿಸಿ, ಬರೆಯಿರಿ.**

3 - 3 = 0
3 - 2 = 1
3 - 1 = 2
3 - 0 = 3
3 - (-1) = 4
3 - (-2) = 5
3 - (-3) = 6

> ಇಲ್ಲಿ 3ರಿಂದ ಕಳೆಯುವ ಸಂಖ್ಯೆಯನ್ನು ಗಮನಿಸಿರಿ. ಇಲ್ಲಿ ಬೆಲೆಯು ಕಡಿಮೆಯಾದಂತೆ ಫಲಿತಾಂಶದಲ್ಲಿ ಹೆಚ್ಚಳವಾಗಿರುವುದು ಕಂಡುಬರುತ್ತದಲ್ಲವೇ.!
> ಈ ರೀತಿಯು ಫಲಿತಾಂಶ ಎಲ್ಲಾ ಪೂರ್ಣಾಂಕಗಳಿಗೂ ಅನ್ವಹಿಸುತ್ತದೇಯೇ?

**ಉದಾ–6:** (-13) ರಿಂದ (-6) ನ್ನು ಕಳೆಯಿರಿ.

**ಪರಿಹಾರ :** (-13) - (-6) = (-13) + 6 ((−6)ರ ಸಂಕಲನ ವಿಲೋಮ)

= -13 + 6 = -7.

**ಉದಾ–7:** (-8) ರಿಂದ (+8)ನ್ನು ಕಳೆಯಿರಿ

**ಪರಿಹಾರ :** (-8) - (+8) = (-8) +(+ 8) ( (+8)ರ ಸಂಕಲನ ವಿಲೋಮ)

= -8 + (-8) = -16

**ಉದಾ -8.** ಸೂಕ್ಷ್ಮೀಕರಿಸಿ. (-6) - (+7) - (-24)

**ಪರಿಹಾರ :** (-6) - (+7) - (-24) = (-6) + ((+7)ರ ಸಂಕಲನ ವಿಲೋಮ) + ((-24)ರ ಸಂಕಲನ ವಿಲೋಮ)

= -6 + (-7) + (+24) = -13 + 24 = 11.

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ-6.4

1. ಕಂಡುಹಿಡಿಯಿರಿ.

(i) 40 - (22) (ii) 84 - (98) (iii) (-16) + (-17)

(iv) (-20) - (13) (v) (38) - (-6) (iv) (-17) - (-36)

2. ಬಿಟ್ಟ ಸ್ಥಳಗಳನ್ನು >, < ಅಥವಾ = ಗುರುತಿನಿಂದ ತುಂಬಿರಿ.

(i) (-4) + (-5) ___________ (-5) - (-4)

(ii) (-16) - (-23) ___________ (-6) + (-12)

(iii) 44 - (-10) ___________ 47 + (-3)

(iv) (-21) + (-22) ___________ (-22) + (-21)

3. ಬಿಟ್ಟ ಸ್ಥಳಗಳನ್ನು ಪೂರ್ಣಗೊಳಿಸಿ.

(i) (-13) + ___________ = 0 (ii) (-16) + 16 = ___________

(iii) (-5) + ___________ = -14 (iv) ___________ - 16 = -22

4. ಸಂಕ್ಷೇಪಿಸಿ

(i) (-6) - (5) - (2) (ii) (-12) + 42 - 7 - 2

(iii) (-3) + (-6) + (-24) (iv) 40 - (-50) - (2)

## ನೆನಪಿನಲ್ಲಿಡಬೇಕಾದ ಅಂಶಗಳು

1. ನಾವು ವ್ಯಾಪಾರದಲ್ಲಿ ನಷ್ಟ, ಸೊನ್ನೆ ಡಿಗ್ರಿ ಗಿಂತ ಕಡಿಮೆ ಉಷ್ಣತೆ, ಗತಿಸಿದ ಕಾಲ, ಸಮುದ್ರ ಮಟ್ಟಕ್ಕಿಂತ ಕೆಳಗಿನ ಆಳತೆಗಳನ್ನು ಅಳೆಯಲು ಋಣ ಪೂರ್ಣಾಂಕಗಳನ್ನು ಬಳಸುತ್ತೇವೆ.
2. ಪೂರ್ಣಸಂಖ್ಯೆಗಳು (0,1, 2, 3, .....), ಋಣ ಸಂಖ್ಯೆಗಳು (-1, -2, -3, .....) ಒಳಗೊಂಡಿರುವ ಸಂಖ್ಯೆಗಳನ್ನು ಪೂರ್ಣಾಂಕಗಳೆನ್ನುವರು. ಪೂರ್ಣಾಂಕಗಳ ಗಣವನ್ನು Z ಅಕ್ಷರದಿಂದ ಸೂಚಿಸುತ್ತಾರೆ.

   Z = {..... -3, -2, -1, 0, 1, 2, 3, .....}.
3. ಪೂರ್ಣಾಂಕಗಳ ಸಂಕಲನ, ವ್ಯವಕಲನಗಳನ್ನು ಸಂಖ್ಯಾರೇಖೆಯ ಮೇಲೆ ಸೂಚಿಸಬಹುದು.
4. ಎರಡು ಧನ ಪೂರ್ಣಾಂಕಗಳ ಮೊತ್ತ ಧನ ಪೂರ್ಣಾಂಕವೇ ಆಗಿರುತ್ತದೆ.

   [ಉದಾ: (+3) + (+4) = +7]
5. ಎರಡು ಋಣ ಪೂರ್ಣಾಂಕಗಳ ಮೊತ್ತ ಮತ್ತೊಂದು ಋಣ ಪೂರ್ಣಾಂಕವೇ ಆಗಿರುತ್ತದೆ.

   [ಉದಾ: (-3) + (-4) = -7]
6. ಒಂದು ಧನ ಮತ್ತು ಒಂದು ಋಣ ಪೂರ್ಣಾಂಕಗಳನ್ನು ಕೂಡಿಸುವಾಗ ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಕಳೆದು ದೊಡ್ಡ ಸಂಖ್ಯೆಯ ಚಿಹ್ನೆ ಹಾಕಬೇಕು.

   (ಉದಾ: (+4)+(-3)=+1

   -4 + 3 = -1
7. ಎರಡು ಪೂರ್ಣಾಂಕಗಳ ವ್ಯತ್ಯಾಸವೆಂದರೆ, ಕಳೆಯಬೇಕಾದ ಸಂಖ್ಯೆಯ ಸಂಖ್ಯಾ ವಿಲೋಮವನ್ನು ಕೂಡುವುದೇ ಆಗಿರುತ್ತದೆ.

   (ಉದಾ: (+5) - (-3) = 5 + 3 = 8

**ಪೂರ್ಣಸಂಖ್ಯೆಗಳಿಂದ ವಿನೋದ**

**ಒಂದು ಕಪ್ಪೆ ತನ್ನ ದಾಹವನ್ನು ತೀರಿಸಿಕೊಳ್ಳಲು ನೀರಿಗಾಗಿಹುಡುಕುತ್ತಾ ಹೋಗಿ 30ಮೀ ಆಳವುಳ್ಳ ಬಾವಿಗೆ ಬಿದ್ದಿತು. ಆ ಕಪ್ಪೆಯು ಬಾವಿಯಿಂದ ಹೊರಬರುವುದು ಅನಿಶ್ಚಿತ. ಅದು ಮೇಲೇರಲು ಪ್ರಯತ್ನಿಸಿತು. ಪ್ರತಿದಿನ ಹಗಲು 3 ಮೀ. ಮೇಲೇರಿದರೆ ರಾತ್ರಿ 2ಮೀ. ಕೆಳಕ್ಕೆ ಜಾರುತ್ತಿತ್ತು. ಹಾಗಾದರೆ ಆ ಕಪ್ಪೆ ಬಾವಿಯಿಂದ ಹೊರಬರಲು ಎಷ್ಟು ದಿನ ಬೇಕಾಗುವುದು ?**





SCERT TELANGANA

Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ –7

# ಭಿನ್ನರಾಶಿಗಳು –ದಶಮಾಂಶ ಭಿನ್ನರಾಶಿಗಳು

## 7.1 ಪರಿಚಯ :



ರಾಮು ಒಂದು ಸೇಬಿನಹಣ್ಣನ್ನು ಕೊಂಡು ತನ್ನ ಗೆಳೆಯನೊಂದಿಗೆ ಸಮಾನವಾಗಿ ಹಂಚಿಕೊಳ್ಳಬಯಸಿದನು. ಅಂದರೆ ಆ ಹಣ್ಣನ್ನು ಎರಡು ಸಮಾನ ಭಾಗಗಳನ್ನಾಗಿ ಮಾಡಿ ರಾಮು ಒಂದು ಭಾಗವನ್ನು ತೆಗೆದುಕೊಂಡು ತನ್ನ ಗೆಳೆಯನಿಗೆ ಇನ್ನೊಂದು ಭಾಗ ಕೊಡಬೇಕೆಂದುಕೊಂಡನು. " ನೀವು ನಾಲ್ಕು ಮಂದಿ ಗೆಳೆಯರಿದ್ದರೆ ಆಗ ಏನುಮಾಡುವಿರಿ



ಎಂದು ರೇಷ್ಮಾ ಅವನ್ನನು ಪ್ರಶ್ನಿಸಿದಳು. ಆಗ ರಾಮು ಮತ್ತೆ ಪ್ರತಿ ಅರ್ಧ ಭಾಗವನ್ನು ಎರಡು ಸಮಾನ ಭಾಗಗಳಾಗಿ ಮಾಡಿ, 'ಒಂದೊಂದು ಭಾಗ ಪೂರ್ತಿ ಹಣ್ಣಿನಲ್ಲಿ ಎಷ್ಟನೇ ಭಾಗ'ಎಂದು ರೇಷ್ಮಾಳನ್ನು ಕೇಳಿದನು.



ಆಗ ರೇಷ್ಮ ಈ ನಾಲ್ಕು ಸಮಾನ ಭಾಗಗಳನ್ನು ಸೇರಿಸಿದರೆ ಪೂರ್ತಿ ಹಣ್ಣು ಉಂಟಾಗುತ್ತದೆ ಎಂದು ಹೇಳಿದಳು. ಆದ್ದರಿಂದ ಪ್ರತಿ ತುಂಡು ಒಟ್ಟು ಸೇಬುಣ್ಣಿನಲ್ಲಿ 1/4ನೇ ಭಾಗ.

ಆದ್ದರಿಂದ ಯಾವುದನ್ನಾದರೂ ಎರಡು ಸಮಾನ ಭಾಗಗಳನ್ನಾಗಿ ಮಾಡಿದರೆ ಪ್ರತಿಭಾಗವು ಪೂರ್ಣದಲ್ಲಿ ಅರ್ಧವನ್ನು ಸೂಚಿಸುತ್ತದೆ. ಎಂದು ಹೇಳುತ್ತೇವೆ.

ಕೆಳಗಿನ ಚಿತ್ರಗಳನ್ನು ಪರಿಶೀಲಿಸಿ.

**ಪೂರ್ಣ ಭಾಗ** **ಅಪೂರ್ಣಗೆರೆ ಅನುಗುಣವಾಗಿ ಕತ್ತರಿಸಿರಿ**








## 7.2 ಭಿನ್ನರಾಶಿ

ಭಿನ್ನರಾಶಿ ಎಂದರೆ ಒಂದು ಮೊತ್ತದಲ್ಲಿ ಸ್ವಲ್ಪಭಾಗ.

$\frac{5}{12}$ ಒಂದು ಭಿನ್ನರಾಶಿ ಇದನ್ನು 5 ಬೈ 12 ಎಂದು ಓದುತ್ತೇವೆ.

ಇದರಲ್ಲಿ 12 ಏನನ್ನು ಸೂಚಿಸುತ್ತದೆ ? ಒಂದು ಗುಂಪಿನ ಅಥವಾ ಒಂದು ವಸ್ತುವನ್ನು ಎಷ್ಟು ಸಮ ಭಾಗಗಳಾಗಿ ವಿಭಜಿಸಲ್ಪಟ್ಟಿದೆಯೋ ತಿಳಿಸುವ ಸಂಖ್ಯೆ ಮತ್ತು 5 ಏನನ್ನು ಸೂಚಿಸುವುದು ? ನಾವು ತೆಗೆದುಕೊಂಡ ಅಥವಾ ಆಯ್ದುಕೊಂಡ ಸಮಾನ ಭಾಗಗಳ ಸಂಖ್ಯೆಯನ್ನು ಇದು ಸೂಚಿಸುತ್ತದೆ. ಇದರಲ್ಲಿ 5ನ್ನು ಅಂಶ ಎಂದು, 12ನ್ನು, ಛೇದ ಎಂದು ಕರೆಯುವರು

$\frac{3}{7}$ ನಲ್ಲಿ ಅಂಶವನ್ನು, $\frac{4}{15}$ ನಲ್ಲಿ ಛೇಧವನ್ನು ತಿಳಿಸಿರಿ.

**ಪ್ರಯತ್ನಿಸಿ :**



1. ಕೆಳಗಿನವುಗಳನ್ನು ಚಿತ್ರರೂಪದಲ್ಲಿ ತೋರಿಸಿರಿ.

(i) $\frac{3}{4}$ (ii) $\frac{2}{8}$ (iii) $\frac{1}{3}$ (iv) $\frac{5}{8}$



SCERT TELANGANA

Downloaded from https:// www.studiestoday.com

Downloaded from https:// www.studiestoday.com

2. ಕೆಳಗಿನ ಚಿತ್ರಗಳು ಸೂಚಿಸುವ ಭಿನ್ನರಾಶಿಗಳನ್ನು ಬರೆಯಿರಿ.



(i) (ii) (iii)

ಈ ಭಿನ್ನರಾಶಿಗಳೆಲ್ಲವೂ ಒಂದಕ್ಕಿತ ಕಡಿಮೆ ಮತ್ತು ಪೂರ್ಣದಲ್ಲಿ ಭಾಗಗಳು. ಇವುಗಳನ್ನು ಸಮ ಭಿನ್ನರಾಶಿಗಳು ಎನ್ನುವರು.

**ಇವನ್ನು ಮಾಡಿ.**



1. ಯಾವುದಾದರೂ ಐದು ಸಮ ಭಿನ್ನರಾಶಿಗಳನ್ನು ಬರೆದು, ಅವುಗಳನ್ನು ಚಿತ್ರರೂಪದಲ್ಲಿ ತೋರಿಸಿ.
2. ಪಕ್ಕದಲ್ಲಿ ಕೊಟ್ಟಿರುವ ಚಿತ್ರವನ್ನು ನೋಡಿದ ರಾಣಿ ಚಿತ್ರದಲ್ಲಿ ಛಾಯೆಗೊಳಿಸಿದ ಭಾಗವನ್ನು $\frac{1}{4}$ ಎಂದು ಹೇಳಿದಳು. ಇದು ಸರಿಯಾದುದೇ? ನಿಮ್ಮ ಉತ್ತರಕ್ಕೆ ಕಾರಣ ಕೊಡಿ.



**ವಿಷಮ ಭಿನ್ನರಾಶಿಗಳು:**

ಭಿನ್ನರಾಶಿಯಲ್ಲಿ ಛೇದಕ್ಕಿಂತ ಅಂಶ ದೊಡ್ಡದಾಗಿದ್ದರೆ, ಅದನ್ನು ವಿಷಮ ಭಿನ್ನರಾಶಿ ಎನ್ನುವರು. $\frac{3}{2}, \frac{5}{2}, \frac{7}{3}, \frac{8}{2}$ ಮುಂತಾದವುಗಳು ಇದಕ್ಕೆ ಉದಾಹರಣೆಗಳು.

ಈ ಭಿನ್ನ ರಾಶಿಗಳಲ್ಲಿ ಅಂಶವು, ಛೇಧಕ್ಕಿಂತ ದೊಡ್ಡದೋ, ಅಲ್ಲವೋ ಸರಿನೋಡಿರಿ. ಯಾವುದಾದರೂ ಐದು ವಿಷಮ ಭಿನ್ನರಾಶಿಗಳನ್ನು ಬರೆಯಿರಿ. ಈ ವಿಷಮ ಭಿನ್ನರಾಶಿಗಳನ್ನು ಚಿತ್ರ ರೂಪದಲ್ಲಿ ಹೇಗೆ ತೋರಿಸುವಿರಿ?

**ಒಂದು ಉದಾಹರಣೆಯನ್ನು ಪರಿಶೀಲಿಸೋಣ**



ಇವುಗಳಲ್ಲಿ ಪ್ರತಿ ವೃತ್ತವು ಮೊತ್ತವನ್ನು(ಪೂರ್ಣಭಾಗವನ್ನು) ಸೂಚಿಸುತ್ತದೆ. ನಮಗಿರುವ ಎರಡು ಮೊತ್ತಗಳಲ್ಲಿ ಎರಡು ಸಮ ಭಾಗಗಳಾಗಿ ಮಾಡಲಾಗಿದೆ. ಒಟ್ಟು ಮೂರು ಅರ್ಧಭಾಗಗಳು ಛಾಯೆಗೊಳಿಸಲಾಗಿದೆ. ಆದ್ದರಿಂದ ಇದನ್ನು $\frac{3}{2}$ ಎಂದು ಸೂಚಿಸುತ್ತೇವೆ. ಆದ್ದರಿಂದ ವಿಷಮ ಭಿನ್ನರಾಶಿಗಳನ್ನು ಸೂಚಿಸಬೇಕೆಂದರೆ ನಮಗೆ ಒಂದಕ್ಕಿಂತ ಹೆಚ್ಚು ಪೂರ್ಣವಸ್ತುಗಳು ಬೇಕೆಂದು ಗಮನಿಸಬಹುದು.

**ಇವುಗಳನ್ನು ಮಾಡಿ**



1. ಕೆಳಗಿನ ಚಿತ್ರಗಳು ಸೂಚಿಸುವ ಭಾಗಗಳನ್ನು ಬರೆಯಿರಿ.

(i)



SCERT TELANGANA



Downloaded from https:// www.studiestoday.com

Downloaded from https:// www.studiestoday.com

(ii)  (iii) 

2. ಕೆಳಗಿನ ಭಿನ್ನರಾಶಿಗಳನ್ನು ಚಿತ್ರ ರೂಪದಲ್ಲಿ ಸೂಚಿಸಿರಿ.

(i) $\frac{7}{4}$, $\frac{5}{3}$, $\frac{7}{6}$

### 7.2.2 ಮಿಶ್ರಭಿನ್ನರಾಶಿಗಳು:

ವಿಷಮ ಭಿನ್ನರಾಶಿಗಳು ಒಂದಕ್ಕಿಂತ ಹೆಚ್ಚು. ಉದಾಹರಣೆಗೆ $\frac{5}{2}$ ನ್ನು ತೆಗೆದುಕೊಂಡರೆ, ಇದರಲ್ಲಿ 5 ಅರ್ಧಭಾಗಗಳಿವೆ ಇವನ್ನು ನಾವು ಈ ಕೆಳಗಿನಂತೆ ಸೂಚಿಸುತ್ತೇವೆ.$(5 \times \frac{1}{2})$



ಆದ್ದರಿಂದ ಇದು ಎರಡು ಪೂರ್ಣ ಭಾಗಗಳು ಮತ್ತು ಒಂದು ಅರ್ಧ ಭಾಗವಿದೆ.

ಅಂದರೆ, $2+\frac{1}{2}$. ಇದನ್ನು $2\frac{1}{2}$ ಎಂದು ಬರೆಯುತ್ತೇವೆ. ಅದೇ ವಿಧವಾಗಿ $\frac{5}{3}$ ರಲ್ಲಿ ಒಂದು ಪೂರ್ಣವನ್ನು 3 ಸಮ ಭಾಗಗಳಾಗಿ ಮಾಡಿದರೆ ಒಂದೊಂದು ಭಾಗ $\frac{1}{3}$ ಕ್ಕೆ ಸಮ. $\frac{5}{3} = \frac{1}{3}+\frac{1}{3}+\frac{1}{3}+\frac{1}{3}+\frac{1}{3} = (5 \times \frac{1}{3})$ ಮೂರು $\frac{1}{3}$ ಗಳು ಒಂದು ಪೂರ್ಣವಾಗುತ್ತದೆ. $(3 \times \frac{1}{3}) = 1$.ಉಳಿದ ಎರಡು $\frac{1}{3}$ ಗಳು ಕೂಡಿದರೆ $\frac{2}{3}$ ಅಗುತ್ತದೆ.

 ಅಥವಾ $1\frac{2}{3} = \frac{5}{3}$

ಆದ್ದರಿಂದ $\frac{5}{3} = 1+\frac{2}{3} = 1\frac{2}{3}$ ಆಗುತ್ತದೆ.

ಪ್ರತಿ ವಿಷಮ ಭಿನ್ನರಾಶಿಯನ್ನು ಮಿಶ್ರಭಿನ್ನರಾಶಿಯಾಗಿ ಬದಲಾಯಿಸಬಹುದು.

**ಇವು ಮಾಡಿರಿ.**



ಕೆಳಗಿನವುಗಳನ್ನು ಮಿಶ್ರ ಭಿನ್ನರಾಶಿಯಾಗಿ ಬರೆಯಿರಿ.

$\frac{7}{2}$, $\frac{8}{5}$, $\frac{9}{4}$, $\frac{13}{5}$, $\frac{17}{3}$

SCERT TELANGANA



Downloaded from https:// www.studiestoday.com

Downloaded from https:// www.studiestoday.com

## 7.3 ಅಂಶ ಮತ್ತು ಛೇದ.

ಯಾವುದಾದರೂ ಪೂರ್ಣಸಂಖ್ಯೆಗಳನ್ನು $\frac{1}{2}, \frac{1}{3}, \frac{5}{4}, \frac{3}{4}, \frac{2}{3}$ ಗಳಂತಹ ರೂಪದಲ್ಲಿ ತೋರಿಸಿದರೆ ಅವು ಭಿನ್ನರಾಶಿಗಳನ್ನು ಸೂಚಿಸುತ್ತವೆ. ಈ ಸಂದರ್ಭದಲ್ಲಿ ಛೇದದಲ್ಲಿ 'ಸೊನ್ನೆ' ಇರಬಾರದು. (ಏಕೆ?)

**ಪ್ರಯತ್ನಿಸಿರಿ.**



1. ಕೆಳಗಿನ ಭಿನ್ನರಾಶಿಗಳ ಅಂಶ ಮತ್ತು ಛೇದಗಳನ್ನು ಬರೆಯಿರಿ.

   $\frac{1}{3}, \quad \frac{2}{5}, \quad \frac{7}{2}, \quad \frac{19}{3}, \quad \frac{7}{29}, \quad \frac{11}{13}, \quad \frac{1}{7}, \quad \frac{8}{3}$

2. ಕೆಳಗಿನ ಭಿನ್ನರಾಶಿಗಳನ್ನು ಸಮಭಿನ್ನರಾಶಿಗಳಾಗಿ, ವಿಷಮ ಭಿನ್ನರಾಶಿಗಳಾಗಿ ವಿಂಗಡಿಸಿ. ವಿಷಮ ಭಿನ್ನರಾಶಿಗಳನ್ನು ಮಿಶ್ರಭಿನ್ನರಾಶಿಗಳಾಗಿ ಬರೆಯಿರಿ.

   $\frac{1}{3}, \quad \frac{2}{7}, \quad \frac{8}{3}, \quad \frac{3}{5}, \quad \frac{5}{3}, \quad \frac{1}{9}, \quad \frac{9}{5}, \quad \frac{8}{7}$

## 7.4 ಸಂಖ್ಯಾರೇಖೆ ಮೇಲೆ ಭಿನ್ನರಾಶಿಗಳನ್ನು ಗುರುತಿಸುವುದು :

ನಾವು ಭಿನ್ನರಾಶಿಗಳನ್ನು ಕೂಡ ಸಂಖ್ಯಾರೇಖೆಯ ಮೇಲೆ ತೋರಿಸಬಹುದು.

ಒಂದು ಸಂಖ್ಯಾರೇಖೆಯನ್ನು ಎಳೆದು ಅದರ ಮೇಲೆ $\frac{1}{2}$ ನ್ನು ಗುರ್ತಿಸೋಣ.

$\frac{1}{2}$ ಎಂಬುದು ಸೊನ್ನೆಗಿಂತ ಹೆಚ್ಚು ಮತ್ತು ಒಂದಕ್ಕಿಂತ ಕಡಿಮೆ ಎಂಬುದು ನಮಗೆ ಗೊತ್ತು. ಆದ್ದರಿಂದ $\frac{1}{2}$ ಎಂಬುದು 0 ಮತ್ತು 1 ಗಳ ನಡುವೆ ಇರುತ್ತದೆ.




[0, 1ರ ನಡುವೆ ಇರುವ ಜಾಗವನ್ನು ಎರಡು ಸಮಭಾಗಗಳಾಗಿ ಮಾಡಿರಿ. ಒಂದು ಭಾಗವನ್ನು $\frac{1}{2}$, ಎರಡನೆ ಭಾಗವನ್ನು $\frac{2}{2}$ ಎಂದು ತೋರಿಸಿ]

ಇದೇ ರೀತಿ $\frac{1}{3}, \frac{2}{3}$ ಮತ್ತು $\frac{3}{3} = 1$ ಗಳನ್ನು ಕೆಳಗಿನ ವಿಧವಾಗಿ ಸಂಖ್ಯಾರೇಖೆಯ ಮೇಲೆ ತೋರಿಸಬಹುದು.




[ಒಂದು ಸಮಪ್ರಮಾಣದ ದೂರವನ್ನು 3 ಸಮ ಭಾಗಗಳಾಗಿ ಮಾಡಬೇಕು.ಮೊದಲನೇ ಭಾಗವನ್ನು $\frac{1}{3}$ ಎಂದು, ಎರಡನೇ ಭಾಗವನ್ನು $\frac{2}{3}$ , ಮೂರನೇ ಭಾಗವನ್ನು $\frac{3}{3} = 1$ ಅಗುತ್ತದೆ.]

$\frac{1}{5}, \frac{2}{5}, \frac{3}{5}, \frac{4}{5}$ ಮತ್ತು $\frac{5}{5} = 1$ ಗಳನ್ನು ಕೆಳಗಿನಂತೆ ಸಂಖ್ಯಾರೇಖೆಯ ಮೇಲೆ ತೋರಿಸಬಹುದು.




[ಒಂದು ಯುನಿಟ್ ಅನ್ನು 5 ಸಮಭಾಗಗಳಾಗಿ ಮಾಡಲಾಗಿದೆ.]

SCERT TELANGANA



Downloaded from https:// www.studiestoday.com

Downloaded from https:// www.studiestoday.com

$\frac{4}{3}$ ನ್ನು ಸಂಖ್ಯಾರೇಖೆಯ ಮೇಲೆ ಹೇಗೆ ಗುರುತಿಸುತ್ತೇವೆ? $\frac{4}{3}$ ರಲ್ಲಿ ನಾಲ್ಕು $\frac{1}{3}$ನೆ ಭಾಗಗಳು ಇವೆ. ಇದು 1ಕ್ಕಿಂತ ಹೆಚ್ಚು. $\frac{4}{3}$ ನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಬೇಕಾದರೆ 1ರ ನಂತರ ಮತ್ತೊಂದು $\frac{1}{3}$ನೇ ಭಾಗ ಬೇಕು.




$$\frac{4}{3} = \frac{3}{3} + \frac{1}{3} = 1 + \frac{1}{3}$$

1 ರ ನಂತರ 1 ಮತ್ತು 2 ರ ಮಧ್ಯ ಇರುವ ಜಾಗವನ್ನು ಮೂರು ಸಮಾನಭಾಗಗಳಾಗಿ ಮಾಡಬೇಕು.

ಈಗ ನಾವು $\frac{9}{4}$ ನ್ನು ಗಣನಗೆ ತೆಗೆದುಕೊಂಡರೆ, ಇದರಲ್ಲಿ $\frac{1}{4}$ ಎಂಬ 9 ಭಾಗಗಳಿವೆ. ಆಗ ಈ ಸಂಖ್ಯೆಯನ್ನು ಸಂಖ್ಯಾರೇಖೆ ಮೇಲೆ ಕೆಳಗಿನಂತೆ ಗುರುತಿಸುತ್ತೇವೆ.




ಆದ್ದರಿಂದ ಈ ಸಂಖ್ಯೆ, ಸಂಖ್ಯಾರೇಖೆಯ ಮೇಲೆ 2 ನಂತರ ಬರುತ್ತದೆ ಮತ್ತು ಇದನ್ನು $2\frac{1}{4}$ ಎಂದು ಬರೆಯುತ್ತೇವೆ.

**ಇವನ್ನು ಮಾಡಿ**



1. ಈ ಕೆಳಗಿನವುಗಳನ್ನು ಸಂಖ್ಯಾರೇಖೆಯ ಮೇಲೆ ತೋರಿಸಿ

   (i) $\frac{7}{6}$ (ii) $\frac{5}{2}$ (iii) $\frac{7}{5}$ (iv) $\frac{9}{6}$

2. ಕೆಳಗಿನ ಸಂಖ್ಯೆಗಳನ್ನು ಪರಿಶೀಲಿಸಿ, ಕೆಳಗಿನವು ಸಂಖ್ಯಾರೇಖೆಯ ಮೇಲೆ ಎಲ್ಲಿರುತ್ತವೆ.

   (i) 1 ಕ್ಕಿಂತ ಮುಂಚೆ (ii) 1 , 2 ನಡುವೆ ಯಾವುವು ಇರುತ್ತವೆ.

   $\frac{17}{8}$, $\frac{11}{4}$, $\frac{1}{3}$, $\frac{7}{9}$, $\frac{7}{5}$, $\frac{6}{11}$, $\frac{9}{2}$, $\frac{9}{5}$



**ಅಭ್ಯಾಸ 7.1**

1. ಕೆಳಗಿನವುಗಳಲ್ಲಿ ಯಾವುದು ಸಮಭಿನ್ನರಾಶಿಗಳು ?

   (i) $\frac{3}{2}$ (ii) $\frac{2}{5}$ (iii) $\frac{1}{7}$ (iv) $\frac{8}{3}$

2. ಕೆಳಗಿನವುಗಳಲ್ಲಿ ಯಾವುವು ವಿಷಮ ಭಿನ್ನರಾಶಿಗಳು

   (i) $\frac{2}{7}$ (ii) $\frac{7}{11}$ (iii) $\frac{9}{11}$ (iv) $\frac{13}{2}$ (v) $\frac{7}{3}$

   ಮೇಲಿನ ವಿಷಮ ಭಿನ್ನರಾಶಿಗಳು ಸಂಖ್ಯಾರೇಖೆಯ ಮೇಲೆ ಎಲ್ಲಿರುತ್ತವೆಯೋ ಬರೆಯಿರಿ?

3. ಕೆಳಗಿನವುಗಳಿಂದ ಮಿಶ್ರಭಿನ್ನರಾಶಿಗಳನ್ನು ವಿಂಗಡಿಸಿ ಬರೆಯಿರಿ.

   (i) $\frac{3}{5}$ (ii) $1\frac{2}{7}$ (iii) $\frac{7}{2}$ (iv) $2\frac{3}{5}$



SCERT TELANGANA

Downloaded from https:// www.studiestoday.com

Downloaded from https:// www.studiestoday.com

4. ಕೆಳಗಿನ ವಿಷಮ ಭಿನ್ನರಾಶಿಗಳನ್ನು ಮಿಶ್ರಭಿನ್ನರಾಶಿಗಳಾಗಿ ಬದಲಾಯಿಸಿ ಬರೆಯಿರಿ.

(i) $\frac{7}{3}$ (ii) $\frac{11}{2}$ (iii) $\frac{9}{4}$ (iv) $\frac{27}{4}$

5. ಕೆಳಗಿನ ಮಿಶ್ರಭಿನ್ನರಾಶಿಗಳನ್ನು, ವಿಷಮ ಭಿನ್ನರಾಶಿಗಳಾಗಿ ಬದಲಾಯಿಸಿ ಬರೆಯಿರಿ.

(i) $1\frac{2}{7}$ (ii) $3\frac{2}{8}$ (iii) $10\frac{2}{9}$ (iv) $8\frac{7}{9}$

### 7.5 ಸಮಾನ ಭಿನ್ನರಾಶಿಗಳು

ಕೆಳಗಿನ ನಾಲ್ಕು ಭಿನ್ನರಾಶಿಗಳನ್ನು ಸೂಚಿಸಿರುವ ವಿಧಾನವನ್ನು ಗಮನಿಸಿ.



$\frac{1}{4}$ $\frac{2}{8}$ $\frac{3}{12}$ $\frac{4}{16}$

ನಾವು ಜಾಗರೂಕತೆಯಿಂದ ಪರಿಶೀಲಿಸಿದರೆ $\frac{2}{8}$ ರಲ್ಲಿನ ಅಂಶ ಛೇದಗಳು $\frac{1}{4}$ ರಲ್ಲಿನ ಅಂಶ ಛೇದಗಳಿಗೆ 2 ರಷ್ಟಿವೆ ಎಂದು ಗಮನಿಸಬಹುದು. ಇದೇರೀತಿ $\frac{3}{12}$ ರಲ್ಲಿನ ಅಂಶಛೇದಗಳು $\frac{1}{4}$ ರಲ್ಲಿನ ಅಂಶಛೇದಗಳಿಗೆ 3ರಷ್ಟಿವೆ.

$\frac{1}{4} = \frac{2}{8} = \frac{3}{12} = \frac{4}{16}$ ಎಂದು ಗಮನಿಸಬಹುದು. ಇವೆಲ್ಲವೂ $\frac{1}{4}$ ಕ್ಕೆ ಸಮ.

ಅಂದರೆ ಇವೆಲ್ಲವುಗಳು $\frac{1}{4}$ ಕ್ಕೆ ಸಮಾನ ಭಿನ್ನರಾಶಿಗಳು.

ಅಂದರೆ ಕೊಟ್ಟಿರುವ ಭಿನ್ನರಾಶಿಯಲ್ಲಿನ ಅಂಶ ಮತ್ತು ಛೇದಗಳನ್ನು(ಸೊನ್ನೆ ಹೊರತುಪಡಿಸಿ) ಒಂದೇ ಸಂಖ್ಯೆಯಿಂದ ಗುಣಿಸುವ ಮೂಲಕ ಸಮಾನ ಭಿನ್ನರಾಶಿಗಳನ್ನು ಪಡೆಯುತ್ತೇವೆ.

$\frac{1}{3}$ ಕ್ಕೆ ಸಮಾನ ಭಿನ್ನರಾಶಿಗಳು $\frac{2}{6}, \frac{3}{9}, \frac{4}{12}, \frac{5}{15}$ ..... ಮುಂತಾದವುಗಳು.

### 7.6 ಭಿನ್ನರಾಶಿಯ ಕನಿಷ್ಠರೂಪ

ಸಮಾನ ಭಿನ್ನರಾಶಿಗಳಾದ $\frac{1}{3}, \frac{2}{6}, \frac{3}{9}, \frac{4}{12}$ .......ಮುಂತಾದವುಗಳಲ್ಲಿ. $\frac{1}{3}$ ಎಂಬುದು ಕನಿಷ್ಠ ರೂಪ, $\frac{1}{3}$ ಕನಿಷ್ಠ ರೂಪ ಏಕೆಂದರೆ ಈ ಭಿನ್ನರಾಶಿಯ ಅಂಶ ಛೇದಗಳು ಕನಿಷ್ಠ ಪದಗಳಲ್ಲಿ ಇವೆ. ಅಂದರೆ ಇದಕ್ಕೆ ಸಾಮಾನ ಅಪವರ್ತನಗಳು ಇಲ್ಲ.

ಉದಾಹರಣೆ: $\frac{2}{3}, \frac{7}{3}, \frac{17}{7}, \frac{1}{5}, \frac{3}{11}$ ಮುಂತಾದವುಗಳು ಕನಿಷ್ಠ ರೂಪಗಳು.

ಆದರೆ: $\frac{5}{10}, \frac{2}{4}, \frac{16}{36}, \frac{3}{9}$ ಮುಂತಾದವುಗಳೆಲ್ಲವೂ ಕನಿಷ್ಠ ರೂಪದಲ್ಲಿ ಇರುವುದಿಲ್ಲ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿ:**



1. ಕನಿಷ್ಠ ರೂಪದಲ್ಲಿರುವ ಮಾವುದಾದರೂ 5 ಭಿನ್ನರಾಶಿಗಳನ್ನು ಬರೆಯಿರಿ.
2. ಕನಿಷ್ಠ ರೂಪದಲ್ಲಿರದ ಮಾವುದಾದರೂ 5 ಭಿನ್ನರಾಶಿಗಳನ್ನು ಬರೆಯಿರಿ.
3. ಕೆಳಗಿನ ಭಿನ್ನರಾಶಿಗಳನ್ನು ಅವುಗಳ ಕನಿಷ್ಠ ರೂಪಕ್ಕೆ ಬದಲಾಯಿಸಿರಿ.

(i) $\frac{7}{28}$ (ii) $\frac{15}{90}$ (iii) $\frac{11}{33}$ (iv) $\frac{39}{13}$

### 7.7 ಸಜಾತಿ ಮತ್ತು ವಿಜಾತಿ ಭಿನ್ನರಾಶಿಗಳು

ಒಂದು ಗಣಿತ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳು, 25,ರಾಮುಗೆ 5 ಅಂಕಗಳು ಬಂದಿವೆ. ಇದನ್ನು ನಾವು $\frac{5}{25}$ ಎಂದು ಬರೆಯುತ್ತೇವೆ. ಹಾಗೆಯೇ ರಾಜುಗೆ $\frac{10}{25}$ ಮತ್ತು ರವಿಗೆ $\frac{21}{25}$ ಬಂದಿವೆ.

ಮೂರು ವಿದ್ಯಾರ್ಥಿಗಳಲ್ಲಿ ರವಿಗೆ ಹೆಚ್ಚು ಅಂಕಗಳು ಬಂದಿವೆ.

ಒಂದೇ ಛೇದ ಹೊಂದಿದ ಭಿನ್ನರಾಶಿಗಳನ್ನು 'ಸಜಾತಿ ಭಿನ್ನರಾಶಿಗಳು' ಎನ್ನುತ್ತಾರೆ. ಇವುಗಳನ್ನು ಹೋಲಿಸುವುದು ಬಹಳ ಸುಲಭ. ಛೇದಗಳು ಸಮವಾಗಿ ಇಲ್ಲದ ಭಿನ್ನರಾಶಿಗಳನ್ನು 'ವಿಜಾತಿ ಭಿನ್ನರಾಶಿಗಳು' ಎನ್ನುವರು.

ಉದಾಹರಣೆ : 1. $\frac{3}{7}, \frac{5}{7}, \frac{1}{7}, \frac{2}{7}$ .....ಗಳು ಸಜಾತಿಭಿನ್ನರಾಶಿಗಳು

2. $\frac{3}{8}, \frac{4}{9}, \frac{3}{5}, \frac{4}{7}$ .....ಗಳು ವಿಜಾತಿಭಿನ್ನರಾಶಿಗಳು

ಇಲ್ಲಿ $\frac{2}{4}, \frac{6}{12}$ ಗಳು ಸಮಾನಭಿನ್ನರಾಶಿಗಳೇ, ಆದರೆ ವಿಜಾತಿ ಭಿನ್ನರಾಶಿಗಳು.



**ಅಭ್ಯಾಸ –7.2**

1. ಕೆಳಗಿನ ಸಮೂಹಗಳಲ್ಲಿ ಯಾವುವು ಸಜಾತಿ ಭಿನ್ನರಾಶಿಗಳು?

(i) $\frac{2}{7}, \frac{3}{7}, \frac{4}{7}$ (ii) $\frac{1}{9}, \frac{2}{9}, \frac{4}{9}$ (iii) $\frac{3}{7}, \frac{4}{9}, \frac{7}{11}$

2. 5 ಸಜಾತಿ ಭಿನ್ನರಾಶಿಗಳ ಸಮೂಹಗಳನ್ನು ಬರೆಯಿರಿ.
3. ಕೆಳಗಿನವುಗಳಲ್ಲಿ ಸಜಾತಿ ಭಿನ್ನರಾಶಿಗಳನ್ನು ಗುರ್ತಿಸಿರಿ

(i) $\frac{2}{3}, \frac{5}{3}, \frac{1}{3}, \frac{4}{6}$ (ii) $\frac{1}{7}, \frac{3}{5}, \frac{2}{5}, \frac{1}{9}$ (iii) $\frac{7}{8}, \frac{8}{7}, \frac{2}{8}, \frac{7}{5}$

**ಆಲೋಚಿಸಿ, ಚರ್ಚಿಸಿ ಮತ್ತು ಬರೆಯಿರಿ**



ಸಮಾನ ಭಿನ್ನರಾಶಿಗಳು ಆಗುತ್ತಾ, ಸಜಾತಿ ಭಿನ್ನರಾಶಿಗಳು ಕೂಡ ಆಗುವಂತಹ ಭಿನ್ನರಾಶಿಗಳು ಇರಲಾರವು ಎಂದು ರಫಿ ಹೇಳಿದನು. ನೀವು ಸಹ ಅವನೊಂದಿಗೆ ಏಕೀಭವಿಸುವಿರಾ? ನಿಮ್ಮ ಉತ್ತರಕ್ಕೆ ವಿವರಣೆ ನೀಡಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

### 7.8 ಭಿನ್ನರಾಶಿಗಳ ಆರೋಹಣ ಮತ್ತು ಅವರೋಹಣ ಕ್ರಮ

ಸಂಖ್ಯಾಗಣದಲ್ಲಿನ ಸಂಖ್ಯೆಗಳನ್ನು ಹೋಲಿಸಿದಾಗ ಕೆಲವು ದೊಡ್ಡವು, ಉಳಿದ ಸಂಖ್ಯಗಳಿಂತ ಚಿಕ್ಕವು ಇರುತ್ತವೆ. 7 ಎಂಬ ಸಂಖ್ಯೆ 19 ಕ್ಕಿಂತ ಚಿಕ್ಕದು ಮತ್ತು 3 ಕ್ಕಿಂತ ದೊಡ್ಡದು, ಹಾಗೆಯೇ 3 ಎಂಬುದು 5 ಕ್ಕಿಂತ ದೊಡ್ಡದು, ಭಿನ್ನರಾಶಿಗಳನ್ನು ಕೂಡ ನಾವು ಇದೇ ರೀತಿ ಸುಲಭವಾಗಿ ಹೋಲಿಸಬಹುದು. ಕೆಲವು ಉದಾಹರಣೆಗಳೊಂದಿಗೆ ಇದನ್ನು ಅರ್ಥೈಸಿಕೊಳ್ಳೋಣ.

ಶಾಲೆಯಲ್ಲಿ ನಡೆಸಿದ ಒಂದು ಪರೀಕ್ಷೆಯಲ್ಲಿ ಸುರೇಶ್‌ಗೆ $\frac{7}{10}$, ಸೀತೆಗೆ $\frac{9}{10}$, ರಾಕೇಶ್‌ಗೆ $\frac{5}{10}$ ಅಂಕಗಳು ಬಂದಿವೆ. ಮೂವರಲ್ಲಿ ಸೀತೆಗೆ ಹೆಚ್ಚು ಅಂಕಗಳು ಬಂದಿವೆ. ಆದ್ದರಿಂದ. $\frac{9}{10}$ ಎಂಬುದು $\frac{7}{10}$ ಕ್ಕಿಂತ ದೊಡ್ಡದು. $\frac{9}{10}$ ಎಂದರೆ 10 ಸಮಭಾಗಗಳಲ್ಲಿ 9 ಸಮಭಾಗಗಳನ್ನು ತೆಗೆದುಕೊಳ್ಳುವುದು. ಇದು 10 ಸಮಭಾಗಗಳಲ್ಲಿ 9 ಸಮಭಾಗಗಳನ್ನು ತೆಗೆದುಕೊಳ್ಳುವುದು. ಇದು 10 ಸಮಭಾಗಗಳಲ್ಲಿ 7 ಸಮಭಾಗಗಳನ್ನು ತೆಗೆದುಕೊಳ್ಳುವದಕ್ಕಿಂತ ಹೆಚ್ಚು. ಇಲ್ಲಿ ಛೇದಗಳು ಸಮವಾದ್ದರಿಂದ ಯಾವುದು ದೊಡ್ಡದು ಯಾವುದು ಚಿಕ್ಕದು ಎಂದು ಹೇಳುವುದು ಸುಲಭ

ಉದಾಹರಣೆಗೆ $\frac{3}{2}, \frac{1}{2}$ ಗಳಲ್ಲಿ $\frac{3}{2}$ ದೊಡ್ಡದು.ನಾವು $\frac{7}{10}, \frac{9}{10}, \frac{5}{10}$ ಗಳನ್ನು ಆರೋಹಣ ಕ್ರಮದಲ್ಲಿ ತೋರಿಸಲು $\frac{5}{10}, \frac{7}{10}, \frac{9}{10}$ ಎಂದು ತೋರಿಸುತ್ತೇವೆ. ಇವುಗಳನ್ನು ಅವರೋಹಣ ಕ್ರಮದಲ್ಲಿ ಬರೆಯಬಲ್ಲಿರಾ?

**ಇದನ್ನು ಮಾಡಿ**



ಕೆಳಗಿನ ಭಿನ್ನರಾಶಿಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ಭಿನ್ನರಾಶಿಗಳನ್ನು ಗುರ್ತಿಸಿರಿ.

(i) $\frac{1}{7}, \frac{3}{7}, \frac{2}{7}, \frac{5}{7}$ (ii) $\frac{1}{9}, \frac{13}{9}, \frac{11}{9}, \frac{5}{9}$

(iii) $\frac{1}{3}, \frac{5}{3}, \frac{17}{3}, \frac{9}{3}$

### 7.8.1. ವಿಜಾತಿ ಭಿನ್ನರಾಶಿಗಳನ್ನು ಹೋಲಿಸುವುದು

ಈಗ $\frac{2}{3}$ ಮತ್ತು $\frac{3}{5}$? ಗಳನ್ನು ಹೋಲಿಸಿರಿ, ಯಾವುದು ದೊಡ್ಡದೋ ಹೇಳಬಲ್ಲಿರಾ? ಸಂಖ್ಯೆಗಳನ್ನು ನೋಡಿದಾಕ್ಷಣ ನಾವು ಹೇಳಲಾರೆವು, ಮೊದಲನೇಯದರಲ್ಲಿ 2 ಭಾಗಗಳು, ಎರಡನೇಯದರಲ್ಲಿ 3 ಭಾಗಗಳು ಇವೆ. ಒಂದು ಭಿನ್ನರಾಶಿಯಲ್ಲಿ ಸಮಾನ ಭಾಗಗಳು ಒಂದೇ ಬಗೆಯಾಗಿ ಇರುತ್ತವೆ. ಆದರೆ ಬೇರೆ ಬೇರೆ ಭಿನ್ನರಾಶಿಗಳಲ್ಲಿ ಸಮಾನ ಭಾಗಗಳು ಬೇರೆ ಬೇರೆ ಇರುತ್ತವೆ.

ಇಂತಹ ವಿಜಾತಿ ಭಿನ್ನರಾಶಿಗಳನ್ನು ಹೋಲಿಸುವುದಕ್ಕೆ ನಾವು ಮೊದಲು ಅವುಗಳನ್ನು ಸಜಾತಿ ಭಿನ್ನರಾಶಿಗಳಾಗಿ ಬದಲಾಯಿಸಬೇಕು.ಆದ್ದರಿಂದ $\frac{2}{3}$ ಮತ್ತು $\frac{3}{5}$ ಗಳನ್ನು ನಾವು ಈ ಕೆಳಗಿನ ವಿಧವಾಗಿ ಬದಲಾಯಿಸುತ್ತೇವೆ.

$\frac{2}{3} = \frac{2}{3} \times \frac{5}{5} = \frac{10}{15}$ (ಸಜಾತಿ ಭಿನ್ನರಾಶಿಯಾಗಿ ಬದಲಾಯಿಸುವುದು)

$\frac{3}{5} = \frac{3}{5} \times \frac{3}{3} = \frac{9}{15}$

ಆದ್ದರಿಂದ $\frac{9}{15} < \frac{10}{15} \Rightarrow \frac{3}{5} < \frac{2}{3}$



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಮತ್ತೊಂದು ಉದಾಹರಣೆಯನ್ನು ನೋಡೋಣ $\frac{7}{9}, \frac{3}{11}$ ಗಳಲ್ಲಿ ಯಾವುದು ದೊಡ್ಡದು?

ಮೊದಲು ಇವುಗಳನ್ನು ಸಮಾನ ಭಿನ್ನರಾಶಿಗಳಾಗಿ ಬದಲಾಯಿಸಿ ಬರೆಯೋಣ.

$\frac{7}{9}\times\frac{11}{11}=\frac{77}{99}$ ; $\frac{3}{11}\times\frac{9}{9}=\frac{27}{99}$

$\frac{77}{99}$ ದೊಡ್ಡದು ಅಂದರೆ $\frac{7}{9}$ ದೊಡ್ಡದು. $\frac{7}{9}>\frac{3}{11}$.

ಈ ಸಮಸ್ಯೆಗಳಲ್ಲಿ ನಾವು ಎರಡು ಭಿನ್ನರಾಶಿಗಳ ಛೇದಗಳ ಸಮಗೊಳಿಸಿದ್ದೇವೆ. ಛೇದಗಳ ಪರಿಮಾಣಗಳು ಕೂಡ ಸಮಾನವಾಗುತ್ತವೆ. ಆಗ ನಾವು ಸಮಾನ ಭಾಗಗಳನ್ನು ಹೋಲಿಸಬಹುದು ಯಾವ ಭಿನ್ನರಾಶಿಯ ಅಂಶಗಳಲ್ಲಿನ ಸಮಾನ ಭಾಗಗಳು ಹೆಚ್ಚಿರುತ್ತವೆಯೋ ಅದೇ ದೊಡ್ಡ ಭಿನ್ನರಾಶಿ ತಿಳಿಯುತ್ತದೆ.

**ಇವು ಮಾಡಿರಿ**



ಕೆಳಗಿನವುಗಳಲ್ಲಿ ಯಾವುದು ಚಿಕ್ಕ ಭಿನ್ನರಾಶಿ?

(i) $\frac{2}{5}, \frac{3}{7}$  (ii) $\frac{7}{8}, \frac{5}{4}$  (iii) $\frac{3}{11}, \frac{1}{2}$  (iv) $\frac{5}{6}, \frac{2}{3}$

### 7.82 ಆರೋಹಣ ಮತ್ತು ಅವರೋಹಣ ಕ್ರಮ

ನಾವು ಸಂಖ್ಯೆಗಳನ್ನು ಎಡದಿಂದ ಬಲಕ್ಕೆ ಕ್ರಮವಾಗಿ ಏರಿಕೆ ಕ್ರಮದಲ್ಲಿರುವಂತೆ ಬರೆಯುತ್ತೇವೆ. ಇದನ್ನೇ ನಾವು ಆರೋಹಣ ಕ್ರಮ ಎನ್ನುತ್ತೇವೆ.

ಉದಾಹರಣೆಗೆ 1, 3, 7, 8, 12 ಗಳು ಆರೋಹಣ ಕ್ರಮದಲ್ಲಿದೆ. ಇದೇ ರೀತಿ

$\frac{2}{5}, \frac{3}{5}, \frac{7}{5}, \frac{16}{5}$ ಗಳು ಕೂಡ ಆರೋಹಣ ಕ್ರಮದಲ್ಲಿ ಇವೆ. ಅಂದರೆ $\frac{2}{5}<\frac{3}{5}<\frac{7}{5}<\frac{16}{5}$

ಹಾಗೆಯೇ $\frac{1}{7}, \frac{1}{6}, \frac{1}{5}, \frac{1}{4}$ ಗಳು ಕೂಡ ಆರೋಹಣ ಕ್ರಮದಲ್ಲಿ ಇವೆ.

**ಇದನ್ನು ಮಾಡಿ**



ಕೆಳಗಿನ ಭಿನ್ನರಾಶಿಗಳನ್ನು ಆರೋಹಣ ಕ್ರಮದಲ್ಲಿ ಬರೆಯಿರಿ

(i) $\frac{1}{7}, \frac{13}{7}, \frac{11}{7}, \frac{5}{7}, \frac{15}{7}$  (ii) $\frac{2}{3}, \frac{5}{6}, \frac{3}{9}, \frac{24}{18}$

(iii) $\frac{2}{3}, \frac{1}{2}, \frac{5}{6}, \frac{7}{12}$  (iv) $\frac{1}{5}, \frac{1}{2}, \frac{1}{8}, \frac{1}{3}, \frac{1}{12}$

ನಾವು ಸಂಖ್ಯೆಗಳನ್ನು ಕ್ರಮವಾಗಿ ಎಡದಿಂದ ಬಲಕ್ಕೆ ಕಡಿಮೆ ಯಾಗುವಂತೆ ಬರೆದರೆ ಅದನ್ನು ಅವರೋಹಣ ಕ್ರಮ ಎನ್ನುವರು

ಉದಾಹರಣೆ: 100, 85, 83, 74, 61 ಗಳು ಅವರೋಹಣ ಕ್ರಮದಲ್ಲಿ ಇವೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಹಾಗೆಯೇ $\frac{11}{2}, \frac{7}{2}, \frac{5}{2}, \frac{3}{2}, \frac{1}{2}$ ಗಳು ಅವರೋಹಣ ಕ್ರಮದಲ್ಲಿ ಇವೆ.

ಹಾಗೂ $\frac{1}{4}, \frac{1}{5}, \frac{1}{6}, \frac{1}{7}$ ಗಳು ಕೂಡ ಅವರೋಹಣ ಕ್ರಮದಲ್ಲಿವೆ. ಏಕೆಂದು ಕಾರಣ ಹೇಳಬಲ್ಲಿರಾ? ನಿಮ್ಮ ಸ್ನೇಹಿತರೋಡನೆ ಚರ್ಚಿಸಿ.

**ಇದನ್ನು ಮಾಡಿ**



ಕೆಳಗಿನವುಗಳನ್ನು ಅವರೋಹಣ ಕ್ರಮದಲ್ಲಿ ಬರೆಯಿರಿ

(i) $\frac{1}{9}, \frac{13}{9}, \frac{11}{9}, \frac{15}{9}, \frac{3}{9}$ (ii) $\frac{1}{6}, \frac{2}{3}, \frac{3}{9}, \frac{5}{6}$

(iii) $\frac{1}{5}, \frac{9}{5}, \frac{3}{5}, \frac{6}{5}$ (iv) $\frac{1}{4}, \frac{1}{2}, \frac{1}{8}, \frac{3}{4}$

**7.9 ಭಿನ್ನರಾಶಿಗಳ ಸಂಕಲನ**

ಕೆಳಗಿನವುಗಳನ್ನು ಕೂಡಿರಿ

1.  $= \frac{1}{4} + \frac{1}{4} = \frac{1}{2}$

2.  $= \frac{1}{2} + \frac{1}{2} = \frac{2}{2} = 1$

**ಇವು ಮಾಡಿರಿ**



ಕೆಳಗಿನವುಗಳನ್ನು ಸಂಕ್ಷೇಪಿಸಿರಿ.

i. $\frac{1}{4}+\frac{5}{4}$ ii. $\frac{1}{3}+\frac{2}{3}$ iii. $\frac{1}{7}+\frac{2}{7}+\frac{3}{7}$ iv. $\frac{13}{6}+\frac{5}{6}$

**7.9.1 ವಿಜಾತಿ ಭಿನ್ನರಾಶಿಗಳ ಸಂಕಲನ**

ಕೆಳಗಿನವುಗಳನ್ನು ಗಮನಿಸಿರಿ

$\frac{1}{2} + \frac{1}{3} = ?$

ಇಲ್ಲಿ ನಾವು ಅಂಶಗಳನ್ನು ಕೂಡಿಸಲಾರೆವು ಏಕೆ? ಮತ್ತೆ ನಾವು ಏನು ಮಾಡಬೇಕು? ಇಂತಹ ಭಿನ್ನರಾಶಿಗಳನ್ನು ಕೂಡುವ ಮೊದಲು ಅವುಗಳನ್ನು ಸಮಛೇದ ಭಿನ್ನರಾಶಿಗಳಾಗಿ ಪರಿವರ್ತಿಸಬೇಕು.

$$\frac{1}{2} = \frac{1}{2} \times \frac{3}{3} = \frac{3}{6} \quad ; \quad \frac{1}{3} = \frac{1}{3} \times \frac{2}{2} = \frac{2}{6}$$

ಆದ್ದರಿಂದ $\frac{1}{2} + \frac{1}{3} = \frac{3}{6} + \frac{2}{6} = \frac{5}{6}$

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಇವುಗಳನ್ನು ಚಿತ್ರರೂಪದಲ್ಲಿ ಹೇಗೆ ತೋರಿಸಬಹುದೋ ನೋಡೋಣ

$\frac{1}{2}+\frac{1}{3}$



ಎರಡು ಚಿತ್ರಗಳಲ್ಲಿನ ಭಾಗಗಳು ಸಮ ಅಲ್ಲ. ಆದರೆ ಕೂಡಬೇಕೆಂದರೆ, ನಮಗೆ ಸಮಾನ ಭಾಗಗಳು ಬೇಕು. ಆದ್ದರಿಂದ ಮೊದಲನೇಯದನ್ನು ಮತ್ತೆ ಮೂರು ಅಡ್ಡಭಾಗಗಳಾಗಿ ವಿಭಜಿಸುತ್ತೇವೆ.

ಆಗ ನಮಗೆ $\frac{3}{6}$ ಬರುತ್ತದೆ



ಮತ್ತು ಎರಡನೇ ಚಿತ್ರಕ್ಕೆ ಇದೇ ವಿಧವಾಗಿ $\frac{2}{6}$ ಬರುತ್ತದೆ.



ಈ ಎರಡೂ ಕೂಡುವುದಕ್ಕೆ ಅನುಕೂಲವಾಗಿವೆ, ಕೂಡಿದಾಗ ಮೊತ್ತ $\frac{5}{6}$ ಬರುತ್ತದೆ



$\frac{1}{6}+\frac{5}{3}$ ನ್ನು ಪರಿಗಣಿಸಿರಿ.

$\frac{5}{3}=\frac{10}{6}$ ಎಂದು ಬರೆಯುತ್ತೇವೆ. ಆದ್ದರಿಂದ $\frac{1}{6}+\frac{5}{3}=\frac{1}{6}+\frac{10}{6}=\frac{11}{6}$

**ಇವುಗಳನ್ನು ಮಾಡಿರಿ**



ಕೆಳಗಿನ ಭಿನ್ನರಾಶಿಗಳನ್ನು ಕೂಡಿರಿ

(i) $\frac{1}{2}+\frac{1}{5}$ (ii) $\frac{1}{2}+\frac{3}{2}+\frac{7}{2}$ (iii) $\frac{1}{3}+\frac{2}{6}+\frac{5}{6}$ (iv) $\frac{1}{3}+\frac{7}{5}$

### 7.9.2. ಮಿಶ್ರಭಿನ್ನರಾಶಿಗಳ ಸಂಕಲನ

$2\frac{1}{3}$ ಮತ್ತು $1\frac{2}{3}$ ಗಳನ್ನು ಹೇಗೆ ಸಂಕಲನ ಮಾಡುತ್ತೇವೆ?

ಇವುಗಳನ್ನು ವಿಷಮ ಭಿನ್ನರಾಶಿಗಳು $\frac{8}{3}$ ಮತ್ತು $\frac{5}{3}$ ಗಳಾಗಿ ಪರಿವರ್ತಿಸಿ ಕೂಡುವುದು ಒಂದುಪದ್ಧತಿ

ಇವುಗಳನ್ನು ಈ ಕೆಳಗಿನ ಪದ್ಧತಿಯಲ್ಲಿ ಸಹ ಕೂಡಬಹುದು.

$$2\frac{1}{3}+1\frac{2}{3}=2+1+\frac{1}{3}+\frac{2}{3}=3+\frac{3}{3}$$

ಇಲ್ಲಿ ಪೂರ್ಣಸಂಖ್ಯೆ ಭಾಗಗಳನ್ನು, ಭಿನ್ನರಾಶಿಗಳ ಭಾಗಗಳನ್ನು ಬಿಡಿ ಬಿಡಿಯಾಗಿ ಸಂಕಲನ ಮಾಡಿದ್ದೇವೆ. ಮತ್ತೇ ಆ ಎರಡನ್ನು ಸಂಕಲನ ಮಾಡಿದಾಗ ನಮಗೆ $3+\frac{3}{3}=3+1=4$ ಬರುತ್ತದೆ.

ಈಗ ನಾವು $2\frac{1}{8}$, $3\frac{1}{6}$ ಗಳನ್ನು ಎರಡೂ ಪದ್ಧತಿಗಳಲ್ಲಿ ಮಾಡೋಣ



Downloaded from https:// www.studiestoday.com

Downloaded from https:// www.studiestoday.com

**1ನೇ ಪದ್ಧತಿ:** $2\frac{1}{8}+3\frac{1}{6}$

$$= 2+3+\frac{1}{8}+\frac{1}{6}$$

$$= 5+\frac{1\times 6}{8\times 6}+\frac{1\times 8}{6\times 8}$$

$$= 5+\frac{6}{48}+\frac{8}{48}$$

$$= 5+\frac{14}{48} = 5+\frac{7}{24}=5\frac{7}{24}$$

**2ನೇ ಪದ್ಧತಿ:** ಎರಡನ್ನೂ ವಿಷಮ ಭಿನ್ನರಾಶಿಗಳಾಗಿ ಪರಿವರ್ತಿಸಿದಾಗ $\frac{17}{8}+\frac{19}{6}$ ಬರುವುದು

ಸಮಾನ ಸಜಾತಿ ಭಿನ್ನರಾಶಿಗಳಾಗಿ ಪರಿವರ್ತಿಸಿ ಬರೆದಾಗ $\frac{17}{8} = \frac{17}{8}\times\frac{6}{6}=\frac{102}{48}$

$$\frac{19}{6} = \frac{19}{6}\times\frac{8}{8}=\frac{152}{48}$$

$$\therefore \frac{102}{48}+\frac{152}{48}=\frac{254}{48} = \frac{127}{24} = 5\frac{7}{24}$$

### 7.10 ಭಿನ್ನರಾಶಿಗಳ ವ್ಯವಕಲನ

$\frac{4}{7}$ ರಿಂದ $\frac{3}{7}$ನ್ನು ಕಳೆಯಿರಿ. ಈ ಎರಡೂ ಭಿನ್ನರಾಶಿಗಳ ಛೇದಗಳು ಸಮ ಆದ್ದರಿಂದ ಇವು ಸಜಾತಿ ಭಿನ್ನರಾಶಿಗಳು. ನಾವು ಮೂರು $\frac{1}{7}$ನೇ ಭಾಗಗಳನ್ನು, ನಾಲ್ಕು $\frac{1}{7}$ ಭಾಗಗಳಿಂದ ಕಳೆದಾಗ ಒಂದು $\frac{1}{7}$ ಭಾಗ ಉಳಿಯುತ್ತದೆ.

$$\therefore \frac{4}{7}-\frac{3}{7}=\frac{4-3}{7} = \frac{1}{7}$$

ಈಗ ಛೇದಗಳು ಬೇರೆ ಬೇರೆ ಇರುವ ಭಿನ್ನರಾಶಿಗಳನ್ನು ತೆಗೆದುಕೊಳ್ಳೋಣ

$\frac{3}{10}$ ರಿಂದ $\frac{2}{9}$ನ್ನು ಕಳೆಯಿರಿ

$$\frac{3}{10}-\frac{2}{9}.$$

ನಾವು ಈ ಸಮಸ್ಯೆಯನ್ನು ಮೇಲಿನ ಪದ್ಧತಿಯಲ್ಲಿ ಮಾಡಲಾರೆವು

ಮೊದಲು ಇವುಗಳನ್ನು ಸಜಾತಿ ಸಮಾನ ಭಿನ್ನರಾಶಿಗಳಾಗಿ ಪರಿವರ್ತಿಸಬೇಕು.

$$\frac{3}{10}=\frac{3\times 9}{10\times 9}=\frac{27}{90}; \qquad \frac{2}{9}=\frac{2\times 10}{9\times 10}=\frac{20}{90}$$

ಆಗ $\frac{27}{90}-\frac{20}{90}=\frac{27-20}{90}=\frac{7}{90}$ ಬರುವುದು.



Downloaded from https:// www.studiestoday.com

Downloaded from https:// www.studiestoday.com



### ಇವು ಮಾಡಿರಿ

1. ಕೆಳಗಿನ ಭಿನ್ನರಾಶಿಗಳನ್ನು ಸಂಕಲನ ಮಾಡಿ

(i) $\frac{2}{5}+\frac{3}{5}$ (ii) $\frac{7}{10}+\frac{2}{10}$ (iii) $\frac{3}{4}+\frac{2}{6}$

2. ಕೆಳಗಿನವುಗಳನ್ನು ಕಳೆಯಿರಿ

(i) $\frac{3}{5}$ ರಿಂದ $\frac{2}{7}$ (ii) $\frac{2}{5}$ ರಿಂದ $\frac{1}{9}$



## ಅಭ್ಯಾಸ 7. 3

1. ಛಾಯೀಕರಿಸಿರುವ ಪ್ರದೇಶಗಳನ್ನು ಭಿನ್ನರಾಶಿಗಳಾಗಿ ಸೂಚಿಸಿರಿ. ಆ ಭಿನ್ನರಾಶಿಗಳ ಮಧ್ಯ '<', '=', '>' ಗಳಲ್ಲಿ ಸರಿಯಾದ ಗುರ್ತುಗಳನ್ನು ಉಪಯೋಗಿಸಿ ಆರೋಹಣ ಅಥವಾ ಅವರೋಹಣ ಕ್ರಮದಲ್ಲಿ ಬರೆಯಿರಿ.

(i)



(ii)



2. $\frac{2}{6}, \frac{4}{6}, \frac{8}{6}, \frac{5}{6}$ ಮತ್ತು $\frac{6}{6}$ ಗಳನ್ನು ಸಂಖ್ಯಾರೇಖೆಯ ಮೇಲೆ ಗುರ್ತಿಸಿ, ಅವನ್ನು ಆರೋಹಣ ಕ್ರಮದಲ್ಲಿ ಬರೆಯಿರಿ.

3. ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಪರಿಶೀಲಿಸಿ, ಕೆಳಗೆ ಕೊಡಲಾದ ಸಮಸ್ಯೆಗಳಲ್ಲಿ ಪ್ರತಿ ಜೊತೆ ಭಿನ್ನರಾಶಿಗಳ ನಡುವೆ '<' ಅಥವಾ '>', '=' ಸರಿಯಾದ ಸಂಕೇತದಿಂದ ತುಂಬಿರಿ.




SCERT TELANGANA



Downloaded from https:// www.studiestoday.com

Downloaded from https:// www.studiestoday.com

(i) $\frac{1}{6} \square \frac{1}{3}$ (ii) $\frac{3}{4} \square \frac{2}{6}$ (iii) $\frac{2}{3} \square \frac{2}{4}$

(iv) $\frac{6}{6} \square \frac{3}{3}$ (v) $\frac{5}{6} \square \frac{5}{5}$

ಇಂತಹ ಇನ್ನೂ ಐದು ಸಮಸ್ಯೆಗಳನ್ನು ತಯಾರಿಸಿ ನಿಮ್ಮ ಸ್ನೇಹಿತರನ್ನು ಸಾಧಿಸಿ ಎಂದು ಹೇಳಿರಿ.

4. ಸರಿಯಾದ ಸಂಕೇತಗಳಿಂದ ('<', '=', '>') ತುಂಬಿರಿ.

(i) $\frac{1}{2} \square \frac{1}{5}$ (ii) $\frac{2}{4} \square \frac{3}{6}$ (iii) $\frac{3}{5} \square \frac{2}{3}$

(iv) $\frac{3}{4} \square \frac{2}{8}$ (v) $\frac{3}{5} \square \frac{6}{5}$ (vi) $\frac{7}{9} \square \frac{3}{9}$

5. ಕೆಳಗಿನವುಗಳಿಗೆ ಉತ್ತರಿಸಿ, ಅವನ್ನು ಹೇಗೆ ಸಾಧಿಸಿದ್ದೀರೋ ಆ ಹಂತಗಳನ್ನು ನಿಮ್ಮ ಪುಸ್ತಕದಲ್ಲಿ ಬರೆಯಿರಿ.

(i) $\frac{5}{9}$ ಎಂಬುದು $\frac{4}{5}$ ಕ್ಕೆ ಸಮಾನವೇ? (ii) $\frac{9}{16}$ ಎಂಬುದು $\frac{5}{9}$ ಕ್ಕೆ ಸಮಾನವೇ?

(iii). $\frac{4}{5}$ ಎಂಬುದು $\frac{16}{20}$ ಕ್ಕೆ ಸಮಾನವೇ? (iv) $\frac{1}{15}$ ಎಂಬುದು $\frac{4}{30}$ ಕ್ಕೆ ಸಮಾನವೇ?

6. 100 ಪುಟಗಳಿರುವ ಒಂದು ಕಥೆ ಪುಸ್ತಕದಲ್ಲಿ ವರ್ಷಿತ 25 ಪುಟಗಳನ್ನು ಓದಿದ್ದಾಳೆ. ಲಲಿತ ಇದೇ ಪುಸ್ತಕದಲ್ಲಿ $\frac{2}{5}$ ನೇ ಭಾಗ ಓದಿದ್ದಳೆ ಯಾರು ಆ ಪುಸ್ತಕವನ್ನು ಕಡಿಮೆ ಓದಿದ್ದಾರೆ? ಕಾರಣ ತಿಳಿಸಿರಿ.

7. ಈ ಕೆಳಗಿನ ಭಿನ್ನರಾಶಿಗಳಲ್ಲಿ ಸರಿಯಾದ ಸಂಕಲನ ಅಥವಾ ವ್ಯವಕಲನಗಳನ್ನು ಬರೆಯಿರಿ.

(i)  .....  = 

(ii)  .....  = 

(iii)  .....  = 

8. ಸಂಕ್ಷೇಪಿಸಿ:

(i) $\frac{1}{18} + \frac{1}{18}$ (ii) $\frac{8}{15} + \frac{3}{15}$ (iii) $\frac{7}{7} - \frac{5}{7}$

(iv) $\frac{1}{22} + \frac{21}{22}$ (v) $\frac{12}{15} - \frac{7}{15}$ (vi) $\frac{5}{8} + \frac{3}{8}$

(vii) $1 - \frac{2}{3}$ (viii) $\frac{1}{4} + \frac{0}{4}$ (ix) $3 - \frac{12}{5}$

SCERT TELANGANA



Downloaded from https:// www.studiestoday.com

Downloaded from https:// www.studiestoday.com

9. ಬಿಟ್ಟ ಸ್ಥಳಗಳಲ್ಲಿ ಸರಿಯಾದ ಭಿನ್ನರಾಶಿಯನ್ನು ತುಂಬಿರಿ.

(i) $\frac{7}{10} - \square = \frac{3}{10}$ (ii) $\square - \frac{3}{21} = \frac{5}{21}$

(iii) $\square - \frac{3}{3} = \frac{3}{6}$ (iv) $\square + \frac{5}{27} = \frac{12}{27}$

10. ನರೇಂದ್ರ ತನ್ನ ಮನೆಯ ಗೋಡೆಗೆ $\frac{2}{3}$ ರಷ್ಟು ಭಾಗ ಬಣ್ಣ ಹಚ್ಚಿದ್ದಾನೆ. ಅವನ ತಮ್ಮ ರಿತೋಷ್ $\frac{1}{3}$ ರಷ್ಟು ಭಾಗ ಬಣ್ಣ ಹಚ್ಚಿ ಸಹಾಯ ಮಾಡಿದ್ದಾನೆ. ಇಬ್ಬರೂ ಸೇರಿ ಎಷ್ಟು ಭಾಗಕ್ಕೆ ಬಣ್ಣ ಹಚ್ಚಿದ್ದಾರೆ?

11. ನೀಹಾಗೆ ಒಂದು ಬುಟ್ಟಿಯಲ್ಲಿ $\frac{5}{7}$ ರಷ್ಟು ಬಾಳೆಹಣ್ಣನ್ನು ಕೊಡಲಾಗಿದೆ. ಆದರೆ ಆ ಬುಟ್ಟಿಯಲ್ಲಿ ಉಳಿದ ಬಾಳೆಹಣ್ಣನ್ನು ಸೂಚಿಸುವ ಭಿನ್ನರಾಶಿಯನ್ನು ಬರೆಯಿರಿ.

12. $\frac{7}{8}$ ಮೀಟರು ಉದ್ದವುಳ್ಳ ಒಂದು ಕಡ್ಡಿ ಎರಡು ತುಂಡುಗಳಾಗಿ ಮುರಿದುಹೋಗಿದೆ. ಒಂದು ತುಂಡು $\frac{1}{4}$ ಮೀಟರು ಉದ್ದವಿದ್ದರೆ, ಎರಡನೇ ತುಂಡಿನ ಉದ್ದವನ್ನು ಕಂಡುಹಿಡಿಯಿರಿ.

13. ಪಾಠಶಾಲೆಯ ಮೈದಾನದ ಸುತ್ತ ನಡೆದು ಬರಲು ರೇಣುಕಾಗೆ $2\frac{1}{5}$ ನಿಮಿಷಗಳ ಸಮಯ ಬೇಕಾಗುತ್ತದೆ.

ಇದೇ ದೂರವನ್ನು ನಡೆಯಲು ರೇಷ್ಮಾಗೆ $\frac{7}{4}$ ನಿಮಿಷಗಳ ಸಮಯ ಬೇಕಾಗುತ್ತದೆ. ಇಬ್ಬರಲ್ಲಿ ಯಾರು ಕಡಿಮೆ ಸಮಯದಲ್ಲಿ ಪ್ರಯಾಣಿಸಿದ್ದರೆ?ಎಷ್ಟು ಕಡಿಮೆ? ಆ ಕಡಿಮೆ ಸಮಯವನ್ನು ಭಿನ್ನರಾಶಿ ರೂಪದಲ್ಲಿ ಬರೆಯಿರಿ.

### 7.11 ದಶಮಾಂಶಗಳು




ಈ ಪೆನ್ಸಿಲ್‌ನ ಉದ್ದ ಎಷ್ಟು? ..................... ಸೆಂ.ಮೀ




ಈ ಮೇಲಿನ ಉದ್ದ 4 ಸೆಂ.ಮೀ ಗಿಂತಲೂ ಹೆಚ್ಚು ಮತ್ತು 5 ಸೆಂ.ಮೀ ಗಿಂತಲೂ ಕಡಿಮೆ ಹಾಗಾದರೆ ಈ ಮೀನಿನ ಉದ್ದವನ್ನು ಹೇಗೆ ಕಂಡುಹಿಡಿಯುವಿರಿ?

ಇದನ್ನು ಕಂಡುಕಹಿಡಿಯಲು 4, 5 ಗಳ ಮಧ್ಯದೂರವನ್ನು 10 ಸಮಾನ ಭಾಗಗಳಾಗಿ ಮಾಡಬೇಕು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಈಗ ನೀವು ಮೀನಿನ ಉದ್ದ ಹೇಳಬಲ್ಲಿರಾ? ಇದರ ಉದ್ದ.............ಸೆಂ.ಮೀ ಮತ್ತು .............. ಚಿಕ್ಕ ಭಾಗ. ಈ ಚಿಕ್ಕ ಸಮಭಾಗವನ್ನು ನಾವು ಮಿಲಿ ಮೀಟರು ಎನ್ನುತ್ತೇವೆ. ಅಂದರೆ ಮೀನಿನ ಉದ್ದ 4 ಸೆಂ.ಮೀ ಮತ್ತು 2 ಮಿ.ಮೀ. ಆ 10 ಸಮಭಾಗಗಳಲ್ಲಿ ಪ್ರತಿಭಾಗವನ್ನು ಒಂದು ಮಿಲಿಮೀಟರು ಎನ್ನುತ್ತೇವೆ. ನಾವು ಸ್ಕೇಲನ್ನು ಉಪಯೋಗಿಸವಾಗ ಸಮಾನಭಾಗಗಳು ಉಂಟುಮಾಡಿದ ಚಿಕ್ಕ ಭಾಗಗಳನ್ನು ಸಹ ಗಣಿಸುತ್ತೇವೆ.

ಮೇಲಿನ ಉದಾಹರಣೆಯಲ್ಲಿ ಮೀನಿನ ಉದ್ದ

4 ಮತ್ತು $\frac{2}{10}$ ಭಾಗವು $= 4\frac{2}{10}$ ಸೆಂ.ಮೀ

ಹಾಗಾದರೆ ಈ ಮೀನಿನ ಬಾಲದ ಉದ್ದ ಎಷ್ಟು?

ಬಾಲದ ಉದ್ದ 1 ಸೆಂ.ಮೀ ಗಿಂತ ಕಡಿಮೆ. ಇನ್ನೂ ಇದು 10 ಚಿಕ್ಕ ಸಮಭಾಗಗಳಲ್ಲಿ 8 ಚಿಕ್ಕ ಸಮಭಾಗಗಳಿಗೆ ಸಮ.

ಆಗ ಅದು $\frac{1}{10} + \frac{1}{10} + \frac{1}{10} + \frac{1}{10} + \frac{1}{10} + \frac{1}{10} + \frac{1}{10} + \frac{1}{10} = \frac{8}{10}$ ಸೆಂ.ಮೀ




ಚಿತ್ರದಲ್ಲಿ ಬೆಂಕಿ ಕಡ್ಡಿಯನ್ನು ನೋಡಿ, ಅದರ ಉದ್ದವನ್ನು ಸೆಂ.ಮೀಗಳಲ್ಲಿ ಮತ್ತು ಮಿ.ಮೀ ಗಳಲ್ಲಿ ತಿಳಿಸಿರಿ

1ಸೆಂ.ಮೀ.ನಲ್ಲಿ ಪ್ರತಿಭಾಗವು $= 1$ ಮಿ.ಮೀ $= \frac{1}{10}$ ಸೆಂ.ಮೀ $= .1$ ಸೆಂ.ಮೀ $= 0\ .1$ ಸೆಂ.ಮೀ

### 7.11.1 ದಶಾಂಶ ಸಂಖ್ಯೆಗಳ ಸ್ಥಾನಬೆಲೆಗಳು

ನಾವು ಒಂದು ಮೂರು ಅಂಕಗಳ ಸಂಖ್ಯೆಯನ್ನು ಓದಿದರೆ, ಅದರಲ್ಲಿನ ಅಂಕೆಗಳ ಸ್ಥಾನಬೆಲೆಗಳನ್ನು ಅನುಸರಿಸಿ ಆ ಸಂಖ್ಯೆಯನ್ನು ಕಂಡುಕೊಳ್ಳಬಹುದು. ಉದಾಹರಣೆಗೆ 1, 2, 5ಎಂಬ ಮೂರು ಅಂಕೆಗಳನ್ನು ತೆಗೆದುಕೊಳ್ಳಿರಿ.

512ಎಂಬ ಸಂಖ್ಯೆಯಲ್ಲಿ 5 ನೂರರ ಸ್ಥಾನದಲ್ಲಿದ್ದಾಗ ಅದರ ಸ್ಥಾನಬೆಲೆ 500. ಆದ್ದರಿಂದಲೇ ಆ ಸಂಖ್ಯೆ ಐದುನೂರ ಹನ್ನೆರಡು, 152 ಎಂಬ ಸಂಖ್ಯೆಯಲ್ಲಿ 5 ಹತ್ತರ ಸ್ಥಾನದಲ್ಲಿದೆ. ಆದ್ದರಿಂದ ಅದರ ಬೆಲೆ 50. ಆ ಸಂಖ್ಯೆ ಒಂದು ನೂರ ಐವತ್ತೆರಡು. 125 ರಲ್ಲಿ 5 ಬಿಡಿಸ್ಥಾನದಲ್ಲಿದೆ. ಆದ್ದರಿಂದ ಆ ಸಂಖ್ಯೆ 125. ನಾವು ನೂರರ ಸ್ಥಾನದಿಂದ ಬಲಕ್ಕೆ ಚಲಿಸಿದಾಗ ಹತ್ತರ ಸ್ಥಾನ ಅದರ ಬಲಕ್ಕೆ ಬಿಡಿ ಸ್ಥಾನಗಳು ಇವೆ ಅಂದರೆ ನಾವು ಬಲಕ್ಕೆ ಚಲಿಸಿದಂತೆಲ್ಲಾ ಅದರ ಸ್ಥಾನ ಬೆಲೆ $\frac{1}{10}$ ರಷ್ಟು ಕಡಿಮೆಯಾಗುತ್ತದೆ.



100 10 1 $\frac{1}{10}$



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಮೇಲಿನ ಚಿತ್ರದಲ್ಲಿ ನಾವು ಎಡದಿಂದ ಬಲಕ್ಕೆ ಚಲಿಸಿದಾಗ ಬೆಲೆಗಳು ಹೇಗೆ ಬದಲಾಗುತ್ತವೆಯೋ ನೋಡಬಹುದು. ಮೊದಲ ಚಿತ್ರದಲ್ಲಿ 100 ಆಯತಘನಾಕಾರ ಕಡ್ಡಿಗಳಿಂದ ಉಂಟಾದ ಘನವನ್ನು ನೂರರ ಸ್ಥಾನದಲ್ಲಿ ತೆಗೆದುಕೊಂಡು ಪ್ರಾರಂಭಿಸಿದ್ದೇವೆ. ಇದನ್ನು 10 ಸಮಭಾಗಗಳಾಗಿ ಮಾಡಲಾಗಿ 10 ಆಯತ ಘನಾಕಾರ ಕಡ್ಡಿಗಳಿಂದ ಮಾಡಲಾದ ಆಯತಘನ ಉಂಟಾಗಿದೆ.

ಇದನ್ನು ಮತ್ತೆ 10 ಸಮಾನ ಭಾಗಗಳು ಮಾಡಿದಾಗ 1 ಆಯತಾಕಾರ ಕಡ್ಡಿ ಬರುತ್ತದೆ. ಅಂದರೆ ನೂರರಲ್ಲಿ 10ನೇ ಭಾಗ 10 ಮತ್ತು ಹತ್ತರಲ್ಲಿ ಹತ್ತನೇ ಭಾಗ ಒಂದು.

ನಾವು ಇದೇರೀತಿ ಇನ್ನೂ ಬಲಕ್ಕೆ ಚಲಿಸಿದರೆ ಏನು ಆಗುತ್ತೇ?

ಷಷಷಷ ಈ ರೀತಿಯ ಸಂದರ್ಭಗಳಲ್ಲಿ ಬಳಸಿದ ನಿಯಮವನ್ನು ಒಂದು ಸಮೀಕರಣ ಎನ್ನಬಹುದು. ಕೆಳಗಿನ ಪಟ್ಟಿಯನ್ನು ಪರಿಶೀಲಿಸಿದರೆ ನಮ್ಮ ಪ್ರಶ್ನೆಗೆ ಉತ್ತರ ದೊರೆಯುತ್ತದೆ

| $m$ | $2m$ | ನಿಬಂಧನೆ ತೃಪ್ತಿಯಾಗಿದೆಯೇ?(ಹೌದು/ಅಲ್ಲ) |
|---|---|---|
| 2 | 4 | ಇಲ್ಲಾ |
| 3 | 6 | ಇಲ್ಲಾ |
| 4 | 8 | ಇಲ್ಲಾ |
| 5 | 10 | ಹೌದು |
| 6 | 12 | ಇಲ್ಲಾ |
| 7 | 14 | ಇಲ್ಲಾ |



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಇದರಿಂದ $2m = 10$ ಎನ್ನುವದು $m = 5$ ಎಂಬ ಬೆಲೆಗೆ ತೃಪ್ತಿ ಹೊಂದುತ್ತದೆ. 5ಬಿಟ್ಟು ಮತ್ತೇ ಯಾವುದೇ ಬೆಲೆಗಳಿಗೆ ಈ ಸಮೀಕರಣ ತೃಪ್ತಿ ಹೊಂದುವುದಿಲ್ಲ.

### 9.8.1 ಸಮೀಕರಣದ LHS ಮತ್ತು RHS




ನಾವು $2m = 10$ ಎಂಬ ಸಮೀಕರಣವನ್ನು ಪರಿಶೀಲಿಸಿದರೆ ಎರಡು ಬದಿಯ ನಡುವಿನ ಸಮ(=)ಚಿಹ್ನೆ ಇರುತ್ತದೆ, ಈ ಸಮಾನತ್ವ ಗುರ್ತಿಗೆ ಎಡಗೈಕಡೆ ಇರುವ ಬೀಜೋಕ್ತಿಯನ್ನು($2m$) LHS (Left hand side) ಎಂದೂ, ಬಲಗಡೆ ಇರುವ ಬೀಜೋಕ್ತಿಯನ್ನು(10)RHS (Right hand side) ಎಂದು ಕರೆಯುತ್ತಾರೆ. ಒಂದು ಸಮೀಕರಣದ LHS ನ ಬೆಲೆ RHS ನಬೆಲೆಗೆ ಸಮ ವಾಗಿರುವುದೆಂದು ಹೇಳಬಹುದು. ಈ ಸಂದರ್ಭವಾಗಿ ನಾವು ಸಮೀಕರಣವನ್ನು ಸಾಮಾನ್ಯ ತಕ್ಕಡಿಯಲ್ಲಿ ಹೋಲಿಸಬಹುದು.RHS.,LHS ಗೆ ಸಮ ವಾಗಿಲ್ಲದಿದ್ದರೆ ಅವುಗಳನ್ನು ಸಮೀಕರಣ ಎನ್ನಲಾರೆವು.

ಉದಾಹರಣೆಗೆ ಒಂದು ಬದಿಯಲ್ಲಿ 4+5 ಇದ್ದು ಇನ್ನೊಂದು ಬದಿಯಲ್ಲಿ 7 ಇದ್ದರೆ ಅದು ಸಮೀಕರಣವಾಗುವುದಿಲ್ಲ. ಅದನ್ನು ಈ ರೀತಿ ಬರೆಯಬಹುದು $4+5\neq7$ ಅಥವಾ $4+5>7$ ಹಾಗೆಯೇ $x + 5 > 6$, $y - 1< 10$ ಗಳು ಸಮೀಕರಣಗಳಲ್ಲ.

**ಇವು ಮಾಡಿರಿ**



1. ಕೆಳಗಿನ ಸರಳ ಸಮೀಕರಣಗಳಿಗೆ LHS ಮತ್ತು RHS ಗಳನ್ನು ಗುರ್ತಿಸಿ ಬರೆಯಿರಿ
   (i) $2x + 1 = 10$  (ii) $9 = y - 2$  (iii) $3p + 5 = 2p + 10$
2. ಯಾವುದಾದರೂ ಎರಡು ಸರಳ ಸಮೀಕರಣಗಳನ್ನು ಬರೆದು, ಅವುಗಳ LHS ಮತ್ತುRHS ಗಳನ್ನು ಬರೆಯಿರಿ

### 9.8.2 ಸಮೀಕರಣಗಳ ಸಾಧನೆ : (ಸಮೀಕರಣ ಮೂಲ)– ಯತ್ನದೋಷ ಪದ್ಧತಿ

ಈ ಪಾಠದ ಪ್ರಾರಂಭದಲ್ಲಿ ನೀಡಿದ ಉದಾಹರಣೆ ಯನ್ನು ಪರಿಶೀಲಿಸೋಣ ನಾವು ದಾಮಿನಿ ಮತ್ತು ಕೌಶಿಕ್ ನಡುವಿನ ಸಂಭ್ಘಾಣೆಯನ್ನು ಗಮನಿಸಿದ್ದೇವೆ ಆ ಸಂಭಾಷಣೆಯಲ್ಲಿ ಅಂತಿಮ ಫಲಿತಾಂಶ 27 ಎಂದು ದಾಮಿನಿ ಹೇಳುತ್ತಲೇ, ಕೌಶಿಕನು ಸ್ನೇಹಿತರ ವಯಸ್ಸು 11 ವರ್ಷಗಳೆಂದು ಹೇಳೀದನು. ಅವನು ವಯಸ್ಸನ್ನು ಹೇಗೆ ಹೇಳಿದನೋ ಈಗ ನೋಡೋಣ

ದಾಮಿನಿ ಗೆಳೆಯನ ವಯಸ್ಸು $x$ ವರ್ಷಗಳಾಗಿರಲಿ ಅದನ್ನು ದ್ವಿಗುಣಗೋಳಿಸಿದಾಗ ನಮಗೆ $2x$ದೊರೆಯುತ್ತದೆ ಅಲ್ಲವೇ! ಅದಕ್ಕೆ 5ನ್ನು ಸೇರಿಸಿದಾಗ ಅದು $2x + 5$ ಎಂದಾಗುತ್ತದೆ.ದಾಮಿನಿ ಅಂತಿಮ ಫಲಿತಾಂಶ 27ಕ್ಕೆ ಇದು ಸಮ.

ಅಂದರೆ $2x + 5 = 27$ ಎಂದು ತಿಳಿಯುತ್ತದೆ.

ಮೇಲಿನ ಸಮೀಕರಣವನ್ನು ತೆಗೆದುಕೊಳ್ಳೋಣ. $x$ ಯಾವ ಬೆಲೆಗೆ ತೃಪ್ತಿ ಹೊಂದುತ್ತದೆಯೋ ಪರಿಶೀಲಿಸೋಣ.

ಇಲ್ಲಿ $x$ ಎನ್ನುವುದು ಚರಾಕ್ಷರ ಆದ್ದರಿಂದ, ಅದಕ್ಕೆ 1,2,3 ….ಬೆಲೆಗಳು ತೆಗೆದುಕೊಳ್ಳೋಣ.

$x = 1$ ಆದರೆ $2x + 5 = 2 \times 1 + 5 = 7$ ಆಗಿರುತ್ತದೆ

$x = 2$ ಆದರೆ $2x + 5 = 2 \times 2 + 5 = 9$ ಆಗಿರುತ್ತದೆ

$x = 3$ ಆದರೆ $2x + 5 = 2 \times 3 + 5 = 11$ಆಗಿರುತ್ತದೆಎನ್ನುತ್ತೇವೆ ಇನ್ನು ಮುಂತಾದವು

$x$ ನ ಸ್ಥಾನದಲ್ಲಿ 1,2,3 .....ಬೆಲೆಗಳಿಗೆ $x$ ಗೆ ಬದಲಾಗಿ ಬರೆದು $2x + 5$ನ ಬೆಲೆಗಳನ್ನು ಸರಿನೋಡುವುದನ್ನು **ಆದೇಶ ಪದ್ಧತಿ** ಎನ್ನುತ್ತೇವೆ. ಈ ವಿಧವಾಗಿ $x$ ನ ವಿವಿಧ ಬೆಲೆಗಳಿಗೆ $2x + 5 = 27$ ಸಮೀಕರಣದಲ್ಲಿ ಆದೇಶಿಸಿ, LHS ಮತ್ತು RHS ಗಳನ್ನು ಪರಿಶೀಲಿಸೋಣ.



Downloaded from https:// www.studiestoday.com

Downloaded from https:// www.studiestoday.com

| ಆದೇಶಿಸುವ ಬೆಲೆ (x) | LHSನ ಬೆಲೆ (2x+5) | RHSನಬೆಲೆ 27 | LHS, RHS ಗೆ ಸಮನಾಗಿರುವುದೇ |
|---|---|---|---|
| 1 | 2 × 1+5 = 7 | 27 | ಸಮವಾಗಿಲ್ಲ |
| 2 | 2 × 2+5 = 9 | 27 | ಸಮವಾಗಿಲ್ಲ |
| 3 | 2 × 3+5 = 11 | 27 | ಸಮವಾಗಿಲ್ಲ |
| 4 | 2 × 4+5 = 13 | 27 | ಸಮವಾಗಿಲ್ಲ |
| 5 | 2 × 5+5 = 15 | 27 | ಸಮವಾಗಿಲ್ಲ |
| 6 | 2 × 6+5 = 17 | 27 | ಸಮವಾಗಿಲ್ಲ |
| 7 | 2 × 7+5 = 19 | 27 | ಸಮವಾಗಿಲ್ಲ |
| 8 | 2 × 8+5 = 21 | 27 | ಸಮವಾಗಿಲ್ಲ |
| 9 | 2 × 9+5 = 23 | 27 | ಸಮವಾಗಿಲ್ಲ |
| 10 | 2 × 10+5 = 25 | 27 | ಸಮವಾಗಿಲ್ಲ |
| 11 | 2 × 11+5 = 27 | 27 | ಸಮವಾಗಿದೆ |
| 12 | 2 × 12+5 = 29 | 27 | ಸಮವಾಗಿಲ್ಲ |

ಮೇಲಿನ ಪಟ್ಟಿಯನ್ನು ಪರಿಶೀಲಿಸಿದರೆ $x= 11$ ಬೆಲೆಯನ್ನು ಆದೇಶಿಸಿದಾಗ LHS ಮತ್ತು RHS ಸಮವಾಗಿವೆ ಆದ್ದರಿಂದ $x = 11$ ಇದು $2x + 5 = 27$ ಸಮೀಕರಣದ **ಮೂಲ** ಎನ್ನುತ್ತಾರೆ.

**ಒಂದು ಚರಾಕ್ಷರ ಬೆಲೆಗೆ ಒಂದು ಸಮೀಕರಣದಲ್ಲಿ LHS ಮತ್ತು RHSಗಳು ಸಮವಾಗುವುದೋ ಅದನ್ನು ಸಮೀಕರಣದ ಮೂಲ ಎನ್ನುವರು.** ಈಗ ನಿಮಗೆ ದಾಮಿನಿ ಗೆಳೆಯನ ವಯಸ್ಸನ್ನು ಕೌಷಿಕ್ ಹೇಗೆ ಹೇಳಿದನೋ ಅರ್ಥವಾಗಿರುತ್ತದೆ. ಗಣಿತಲ್ಲಿ ಚಿಕ್ಕ ಚಿಕ್ಕ ಒಗಟು, ಪಜಿಲ್ಸ್ , ನಿಜ ಜೀವನ ಸಮಸ್ಯಗಳ ಬಿಡುಸುವಿಕೆಗೆ ಶಕ್ತಿವಂತವಾದ ಉಪಕರಣವಾಗಿ ಬೀಜಗಣಿತವನ್ನು ಉಪಯೋಗಿಸಿ ಸುಲಭವಾಗಿ ಬಿಡಿಸಬಹುದು.

ಉದಾಹರಣೆಗೆ $3m = 15$ ಆಗಿರಲಿ

ಕೆಳಗಿನ ಪಟ್ಟಿಯ $m$ ಎಂಬ ಚರಾಕ್ಷರದ ಯಾವ ಬೆಲೆಗಳಿಗೆ ಸಮೀಕರಣದಲ್ಲಿ LHS ಮತ್ತು RHS ಗಳೂ ಸಮವಾಗಿವೆಯೋ ನೋಡೋಣ.

| ಆದೇಶಿಸುವ ಬೆಲೆ (m) | LHSನಬೆಲೆ (3m) | RHSನಬೆಲೆ (15) | LHS RHS ಸಮವೇ |
|---|---|---|---|
| 1 | 3 × 1 = 2 | 15 | ಸಮವಾಗಿಲ್ಲ |
| 2 | 3 × 2 = 6 | 15 | ಸಮವಾಗಿಲ್ಲ |
| 3 | 3 × 3 = 9 | 15 | ಸಮವಾಗಿಲ್ಲ |
| 4 | 3 × 4 = 12 | 15 | ಸಮವಾಗಿಲ್ಲ |
| 5 | 3 × 5 = 15 | 15 | ಸಮವಾಗಿದೆ |
| 6 | 3 × 6 = 18 | 15 | ಸಮವಾಗಿಲ್ಲ |

ಈ ಪಟ್ಟಿಯಿಂದ $m$ =5 ಆದಾಗ LHSಮತ್ತು RHSಗಳು ಸಮವಾಗಿವೆಯೆಂದು ತಿಳಿಯಬಹುದು. ಆದ್ದರಿಂದ $m$=5 ಈ ಸಮೀಕರಣದ ಮೂಲವಾಗಿದೆ. ಈ ಪದ್ಧತಿಯನ್ನು ನಾವು ಯತ್ನ ಮತ್ತು ಸಾಧನೆಯ ಪದ್ಧತಿ ಎಂದು ಕರೆಯುತ್ತೇವೆ



Downloaded from https:// www.studiestoday.com

Downloaded from https:// www.studiestoday.com

**ಇವು ಮಾಡಿರಿ**

$x - 4 = 2$ಯತ್ನದೋಷ ಪದ್ಧತಿಯಿಂದ ಈ ಸಮೀಕರಣದಮೂಲವನ್ನು ಕಂಡುಹಿಡಿಯಿರಿ





## ಅಭ್ಯಾಸ 9.3

1. ಇವುಗಳು ಯಾವ ಸಮೀಕರಣಳೋ ತಿಳಿಸಿರಿ

(i) $x - 3 = 7$ (ii) $l + 5 > 9$ (iii) $p-4 < 10$

(iv) $5 + m = -6$ (v) $2s - 2 = 12$ (vi) $3x + 5 > 13$

(vii) $3x < 15$ (viii) $2x - 5 = 3$ (ix) $7y + 1 < 22$

(x) $-3z + 6 = 12$ (xi) $2x - 3y = 3$ (xii) $z^2 = 4$

2. ಈ ಸಮೀಕರಣಗಳಲ್ಲಿ LHSಮತ್ತು RHS ಗಳನ್ನು ಬರೆಯಿರಿ

(i) $x-5 = 6$ (ii) $4y = 12$ (iii) $2z + 3 = 7$

(iv) $3p = 24$ (v) $4 = x - 2$ (vi) $2a - 3 = -5$

3. ಯತ್ನದೋಷ ಪದ್ಧತಿಯಿಂದ ಈ ಸಮೀಕರಣಗಳ ಮೂಲಗಳನ್ನು ಕಂಡುಹಿಡಿಯಿರಿ

(i) $x + 3 = 5$ (ii) $y - 2 = 7$ (iii) $a - 2 = 6$

(iv) $5x = 15$ (v) $6n = 30$ (vi) $3z = 27$

## ನೆನಪಿನಲ್ಲಿಡಬೇಕಾದ ಅಂಶಗಳು

1. ಬೆಂಕಿಕಡ್ಡಿಗಳನ್ನು ಬಳಸಿ ಆಕೃತಿಗಳನ್ನುಜೋಡಿಸುವುದನ್ನು ಕಲಿತಿದ್ದೇವೆ. ವಿವಿಧ ಆಕೃತಿಗಳ ಸಂಖ್ಯೆ ಹಾಗೂ ಅವುಗಳನ್ನೇರ್ಪಡಿಸಲು ಬೇಕಾಗುವ ಬೆಂಕಿಕಡ್ಡಿಗಳ ಸಂಖ್ಯೆಗಿರುವ ಸಾಮಾನ್ಯ ಸಂಬಂಧವನ್ನು ತಿಳಿದಿದ್ದೇವೆ ಆ ಆಕೃತಿಯು ಎಷ್ಟು ಬಾರಿ ಆವೃತ್ತಿಗೊಂಡಿದೆಯೋ ಅದನ್ನು ನಾವು ಚರಾಕ್ಷರ ಎನ್ನುತ್ತೇವೆ. ನಿಯಮಗಳನ್ನು ಬರೆಯುವಾಗ ನಾವು ಚರಾಕ್ಷರಗಳಿಗೆ ಅಕ್ಷರಗಳನ್ನು ಪಯೋಗಿಸುತ್ತೇವೆ.
2. ಒಂದು ಚರಾಕ್ಷರವು ಹಲವಾರು ಬೆಲೆಗಳನ್ನು ಹೊಂದಿರುತ್ತದೆ ಈ ಬೆಲೆಯು ನಿರ್ಧಿಷ್ಟವಾಗಿರುವುದಿಲ್ಲ.
3. ನಾವು ಚರಾಕ್ಷರನ್ನು ತಿಳಿಸಲು ಸಾಧಾರಣವಾಗಿ a, b, m, n, p, q, x, y, z ಮುಂತಾದವುಗಳನ್ನು ಬಳಸುತ್ತೇವೆ.
4. ಪ್ರಾಯೋಗಿಕ ಸನ್ನಿವೇಶಗಳಲ್ಲಿ ಸಂಬಂಧಗಳನ್ನು ವ್ಯಕ್ತಪಡಿಸಲು ಈ ಚರಾಕ್ಷರವು ಸಹಾಯಕವಾಗಿದೆ
5. ಚರಾಕ್ಷರಗಳು ಸಂಖ್ಯೆಗಳಾಗಿದ್ದರೂ ಅವುಗಳ ಬೆಲೆ ನಿರ್ದಿಷ್ಟವಾಗಿದ್ದಾಗ ಮಾತ್ರ ಅವುಗಳ ಮೇಲೆ ಮೂಲಕ್ರೀಯೆಗಳನ್ನು ನಡೆಸಬಹುದು
6. ವಿವಿಧ ಕ್ರಿಯೆಗಳನ್ನು ಬಳಸುವುದರ ಮೂಲಕ ನಾವು ಅವ್ಯಕ್ತಗಳ ಬೆಲೆಯನ್ನು ವ್ಯಕ್ತಡಿಸಬಹುದು ಉದಾಹರಣೆ $2m$, $3s+1$, $8p$, $x/3$ ಮುಂತಾದವು
7. ರೇಖಾಗಣಿತ ಮತ್ತು ಅಂಕಗಣಿತದ ಸಾಮಾನ್ಯ ಸೂತ್ರಗಳನ್ನು ವ್ಯಕ್ತಪಡಿಸಲು ಚರಾಕ್ಷರಗಳು ಸಹಾಯಕವಾಗಿವೆ.
8. ಒಂದು ಸಮೀಕರಣದಿಂದ ರೂಪೊಂದಿಸಿದ ನಿಭಂದನೆಯನ್ನು ಸಮೀಕರಣ ಎನ್ನಬಹುದು.
9. ಪ್ರತಿ ಸಮೀಕರಣಕ್ಕೆ ಸಮಾನತ್ವದ ಎರಡೂ ಕಡೆ ಇರುವ ಬೀಜೋಕ್ತಿಗಳನ್ನು L.H.S.ಮತ್ತು R.H.S. ಎನ್ನುತ್ತಾರೆ.
10. ಸಮೀಕರಣದಲ್ಲಿ ಚರಾಕ್ಷರಕ್ಕೆ ಯಾವ ಬೆಲೆ ಆದೇಶಿಸಿದಾಗ L.H.S.ಮತ್ತು R.H.S..ಗೆ ಸಮನಾವುದೋ ಆ ಬೆಲೆಗಳನ್ನು ಸಮೀಕರಣದ ಮೂಲ ಎನ್ನುತ್ತಾರೆ.
11. ಈ ಸಮೀಕರಣದ ಮೂಲ ತಿಳಿಯಲು ಬಳಸುವ ಪದ್ಧತಿಗಳಲ್ಲಿ ಯತ್ನದೋಷಪದ್ಧತಿಯೂ ಒಂದು.



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ –10

# ಸುತ್ತಳತೆಗಳು ಮತ್ತು ವಿಸ್ತೀರ್ಣಗಳು

## 10.1 ಪರಿಚಯ

ನಾವು ಇದಕ್ಕೂ ಮುಂಚೆ ಚರ್ಚಿಸಿದ'‘ಮೂಲ ರೇಖಾಗಣಿತದ ಪರಿಕಲ್ಪನೆಗಳು’ ಎಂಬ ಪಾಠದಲ್ಲಿ ನಾವು ವಿವಿಧ ಆಕೃತಿಗಳ ಬಗ್ಗೆ ತಿಳಿದಿದ್ದೇವೆ. ಸಮತಲ ಆಕೃತಿಗಳು ಎಂದಾಕ್ಷಣ ಅದು ಆವರಿಸಿರುವ ಪ್ರದೇಶ ಹಾಗೂ ಅದರ ಸೀಮಾರೇಖೆಗಳ ಬಗ್ಗೆ ಯೋಚಿಸುತ್ತೇವೆ. ವಿವಿಧ ಆಕೃತಿಗಳ ಗಾತ್ರಗಳ ಬಗ್ಗೆ ಹೋಲಿಸಬೇಕೆಂದರೆ ಕೆಲವು ಅಳತೆಗಳು ಅವಶ್ಯಕವಾಗಿವೆ. ಸಮತಲಗಳನ್ನು ಅಳೆಯುವುದು ಹೇಗೆಂಬುದನ್ನು ಈಗ ತಿಳಿಯೋಣ.

## 10.2 ಸುತ್ತಳತೆ

ಈ ಕೆಳಗಿನ ಸಂದರ್ಭಗಳನ್ನು ಪರಿಶೀಲಿಸಿರಿ.

1. ಒಬ್ಬ ಹುಡುಗನು ಚಿತ್ರದಲ್ಲಿ ತೋರಿಸಿದ ಹಾಗೆ ವರ್ತುಲಾಕಾರದ ಪಥದಲ್ಲಿ ಓಡುತ್ತಿದ್ದಾನೆ. ಅವನು A ಬಿಂದುವಿನಿಂದ ಓಡಲು ಪ್ರಾರಂಭಿಸಿ ಮತ್ತೆ A ಬಿಂದುವಿಗೆ ಬಂದು ನಿಂತಿದ್ದಾನೆ ಎಂದುಕೊಳ್ಳೋಣ. ಈ ಸಂದರ್ಭದಲ್ಲಿ ಆ ಹುಡುಗನು ಕ್ರಮಿಸಿದ ಒಟ್ಟು ದೂರವನ್ನು ಆ ವರ್ತುಲಾಕಾರದ ಪಥದ ಸುತ್ತಳತೆ ಎನ್ನುತ್ತೇವೆ.





2. ಒಬ್ಬ ಮನುಷ್ಯ ತನ್ನ ಹೊಲದ ಸುತ್ತಲೂ ತಂತಿಬೇಲಿಯನ್ನು ಹಾಕಬೇಕೆಂದು ಕೊಂಡಿದ್ದಾನೆ. ಆದರೆ ತನಗೆ ಒಟ್ಟು ಎಷ್ಟು ಉದ್ದವಾದ ತಂತಿ ಅವಶ್ಯಕವಾಗುತ್ತದೆಯೋ ಕಂಡುಹಿಡಿಯಲು ಅವನು ಹೊಲದ ಬಾಹುಗಳ ಉದ್ದಗಳನ್ನು ಕಂಡುಹಿಡಿಯಬೇಕು. ಬಾಹುಗಳ ಉದ್ದ ಒಟ್ಟು ಹೊಲದ ಸುತ್ತಳತೆಯನ್ನು ಕೊಡುತ್ತದೆ. ಒಂದು ಆವೃತ ಚಿತ್ರದಲ್ಲಿ ಅದರ ಸೀಮಾರೇಖೆಗಳ ಒಟ್ಟು ಉದ್ದವನ್ನು ಅದರ ಸುತ್ತಳತೆ ಎನ್ನುತ್ತೇವೆ. ನಾವು ಈ ಸುತ್ತಳತೆ ಎಂಬ ಭಾವನೆಯನ್ನು ನಮ್ಮ ನಿತ್ಯ ಜೀವನದಲ್ಲಿ ಹಲವಾರು ಸಂದರ್ಭಗಳಲ್ಲಿ ಬಳಸುತ್ತೇವೆ.

**ಪ್ರಯತ್ನಿಸಿರಿ :**



ಸುತ್ತಳತೆ ಎಂಬ ಭಾವನೆಯನ್ನು ಬಳಸುವ ಐದು ಸಂದರ್ಭಗಳನ್ನು ತಿಳಿಸಿರಿ.

ನಾವು ಸುತ್ತಳತೆಯನ್ನು ಇನ್ನೊಂದು ರೀತಿಯಲ್ಲಿ ಪರಿಶೀಲಿಸೋಣ

ಈ ಕೆಳಗೆ ನೀಡಲಾದ ಚಿತ್ರಗಳನ್ನು ಪರಿಶೀಲಿಸಬಹುದು.






SCERT TELANGANA

Downloaded from https:// www.studiestoday.com

Downloaded from https:// www.studiestoday.com

ಒಂದು ತಂತಿ ಅಥವಾ ದಾರವನ್ನು ತೆಗೆದುಕೊಂಡು ಒಂದೊಂದು ಆಕೃತಿಗೆ ಅವಶ್ಯಕವಾದ ತುಂಡುಗಳಾಗಿ ಕತ್ತರಿಸಿರಿ. ಆ ದಾರದ ತುಂಡುಗಳನ್ನು ಕೊಟ್ಟಿರುವ ಆಕೃತಿಯ ಬಾಹುಗಳ ಮೇಲೆ ಜೋಡಿಸಿರಿ. ಈ ವಿಧವಾಗಿ ಆಕೃತಿಯ ಬಾಹುಗಳೆಲ್ಲವನ್ನೂ ತಂತಿ ತುಂಡುಗಳಿಂದ ಜೋಡಿಸಿದ ನಂತರ ಅವುಗಳನ್ನು ತೆಗೆದು ಒಂದೊಂದು ಆಕೃತಿಯ ತಂತಿ ತುಂಡುಗಳ ಒಟ್ಟು ಉದ್ದವನ್ನು ಕಂಡುಹಿಡಿಯಿರಿ. ಈ ಅಳತೆ ಆಕೃತಿಯ ಸುತ್ತಲೂ ಒಂದು ಸಾರಿ ತಂತಿಯನ್ನು ಸುತ್ತುವುದಕ್ಕೆ ಬೇಕಾದ ತಂತಿಯ ಉದ್ದವನ್ನು ನೀಡುತ್ತದೆ. ಈ ತಂತಿ ಉದ್ದವನ್ನೇ ಆ ಆವೃತ ಆಕೃತಿಯ ಸುತ್ತಳತೆ ಎನ್ನುತ್ತೇವೆ.

**ಸುತ್ತಳತೆ ಎಂದರೆ ಒಂದು ಆವೃತ ಆಕೃತಿಯ ಸುತ್ತಲೂ, ಅದರ ಅಂಚುಗಳ ಅನುಗುಣವಾಗಿ ಒಂದು ಸಾರಿ ಸುತ್ತೂ ತಿರಿಗಿ ಬರುವುದಕ್ಕೆ ಪ್ರಯಾಣಿಸಬೇಕಾದ ಒಟ್ಟು ದೂರದ ಅಳತೆ.**

**ಇವು ಮಾಡಿರಿ**



ಈ ಆಕೃತಿಗಳ ಸುತ್ತಳತೆ ಎಷ್ಟು ?

(i) ಸುತ್ತಳತೆ = AB + .......... + .......... +..........

= ..........+.......... + .......... + ..........

= ..........ಮೀ




(ii) ಸುತ್ತಳತೆ = AB + .......... + ..........

+ .......... + .......... + ..........

= .......... + .......... + ..........

+ .......... + .......... + ..........

= ..........ಮೀ




ರೇಖಾಖಂಡಗಳಿಂದ ಏರ್ಪಟ್ಟ ಆವೃತ ಚಿತ್ರದ ಸುತ್ತಳತೆಯನ್ನು ಕಂಡುಹಿಡಿಯಲು ಅದರ ಬಾಹುಗಳ ಉದ್ದದ ಅಳತೆಯ ಮೊತ್ತವನ್ನು ಕಂಡುಹಿಡಿಯಬೇಕು.

**ಉದಾಹರಣೆ –1** ರೀತು ಉದ್ದ 130 ಮೀ. ಮತ್ತು ಅಗಲ 90 ಮೀ. ಇರುವ ಒಂದು ಉದ್ಯಾನವನಕ್ಕೆ ಹೋದಳು. ಆಕೆ ಉದ್ಯಾನವನದ ಸುತ್ತಲೂ ಒಂದು ಸುತ್ತು ಸುತ್ತಿದ ನಂತರ ಆಕೆ ಪ್ರಯಾಣಿಸಿದ ಒಟ್ಟು ದೂರವೆಷ್ಟು ?




**ಪರಿಹಾರ :** ರೀತು ಪ್ರಯಾಣಿಸಿದ ಒಟ್ಟುದೂರ = ಉದ್ಯಾನವನ ABCDಯ ಸುತ್ತಳತೆ

= AB + BC + CD + DA

= 130 ಮೀ + 90 ಮೀ+ 130 ಮೀ + 90 ಮೀ. = 440ಮೀ

**ಉದಾಹರಣೆ –2 :** ಕೊಟ್ಟಿರುವ ಆಕೃತಿಯ ಸುತ್ತಳತೆಯನ್ನು ಕಂಡುಹಿಡಿಯಿರಿ.




**ಪರಿಹಾರ :** IJ = DC = 3 ಮೀ EF = HG = 2 ಮೀ

AB = LK = 4 ಮೀ FG = KJ = CB = 1 ಮೀ

AL = BC + DE + FG + HI + JK

= 1ಮೀ + 2 ಮೀ + 1 ಮೀ + 2 ಮೀ + 1ಮೀ

= 7 ಮೀ

ಸುತ್ತಳತೆ = AB + BC + CD + DE + EF + FG + GH + HI + IJ + JK + KL + LA

= 4 ಮೀ + 1 ಮೀ + 3 ಮೀ + 2ಮೀ + 2 ಮೀ + 1 ಮೀ

+ 2ಮೀ + 2 ಮೀ + 3ಮೀ+ 1 ಮೀ + 4ಮೀ + 7 ಮೀ = 32ಮೀ



Downloaded from https:// www.studiestoday.com

Downloaded from https:// www.studiestoday.com



**ಪ್ರಯತ್ನಿಸಿರಿ :**

ಕೆಳಗಿನವುಗಳ ಸುತ್ತಳತೆಯನ್ನು ಕಂಡುಹಿಡಿಯಿರಿ.

1. ಒಂದು ಟೇಬಲ್‌ನ ಮೇಲಿನ ಭಾಗದ ಅಳತೆಗಳು ಕ್ರಮವಾಗಿ 30 ಸೆಂ.ಮೀ, 15 ಸೆಂ.ಮೀ, 30 ಸೆಂ.ಮೀ, 15 ಸೆಂ.ಮೀ. ಅದರ ಮೇಲಿನ ಭಾಗದ ಸುತ್ತಳತೆ ಎಷ್ಟು ?
2. ನಿನ್ನ ಗಣಿತ ಪುಸ್ತಕದ ಮುಖಪುಟದ ಸುತ್ತಳತೆಯನ್ನು ಕಂಡುಹಿಡಿಯಿರಿ.
3. 100 ಮೀ : 70 ಮೀ ಅಳತಯೆಯ ಒಂದು ಆಯತಾಕಾರದ ಉದ್ಯಾನವನದ ಸುತ್ತಲೂ ತಂತಿ ಬೇಲಿಹಾಕಬೇಕು. 1 ಮೀ ತಂತಿಯ ಬೆಲೆ ₹20 ರಂತೆ ಆಗುವ ಒಟ್ಟು ಖರ್ಚು ಎಷ್ಟು?

### 10.2.1 ಆಯತದ ಸುತ್ತಳತೆ

ಚಿತ್ರದಲ್ಲಿ ತೋರಿಸಿರುವಂತೆ ಒಂದು ABCD ಅಯತವನ್ನು ತೆಗೆದುಕೊಳ್ಳೋಣ. ಇದರ ಉದ್ದ, ಅಗಲಗಳು ಕ್ರಮವಾಗಿ 15 ಸೆಂ.ಮೀ ಮತ್ತು 10 ಸೆಂ.ಮೀ ಆದರೆ ಇದರ ಸುತ್ತಳತೆ ಎಷ್ಟು ?




**ಪರಿಹಾರ :** ಆಯತದ ಸುತ್ತಳತೆ = 4 ಬಾಹುಗಳ ಉದ್ದಗಳ ಮೊತ್ತ

= AB + BC + CD + DA

= AB + BC + AB + BC

= 2 × AB + 2 × BC

= 2 × (AB + BC)

= 2 × (15 ಸೆಂ.ಮೀ + 10 ಸೆಂ.ಮೀ)

= 2 × 25 ಸೆಂ.ಮೀ .

= 50 ಸೆಂ.ಮೀ .

> ಆಯತದ ಅಭಿಮುಖ ಬಾಹುಗಳು ಸಮವಾಗಿರುತ್ತದ, ಆದ್ದರಿಂದ
> AB = CD, AD = BC

ಮೇಲಿನ ಚರ್ಚೆಯಿಂದ

ಆಯತದ ಸುತ್ತಳತೆ = ಉದ್ದ + ಅಗಲ + ಉದ್ದ + ಅಗಲ

ಆಯತದ ಸುತ್ತಳತೆ = 2 × (ಉದ್ದ+ಅಗಲ)

ಆಯತದ ಸುತ್ತಳತೆ **P = 2 (*l* + *b*)**




ಇಲ್ಲಿ $l$ = ಉದ್ದ, $b$ = ಅಗಲ ಮತ್ತು p = ಸುತ್ತಳತೆ.

**ಪ್ರಯತ್ನಿಸಿರಿ**



ಕೆಳಗಿನ ಆಯತಗಳ ಸುತ್ತಳತೆಗಳನ್ನು ಕಂಡುಹಿಡಿಯಿರಿ.

| ಆಯತಗಳು | | ಬಾಹುಗಳ ಮೊತ್ತ ಕಂಡುಹಿಡಿಯುವುದರ ಸುತ್ತಳತೆ | **2 × (L+B)** ನ್ನು ಉಪಹೋಗಿಸುವುದರ ಮೂಲಕ ಸುತ್ತಳತೆ |
|---|---|---|---|
| ಉದ್ದ | ಅಗಲ ಮೂಲಕ | | |
| 20 ಸೆಂ.ಮೀ. | 15 ಸೆಂ.ಮೀ. | = 20 ಸೆಂ.ಮೀ. + 15ಸೆಂ.ಮೀ. + 20 ಸೆಂ.ಮೀ.. + 15 ಸೆಂ.ಮೀ. = 70 ಸೆಂ.ಮೀ. | = 2×(20 + 15) = 2 × (35) = 70 ಸೆಂ.ಮೀ. |
| 0.7 ಮೀ. | 0.3 ಮೀ. | | |
| 22 ಸೆಂ.ಮೀ. | 18 ಸೆಂ.ಮೀ. | | |
| 12.5 ಸೆಂ.ಮೀ. | 7.5 ಸೆಂ.ಮೀ. | | |

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಉದಾ–3:** 36 ಮೀ ಉದ್ದ 24 ಮೀ ಅಗಲಗಳನ್ನು ಹೊಂದಿದ ಆಯತಾಕಾರದ ಹೊಲದ ಸುತ್ತಳತೆಯನ್ನು ಕಂಡು ಹಿಡಿಯಿರಿ.

**ಪರಿಹಾರ:** ಹೊಲದ ಉದ್ದ $l = 36$ ಮೀ

ಹೊಲದ ಅಗಲ $b = 24$ ಮೀ

ಹೊಲದ ಸುತ್ತಳತೆ $p = 2(l + b)$

$= 2(36 + 24)$ ಮೀ

$= 2 \times 60$ ಮೀ

$= 120$ ಮೀ

**ಉದಾ–4:** ಒಂದು ಆಯತದ ಸುತ್ತಳತೆ 76 ಸೆಂ.ಮೀ. ಇದರ ಉದ್ದ 26 ಸೆಂ.ಮೀ. ಆದರೆ ಅಗಲ ಎಷ್ಟು?

**ಪರಿಹಾರ** ಆಯತದ ಸುತ್ತಳತೆ P $= 76$ ಸೆಂ.ಮೀ

ಆಯತದ ಉದ್ದ $l$ $= 26$ ಸೆಂ.ಮೀ

$= 2$ (ಉದ್ದ+ ಅಗಲ) $= 76$ ಸೆಂ.ಮೀ

76 $= 2(26 +$ ಅಗಲ$)$

$26 +$ ಅಗಲ $= 76 \div 2 = 38$

ಅಗಲ $= 38 - 26 = 12$ ಸೆಂ.ಮೀ

ಆದ್ದರಿಂದ ಆಯತದ ಅಗಲ $= 12$ ಸೆಂ.ಮೀ

**ಉದಾ–5 :** ಒಂದು ಆಯತಾಕಾರದ ಹೊಲದ ಉದ್ದ ಅಗಲಗಳು ಕ್ರಮವಾಗಿ 22.5 ಮೀ. ಮತ್ತು 14.5 ಮೀ. ಸುತ್ತಲೂ ಬೇಲಿ ಹಾಕಲು ಮೀಟರಿಗೆ 6 ರೂ. ನಂತೆ ಎಷ್ಟು ಖರ್ಚಾಗುತ್ತದೆ.

**ಪರಿಹಾರ :** ಹೊಲದ ಉದ್ದ $l = 22.5$ ಮೀ

ಅಗಲ $b = 14.5$ ಮೀ.

ಹೊಲದ ಸುತ್ತಳತೆ $p = 2(l + b)$

$= 2(22.5 + 14.5)$ ಮೀ.

$= 2 \times 37$ ಮೀ.

$= 74$ ಮೀ.

ಮೀಟರಿಗೆ ₹ 6 ನಂತೆ ಆಗುವ ಒಟು ಖರ್ಚು.

$=$ ₹ $(6 \times 74)$

$=$ ₹ 444

**ಉದಾ–6:** ಸುತ್ತಳತೆ 32 ಸೆಂ.ಮೀ ಆಗುವಂತೆ ಬೇರೆ ಬೇರೆ ಉದ್ದ, ಅಗಲಗಳನ್ನು ಹೋಂದಿರುವ ಎಷ್ಟು ಆಯತಗಳನ್ನು ರಚಿಸಬಹುದು? (ಬಾಹುಗಳ ಅಳತೆಗಳು ಧನ ಪೂರ್ಣಾಂಕಗಳು)

**ಪರಿಹಾರ :** ಸುತ್ತಳತೆ = 32 ಸೆಂ.ಮೀ.

ಸುತ್ತಳತೆಯಲ್ಲಿನ ಅರ್ಧ $= \frac{32}{2}$ ಸೆಂ.ಮೀ. $= 16$ ಸೆಂ.ಮೀ

ಆದ್ದರಿಂದ ಉದ್ದ ಅಳತೆಗಳ ಮೊತ್ತ 16 ಸೆಂ.ಮೀ. ಆಗುವಂತೆ ಎಷ್ಟು ಆಯತಗಳನ್ನು ರಚಿಸಬಹುದೆಂದು ಪರಿಶೀಲಿಸಬೇಕು. ಇನ್ನೊಂದು ವಿಧದಲ್ಲಿ ಹೇಳಬೇಕೆಂದರೆ ನೀವು ಎರಡು ಸಂಖ್ಯೆಗಳ ಮೊತ್ತ 16 ಅಗುವಂತೆ ಸಂಖ್ಯೆಗಳ ಜೋಡಿಗಳನ್ನು ಕಂಡು ಹಿಡಿಯ ಬೇಕು. ಅವುಗಳು

(15, 1) (14, 2) (13, 3) (12, 4) (11, 5) (10, 6) (9, 7) (8, 8)

ಆದ್ದರಿಂದ ಈ ರೀತಿಯ 8 ಆಯತಗಳನ್ನು ರಚಿಸಬಹುದು.



SCERT TELANGANA

Downloaded from https:// www.studiestoday.com

Downloaded from https:// www.studiestoday.com

**ಇವು ಮಾಡಿರಿ :**



1. ಒಂದು ಚೌಕಾಕಾರದ ಫೋಟೋ ಫ್ರೇಮ್‌ನ ಬಾಹು = 0.75 ಮೀ. ಅದರ ಸುತ್ತಲೂ ಬಣ್ಣದ ಕಾಗದ ಸುತ್ತಲು 1 ಮೀ. ಕಾಗದಕ್ಕೆ ₹ 20 ರೂ. ನಂತೆ ಎಷ್ಟು ಖರ್ಚಾಗುತ್ತದೆ.
2. ಒಂದು ತಂತಿಯ ಉದ್ದ 44 ಸೆಂ.ಮೀ. ಈ ತಂತಿಯನ್ನುಪಯೋಗಿಸಿ ಬೇರೆ ಬೇರೆ ಉದ್ದ ಅಗಲಗಳುಳ್ಳ ಎಷ್ಟು ಆಯತಗಳನ್ನು ರಚಿಸಬಹುದು?
3. ನನ್ನ ಬಳಿ 41 ಸೆಂ.ಮೀ ಉದ್ದವುಳ್ಳ ತಂತಿಯಿದೆ. ಇದರ ಅಳತೆಗಳು ಧನ ಪೂರ್ಣಾಂಕಗಳಾಗುವಂತೆ ಆಯತಗಳನ್ನು ರಚಿಸಬಲ್ಲೆವೋ ? ಕಾರಣಗಳನ್ನು ತಿಳಿಸಿರಿ.

### 10.2.2 ನಿಯಮಿತ ಆಕೃತಿಗಳ ಸುತ್ತಳತೆ

ರೇಖಾ ಖಂಡದಿಂದ ಏರ್ಪಡುವ ಆವೃತ ಚಿತ್ರಗಳನ್ನು ಬಹುಭುಜಾಕೃತಿಗಳು ಎನ್ನುತ್ತೇವೆ. ಒಂದು ಬಹುಭುಜಾಕೃತಿಯ ಎಲ್ಲ ಬಾಹುಗಳು, ಎಲ್ಲ ಕೊನಗಳು ಸಮಾನವಾಗಿದ್ದರೆ ಅದನ್ನು ನಿಯಮಿತ ಬಹುಭುಜಾಕೃತಿ ಎನ್ನುವರು.

ಸಮಬಾಹು ತ್ರಿಭುಜವು ಒಂದು ಮೂರು ಬಾಹುಗಳುಳ್ಳ ನಿಯಮಿತ ಬಹುಭುಜಾಕೃತಿ.

ಚೌಕ ಎಂಬುದು ನಾಲ್ಕುಬಾಹುಗಳುಳ್ಳ ನಿಯಮಿತ ಬಹುಭುಜಾಕೃತಿ.




ಚೌಕದಲ್ಲಿ ಬಾಹುಗಳೆಲ್ಲವೂ ಸಮ ಆದ್ದರಿಂದ,

ಚೌಕದ ಸುತ್ತಳತೆ = ಬಾಹು+ಬಾಹು+ಬಾಹು+ಬಾಹು

$= a+a+a+a$

$= 4 \times a = 4a$

$= 4 \times$ ಬಾಹು

ಈಗ ಬಾಹುಗಳ ಉದ್ದ 4 ಸೆಂ.ಮೀ ಹೊಂದಿರುವ ಸಮ ಬಾಹು ತ್ರಿಭುಜವನ್ನು ಪರಿಶೀಲಿಸೋಣ. ಇದರ ಸುತ್ತಳತೆಯನ್ನು ನಾವು ಕಂಡು ಹಿಡಿಯಬಲ್ಲೆವೆ ?




ಈ ಸಮಬಾಹು ತ್ರಿಭುಜದ ಸುತ್ತಳತೆ

$= (4 + 4 + 4)$ ಸೆಂ.ಮೀ.

$= 3 \times 4$ ಸೆಂ.ಮೀ $= 12$ ಸೆಂ.ಮೀ.

ಆದ್ದರಿಂದ '$a$' ಬಾಹುವನ್ನು ಹೊಂದಿದ ಸಮಬಾಹು ತ್ರಿಭುಜದ ಸುತ್ತಳತೆ $3 \times a = 3a$ ಎಂದು ಸಾಮಾನ್ಯೀಕರಿಸಬಹುದು.

ಸಮಬಾಹು ತ್ರಿಭುಜದ ಸುತ್ತಳತೆ = 3 × ಬಾಹುವಿನ ಉದ್ದ

**ಪ್ರಯತ್ನಿಸಿರಿ**

1. ಕೆಳಗಿನ ಚೌಕದ ಸುತ್ತಳತೆಯನ್ನು ಕಂಡುಹಿಡಿಯೋಣ. ಚಿತ್ರಗಳೆಲ್ಲವೂ 1 ಸೆಂ.ಮೀ ಗ್ರಿಡ್ (ಚೌಕುಳಿಕಾಗದ) ನ ಮೇಲೆ ನಿರ್ಮಿಸಲ್ಪಟ್ಟಿವೆ.






2. ನಿನ್ನ ಸುತ್ತಲಿನ ನಿಯಮಿತ ಆಕೃತಿಗಳ ವಸ್ತುಗಳನ್ನು ಗುರ್ತಿಸಿ ಅವುಗಳ ಸುತ್ತಳತೆಯನ್ನು ಕಂಡುಹಿಡಿ. .



SCERT TELANGANA

Downloaded from https:// www.studiestoday.com

Downloaded from https:// www.studiestoday.com

### ಇತರ ನಿಯಮಿತ ಆಕೃತಿಗಳು ಅಥವಾ ಇತರ ನಿಯಮಿತ ಬಹುಭುಜಾಕೃತಿಗಳು

ಎಲ್ಲಾ ಬಾಹುಗಳು, ಎಲ್ಲಾ ಕೋನಗಳು ಸಮವಾಗಿರುವ ರೇಖಾಕೃತಿಗಳನ್ನು ನಿಯಮಿತ ಆಕೃತಿಗಳೆನ್ನುವರು ಎಂಬುದನ್ನು ನೆನಪಿಸಿಕೊಳ್ಳಿ. ಚೌಕ, ಸಮಬಾಹು ತ್ರಿಭುಜದ ನಿಯಮಿತ ಆಕೃತಿಗಳಿಗೆ ಕೆಲವು ಉದಾಹರಣೆಗಳು. ಹಾಗಾದರೆ 5 ಭುಜಗಳ, 6 ಭುಜಗಳ ನಿಯಮಿತ ಆಕೃತಿಗಳು ಕೂಡ ಇವೆ. ಇವು ನಿಯಮಿತ ಬಹುಭುಜಾಕೃತಿಳಾದ್ದರಿಂದ ಇವುಗಳ ಬಾಹುಗಳೆಲ್ಲವೂ ಸಮಾವಾಗಿರುತ್ತವೆ. ಇವುಗಳ ಬಾಹುಗಳ ಉದ್ದಗಳ ಮೊತ್ತವೇ ಸುತ್ತಳತೆ ಆಗುತ್ತದೆ.

ನಿಯಮಿತ ಪಂಚಭುಜಾಕೃತಿಯ ಸುತ್ತಳತೆ = 5 × ಬಾಹುವಿನ ಉದ್ದ

ನಿಯಮಿತ ಷಡ್ಭುಜಾಕೃತಿಯ ಸುತ್ತಳತೆ = 6 × ಬಾಹುವಿನ ಉದ್ದ

ನಿಯಮಿತ ಅಷ್ಟಭುಜಾಕೃತಿಯ ಸುತ್ತಳತೆ = 8 × ಬಾಹುವಿನ ಉದ್ದ

**ಪ್ರಯತ್ನಿಸಿರಿ:**



1. 8 ಸೆಂ.ಮೀ ಭುಜಹೊಂದಿದ ಒಂದು ಪಂಚಭುಜದ ಸುತ್ತಳತೆ ಕಂಡುಹಿಡಿಯಿರಿ.

**ಉದಾ–7:** 250ಮೀ ಬಾಹುವನ್ನು ಹೊಂದಿದ ಒಂದು ಚೌಕಾಕಾರದ ಉದ್ಯಾನ ವನದ ಸುತ್ತ ತಂತಿ ಬೇಲಿಹಾಕಲು ಮೀಟರಿಗೆ ₹20ನಂತೆ ಎಷ್ಟು ಖರ್ಚಾಗುತ್ತದೆ ?

**ಪರಿಹಾರ :** ಚೌಕಾಕಾರದ ಉದ್ಯಾನವನದ ಸುತ್ತಳತೆ = 4 × ಬಾಹುವಿನ ಉದ್ದ

= 4 × 250 ಮೀ. = 1000 ಮೀ

ಒಂದು ಮೀಟರಿಗೆ ಬೇಲಿಹಾಕಲು ಆಗುವ ಖರ್ಚು = ₹20 ಪ್ರತಿ ಮೀಟರ್‌ಗೆ

1000 ಮೀ ಗೆ ಆಗುವ ಖರ್ಚು = ₹ 1000 × 20 = ₹ 20,000

**ಉದಾ–8 :** ಒಂದು ಸಮ ಬಾಹು ತ್ರಿಭುಜದ ಸುತ್ತಳತೆ 54 ಸೆಂ.ಮೀ. ಆದರೆ ಅದರ ಬಾಹುವಿನ ಉದ್ದವೆಷ್ಟು ?

**ಪರಿಹಾರ :** ಸಮಬಾಹು ತ್ರಿಭುಜದ ಸುತ್ತಳತೆ = 3 × ಬಾಹು ಉದ್ದ.

$$\text{ಬಾಹುವಿನ ಉದ್ದ} = \frac{\text{ಸುತ್ತಳತೆ}}{3} = \frac{54 \text{ ಸೆಂ.ಮೀ.}}{3} = 18 \text{ ಸೆಂ.ಮೀ.}$$

**ಉದಾ–9 :** 24 ಸೆಂ.ಮೀ ಉದ್ದದ ತಂತಿಯಿಂದ ಕೆಳಗಿನ ಕ್ರಮಬದ್ಧ ಆಕೃತಿಗಳನ್ನು ರಚಿಸಿ ಅವುಗಳ ಬಾಹುಗಳ ಉದ್ದವನ್ನು ಕಂಡು ಹಿಡಿಯಿರಿ.

(i) ಸಮಾಬಾಹು ತ್ರಿಭುಜ (ii) ಚೌಕ (iii) ನಿಯಮಿತ ಷಡ್ಭುಜ

**ಪರಿಹಾರ :**

(i) ಸಮಬಾಹು ತ್ರಿಭುಜದ ಸುತ್ತಳತೆ = 3 × ಬಾಹುವಿನ ಉದ್ದ

$$\text{ಭುಜದ ಉದ್ದ} = \frac{24 \text{ ಸೆಂ.ಮೀ.}}{3} = 8 \text{ ಸೆಂ.ಮೀ.}$$

(ii) ಚೌಕದ ಸುತ್ತಳತೆ = 4 × ಭುಜಗಳು

$$\text{ಭುಜದ ಉದ್ದ} = \frac{24 \text{ ಸೆಂ.ಮೀ.}}{4} = 6 \text{ ಸೆಂ.ಮೀ}$$

(iii) ನಿಯಮಿತ ಷಡ್ಭುಜದಲ್ಲಿ 6 ಬಾಹುಗಳಿರುತ್ತವೆ. ಆದ್ದರಿಂದ ಇದರ ಸುತ್ತಳತೆ

= 6 × ಬಾಹುವಿನ ಉದ್ದ

$$\text{ಬಾಹುವಿನ ಉದ್ದ} = \frac{24 \text{ ಸೆಂ.ಮೀ.}}{6} = 4 \text{ಸೆಂ.ಮೀ}$$

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ –10.1

1. ಕೆಳಗಿನ ಆಕೃತಿಗಳ ಸುತ್ತಳತೆಯನ್ನು ಕಂಡುಹಿಡಿಯಿರಿ.




2. ಕೆಳಗಿನ ಚಿತ್ರಗಳ ಸುತ್ತಳತೆಯನ್ನು ಕಂಡುಹಿಡಿಯಿರಿ ಈ ಚಿತ್ರಗಳ ಸುತ್ತಲೂ ತಂತಿಹಾಕಲು 1 ಸೆಂ.ಮೀ ತಂತಿಗೆ ₹15 ರಂತೆ ಎಷ್ಟು ಖರ್ಚಾಗುತ್ತದೆ.?




3. 24 ಸೆಂ.ಮೀ ಉದ್ದವಿರುವ ತಂತಿಯಿಂದ ಉದ್ದ, ಅಗಲಗಳು ಪೂರ್ಣಾಂಕಗಳಾಗಿರುವ ಬೇರೆಬೇರೆ ಅಳತೆಗಳನ್ನು ಹೊಂದಿದ ಎಷ್ಟು ಆಯತಗಳನ್ನು ರಚಿಸಬಹುದು.?
4. ಒಂದು ಗಿಡನೆಡುವ ಗುಂಡಿಯು ಚೌಕಾಕಾರದಲ್ಲಿದೆ. ಇದರ ಬಾಹುವಿನ ಉದ್ದ 3.5 ಮೀ. ಇದರ ಸುತ್ತ 4 ಸುತ್ತು ಹಗ್ಗ ಸುತ್ತಬೇಕಾದರೆ 1 ಮೀಟರ್ ಹಗ್ಗದ ಬೆಲೆ ₹ 15 ರಂತೆ ಎಷ್ಟು ಖರ್ಚಾಗುತ್ತದೆ ?
5. 60 ಸೆಂ.ಮೀ ಉದ್ದವನ್ನು ಹೊಂದಿದ ತಂತಿಯಿಂದ ಈ ಕೆಳಗಿನ ನಿಯಮಿತಾಕೃತಿಗಳನ್ನು ರಚಿಸಿ ಅವುಗಳ ಬಾಹುಗಳ ಉದ್ದವನ್ನು ಕಂಡುಹಿಡಿಯಿರಿ.
   (i) ಸಮಬಾಹು ತ್ರಿಭುಜ (ii) ಚೌಕ
   (iii) ನಿಯಮಿತ ಷಡ್ಭುಜಾಕೃತಿ (iv) ನಿಯಮಿತ ಪಂಚಭುಜಾಕೃತಿ
6. ಬಂಟಿ ಮತ್ತು ಬಬ್ಲಿ ಪ್ರತಿದಿನ ಬೆಳಿಗ್ಗೆ ಜಾಗಿಂಗ್‌ಗೆ ಹೋಗುತ್ತಾರೆ. ಬಂಟಿ 80 ಮೀ ಬಾಹು ಹೊಂದಿದ ಚೌಕಾಕಾರದ ಪಾರ್ಕಿನ ಸುತ್ತ ಓಡುತ್ತಾನೆ. ಬಬ್ಲಿಯು 90 ಮೀ ಉದ್ದ, 60 ಮೀ ಅಗಲವನ್ನು ಹೊಂದಿದ ಆಯತಾಕಾರದ ಪಾರ್ಕ್ ಸುತ್ತ ತಿರುಗುತ್ತಾಳೆ. ಇಬ್ಬರೂ 3 ಸಾರಿ ಓಡಿದರೆ, ಹೆಚ್ಚುದೂರ ಓಡಿದವರು ಯಾರು? ಯಾರು ಎಷ್ಟು ದೂರ ಹೆಚ್ಚು ಓಡಿದ್ದಾರೆ.?
7. ಒಂದು ಆಯತದ ಉದ್ದ ಅದರ ಅಗಲದ ಎರಡರಷ್ಟಿದೆ. ಇದರ ಸುತ್ತಳತೆ 48 ಮೀ ಆದರೆ ಆಯತದ ಅಳತೆಗಳನ್ನು ಕಂಡು ಹಿಡಿಯಿರಿ.
8. ಒಂದು ತ್ರಿಭುಜದ ಎರಡು ಬಾಹುಗಳು ಕ್ರಮವಾಗಿ 12 ಸೆಂ.ಮೀ, 14 ಸೆಂ.ಮೀ ಮತ್ತು ಇದರ ಸುತ್ತಳತೆ 36 ಸೆಂ.ಮೀ ಆದರೆ ಮೂರನೆ ಬಾಹುವಿನ ಅಳತೆಯೆಷ್ಟು ?
9. ಈ ಕೆಳಗಿನ ಆಕೃತಿಗಳ ಸುತ್ತಳತೆಯನ್ನು ಕಂಡುಹಿಡಿಯಿರಿ.
   (i) 3 ಸೆಂ.ಮೀ ; 4 ಸೆಂ.ಮೀ; 5 ಸೆಂ.ಮೀ ಬಾಹುಗಳುಳ್ಳ ತ್ರಿಭುಜ
   (ii) 9 ಸೆಂ.ಮೀ ಅಳತೆಯುಳ್ಳ ಸಮಬಾಹು ತ್ರಿಭುಜ.
   (iii) ಎರಡು ಸಮಾನ ಬಾಹುಗಳ ಉದ್ದ 8 ಸೆಂ.ಮೀ., ಮೂರನೇ ಬಾಹುವಿನ ಉದ್ದ 6 ಸೆಂ.ಮೀ. ಗಳಾಗಿರುವ ಸಮದ್ವಿಬಾಹು ತ್ರಿಭುಜ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

## 10.3 ವಿಸ್ತೀರ್ಣ

ಕೆಳಗಿನ ಆವೃತ ಚಿತ್ರಗಳನ್ನು ಪರಿಶೀಲಿಸೋಣ ಇವೆಲ್ಲವೂ ಸಮತಲದ ಮೇಲಿನ ಸ್ವಲ್ಪ ಪ್ರದೇಶವನ್ನು ಆಕ್ರಮಿಸುತ್ತವೆ. ಇವುಗಳಲ್ಲಿ ಯಾವುದು ಹೆಚ್ಚಿನ ಪ್ರದೇಶವನ್ನು ಆಕ್ರಮಿಸುತ್ತದೆಯೋ ? ನೀನು ಹೇಳಬಲ್ಲೆಯಾ? ಇಲ್ಲಿ ನೀಡಿರುವ ಜೋಡಿ ಚಿತ್ರಗಳನ್ನು ಪರಿಶೀಲಿಸಿ ಹೆಚ್ಚು ಸ್ಥಳವನ್ನು ಆಕ್ರಮಿಸುವ ಚಿತ್ರವನ್ನು (✓) ಗುರ್ತಿನಿಂದ ಗುರ್ತಿಸಿರಿ.



(a) (b)



(a) (b)



(a) (b)



(a) (b)

ಯಾವುದೇ ಒಂದು ಆವೃತ ಚಿತ್ರ ಆಕ್ರಮಿಸುವ ಪ್ರದೇಶವನ್ನೇ ಅದರ ವಿಸ್ತೀರ್ಣ ಎನ್ನುವರು.

ಮೇಲೆ ಹೆಸರಿಸಿದ ಚಿತ್ರಗಳಲ್ಲಿ ಯಾವುದು ಹೆಚ್ಚು ವಿಸ್ತೀರ್ಣವನ್ನು ಹೊಂದಿರುವುದೆಂದು ನೀವು ಹೇಳಬಹುದು.

ಹಾಗಾದರೆ ಈ ವಿಧವಾಗಿಯೇ ಎಲ್ಲಾ ಸಂದರ್ಭಗಳಲಿಯೂ ಹೇಳಬಹುದೇ ?

ಪಕ್ಕದಲ್ಲಿರುವ ಚಿತ್ರವನ್ನು ಗಮನಿಸಿರಿ ಇವುಗಳಲ್ಲಿ ಯಾವುದರ ವಿಸ್ತೀರ್ಣ ಹೆಚ್ಚು ? ಇದನ್ನು ಹೇಳುವುದು ಸುಲಭವೇ ? ಇದನ್ನು ತಿಳಿಯಲು ಒಂದು ಗ್ರಾಫ್ ಪೇಪರನ್ನು ಉಪಯೋಗಿಸೋಣ.



(i) (ii)

ಗ್ರಾಫ್ ಪೇಪರಿನಲ್ಲಿ 1 ಸೆಂ.ಮೀ × 1 ಸೆಂ.ಮೀ ಅಳತೆಯುಳ್ಳ ಚೌಕಗಳಿರುತ್ತವೆ ಎಂಬುದು ನಮಗೆ ತಿಳಿದಿದೆಯಲ್ಲವೆ ? ಈ ಗ್ರಾಫ್ ಹಾಳೆಯ ಮೇಲೆ ಮೇಲಿನ ಆಕೃತಿಗಳನ್ನು ಇಟ್ಟು ಅದರ ಅಂಚಿನ ಅನುಗುಣವಾಗಿ ಗೆರೆ ಎಳೆಯಿರಿ.



ಒಂದು ಆಕಾರವನ್ನು 1 ಸೆಂ.ಮೀ ಭುಜವುಳ್ಳ ಚೌಕದಿಂದ ಪೂರ್ತಿಯಾಗಿ ತುಂಬಲು ಎಷ್ಟು ಅವಶ್ಯಕವಾಗುತ್ತವೆಯೋ ಆ ಸಂಖ್ಯೆಯನ್ನು ಆ ಆಕಾರದ ವಿಸ್ತೀರ್ಣ ಎನ್ನುವರೆಂಬುದು ನಮಗೆ ಗೊತ್ತು.



ಹಾಗಾದರೆ ಈ ಆಕಾರದಿಂದ ಆಕ್ರಮಿತವಾದ ಪ್ರದೇಶವನ್ನು ಗಮನಿಸಿದಾಗ ಅವುಗಳಲ್ಲಿ ಕೆಲವು ಚೌಕಗಳು ಆಕಾರದೊಳಗೆ ಇವೆ. ಕೆಲವು ಅರ್ಧ ಪ್ರದೇಶಗಳನ್ನು ಕೆಲವು ಅರ್ಧಕ್ಕಿಂತ ಹೆಚ್ಚು ಇನ್ನು ಕೆಲವು ಅರ್ಧಕ್ಕಿಂತ ಕಡಿಮೆ ಪ್ರದೇಶಗಳು ಆಕಾರದೊಳಗೆ ಇವೆ. ನಮ್ಮ ಅನುಕೂಲಕ್ಕಾಗಿ ಅರ್ಧಕ್ಕಿಂತ ಕಡಿಮೆಯಿರುವ ಚೌಕಗಳನ್ನು ಲೆಕ್ಕಿಸದೇ ಬಿಟ್ಟುಬಿಡೋಣ. ಅರ್ಧಕ್ಕಿಂತ ಹೆಚ್ಚಿನ ಪ್ರದೇಶ ಆಕಾರದೊಳಗೆ ಇದ್ದರೆ ಅವುಗಳನ್ನು ಪೂರ್ಣ ಚೌಕ ಎಂದು ಪರಿಗಣಿಸಿ ಲೆಕ್ಕಿಸೋಣ. ಅರ್ಧ ಪ್ರದೇಶ ಮಾತ್ರವೇ ಆಕಾರದೊಳಗೆ ಇದ್ದರೆ ಅಂತಹ 2 ಚೌಕಗಳನ್ನು ಸೇರಿಸಿ ಒಂದು ಚೌಕವೆಂದು ಲೆಕ್ಕಿಸುತ್ತೇವೆ. ಹೀಗೆ ಅಂದಾಜು ಮಾಡುವುದರಿಂದ ಅರ್ಧಕ್ಕಿಂತ ಕಡಿಮೆ ಇರುವ ಚೌಕಗಳನ್ನು ಬಿಟ್ಟು ಬಿಡುವುದು; ಅರ್ಧಕ್ಕಿಂತ ಹೆಚ್ಚು ಇರುವ ಚೌಕಗಳನ್ನು ಪೂರ್ತಿಯಾಗಿ ಗಣನೆಯಲ್ಲಿ ತೆಗೆದುಕೊಳ್ಳುವುದು ಸರಿತೂಗಿಸಿದಂತೆ ಆಗುತ್ತದೆ.



Downloaded from https:// www.studiestoday.com

Downloaded from https:// www.studiestoday.com

ಈ ವಿಧವಾಗಿ ಚಿತ್ರ (iii)ರಲ್ಲಿ ಆಕಾರವು ಆಕ್ರಮಿಸಿದ ಚೌಕಗಳನ್ನು ಲೆಕ್ಕಹಾಕಿ ಕೆಳಗಿನ ಪಟ್ಟಿಯಲ್ಲಿ ತುಂಬೋಣ

| | ಆಕ್ರಮಿಸಿದ ಪ್ರದೇಶ | ಚೌಕಗಳ ಸಂಖ್ಯೆ | ವಿಸ್ತೀರ್ಣ(ಚ.ಸೆಂ.ಮಿಗಳಲ್ಲಿ |
|---|---|---|---|
| (i) | ಪೂರ್ಣ ತುಂಬಿದ ಚೌಕಗಳು | 17 | 17 |
| (ii) | ಅರ್ಧತುಂಬಿದ ಚೌಕಗಳು | 3 | 3 × ½ |
| (iii) | ಅರ್ಧಕ್ಕಿಂತ ಹೆಚ್ಚುತುಂಬಿದ ಚೌಕಗಳು | 4 | 4 |
| (iv) | ಅರ್ಧಕ್ಕಿಂತ ಕಡಿಮೆ ಇರುವ ಚೌಕಗಳು | 5 | 0 |

ಒಟ್ಟು ವಿಸ್ತೀರ್ಣ $= 17 + 3 \times \frac{1}{2} + 4$

$= 22\frac{1}{2}$ ಚ.ಸೆಂ.ಮೀ

ಈ ವಿಧವಾಗಿ ಪ್ರತಿ ಆಕಾರದ ವಿಸ್ತೀರ್ಣವನ್ನು ಅಂದಾಜುಮಾಡಬಹುದು. ಚಿತ್ರದಲ್ಲಿನ ಎರಡನೇ ಆಕಾರದ ವಿಸ್ತೀರ್ಣವನ್ನು ಇದೇ ವಿಧವಾಗಿ ಲೆಕ್ಕಹಾಕಿ ಎರಡರಲ್ಲಿ ಯಾವುದು ಹೆಚ್ಚು ವಿಸ್ತೀರ್ಣವನ್ನು ಹೊಂದಿದೆಯೆಂದು ನಿರ್ಣಯಿಸಿರಿ.

**ಪ್ರಯತ್ನಿಸಿರಿ**



ಚೌಕಳಿಗಳನ್ನು ಲೆಕ್ಕ ಹಾಕುವ ಮೂಲಕ ಕೆಳಗಿನ ಚಿತ್ರಗಳ ವಿಸ್ತೀರ್ಣಗಳನ್ನು ಕಂಡುಹಿಡಿಯಿರಿ? ಒಂದೊಂದರ ವಿಸ್ತೀರ್ಣವು 1 ಚ.ಸೆಂಮೀ




**ಇವು ಮಾಡಿರಿ**



1. ಎಲೆಗಳು, ಹೂವಿನ ದಳಗಳ ಚಿತ್ರವನ್ನು ಚೌಕುಳಿ ಕಾಗದದ ಮೇಲೆ ಬಿಡಿಸಿ ಅದರ ವಿಸ್ತೀರ್ಣವನ್ನು ಕಂಡು ಹಿಡಿಯಿರಿ.
2. ಗ್ರಾಫ್ ಪೇಪರ್‌ಗಳ ಮೇಲೆ ರೇಖೀಯ ಆಕೃತಿಗಳನ್ನು ರಚಿಸಿ, ಆ ಆಕೃತಿಗಳು ಆಕ್ರಮಿಸಿದ ಚೌಕಗಳನ್ನು ಲೆಕ್ಕ ಹಾಕುವ ಮೂಲಕ ಅವುಗಳ ವಿಸ್ತೀರ್ಣವನ್ನು ಅಂದಾಜು ಮಾಡಿರಿ.

### 10.3.1 ಆಯತದ ವಿಸ್ತೀರ್ಣ




ಚೌಕಗಳುಳ್ಳ ಕಾಗದವನ್ನು ಉಪಯೋಗಿಸಿ ಉದ್ದ 7 ಸೆಂ.ಮೀ, ಅಗಲ 4 ಸೆಂ.ಮೀ ಅಳತೆಗಳ ಆಯತದ ವಿಸ್ತೀರ್ಣವನ್ನು ಕಂಡುಹಿಡಿಯಬಹುದೇ ?

1 ಸೆಂ.ಮೀ ಬಾಹುವುಳ್ಳ ಚೌಕಗಳನ್ನು ಹೊಂದಿದ ಚೌಕಳಿ ಕಾಗದದ ಮೇಲೆ ಮೇಲಿನ ಅಳತೆಗಳನ್ನು ಬಳಸಿ ನಿರ್ಮಿಸಿದರೆ ಅದು 28 ಚೌಕಳಿಗಳನ್ನು ಆಕ್ರಮಿಸಿರುವುದನ್ನು ಗಮನಿಸಬಹುದು.

ಆದ್ದರಿಂದ ಆಯತದ ವಿಸ್ತೀರ್ಣ = 28 ಚ.ಸೆಂ.ಮೀ.



Downloaded from https:// www.studiestoday.com

Downloaded from https:// www.studiestoday.com

ಚಿತ್ರವನ್ನು ಪರಿಶೀಲಿಸಿದಾಗ ಆಯತವು ಆಕ್ರಮಿಸಿದ ಪ್ರದೇಶದಲ್ಲಿ ಸಾಲಾಗಿ 7 ಚೌಕಳಂತೆ 4 ಸಾಲುಗಳಿರುತ್ತವೆ. ಆದ್ದರಿಂದ ಒಟ್ಟು ಚೌಕಗಳ ಸಂಖ್ಯೆ = 7× 4=28




ಇಲ್ಲಿ 28 ಆಯತದ ವಿಸ್ತೀರ್ಣವಾಗಿದೆ. 7ನ್ನು ಆಯತದ ಉದ್ದ, 4 ನ್ನು ಆಯತದ ಅಗಲವಾಗಿ ಗಮನಿಸಿಬಹುದು.

ಕೆಳಗಿನ ಅಳತೆಗಳುಳ್ಳ ಆಯತಗಳನ್ನು ಗ್ರಾಫ್ ಪೇಪರ್‌ನ ಮೇಲೆ ನಿರ್ಮಿಸಿ ಅದು ಆಕ್ರಮಿಸಿದ ಚದರಗಳನ್ನು ಲೆಕ್ಕಿಸುವುದರ ಮೂಲಕ ಆಯತದ ವಿಸ್ತೀರ್ಣವನ್ನು ಕಂಡು ಹಿಡಿಯುವುದು ಮತ್ತು ಆಯತದ ಉದ್ದ,ಅಗಲಗಳ ಗುಣಲಬ್ದವನ್ನು ಕಂಡುಹಿಡಿಯಿರಿ. ಉತ್ತರಗಳಿಂದ ನಾವು ಏನನ್ನು ಗಮನಿಸಬಹುದು.

| ಕ್ರ,ಸಂ. | ಉದ್ದ | ಅಗಲಗಳು | ಚದರಗಳ ಸಂಖ್ಯೆ | ಉದ್ದ × ಅಗಲ ಆಯತದ ವಿಸ್ತೀರ್ಣ |
|---|---|---|---|---|
| 1. | 3 ಸೆಂ.ಮೀ, | 4 ಸೆಂ.ಮೀ | 12 | 12 |
| 2. | 7 ಸೆಂ.ಮೀ, | 5 ಸೆಂ.ಮೀ | | |
| 3. | 5 ಸೆಂ.ಮೀ, | 3 ಸೆಂ.ಮೀ | | |

ಮೇಲಿನ ಫಲಿತಾಂಶಗಳು ಮತ್ತು ಚರ್ಚೆಯಿಂದ

**ಆಯತದ ವಿಸ್ತೀರ್ಣ = ಉದ್ದ × ಅಗಲ**

ಈಗ ನಾವು ಗ್ರಾಫ್ ಪೇಪರ್ ಉಪಯೊಗಿಸದೆಯೇ ಆಯತದ ವಿಸ್ತೀರ್ಣವನ್ನು ಕಂಡುಹಿಡಿಯೋಣ. ಉದಾಹರಣೆಗೆ ಉದ್ದ 6 ಸೆಂ.ಮೀ ಅಗಲ 4 ಸೆಂ.ಮೀ ಅಳತೆಗಳುಳ್ಳ ಆಯತದ ವಿಸ್ತೀರ್ಣ ಕಂಡುಹಿಡಿಯಿರಿ.

ಆಯತದ ವಿಸ್ತೀರ್ಣ = **ಉದ್ದ × ಅಗಲ**

= 6**ಸೆಂ.ಮೀ** × 4**ಸೆಂ.ಮೀ**

= 24 **ಚ.ಸೆಂ.ಮೀ**

**ಪ್ರಯತ್ನಿಸಿರಿ :**



1. ಒಂದೇ ಸುತ್ತಳತೆ ಹೊಂದಿದ ಎರಡು ಬೇರೆಬೇರೆ ಆಯತಗಳನ್ನು ರಚಿಸಿರಿ. ಅವುಗಳ ವಿಸ್ತೀರ್ಣವನ್ನು ಹೋಲಿಸಿರಿ ? ಅವು ಸಮವೇ ? ಒಂದೇ ಸುತ್ತಳತೆ ಹೊಂದಿದ ಎರಡು ಬೇರೆಬೇರೆ ಚೌಕಗಳನ್ನು ನೀವು ರಚಿಸುವಿರಾ ?

**ಇವು ಮಾಡಿರಿ :**



1. ನಿನ್ನ ತರಗತಿ ಕೋಣೆಯ ನೆಲದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.
2. ನಿನ್ನ ಮನೆಯಲ್ಲಿರುವ ಬಾಗಿಲಿನ ವಿಸ್ತೀರ್ಣವನ್ನು ಕಂಡುಹಿಡಿಯಿರಿ.
3. ನಿನ್ನ ತರಗತಿ ಕೋಣೆಯಲ್ಲಿರುವ ಕಪ್ಪುಹಲಗೆಯ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

### 10.3.2 ಚೌಕದ ವಿಸ್ತೀರ್ಣ :




4 ಸೆಂ.ಮೀ ಬಾಹುವುಳ್ಳ ಒಂದು ಚೌಕವನ್ನು ತೆಗೆದುಕೊಳ್ಳೋಣ. ಇದನ್ನು ಗ್ರಾಫ್ ಪೇಪರ್ ಮೇಲೆ ಚಿತ್ರದಲ್ಲಿ ಸೂಚಿಸಿರುವಂತೆ ಜೋಡಿಸಿ ಪರಿಶೀಲಿಸಿದರೆ ಅವು ಕ್ರಮವಾಗಿ 4 ಚೌಕಗಳನ್ನು ಹೊಂದಿದ 4 ಸಾಲುಗಳನ್ನು ಅಂದರೆ ಒಟ್ಟು 16 ಚೌಕಗಳನ್ನು ಆಕ್ರಮಿಸಿರುವುದನ್ನು ಗಮನಿಸಬಹುದು.

ಆದ್ದರಿಂದ ಇದರ ವಿಸ್ತೀರ್ಣ = 16ಚ.ಸೆಂ.ಮೀ = 4 × 4 ಸೆಂ.ಮೀ.

ಇಲ್ಲಿ ಚೌಕದ ಬಾಹುಗಳನ್ನು 4 ಎಂದು ಗಹಮನಿಸಬಹುದು. ಹಾಗೆಯೇ ಉದ್ದ, ಅಗಲಗಳು ಸಮಾನವಾಗಿರುವ ಆಯತವೇ ಚೌಕವೆಂಬುದನ್ನು ಕೂಡ ಗಮನಿಸಿರಿ. ಈ ಮೇಲಿನ ಫಲಿತಾಂಶದಿಂದ ಚೌಕದ ಸೂತ್ರವನ್ನು ಊಹಿಸಬಲ್ಲಿರಾ ?



**ಪ್ರಯತ್ನಿಸಿರಿ :**

ಚೌಕದ ಬಾಹುಗಳ ಅಳತೆಯನ್ನು ಕೆಳಗೆ ನೀಡಲಾಗಿದೆ, ಅವುಗಳನ್ನು ಗ್ರಾಫ್ ಪೇಪರ್ ಮೇಲೆ ಬರೆಯುವುದರ ಮೂಲಕ ಅವುಗಳ ಚೌಕುಳಿಗಳನ್ನು ಲೆಕ್ಕ ಹಾಕಿ ಅದರ ವಿಸ್ತೀರ್ಣವನ್ನು ಕಂಡು ಹಿಡಿಯಿರಿ.

(i) 4 ಸೆಂ.ಮೀ. (ii) 6ಸೆಂ.ಮೀ. (iii) 2 ಸೆಂ.ಮೀ. (iv) 8 ಸೆಂ.ಮೀ.

ಮೇಲಿನ ಚರ್ಚೆಯಿಂದ,

ಚೌಕದ ವಿಸ್ತೀರ್ಣ = **ಬಾಹು** × **ಬಾಹು** ಎಂದು ನಿರ್ಧರಿಸಬಹುದು.

**= (ಬಾಹು)$^2$**

**ಉದಾ–10 :** 144ಸೆಂ.ಮೀ, 100 ಸೆಂ.ಮೀ ಅಳತೆಗಳು ಕ್ರಮವಾಗಿ ಉದ್ದ ಮತ್ತು ಅಗಲವುಳ್ಳ ಪ್ರದೇಶವನ್ನು 12 ಸೆಂ.ಮೀ ಉದ್ದ, 5ಸೆಂ.ಮೀ ಅಗಲವುಳ್ಳ ಟೈಲ್ಸ್ ಗಳಿಂದ ತುಂಬಬೇಕಾದರೆ ಎಷ್ಟು ಟೈಲ್ಸ್ ಬೇಕು?

**ಪರಿಹಾರ :**

ಟೈಲ್ಸ್ ತುಂಬಬೇಕಾದ ಪ್ರದೇಶದ ಉದ್ದ = 144 ಸೆಂ.ಮೀ.
ಟೈಲ್ಸ್ ತುಂಬಬೇಕಾದ ಪ್ರದೇಶದ ಅಗಲ = 100 ಸೆಂ.ಮೀ.
ಟೈಲ್ಸ್ ತುಂಬಬೇಕಾದ ಪ್ರದೇಶದ ವಿಸ್ತೀರ್ಣ = 144 ಸೆಂ.ಮೀ.. × 100 ಸೆಂ.ಮೀ.
= 14,400 ಚ.ಸೆಂ.ಮೀ.

ಒಂದೊಂದು ಟೈಲ್ಸ್‌ನ ಉದ್ದ **= 12 ಸೆಂ.ಮೀ.**
ಒಂದೊಂದು ಟೈಲ್ಸ್‌ನ ಅಗಲ = 5 ಸೆಂ.ಮೀ.
ಒಂದೊಂದು ಟೈಲ್ಸ್‌ನ ವಿಸ್ತೀರ್ಣ = 12 ಸೆಂ.ಮೀ. × 5 ಸೆಂ.ಮೀ.
= 60 ಚ.ಸೆಂ.ಮೀ.

ಬೇಕಾದ ಟೈಲ್ಸ್ ಸಂಖ್ಯೆ = $\dfrac{\text{ಪ್ರದೇಶದ ವಿಸ್ತೀರ್ಣ}}{\text{ಒಂದು ಟೈಲ್‌ನ ವಿಸ್ತೀರ್ಣ}}$ = $\dfrac{14400}{60}$

= 240 ಟೈಲ್ಸ್.

**ಉದಾ –11 :** ಒಂದು ಆಯತ ಹಾಗೂ ಒಂದು ಚೌಕದ ಸುತ್ತಳತೆಗಳು ಸಮಾನವಾಗಿವೆ. ಆಯತದ ಉದ್ದಗಲಗಳು ಕ್ರಮವಾಗಿ 35 ಸೆಂ.ಮೀ ಮತ್ತು 25 ಸೆಂ.ಮೀ. ಆದರೆ ಯಾವುದರ ವಿಸ್ತೀರ್ಣ ಹೆಚ್ಚು ? ಎಷ್ಟು ಹೆಚ್ಚಾಗಿದೆ?



Downloaded from https:// www.studiestoday.com

Downloaded from https:// www.studiestoday.com

**ಪರಿಹಾರ :** ಆಯತದ ಸುತ್ತಳತೆ = 2 (ಉದ್ದ + ಅಗಲ)

= 2 (35 + 25) = 2 × 60 = 120 ಸೆಂ.ಮೀ

∴ ಕೊಟ್ಟಿರುವ ಚೌಕದ ಸುತ್ತಳತೆ = 120 ಸೆಂ.ಮೀ

ಚೌಕದ ಬಾಹುಗಳು $= \frac{120}{4}$ = 30 ಸೆಂ.ಮೀ

∴ ಚೌಕದ ವಿಸ್ತೀರ್ಣ = (ಬಾಹು)$^2$ = $(30)^2$ = 900 ಚ.ಸೆಂ.ಮೀ

ಆಯತದ ವಿಸ್ತೀರ್ಣ = ಉದ್ದ × ಅಗಲ

= 35 × 25 = 875 ಚ.ಸೆಂ.ಮೀ

ಆದ್ದರಿಂದ ಚೌಕದ ವಿಸ್ತೀರ್ಣ ಆಯತದ ವಿಸ್ತೀರ್ಣಕ್ಕಿಂತ (900 - 875) ಚ.ಸೆಂ.ಮೀ. = 25 ಚ.ಸೆಂ.ಮೀ ಹೆಚ್ಚಾಗಿದೆ.

**ಉದಾ–12 :** 4 ಮೀ ಉದ್ದ 68 ಸೆಂ.ಮೀ ಅಗಲವುಳ್ಳ ಒಂದು ಆಯತದ ವಿಸ್ತೀರ್ಣವನ್ನು ಚ.ಸೆಂ.ಮೀ ಗಳಲ್ಲಿ ಕಂಡು ಹಿಡಿಯಿರಿ.

**ಪರಿಹಾರ :** ಆಯತದ ಅಗಲ = 68 ಸೆಂ.ಮೀ

ಆಯತದ ಉದ್ದ = 4ಮೀ = 400 ಸೆಂ.ಮೀ

ಆಯತದ ವಿಸ್ತೀರ್ಣ = ಉದ್ದ× ಅಗಲ

= 400 × 68 ಚ.ಸೆಂ.ಮೀ

= 27, 200 ಚ.ಸೆಂ.ಮೀ.

**ಉದಾ–13 :** 40ಮೀ ಉದ್ದವುಳ್ಳ ಆಯತದ ವಿಸ್ತೀರ್ಣ1,120 ಚ.ಸೆಂ.ಮೀ ಆದರೆ ಅದರ ಅಗಲವನ್ನು ಕಂಡುಹಿಡಿಯಿರಿ.

**ಪರಿಹಾರ :** ಆಯತದ ವಿಸ್ತೀರ್ಣ = 1,120 ಚ.ಮೀ.

ಆಯತದ ಉದ್ದ = 40 ಮೀ.

ಆಯತದ ವಿಸ್ತೀರ್ಣ = ಉದ್ದ× ಅಗಲ

ಅಗಲ $= \frac{\text{ವಿಸ್ತೀರ್ಣ}}{\text{ಉದ್ದ}} = \frac{1120}{40}$ = 28 ಮೀ.

**ಉದಾ–14:** 5 ಮೀ ಉದ್ದ , 4 ಮೀ ಗಳ ಅಗಲಳುಳ್ಳ ಸ್ಥಳದಲ್ಲಿ 5 ಗಿಡನೆಡುವ ಗುಂಡಿಗಳನ್ನು ತೋಡಲಾಗಿದೆ. ಪ್ರತಿ ಗುಂಡಿಯ ಉದ್ದ 1 ಮೀ ಬಾಹುವಾಗಿರುವ ಉಳಿದ ಪ್ರದೇಶದ ವಿಸ್ತೀರ್ಣ ಕಂಡುಹಿಡಿಯಿರಿ.

**ಪರಿಹಾರ :** ಸ್ಥಳದ ವಿಸ್ತೀರ್ಣ = ಉದ್ದ× ಅಗಲ

= 5 × 4 ಚ.ಮೀ.

= 20 ಚ.ಮೀ.

ಪ್ರತಿ ಗುಂಡಿಯ ವಿಸ್ತೀರ್ಣ = 1×1=1 ಚ.ಮೀ

5 ಗುಂಡಿಗಳ ಒಟ್ಟು ವಿಸ್ತೀರ್ಣ = 5 ಚ.ಮೀ.

ಉಳಿದ ಪ್ರದೇಶದ ವಿಸ್ತೀರ್ಣ = 20 - 5 = 15ಚ.ಮೀ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ –10.2

1. ಕೆಳಗಿನ ಅಳತೆಗಳುಳ್ಳ ಆಯತಗಳ ವಿಸ್ತೀರ್ಣ ಕಂಡು ಹಿಡಿಯಿರಿ.
   (i) 50 ಸೆಂ.ಮೀ ಮತ್ತು 20 ಸೆಂ.ಮೀ (ii) 65 ಸೆಂ.ಮೀ ಮತ್ತು 45 ಸೆಂ.ಮೀ
   (iii) 25 ಸೆಂ.ಮೀ ಮತ್ತು 16ಸೆಂ.ಮೀ (iv) 7 ಕಿ.ಮೀ ಮತ್ತು 19 ಕಿ.ಮೀ

2. ಕೆಳಗಿನ ಅಳತೆಗಳು ಬಾಹುಗಳಾಗಿಹೊಂದಿರುವ ಚೌಕದ ವಿಸ್ತೀರ್ಣ ಕಂಡುಹಿಡಿಯಿರಿ.
   (i) 26 ಮೀ (ii) 17 ಮೀ
   (iii) 52 ಸೆಂ.ಮೀ (iv) 8 ಸೆಂ.ಮೀ

3. ಒಂದು ಆಯತಾಕಾರದ ಚಿತ್ರಪಟದ ವಿಸ್ತೀರ್ಣ1,125 ಚ.ಸೆಂ.ಮೀ ಅದರ ಅಗಲ 25 ಸೆಂ.ಮೀ ಆದರೆ ಅದರ ಉದ್ದವನ್ನು ಕಂಡುಹಿಡಿಯಿರಿ.
4. ಒಂದು ಆಯತಕಾರದ ಹೊಲದ ಉದ್ದ 60 ಮೀ ಅದರ ಅಗಲ, ಉದ್ದದ ಅರ್ಧದಷ್ಟಿದ್ದರೆ ಆದರೆ ಅದರ ವಿಸ್ತೀರ್ಣವನ್ನು ಕಂಡುಹಿಡಿಯಿರಿ.
5. ಒಂದು ಚೌಕಾಕಾರದ ಕಾಗದದ ಸುತ್ತಳತೆ 40 ಸೆಂ.ಮೀ ಆದರೆ ಅದರ ಬಾಹು ಮತ್ತು ವಿಸ್ತೀರ್ಣವನ್ನು ಕಂಡು ಹಿಡಿಯಿರಿ.
6. ಒಂದು ಆಯತಾಕಾರದ ಪ್ಲಾಟ್‌ನ ವಿಸ್ತೀರ್ಣ 2400 ಚ.ಮೀ.ಅದರ ಉದ್ದ ಅಗಲಗಳು 3 : 2 ಅನುಪಾತ ದಲ್ಲಿವೆ. ಅದರ ಸುತ್ತಳತೆಯನ್ನು ಕಂಡುಹಿಡಿಯಿರಿ.
7. ಒಂದು ಕೋಣೆಯ ಉದ್ದ ಅಗಲಗಳು ಕ್ರಮವಾಗಿ 6ಮೀ ಹಾಗೂ 4 ಮೀ ಆದರೆ ಇದರ ನೆಲವನ್ನು ಕಾರ್ಪೆಟ್‌ನಿಂದ ಮುಚ್ಚಲು ಬೇಕಾದ ಕಾರ್ಪೆಟ್ ವಿಸ್ತೀರ್ಣಎಷ್ಟು? 1 ಚ.ಮೀ. ಕಾರ್ಪೆಟ್ ದರ ₹ 240 ಆದರೆ ಎಷ್ಟು ಖರ್ಚಾಗುತ್ತದೆ.?
8. ಒಂದು ಚೌಕ ಮತ್ತು ಆಯತಗಳ ಸುತ್ತಳತೆಗಳು ಸಮ. ಒಂದು ಚೌಕದ ಬಾಹು 72 ಮೀ ಒಂದು ಆಯತದ ಉದ್ದ 80 ಮೀ. ಆದರೆ ಯಾವುದರ ವಿಸ್ತೀರ್ಣ ಹೆಚ್ಚು ? ಎಷ್ಟು ಹೆಚ್ಚು ?
9. ಒಂದು ಚೌಕದ ವಿಸ್ತೀರ್ಣ 49ಚ.ಸೆಂ.ಮೀ ಅದರ ಸುತ್ತಳತೆಗೆ ಸಮಾನವಾದ ಸುತ್ತಳತೆ ಹೊಂದಿದ ಆಯತದ ಉದ್ದ 9.3 ಸೆಂ.ಮೀ ಆದರೆ ಆಯತದ ಅಗಲ ಎಷ್ಟು? ಯಾವುದರ ವಿಸ್ತೀರ್ಣ ಹೆಚ್ಚು?
10. ರಾಹುಲನಿಗೆ 400 × 200 ಮೀ ಅಳತೆಯುಳ್ಳ ಆಯತಾಕಾರದ ಹೊಲವಿದೆ. ಈತನ ಗೆಳೆಯ ರಾಮನಿಗೆ 300 ಮೀ ಬಾಹು ಹೊಂದಿದ ಚೌಕಾಕಾರದ ಹೊಲವಿದೆ. ಈ ಎರಡರ ಸುತ್ತ ಬೇಲಿ ಹಾಕಲು ಮೀಟರಿಗೆ ₹150 ನಂತೆ ಎಷ್ಟು ಖರ್ಚಾಗುತ್ತದೆ? 10 ಚ.ಮೀ ಪ್ರದೇಶದಲ್ಲಿ ಒಂದು ಮರ ನೆಟ್ಟರೆ ಯಾರ ಹೊಲದಲ್ಲಿ ಹೆಚ್ಚು ಮರಗಳನ್ನು ನೆಡಬಹುದು? ಎಷ್ಟು ಹೆಚ್ಚು ಮರಗಳನ್ನು ನೆಡಬಹುದು ?
11. ಒಂದು ಆಯತಕಾರದ ನೆಲದ ಉದ್ದ ಅದರ ಅಗಲಕ್ಕಿಂತ 20 ಮೀ. ಹೆಚ್ಚು. ಅದರ ಸುತ್ತಳತೆ 280 ಮೀ ಆದರೆ ಅದರ ಉದ್ದ ಎಷ್ಟು ?
12. 240ಮೀ × 200ಮೀ ಅಳತೆಗಳನ್ನು ಹೊಂದಿದ ಆಯತಾಕಾರದ ಪ್ಲಾಟ್‌ನ ಸುತ್ತ ತಂತಿಬೇಲಿ ಹಾಕಲು ಮೀಟರಿಗೆ ₹ 30ನಂತೆ ಎಷ್ಟು ಖರ್ಚಾಗುತ್ತದೆ ?
13. 120 ಮೀ ಬಾಹುಹೊಂದಿದ ಒಂದು ಚೌಕಾಕಾರದ ಹೊಲವನ್ನು ಹುಲ್ಲುಗಾವಲಾಗಿ ಮಾಡಲು ಮೀಟರಿಗೆ ₹35 ರಂತೆ ಎಷ್ಟು ಖರ್ಚಾಗುತ್ತದೆ?

SCERT TELANGANA



Downloaded from https:// www.studiestoday.com

Downloaded from https:// www.studiestoday.com

14. ಈ ಕೆಳಗಿನ ಸಂದರ್ಭಗಳಲ್ಲಿ ಆಯತದ ವಿಸ್ತೀರ್ಣ ಹೇಗೆ ಬದಲಾಗುತ್ತದೆ ?
    (i) ಉದ್ದ ಅಗಲಗಳು ಎರಡರಷ್ಟಾದರೆ
    (ii) ಉದ್ದ 2ರಷ್ಟು, ಅಗಲ 3ರಷ್ಟಾದರೆ
15. ಕೆಳಗಿನ ಸಂದರ್ಭಗಳಲಿ ಚೌಕದ ವಿಸ್ತೀರ್ಣ ಹೇಗೆ ಬದಲಾಗುತ್ತದೆ ?
    (i) ಬಾಹುವು ಉದ್ದದ ಎರಡರಷ್ಟದಾಗ (ii) ಬಾಹು ಉದ್ದದ ಅರ್ಧದಷ್ಟಾದಾಗ

## ನೆನಪಿನಲ್ಲಿಡಬೇಕಾದ ಅಂಶಗಳು

1. ಒಂದು ಆವೃತ ಚಿತ್ರದ ಸುತ್ತಲೂ ಅದರ ಸೀಮಾರೇಖೆಗಳನ್ನು ಒಂದು ಸುತ್ತು ತಿರುಗಿ ಬರಲು ಪ್ರಯಾಣಿಸಬೇಕಾದ ದೂರವನ್ನೇ ಅದರ ಸುತ್ತಳತೆ ಎನ್ನುವರು.
2. (i) ಆಯತದ ಸುತ್ತಳತೆ $= 2 \times$ (ಉದ್ದ + ಅಗಲ )
   (ii) ಚೌಕದ ಸುತ್ತಳತೆ $= 4 \times$ ಬಾಹುವಿನ ಉದ್ದ
   (iii) ಸಮಬಾಹು ತ್ರಿಭುಜದ ಸುತ್ತಳತೆ $= 3 \times$ ಬಾಹುವಿನ ಉದ್ದ
3. (i) ಎಲ್ಲಾ ಬಾಹುಗಳು, ಕೋನಗಳು, ಸಮಾನವಾಗಿರುವ ಆವೃತ ಚಿತ್ರಗಳನ್ನು ನಿಯಮಿತ ಬಹುಭುಜಾಕೃತಿಗಳೆನ್ನುತ್ತೇವೆ.
   (ii) ಒಂದು ನಿಯಮಿತ ಬಹುಭುಜಾಕೃತಿಯ ಸುತ್ತಳತೆ ಬಾಹುಗಳ ಸಂಖ್ಯೆಯ ಮತ್ತು ಬಾಹುವಿನ ಉದ್ದದ ಗುಣಲಬ್ದಕ್ಕೆ ಸಮಾನವಾಗಿರುತ್ತದೆ.
4. ಒಂದು ಆವೃತ ಚಿತ್ರ ಅವರಿಸಿರುವ ಪ್ರದೇಶವನ್ನೇ ಅದರ ವಿಸ್ತೀರ್ಣ ಎನ್ನುವರು.
5. ಒಂದು ಚೌಕುಳಿಕಾಗದ ಅಥವಾ ಗ್ರಾಫ್ ಹಾಳೆಯ ಮೇಲೆ ಒಂದು ಆವೃತ ಚಿತ್ರದ ವಿಸ್ತೀರ್ಣವನ್ನು ಅಂದಾಜನ್ನು ತಿಳಿಯಲು ಈ ಕೆಳಗಿನ ಪದ್ಧತಿಗಳನ್ನು ಅನುಸರಿಸುತ್ತೇವೆ.
   (i) ಅರ್ಧಕ್ಕಿಂತ ಕಡಿಮೆ ಭಾಗವುಳ್ಳ ಚೌಕಗಳನ್ನು ಬಿಡಬೇಕು.
   (ii) ಅರ್ಧಕ್ಕಿಂತ ಹೆಚ್ಚು ಭಾಗವುಳ್ಳ ಚೌಕಗಳನ್ನು ಪೂರ್ಣ ಚೌಕಗಳೆಂದು ಪರಿಗಣಿಸಿ ಲೆಕ್ಕ ಹಾಕಬೇಕು.
   (iii) ಅರ್ಧ ಭಾಗವುಳ್ಳ ಚೌಕಗಳ ವಿಸ್ತೀರ್ಣವನ್ನು $\frac{1}{2}$ ಚ.ಸೆಂ.ಮೀ ಎಂದು ಭಾವಿಸಿ ಈ ರೀತಿಯ ಎರಡು ಚೌಕಗಳನ್ನು ಸೇರಿಸಿ ಒಂದೆಂದು ಲೆಕ್ಕಹಾಕುವುದು.
6. (i) ಆಯತದ ವಿಸ್ತೀರ್ಣ = ಉದ್ದ $\times$ ಅಗಲ
   (ii) ಚೌಕದ ವಿಸ್ತೀರ್ಣ = ಬಾಹು $\times$ ಬಾಹು
   (iii) ಒಂದೇ ಸುತ್ತಳತೆಯುಳ್ಳ ಒಂದು ಆಯತ ಹಾಗೂ ಒಂದು ಚೌಕದ ವಿಸ್ತೀರ್ಣದಲ್ಲಿ ಚೌಕದ ಸುತ್ತಳತೆಯೇ ಹೆಚ್ಚಾಗಿರುತ್ತದೆ.





Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ -11

# ಅನುಪಾತ ಮತ್ತು ಸಮಾನುಪಾತ

## 11.1 ಪರಿಚಯ

ನಿತ್ಯ ಜೀವನದಲ್ಲಿ ನಾವು ಪರಿಮಾಣವನ್ನು ವಿವಿಧ ರೀತಿಯಲ್ಲಿ ಹೋಲಿಸುತ್ತೇವೆ. ಮಾರು ಕಟ್ಟೆಯಲ್ಲಿ ಕೆಲವೊಂದು ವಿಷಯಗಳನ್ನು ಹೋಲಿಸುತ್ತೇವೆ. ಅಂತಹ ಕೆಲವು ಉದಾಹರಣೆಗಳನ್ನು ನೋಡೋಣ.

ಪ್ರತಿದಿನ ಸತ್ಯ ಮತ್ತು ಸುಧಾಕರ್ ಶಾಲೆಗೆ ಹೋಗುವುದಕ್ಕೆ ಮುಂಚೆ ಹಾಲು ಕುಡಿಯುತ್ತಾರೆ. ಸತ್ಯ ಎರಡು ಚಮಚ ಸುಧಾಕರ ಒಂದು ಚಮಚ ಸಕ್ಕರೆಯನ್ನು ಒಂದು ಲೋಟ ಹಾಲಿಗೆ ಬೆರೆಸಿದ್ದಾರೆ.




ಯಾವ ಲೋಟದಲ್ಲಿ ಹಾಲು ಸಿಹಿಯಾಗಿ ಇರುತ್ತವೆ ? ರುಚಿಯನ್ನು ನೋಡದೆ ನಾವು ಹೇಳಬಹುದೇ !

ಶಾರದ 3 ಚಮಚ ಸಕ್ಕರೆಯನ್ನು 2 ಲೋಟ ಹಾಲಿನಲ್ಲಿ ಬೆರೆಸಿದಳು. ಈ ಮೂವರ ಲೋಟದಲ್ಲಿ ಹಾಲಿನ ಸಿಹಿಯನ್ನು ಹೋಲಿಸಿ? ಕೆಳಗಿನ ಸಂದರ್ಭವನ್ನು ಪರಿಶೀಲಿಸಿ.

ಸಿರಿಯ ಹತ್ತಿರ 8 ನೋಟ್ ಪುಸ್ತಕಗಳು ಮತ್ತು ರವಿ ಹತ್ತಿರ 16 ನೋಟ್ ಪುಸ್ತಕಗಳಿವೆ.

ರವಿ ಅವುಗಳನ್ನು ಸಂಖ್ಯೆಗಳಲ್ಲಿನ ವ್ಯತ್ಯಾಸದಿಂದ ಹೋಲಿಸಿದರೆ,ಸಿರಿ ಭಾಗಾಕಾರದ ಮುಖಾಂತರ ಹೋಲಿಸಿದಳು. ಒಂದು ಪ್ರಮಾಣ ಇನ್ನೊಂದು ಪ್ರಮಾಣಕ್ಕಿಂತ ಎಷ್ಟು ಹೆಚ್ಚು, ಇಲ್ಲವೇ ಎಷ್ಟು ಅದೇರೀತಿ ಒಂದು ಪ್ರಮಾಣ ಇನ್ನೊಂದು ಪ್ರಮಾಣದ ಎಷ್ಟು ಪಟ್ಟು ಹೆಚ್ಚು ಇಲ್ಲವೇ ಎಷ್ಟು ಪಟ್ಟು ಕಡಿಮೆ ಎಂದು ಹೋಲಿಸುವುದನ್ನೇ ಭಾಗಾಕಾರದ ಹೋಲಿಕೆ ಎನ್ನುತ್ತೇವೆ.




ಪ್ರಮಾಣಗಳನ್ನು ವ್ಯವಕಲನದಿಂದ ಹೋಲಿಸುವುದು ಮತ್ತು ಭಾಗಾಕಾರದಿಂದ ಹೋಲಿಸುವುದಕ್ಕೆ ಸಂಬಂದಿಸಿದ ಹಾಗೆ ಮೂರು ಸಂಗತಿಗಳನ್ನು ಉದಾಹರಣೆಕೊಡಿ.

ನಾವುಒಂದು ಮಿಡತೆ ಮತ್ತು ಒಂದು ಇರುವೆಗಳ ಉದ್ದವನ್ನು ಹೋಲಿಸುವುದಕ್ಕೆ ಅವುಗಳ ಉದ್ದಗಳ ವ್ಯತ್ಯಾಸ ಕಂಡುಹಿಡಿಯುವ ಮುಖಾಂತರ ಹೋಲಿಸುವುದು ಸಾಧ್ಯವಿಲ್ಲ. 4 ಅಥವಾ 5 ಸೆಂ.ಮೀ ಉದ್ದವಿರುವ ಮಿಡತೆಯನ್ನು ಬಹಳ ಕಡಿಮೆ ಮಿ.ಮೀ ಉದ್ದವಿರುವ ಇರುವೆಯ ಉದ್ದದೊಂದಿಗೆ ಹೋಲಿಸುವುದು ಸರಿಯಲ್ಲ ಅವುಗಳ ಉದ್ದಗಳ ವ್ಯತ್ಯಾಸ ಸುಮಾರು 4 ಸೆಂ.ಮೀ ಮಾತ್ರವೇ ಇರುತ್ತದೆ. ಇದು ಅವುಗಳ ಮಧ್ಯೆ ದೊಡ್ಡದಾದ ವ್ಯತ್ಯಾಸ ಕಾಣುವುದಿಲ್ಲ ಒಂದು ಇರುವೆಯ ಹಿಂದೆ ಇನ್ನೊಂದು ಇರುವೆಯನ್ನು ಸೇರಿಸುವುದರ ಮುಖಾಂತರ ಎಷ್ಟು ಇರುವೆಗಳ ಉದ್ದ ಮಿಡತೆಯ ಉದ್ದಕ್ಕೆ ಸರಿಹೋಗುತ್ತದೆಯೋ ಹೋಲಿಸಬಹುದು. ಹೀಗೆ 15 ರಿಂದ 20 ಇರುವೆಗಳ ಉದ್ದವು ಒಂದು ಮಿಡತೆ ಉದ್ದಕ್ಕೆ ಸಮವಾಗುತ್ತದೆ ಎಂದು ಭಾವಿಸಬಹುದು.





SCERT TELANGANA

Downloaded from https:// www.studiestoday.com

Downloaded from https:// www.studiestoday.com

ಮತ್ತೊಂದು ಉದಾಹರಣೆಯನ್ನು ನೋಡಿ

ಒಂದು ಕಾರಿನ ಬೆಲೆ ₹ 2,50,000 ಮತ್ತು ಒಂದು ಬೈಕ್‌ನ ಬೆಲೆ ₹ 50,000. ಇವುಗಳ ಮಧ್ಯದ ವ್ಯತ್ಯಾಸ ಹೋಲಿಸುವುದರ ಮುಖಾಂತರ ವ್ಯತ್ಯಾಸ ₹ 2,00,000 ಎಂದು ಹೇಳಬಹುದು. ಈ ವ್ಯತ್ಯಾಸ ಎಷ್ಟು ವಿಸ್ತರಣವಾಗಿದೆಯೋ ಅರ್ಥವಾಗುವುದಿಲ್ಲ. ಅದೇ ಭಾಗಾಕಾರದ ಮುಖಾಂತರವಾದರೆ $\frac{2,50,000}{50,000}=\frac{5}{1}$ ಎಂದು ತಿಳಿಯುತ್ತದೆ.

ಇದರಿಂದ ನಾವು ಪ್ರತಿ ಒಂದು ಕಾರಿನ ಬೆಲೆಗೆ ನಾವು 5 ಮೋಟಾರು ಬೈಕ್‌ಗಳನ್ನು ಕೊಂಡು ಕೊಳ್ಳಬಹುದು ಎಂಬುದು ತಿಳಿಯುತ್ತದೆ. ಈ ರೀತಿ ಕೆಲವು ಸಂದರ್ಭಗಳಲ್ಲಿ ಭಾಗಾಕಾರದೊಂದಿಗೆ ಹೋಲಿಸುವ ಪ್ರಕ್ರಿಯೆ ವ್ಯವಕಲನದಿಂದ ಹೋಲಿಸುವುಕ್ಕಿಂತ ಮತ್ತಷ್ಟು ಅರ್ಥಗರ್ಭಿತವಾಗಿರುತ್ತದೆ ಎಂಬುದು ತಿಳಿಯುತ್ತದೆ.

**ಮತ್ತೊಂದು ಉದಾಹರಣೆಯನ್ನು ಗಮನಿಸೋಣ..**

ಲತ ವಯಸ್ಸು 3 ವರ್ಷ, ಕರೀಂ ವಯಸ್ಸು 18 ವರ್ಷ, ಇದರಿಂದ ಕರೀಂ ಲತಾಳಿಗಿಂತ 15 ವರ್ಷ ದೊಡ್ಡವನು ಎಂದು ತಿಳಿಯುತ್ತದೆ. ರಹೀಮ್ ವಯಸ್ಸು 65 ವರ್ಷ, ರೇಷ್ಮ ವಯಸ್ಸು 50 ವರ್ಷ. ಅವರ ವಯಸ್ಸುಗಳ ವ್ಯತ್ಯಾಸ 15 ವರ್ಷಗಳು. ಆಗಿರುವುದರಿಂದ ಈ ಎರಡನ್ನು ಒಂದೇ ರೀತಿಯಾಗಿ ಹೋಲಿಸುವುದಿಲ್ಲ. ಇದಕ್ಕಿಂತ, ಕರೀಂ ವಯಸ್ಸು ಲತ ವಯಸ್ಸಿಗಿಂತ ಆರು ಪಟ್ಟು ಹೆಚ್ಚು ಎಂದು ಹೇಳುವುದು ಒಳ್ಳೆಯದು.

ಈ ರೀತಿಯಾಗಿ ಭಾಗಾಕಾರದ ಮೂಲಕ ಹೋಲಿಸುವುದನ್ನೇ ಅನುಪಾತ ಎನ್ನುತ್ತೇವೆ. ಈ ಅಧ್ಯಾಯದಲ್ಲಿ ಅನುಪಾತದ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ. ಇದೇ ರೀತಿಯಾಗಿ ಹೋಲಿಸುವುದರ ಮತ್ತೊಂದು ಉದಾಹರಣೆಯನ್ನು ನಕ್ಷೆಯನ್ನು ತಯಾರಿಸುವುದರ ಮೂಲಕ ಪರಿಶೀಲಿಸೋಣ.

**ನಕ್ಷೆಯನ್ನು ನೋಡಿರಿ.**




ವಾಸ್ತವವಾಗಿ ದೂರಗಳನ್ನು ಹೋಲಿಸಿದರೆ, ಮ್ಯಾಪಿನ ಮೇಲೆ ಪ್ರದೇಶಗಳನ್ನು ಬಹಳ ಹತ್ತಿರವಾಗಿ ತೋರಿಸಲಾಗಿದೆ. ನಕ್ಷೆಯಲ್ಲಿನ ದೂರಕ್ಕೆ ಪ್ರದೇಶಗಳ ಮಧ್ಯ ಇರುವ ವಾಸ್ತವ ದೂರಗಳಿಗೆ ಇರುವ ಸಂಬಂಧವನ್ನು ಸ್ಕೇಲ್ ತಿಳಿಯಪಡಿಸುತ್ತದೆ.

ಉದಾಹರಣೆಗೆ ನಕ್ಷೆಯಲ್ಲಿ 1 ಸೆಂ.ಮೀ ದೂರ 10 ಮೀಟರ್‌ಗಳ ವಾಸ್ತವ ದೂರಕ್ಕೆ ಸಮವಾದರೆ. ಸ್ಕೇಲು 1 ಸೆಂ.ಮೀ – 100 ಮೀ ಎಂದು ಹೇಳುತ್ತೇವೆ. ಅಂದರೆ ನಕ್ಷೆಯಲ್ಲಿ ಎರಡು ಪ್ರದೇಶಗಳ ಮಧ್ಯ ದೂರ ವಾಸ್ತವವಾಗಿ 10,000 ರಷ್ಟು ಇರುತ್ತದೆ. ಅಂದರೆ ನಕ್ಷೆಯಲ್ಲಿ 5 ಸೆಂ.ಮೀ ನಂತೆ ತೋರಿಸಿದ ದೂರ ನಿಜವಾಗಿ 500 ಮೀ ಇರುತ್ತದೆ. ವ್ಯವಕಲನದ ಹೋಲಿಕೆ ಮುಖಾಂತರ ಹೇಳುವುದಾದರೆ ವಾಸ್ತವ ದೂರ ನಕ್ಷೆಯಲ್ಲಿನ ದೂರಕ್ಕಿಂತ 499 ಮೀ 95 ಸೆಂ.ಮೀ ಹೆಚ್ಚು ಇರುತ್ತದೆ. ಆದರೆವಾಸ್ತವ ದೂರ ನಕ್ಷೆಯಲ್ಲಿನ ದೂರಕ್ಕೆ 10,000 ದಷ್ಟು ಹೆಚ್ಚು ಎಂದು ಹೇಳುವುದೇ ಅರ್ಥವತ್ತಾಗಿರುತ್ತದೆ.

ಆದ್ದರಿಂದ ಮೊದಲನೆ ಉದಾಹರಣೆಯಲ್ಲಿ ರವಿ, ಸಿರಿ ಹತ್ತಿರ ಇರುವ ಪುಸ್ತಕಗಳ ಅನುಪಾತ $=\frac{16}{8}=\frac{2}{1}=2:1$

ಇದನ್ನು 2:1 ಎಂದು ಓದುತ್ತೇವೆ.

ಹೋಲಿಕೆಯಲ್ಲಿ ಶ್ರೇಣಿ ಬದಲಾದರು, ಸಿರಿ, ರವಿ ಹತ್ತಿರ ಇರುವ ಪುಸ್ತಕಗಳ ಅನುಪಾತ$=\frac{16}{8}=\frac{2}{1}=2:1$ ಎರಡು ಪರಿಮಾಣಗಳನ್ನು ಹೋಲಿಸಿದಾಗ ಆ ಪರಿಮಾಣಗಳ ಕ್ರಮವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು.



Downloaded from https:// www.studiestoday.com

Downloaded from https:// www.studiestoday.com

**ಪ್ರಯತ್ನಿಸಿರಿ :**



ಉದಾಹರಣೆ ಪರಿಶೀಲಿಸಿ ಪಟ್ಟಿಯನ್ನು ಭರ್ತಿಮಾಡಿ.



| ಕ್ರಮ ಸಂಖ್ಯೆ | 1ನೆ ಬುಟ್ಟಿಯಲ್ಲಿರುವ ವಸ್ತುಗಳ ಪ್ರಮಾಣ | 2ನೇಬುಟ್ಟಿಯಲ್ಲಿರುವ ವಸ್ತುಗಳ ಪ್ರಮಾಣ | ಹೋಲಿಕೆ | ಅನುಪಾತ | ಶ್ರೇಣಿಯಲ್ಲಿ ಬದಲಾವಣೆ ಮುಖಾಂತರ ಹೋಲಿಕೆ | ಅನುಪಾತ |
|---|---|---|---|---|---|---|
| 1 | 2 ಸೇಬು | 6 ಸೇಬು | ಮೊದಲನೆ ಬುಟಿಯಲ್ಲಿ ಸೇಬುಗಳ ಸಂಖ್ಯೆಗೆ ಎರಡನೆ ಬುಟ್ಟಿಯಲ್ಲಿನ ಸೇಬುಗಳು 3ರಷ್ಟಿರುತ್ತದೆ. | 1 : 3 | ಮೊದಲನೆ ಬುಟಿಯಲ್ಲಿ ಆಪಿಲ್ ಸಂಖ್ಯೆಗೆ ಮೊದಲನೆ ಬುಟ್ಟಿಯಲ್ಲಿನ ಸಂಖ್ಯೆಗೆ 3 ರಷ್ಟು | 3 : 1 |
| 2 | 500ಗ್ರಾ.ಗಳ ತಾಮ್ರ | 1000ಗ್ರಾ.ಗಳ ಕಬ್ಬಿಣ | | | | |
| 3 | ಒಂದು T-ಷರ್ಟ್ ಬೆಲೆ ₹200 | ಒಂದು ಕೋಟಿನ ಬೆಲೆ ₹1000 | | | | |

## 11.2 ವಿವಿಧ ಪ್ರಮಾಣದಲ್ಲಿರುವ ಪರಿಮಾಣಗಳನ್ನು ಹೋಲಿಸುವುದು.




ಒಂದು ಸಸ್ಯದ ಉದ್ದ 13 ಮೀ.

ನಕ್ಷೆಯಲ್ಲಿ ಆ ಸಸ್ಯ 26 ಸೆಂ.ಮೀಯಾಗಿ ತೋರಿಸಲಾಗಿದೆ.

ನಕ್ಷೆಯಲ್ಲಿ ಆ ಸಸ್ಯದ ಉದ್ದ ವಾಸ್ತವವಾಗಿರುವ ಉದ್ದಕ್ಕೆ ಎರಡರಷ್ಟು ಇರುತ್ತದೆ ಎನ್ನಬಹುದೇ? ಈ ರೀತಿ ಹೇಳಬಾರದೆಂದು ನಮಗೆ ಗೊತ್ತು. ಸಸ್ಯದ ಉದ್ದ 13 ಮೀ ಅಂದರೆ 13 X 100 = 13,000 ಸೆಂ.ಮೀ.

ನಕ್ಷೆಯಲ್ಲಿನ ಉದ್ದ = 26 ಸೆಂ.ಮೀ.

ಅಂದರೆ ನಕ್ಷೆಯಲ್ಲಿನ ಎತ್ತರಕ್ಕೆ ವಾಸ್ತವವಾದ ಎತ್ತರಕ್ಕಿರುವ ಅನುಪಾತ = $\frac{26}{1300} = \frac{1}{50}$

ಅಂದರೆ ವಾಸ್ತವ ಎತ್ತರ ನಕ್ಷೆಯಲ್ಲಿ ತೋರಿಸಿದ ಎತ್ತರಕ್ಕೆ 50ರಷ್ಟು ಇರುತ್ತದೆ.

ಅಂದರೆ “ಹೋಲಿಸುವ ಪರಿಮಾಣಗಳು ಯಾವಾಗಲೂ ಒಂದೇ ಪ್ರಮಾಣದಲ್ಲಿರಬೇಕು.” ಸಾಧಾರಾಣವಾಗಿ ಎರಡು ಪರಿಮಾಣಗಳಾದ a, b ಗಳ ಅನುಪಾತ **a : b** ಎಂದು ಬರೆಯುತ್ತಾರೆ. ಅನುಪಾತದಲ್ಲಿ **a ,b** ಗಳ ಅನುಪಾತ ಎಂದು ಓದುತ್ತೇವೆ.

**a : b** ಅನುಪಾತದಲ್ಲಿ ಗಳನ್ನುಅನುಪಾತದಲ್ಲಿನ ಪದಗಳು ಎನ್ನುತ್ತಾರೆ. **a** ಯನ್ನು ಪೂರ್ವಪದ, **b** ಯನ್ನು ಉತ್ತರಪದ ಎಂದು ಕರೆಯುವರು..

**ಉದಾ :** ರಫೀಯತ್ತಿರ 16 ಕೆಂಪುಗೋಲಿಗಳು, 4 ನೀಲಿಬಣ್ಣದ ಗೋಲಿಗಳಿವೆ. ರಫೀ ಹತ್ತಿರವಿರುವ ಕೆಂಪು, ನೀಲಿ ಬಣ್ಣದ ಗೋಲಿಗಳ ಅನುಪಾತ ಎಷ್ಟು ?

**ಪರಿಹಾರ:** ಕೆಂಪುಗೋಲಿಗಳು : ನೀಲಿ ಗೋಲಿಗಳು = 16 : 4

= 4 : 1

ಕೆಂಪುಗೋಲಿಗಳು ನೀಲಿ ಬಣ್ಣದ ಗೋಲಿಗಳಿಗೆ 4 ರಷ್ಟು



Downloaded from https:// www.studiestoday.com

Downloaded from https:// www.studiestoday.com

## ಅಭ್ಯಾಸ – 11.1

**1.** ಪಟ್ಟಿಯನ್ನು ಭರ್ತಿಮಾಡಿ.

| ಕ್ರ.ಸಂ | ಮೊದಲನೇ ಪರಿಮಾಣ | ಎರಡನೇ ಪರಿಮಾಣ | ಅನುಪಾತ |
|---|---|---|---|
| (i) |  |  | 3 : 5 |
| (ii) |  |  | |
| (iii) |  |  | |
| (iv) |  |  | |
| (v) |  |  | |

**2.** ಹೋಲಿಸಿರಿ



(i) ನೀಲಿ ಕೊಣೆಗಳ ಸಂಖ್ಯೆ ಕೆಂಪು ಕೋಣೆಗಳ ಸಂಖ್ಯೆಗೆ__________ ರಷ್ಟು

(ii) ಕೆಂಪು ಕೋಣೆಗಳ ಸಂಖ್ಯೆ ನೀಲಿ ಬಣ್ಣದ ಕೋಣೆಗಳ ಸಂಖ್ಯೆಗೆ__________ರಷ್ಟು

(iii) ನೀಲಿ ಕೋಣೆಗಳ ಸಂಖ್ಯೆಗೆ, ಕೆಂಪುಕೋಣೆಗಳ ಸಂಖ್ಯೆಯ ಅನುಪಾತ __________

**3.** ಕೆಳಗಿನವುಗಳನ್ನು ಸಾಧಿಸಿರಿ.

(i) ಒಬ್ಬ ಹಾಲಿನ ವ್ಯಾಪಾರಿ ಪ್ರತಿ ಲೀಟರ್ ಹಾಲಿಗೆ 250 ಮಿ.ಲೀ ನೀರನ್ನು ಬೆರೆಸುತ್ತಾನೆ. ಅವನು ಮಾರುವ ಹಾಲಿನಲ್ಲಿ ನೀರು ಮತ್ತು ಹಾಲಿನ ಅನುಪಾತ ಕಂಡುಹಿಡಿಯಿರಿ.

(ii) ಸತ್ಯಳ ತಾಯಿ 4 ಕಿ.ಗ್ರಾಂ ಬೇಳೆ, 50 ಗ್ರಾಂ ಮೆಣಸಿನ ಪುಡಿಯನ್ನು ಕೊಂಡಳು, ಮೇಣಸಿನ ಪುಡಿ ಮತ್ತು ತೋಗರಿಬೇಳೆ ತೂಕದ ಅನುಪಾತ ಎಷ್ಟು ?

(iii) ರಾಣಿ ತನ್ನ ಮನೆಯಿಂದ ಶಾಲೆಗೆ 30 ನಿಮಿಷದಲ್ಲಿ ಸೇರುತ್ತಾಳೆ, ಅದೇ ದೂರವನ್ನು ಇಸ್ಮಾಯಿಲ್ 1/2 ಗಂಟೆಯಲ್ಲಿ ನಡೆಯಬಲ್ಲನು. ರಾಣಿ ನಡೆಯುವ ಸಮಯಕ್ಕೆ ಇಸ್ಮಾಯಿಲ್ ನಡೆಯುವ ಸಮಯಕ್ಕೆ ಇರುವ ಅನುಪಾತ ಎಷ್ಟು ?

### 11.2 ವಿವಿಧ ಸಂದರ್ಭಗಳಲ್ಲಿ ಅನುಪಾತ

6ನೇ ತರಗತಿ ಓದುತ್ತಿರುವ ಶ್ಲೋಕ ಮಹೇಶರು. ಉಳಿತಾಯ ಖಾತೆ ಯೋಜನೆಯಲ್ಲಿ ಕ್ರಮವಾಗಿ ₹50 , ₹100 ಉಳಿತಾಯ ಮಾಡಿದರು. ಅವರ ತರಗತಿಯಲ್ಲಿ ವಿದ್ಯಾರ್ಥಿಗಳೆಲ್ಲರು ಕೂಡಿ ₹ 2000 ವನ್ನು ಉಳಿತಾಯ ಮಾಡಿದರು. ಅವರು ಉಳಿತಾಯ ಮಾಡಿದ ಮೊತ್ತವನ್ನು ತರಗತಿ ಮೊತ್ತದೊಂದಿಗೆ ಹೋಲಿಸಿದರು.

ಶ್ಲೋಕ, ಮಹೇಶ್ ಉಳಿತಾಯ ಮಾಡಿದ ಮೊತ್ತಗಳ ಅನುಪಾತ = 50:100

ಶ್ಲೋಕ, ತರಗತಿಯಿಂದ ಉಳಿತಾಯ ಮಾಡಿದ ಮೊತ್ತಗಳ ಅನುಪಾತ = 50:2000

ಮಹೇಶ್, ತರಗತಿಯಿಂದ ಉಳಿತಾಯ ಮಾಡಿದ ಮೊತ್ತಗಳ ಅನುಪಾತ = 100: 2000



Downloaded from https:// www.studiestoday.com

SCERT TELANGANA

Downloaded from https:// www.studiestoday.com

## 11.3 ಚಟುವಟಿಕೆ

ಒಂದು ಚೌಕುಳಿ ಕಾಗದ ತೆಗೆದುಕೊಂಡು ಒಂದು ದಾಳವನ್ನು ಉರುಳಿಸಿ ಅದರ ಮೇಲ್ಮುಖ ಮೇಲೆ ಕಂಡ ಸಂಖ್ಯೆಗೆ ಅನುಗುಣವಾಗಿ ಕಾಗದದಲ್ಲಿನ ಚೌಕಗಳನ್ನು ನಿಮಗಿಷ್ಟವಾದ ಬಣ್ಣದಿಂದ ತುಂಬಿರಿ.

ಈಗ ನಿನ್ನ ಸ್ನೇಹಿತನ ಸರದಿ : ನಿನ್ನ ಸ್ನೇಹಿತನಿಗೆ ದಾಳದ ಮೂಲಕ ಬಂದಿರುವ ಸಂಖ್ಯೆಗೆ ಸಮಾನವಾದ ಕೊಣೆಗಳನ್ನು ಆತನಿಗೆ ಇಷ್ಟವಾದ ಬಣ್ಣದಿಂದ ತುಂಬಬೇಕು.



1. ನೀವು ತುಂಬಿದ ಕೋಣೆಗಳ ಸಂಖ್ಯೆಗೆ, ನಿನ್ನ ಸ್ನೇಹಿತ ತುಂಬಿದ ಕೋಣೆಗಳ ಸಂಖ್ಯೆಗೆ ಇರುವ ಅನುಪಾತ ಎಷ್ಟು?
2. ನೀನು ತುಂಬಿದ ಕೋಣೆಗಳ ಸಂಖ್ಯೆಗೆ ಒಟ್ಟು ಬಣ್ಣ ಹಾಕಿದ ಕೋಣೆಗಳ ಸಂಖ್ಯೆಗಳಿಗಿರುವ ಅನುಪಾತ ಎಷ್ಟು ?
3. ನಿನ್ನ ಸ್ನೇಹಿತ ಬಣ್ಣತುಂಬಿದ ಕೋಣೆಗಳ ಸಂಖ್ಯೆಗೆ ಒಟ್ಟಾರೆ ಬಣ್ಣ ತುಂಬಿದ ಕೋಣೆಗಳ ಸಂಖ್ಯೆಗಳಿಗಿರುವ ಅನುಪಾತ ಎಷ್ಟು ?

**ಇವುಗಳನ್ನು ಪ್ರಯತ್ನಿಸಿ**



ಕೊಟ್ಟಿರುವ ಚಿತ್ರದಲ್ಲಿ



(i) ಬಣ್ಣ ಹಾಕಿದ, ಬಣ್ಣ ಹಾಕದೆ ಇರುವ ಭಾಗಗಳಿಗೆ

(ii) ಬಣ್ಣ ಹಾಕಿದ, ಒಟ್ಟು ಭಾಗಗಳಿಗೆ

(iii) ಬಣ್ಣ ಹಾಕದೆ ಇರುವ, ಒಟ್ಟು ಭಾಗಗಳಿಗೆ ಇರುವ ಅನುಪಾತಗಳನ್ನು ಕಂಡುಹಿಡಿಯಿರಿ.

## 11.4 ವಿವಿಧ ಸಂದರ್ಭಗಳಲ್ಲಿ ಸಮ ಅನುಪಾತಗಳು

ಕೆಳಗಿನವುಗಳನ್ನು ಗಮನಿಸಿ

- ಒಂದು ಕೋಣೆಯ ಉದ್ದ 30 ಮೀ. ಮತ್ತು ಅಗಲ 20 ಮೀ. ಆದರೆ ಕೋಣೆ ಉದ್ದ ಮತ್ತು ಅಗಲಗಳ

  ಅನುಪಾತ $= \frac{30}{20} = \frac{3}{2}$ ಅಂದರೆ $3 : 2$

- ಒಂದು ವಿಹಾರ ಯಾತ್ರೆಯಲ್ಲಿ 24 ಜನ ವಿದ್ಯಾರ್ಥಿನಿಯರು, 16 ಜನ ವಿದ್ಯಾರ್ಥಿಗಳು ಭಾಗವಹಿಸಿದರು.

  ವಿದ್ಯಾರ್ಥಿನಿಯ ಮತ್ತು ವಿದ್ಯಾರ್ಥಿಗಳ ಅನುಪಾತ $= \frac{24}{16} = \frac{3}{2}$ ಅಂದರೆ $3 : 2$

  ಮೇಲಿನ ಎರಡು ಸಂದರ್ಭಗಳಲಿ ಅನುಪಾತ $3 : 2$ ಆಗಿರುತ್ತದೆ.

- ಆದ್ದರಿಂದ 30:20 ಮತ್ತು 24:16 ಎಂಬ ಅನುಪಾತಗಳನ್ನು ಕನಿಷ್ಠ ರೂಪದಲ್ಲಿ ಹೇಳಿದಾಗ $3 : 2$ ಆಗುತ್ತದೆ. ಇವು ಸಮ ಅನುಪಾತಗಳು.

  ಅನುಪಾತ $3 : 2$ ಆಗುವ ಸಂದರ್ಭಗಳಿಗೆ ಮತ್ತಷ್ಟು ಉದಾಹರಣೆಗಳನ್ನು ಹೇಳಬಲ್ಲಿರಾ ?

- ಒಂದು ನಿರ್ದಿಷ್ಟ ಅನುಪಾತಕ್ಕೆ ಅನುಕೂಲವಾದ ಸಂದರ್ಭಗಳನ್ನು ಬರೆಯುವುದು ತಮಾಷೆಯಾಗಿ ಇರುತ್ತದೆ. $2 : 3$ ಅನುಪಾತಕ್ಕೆ ಕೆಳಗೆ ಎರಡು ಉದಾಹರಣೆಗಳನ್ನು ಕೊಟ್ಟಿದೆ. ನೀವು ಇನ್ನು ಮೂರು ಉದಾಹರಣೆಗಳನ್ನು ಬರೆಯಿರಿ.
- ಒಂದು ಟೇಬಲ್ಲಿನ ಅಗಲ, ಉದ್ದಗಳ ಅನುಪಾತ $2 : 3$
- ಷೀನಾ ಹತ್ತಿರ 2 ಗೋಲಿಗಳು, ಅವಳ ಸ್ನೇಹಿತೆ ಶಬ್ನಮ್ ಹತ್ತಿರ 3 ಗೋಲಿಗಳಿವೆ. ಷೀನಾ ಮತ್ತೆ ಶಬ್ನಮ್‌ನ ಹತ್ತಿರ ವಿರುವ ಗೋಲಿಗಳ ಅನುಪಾತ = $2 : 3$

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಉದಾ 2 :** ಒಂದು ಗಣಿತ ತರಗತಿಯಲ್ಲಿ 16 ಬಾಲಕರು, 20 ಬಾಲಕಿಯರು ಇರುವರು. ತರಗತಿಯಲ್ಲಿನ ಬಾಲಕರ ಸಂಖ್ಯೆಗೆ ಮತ್ತು ಬಾಲಕಿಯರ ಸಂಖ್ಯೆಗೆ ಇರುವ ಅನುಪಾತವನ್ನು ಕಂಡುಹಿಡಿದು ಅದರ ಕನಿಷ್ಠ ರೂಪವನ್ನು ತಿಳಿಸಿ.

**ಪರಿಹಾರ :** ಅನಿಲ್ ಈ ಸಮಸ್ಯೆಯನ್ನು ಈ ರೀತಿಯಾಗಿ ಸಾಧಿಸಿದನು.

ಬಾಲಕರ ಸಂಖ್ಯೆಗೆ ಬಾಲಕಿಯರ ಸಂಖ್ಯೆಗೆ ಇರುವ ಅನುಪಾತ= 16: 20

$$= \frac{16}{20} = \frac{2\times2\times2\times2}{2\times2\times5} = \frac{4}{5}$$

ಅನಿಲ್ ಕನಿಷ್ಠ ಪದಗಳಲ್ಲಿ ತಿಳಿಸಿದ ಅನುಪಾತ =4 : 5

ಒಂದು ಅನುಪಾತದಲ್ಲಿನ ಪದಗಳಿಗೆ 1 ಬಿಟ್ಟು ಬೇರೆ ಸಾಮಾನ್ಯ ಅಪವರ್ತನಗಳು ಇಲ್ಲದೇ ಇದ್ದಾಗ ಆ ಅನುಪಾತ ಸಾಧಾರಣ ರೂಪದಲ್ಲಿ ಇಲ್ಲವೇ ಕನಿಷ್ಠ ರೂಪದಲ್ಲಿ ಇದೆ ಎನ್ನುತ್ತಾರೆ.

**ಪ್ರಯತ್ನಿಸಿರಿ :**



1. ಕೆಳಗಿನ ಪಟ್ಟಿಯಲ್ಲಿರುವ ಖಾಲಿ ಜಾಗಗಳನ್ನು ಭರ್ತಿಮಾಡಿ.

| ಅನುಪಾತ | 1:2 | 2:3 | 5:7 | | |
|---|---|---|---|---|---|
| 1 ರಷ್ಟು | 1:2 | | | | |
| 2 ರಷ್ಟು | | 4:6 | | | |
| 3 ರಷ್ಟು | | | 15:21 | | |
| 4 ರಷ್ಟು | | | | 12:16 | |
| 5 ರಷ್ಟು | | | | | 20:25 |

2. ಪಟ್ಟಿಯನ್ನು ಪೂರ್ಣಗೊಳಿಸಿ

**ಭರ್ತಿ ಮಾಡಿ**
ರೂ.1 = ..... ಪೈಸೆ
1000 ಗ್ರಾಂ = .......ಕಿ.ಗ್ರಾಂ
1 ಗಂಟೆ= ......ನಿಮಿಷಗಳು
100ಸೆಂ.ಮೀ. = ...ಮೀಟರ್
1 ನಿಮಿಷ = ......ಸೆಕೆಂಡ್
10 ಮಿ.ಮೀ = ......ಸೆಂ.ಮೀ

| ಕ್ರ.ಂ. ಸಂಖ್ಯೆ | ಮೊದಲನೆ ಪರಿಮಾಣ | ಎರಡನೆ ಪರಿಮಾಣ | ಅನುಪಾತ | ಕನಿಷ್ಠರೂಪದಲ್ಲಿ ಅನುಪಾತ |
|---|---|---|---|---|
| 1. | 20 ಪೈಸೆ | ₹ 1 | | |
| 2. | 800 ಗ್ರಾಂ | 1.ಕಿ.ಗ್ರಾಂ | | |
| 3. | 1 ಗಂಟೆ | 30 ನಿಮಿಷ | | |
| 4. | 2 ಮೀ | 125 ಸೆಂ.ಮೀ | | |
| 5. | 3 ನಿಮಿಷ | 45 ಸೆಕೆಂಡ್ | | |
| 6. | 30 ಮಿ.ಮೀ | 1ಸೆಂ.ಮೀ | | |

**ನೆನಪಿಡಿ**
ಒಂದೇ ಪ್ರಮಾಣದಲ್ಲಿರುವ ಪರಿಮಾಣಗಳನ್ನು ಹೋಲಿಸುವುದೇ ಅನುಪಾತ

3. ಕೆಳಗಿನ ಚಿತ್ರಗಳಲ್ಲಿ ಬಣ್ಣ ಹಾಕಿರುವ ಭಾಗಗಳಿಗಿರುವ ಅನುಪಾತವನ್ನು ಕನಿಷ್ಠ ಪದಗಳಲ್ಲಿ ಬರೆಯರಿ



(i)



(ii)



(iii)



Downloaded from https:// www.studiestoday.com

Downloaded from https:// www.studiestoday.com


(iv)


(v)


(vi)

## ಅಭ್ಯಾಸ – 11.2

1. ಕೆಳಗಿನವುಗಳಲ್ಲಿ ಕನಿಷ್ಠ ರೂಪದಲ್ಲಿರುವ ಅನುಪಾತಗಳು ಯಾವುವು ? ಇಲ್ಲವೇ ಅವುಗಳನ್ನು ಕನಿಷ್ಠ ರೂಪದಲ್ಲಿ ತಿಳಿಸಿ.
   (i) 2:3 (ii) 16:20 (iii) 5:6
   (iv) 20:60 (v) 8:15 (vi) 19 : 2
2. ಒಂದು ಚೀಲದಲ್ಲಿ 20 ಕೆ.ಜಿ. ಅಕ್ಕಿ ಮತ್ತೊಂದು ಚೀಲದಲ್ಲಿ 60 ಕೆ.ಜಿ. ಗೋಧಿ ಅಕ್ಕಿ ಇವೆ. ಆದರೆ ಅಕ್ಕಿ ಮತ್ತು ಗೋಧಿಯ ತೂಕದ ಅನುಪಾತ ಎಷ್ಟು ? ಅಕ್ಕಿಯ ತೂಕಕ್ಕೆ ಮತ್ತು ಎರಡು ಚೀಲದ ಒಟ್ಟು ತೂಕಕ್ಕೆ ಇರುವ ಅನುಪಾತವನ್ನು ಕಂಡುಹಿಡಿಯಿರಿ.
3. ಒಂದು ತರಗತಿಯಲ್ಲಿನ ಒಟ್ಟು 32 ವಿದ್ಯಾರ್ಥಿಗಳಲ್ಲಿ 12 ಜನ ಬಾಲಕಿಯರು ಆದರೆ
   (i) ತರಗತಿಯಲ್ಲಿನ ಬಾಲಕರ ಮತ್ತು ಬಾಲಕಿಯರ ಅನುಪಾತ ಎಷ್ಟು ?
   (ii) ಬಾಲಕರ ಸಂಖ್ಯೆಗೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೆ ಇರುವ ಅನುಪಾತ ಎಷ್ಟು ?
   (iii) ಬಾಲಕಿಯರ ಸಂಖ್ಯೆಗೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೆ ಇರುವ ಅನುಪಾತ ಎಷ್ಟು ?
4. ಒಂದು ಚುತುರ್ಭಜವನ್ನು ಎಳೆಯಿರಿ. ಅದನ್ನು ಕೆಲವು ಸಮಾನ ಭಾಗಗಳನ್ನಾಗಿ ವಿಭಜಿಸಿ ಬಣ್ಣ ಹಾಕಿರುವ ಭಾಗಗಳಿಗೆ ಬಣ್ಣ ಹಾಕದೇ ಇರುವ ಭಾಗಗಳಿಗಿರುವ ಅನುಪಾತ 1:3 ಇರುವಂತೆ ಕೆಲವು ಭಾಗಗಳಿಗೆ ಬಣ್ಣ ಹಾಕಿರಿ. ಇದೇ ರೀತಿ ಮತ್ತೆರಡು ಚಿತ್ರಗಳನ್ನು ಎಳೆದು ಬಣ್ಣ ಹಾಕಿರಿ.
5. ಇಮ್ರಾನ್ 2 ಲೀಟರ್ ಎಣ್ಣೆಯನ್ನು, ವಿಜಯ್ 500 ಮಿ.ಲೀ ಎಣ್ಣೆಯನ್ನು ತಂದನು. ಇಮ್ರಾನ್, ವಿಜಯ್ ರು. ತಂದ ಎಣ್ಣೆಗಳ ಅನುಪಾತ ಕಂಡಿಹಿಡಿಹಿರಿ.
6. ಅಬ್ರಾಹಂನ ತೂಕ 20 ಕೆ.ಜಿ ಮತ್ತು ಅವನ ತಂದೆಯ ತೂಕ 60ಕೆಜಿ ಆದರೆ ಅಬ್ರಾಹಂ ಮತ್ತು ಅವನ ತಂದೆಯ ತೂಕಗಳ ಅನುಪಾತ ಕಂಡುಹಿಡಿಯಿರಿ ಮತ್ತು ಆ ಅನುಪಾತವನ್ನು ಕನಿಷ್ಠ ರೂಪದಲ್ಲಿ ಬರೆಯಿರಿ.
7. ರಾಮು ತನ್ನ ಬಳಿ ಇರುವ ಹಣದಲ್ಲಿ 2/5ನೇ ಭಾಗ ಒಂದು ಕಥೆ ಪುಸ್ತಕಕ್ಕೆ ಖರ್ಚು ಮಾಡಿದ ಆದರೆ ರಾಮು ಖರ್ಚು ಮಾಡಿದ ಹಣಕ್ಕೆ ಮತ್ತು ಮೊದಲು ಅವನ ಬಳಿ ಇದ್ದ ಹಣದ ಅನುಪಾತ ಎಷ್ಟು ?

### 11.5 ಒಂದು ಪರಿಮಾಣವನ್ನು ಕೊಟ್ಟ ಅನುಪಾತದಲ್ಲಿ ವಿಭಜಿಸುವುದು

**ಉದಾ –3 :** ಸ್ನಿಗ್ಧಳ ಹುಟ್ಟಿದ ಹಬ್ಬಕ್ಕೆ ಅವಳ ತಂದೆ ಒಂದು ಹೂವಿನ ಗುಚ್ಛ ತಂದನು. ಅದರಲ್ಲಿ ಒಟ್ಟು 18 ಹೂಗಳಿದ್ದು ಕೆಂಪು ಬಣ್ಣದ ಮತ್ತು ಹಳದಿ ಬಣ್ಣದ ಹೂಗಳಿಗಿರುವ ಅನುಪಾತ 1: 2 ಕೆಂಪು ಬಣ್ಣ , ಹಳದಿ ಬಣ್ಣದ ಹೂವಿನ ಸಂಖ್ಯೆಯನ್ನು ಕಂಡುಹಿಡಿಯಿರಿ.

**ಪರಿಹಾರ :** ಕೆಂಪು ಬಣ್ಣದ ಹೂಗಳಿಗೆ ಹಳದಿ ಬಣ್ಣದ ಹೂಗಳಿಗೆ ಅನುಪಾತ = 1: 2

ಅನುಪಾತದಲ್ಲಿನ ಪದಗಳ ಮೊತ್ತ = 1+2 = 3

ಒಟ್ಟು ಹೂಗಳ ಸಂಖ್ಯೆ = 18 ಹೂಗಳು.

3 ಭಾಗಗಳು = 18 ಹೂಗಳು.

ಒಂದೊಂದು ಭಾಗ = 18/3=6 ಹೂಗಳು.

ಕೆಂಪು ಬಣ್ಣದ ಹೂಗಳು.= 1 ಭಾಗ = 1 × 6 ಹೂಗಳು. = 6ಹೂಗಳು.

ಹಳದಿ ಬಣ್ಣದ ಹೂಗಳು = 2 ಭಾಗಗಳು= 2 × 6 ಹೂಗಳು. = 12 ಹೂಗಳು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಉದಾ –4 :** ಒಬ್ಬ ಅಕ್ಕಸಾಲಿಗ ಆಭರಣಗಳ ತಯಾರಿಕೆಯಲ್ಲಿ ಬಂಗಾರವನ್ನು ಮತ್ತು ತಾಮ್ರವನ್ನು 7: 2 ಅನುಪಾತದಲ್ಲಿ ಬೆರೆಸುತ್ತಾನೆ. ಒಂದು ಆಭರಣದ ತೂಕ 45 ಗ್ರಾಂ. ಆದರೆ ಅದರಲ್ಲಿನ ಬಂಗಾರ ಮತ್ತು ತಾಮ್ರದ ತೂಕವನ್ನು ಕಂಡುಹಿಡಿಯಿರಿ.

**ಪರಿಹಾರ :** ಆಭರಣದಲ್ಲಿನ ಬಂಗಾರ , ತಾಮ್ರದ ಅನುಪಾತ= 7: 2

ಅನುಪಾತದಲ್ಲಿನ ಪದಗಳ ಮೊತ್ತ = 7+2 = 9

9 ಭಾಗಗಳ ತೂಕ = 45 ಗ್ರಾಂ.

1 ಭಾಗದ ತೂಕ = 45 ÷ 9 = 5 ಗ್ರಾಂ.

ಬಂಗಾರದ ತೂಕ = 7 ಗ್ರಾಂ.× 5 ಗ್ರಾಂ.. = 35 ಗ್ರಾಂ.

ತಾಮ್ರದ ತೂಕ = 2 ಭಾಗಗಳು × 5 ಗ್ರಾಂ. = 10 ಗ್ರಾಂ.

**ಉದಾ –5 :** ರೇಖಾ ಖಂಡ AB = 5 ಸಮಾನ ಭಾಗಗಳಾಗಿ ವಿಭಜಿಸಲಾಗಿದೆ.




(i) ರೇಖಾ ಖಂಡ AB ಯನ್ನು X ನಲ್ಲಿ ವಿಭಜಿಸಿ ಅನುಪಾತ ಕಂಡುಹಿಡಿಯಿರಿ.

(ii) ABಯ ಉದ್ದ 15 ಸೆಂ.ಮೀ. ಆದರೆ AX ಮತ್ತು XB ಗಳ ಉದ್ದಗಳೆಷ್ಟು ?

**ಪರಿಹಾರ :** (i) ರೇಖಾ ಖಂಡಾ AB ನು X ವಿಭಜಿಸಿದಾಗ

ಅನುಪಾತ = 3:2

(ii) ಒಟ್ಟು ಭಾಗಗಳ ಸಂಖ್ಯೆ = = 3 + 2 = 5

AB ಉದ್ದ = 15 ಸೆಂ.ಮೀ

5 ಭಾಗಗಳು = 15 ಸೆಂ.ಮೀ

ಒಂದೊಂದು ಭಾಗದ ಉದ್ದ = $\frac{15}{5}$ = 3 ಸೆಂ.ಮೀ

AX ನ ಉದ್ದ = 3 ಭಾಗಗಳು = 3 x 3 ಸೆಂ.ಮೀ. = 9 ಸೆಂ.ಮೀ

XB ನ ಉದ್ದ = 2ಭಾಗಗಳು= 2 x 3 ಸೆಂ.ಮೀ = 6 ಸೆಂ.ಮೀ

**ಪ್ರಯತ್ನಿಸಿರಿ**



ಚೌಕಾಕಾರದ ಕಪ್ಪು ಮತ್ತು ಬಿಳಿ ಟೈಲ್ಸ್‌ಗಳನ್ನು 2:5 ರಂತೆ ಉಪಯೋಗಿಸಿ ಒಂದು ಜೋಡಣೆ ಮಾಡಿರಿ. ಬಹಳ ವಿಧಗಳ ಜೋಡಣೆಗಳು ಇರುತ್ತವೆಂದು ತಿಳಿಯಿರಿ.

**ಉದಾ –6 :** ಹರಿ ಮತ್ತು ತೇಜ ಸ್ವಲ್ಪ ಹಣವನ್ನು ಲಾಟರಿಯಲ್ಲಿ ಗೆದ್ದರು, ಅವರು ಅದನ್ನು 5 : 3ಅನುಪಾತದಲ್ಲಿ ಹಂಚಿಕೊಂಡಾಗ ತೇಜನಿಗೆ ₹ 150 ಬಂದಿವೆ ಲಾಟರಿಯಲ್ಲಿ ಹರಿಗೆ ಬರುವ ಭಾಗ ಎಷ್ಟು ?

**ಪರಿಹಾರ :** ಹರಿ ಮತ್ತು ತೇಜರು ಹಂಚಿಕೊಂಡ ಅನುಪಾತ = 5 : 3

ತೇಜನ ಭಾಗ = 3 ಭಾಗ = ₹150

1ಭಾಗ = $\frac{150}{3}$ = 50

ಆದ್ದರಿಂದ ಹರಿಯ ಭಾಗ= 5 ಭಾಗ = 5×50= ₹250

ಒಟ್ಟುಆದಾಯ = 250 +150= ₹400



## ಅಭ್ಯಾಸ – 11.3

1. ಒಂದು ಚೀಲದಲ್ಲಿ 25 ಗೋಲಿಗಳನ್ನು ರಾಹುಲ್ ಮತ್ತು ಕಿರಣ್ 2 : 3 ರ ಅನುಪಾತದಲ್ಲಿ ಹಂಚಿಕೊಂಡರು. ಆದರೆ
   (i) ಕಿರಣ್‌ಗೆ ಬರುವ ಗೋಲಿಗಳೆಷ್ಟು ?
   (ii) ರಾಹುಲನಿಗೆ ಸಿಗುವ ಗೋಲಿಗಳೆಷ್ಟು ?
2. ರೇಖಾ ಖಂಡ AB ಯ ಉದ್ದ 14 ಸೆಂ.ಮೀ AB ಯ ಮೇಲೆ ಒಂದು ಬಿಂದು X, AB ಯನ್ನು X 3 : 4.ಅನುಪಾತದಲ್ಲಿ ವಿಭಜಿಸಿದಾಗ AX ಮತ್ತು XB ಉದ್ದಗಳನ್ನು ಕಂಡುಹಿಡಿಯಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

3. ಗೀತ ಮತ್ತು ಲಕ್ಷ್ಮಿ ಒಂದು ಆಟದಲ್ಲಿ ₹1050 ನ್ನು ಗೆದ್ದಿದ್ದಾರೆ. ಅವರು ಆ ಮೊತ್ತವನ್ನು 3 : 4ರ ಅನುಪಾತದಲ್ಲಿ ಹಂಚಿಕೊಳ್ಳಬೇಕೆಂದು ಕೊಂಡರೆ ಒಬ್ಬೊಬ್ಬರಿಗೆ ಬರುವ ಆದಾಯವೆಷ್ಟು ?
4. ₹ 3600 ನ್ನು ಸತ್ಯ ಮತ್ತು ವಿಷ್ಣು 3 : 5 ಅನುಪಾತದಲ್ಲಿ ಹಂಚಿದರೆ ಒಬ್ಬೊಬ್ಬರಿಗಗೆ ಸಿಗುವ ಪಾಲು ಎಷ್ಟು?
5. ಎರಡು ಸಂಖ್ಯೆಗಳ ಮೊತ್ತ 182 ಮತ್ತು ಅವುಗಳ ಅನುಪಾತ 5 : 6 ಆದರೆ ಆ ಸಂಖ್ಯೆಗಳಾವುವು?
6. ಕೆಳಗಿನ ನಕ್ಷೆಯಲ್ಲಿ X ಬಿಂದುವು AB ಯನ್ನು ವಿಭಜಿಸುವ ಅನುಪಾತವನ್ನು ಅಂದಾಜಿಸಿ. ವಾಸ್ತವವಾಗಿ ಅಳೆದು ನೋಡಿರಿ. ಉತ್ತರವನ್ನು ಸರಿನೋಡಿರಿ.




7. ಒಬ್ಬ ಉದ್ಯೋಗಿಯ ಆದಾಯ ಮತ್ತು ಉಳಿತಾಯದ ಅನುಪಾತ 11 : 2 ಉದ್ಯೋಗಿಯ ಖರ್ಚು ₹5346 ಆದರೆ ಅತನ ಆದಾಯ, ಉಳಿತಾಯವೆಷ್ಟು ?

## 11.6 ಸಮಾನುಪಾತ

ಕೆಳಗಿನ ಚಿತ್ರಗಳನ್ನು ನೋಡಿ, ಅವುಗಳ ಆಕಾರದಲ್ಲಿನ ವ್ಯತ್ಯಾಸ ನೀನು ಗಮನಿಸಿರಿ.




(i) (ii) (iii)

ಮೇಲಿನ ಚಿತ್ರಗಳಲ್ಲಿ ನೀವು ಗಮನಿಸಿದ ವ್ಯತ್ಯಾಸಗಳೇನು? (i), (ii) ಚಿತ್ರಗಳ ಆಕಾರದಲ್ಲಿ ಬದಲಾವಣೆ ಹೊಂದಿವೆ. ಆದರೆ (iii) ನೇ ಚಿತ್ರ ಮೂಲ ಚಿತ್ರದೊಂದಿಗೆ ಹೋಲಿಸಿದರೆ ದೊಡ್ಡದಾಗಿ ಮಾತ್ರ ಮಾಡಲಾಗಿದೆ. ಆದರೆ ಆಕಾರದಲ್ಲಿ ವ್ಯತಾಸವಿಲ್ಲ. ಏಕೆಂದರೆ ಪರಿಮಾಣದಲ್ಲಿ ವ್ಯತ್ಯಾಸ ಆಗಿ ಆಕಾರದಲ್ಲಿ ವ್ಯತ್ಯಾಸ ಆಗದೇ ಇರುವುದು.

ಮೂರು ಚಿತ್ರಗಳ ಉದ್ದ, ಅಗಲಗಳ ಅನುಪಾತ ಕಂಡು ಹಿಡಿದು ನೋಡೋಣ

ಅಸಲು ಚಿತ್ರದ ಉದ್ದ ಅಗಲಗಳ ಅನುಪಾತ = 3:2

ಮೊದಲನೆ ಚಿತ್ರದಲ್ಲಿ ಉದ್ದ ಅಗಲಗಳ ಅನುಪಾತ = 6 : 2 ಕನಿಷ್ಠ ರೂಪ 3 : 1

ಎರಡನೇ ಚಿತ್ರದಲ್ಲಿ ಉದ್ದ ಅಗಲಗಳ ಅನುಪಾತ = 3 : 4 ಕನಿಷ್ಠ ರೂಪ 3 : 4

ಮೂರನೇ ಚಿತ್ರದಲ್ಲಿ ಉದ್ದ ಅಗಲಗಳ ಅನುಪಾತ = 6 : 4 ಕನಿಷ್ಠ ರೂಪದಲ್ಲಿ 3 : 2 ಈ ಅನುಪಾತ ಅಸಲು ಚಿತ್ರದಲ್ಲಿನ ಅನುಪಾತಕ್ಕೆ ಸಮ. ಆದ್ದರಿಂದ ಮೂರನೇ ಚಿತ್ರ, ಮೊದಲನೆ ಚಿತ್ರಕ್ಕೆ ಅನುಪಾತದಲ್ಲಿದೆ ಎಂದು ಹೇಳಬಹುದು. ಅಂದರೆ ಅನುಪಾತಗಳ ಸಮಾನತೆಯನ್ನು **ಸಮಾನುಪಾತ** ಎಂದು ಹೇಳುತ್ತೇವೆ.

ಸಾಧಾರಣವಾಗಿ ಎರಡು ಪದಗಳು **'a'** , **'b'**ಗಳ ಅನುಪಾತ **'c'** , **'d'**ಗಳ ಅನುಪಾತಕ್ಕೆ ಸಮವಾದರೆ ಸಮಾನುಪಾತದಲ್ಲಿವೆ ಎಂದು ಹೇಳುತ್ತೇವೆ **a : b : : c : d**.ಎಂದು ಬರೆಯುತ್ತೇವೆ.

**ಕೆಳಗಿನ ಉದಾಹರಣೆಗಳನ್ನು ಗಮನಿಸಿ .**

ಭಾವಿಕಳ ಹತ್ತಿರ 28 ಗೋಲಿಗಳು, ವಿನೀ ಹತ್ತಿರ 180 ಹೂಗಳಿವೆ. ಅವರು ಇವುಗಳನ್ನು ಹಂಚಿಕೊಂಡರು. ಭಾವಿಕ 14 ಗೊಲಿಗಳನ್ನು ವಿನೀಗೆ ಕೊಟ್ಟು ವಿನೀ ತನ್ನ ಬಳಿ ಇರುವ 180 ಹೂಗಳಲ್ಲಿ 90 ಹೂಗಳನ್ನು ಭಾವಿಕಳಿಗೆ ಕೊಟ್ಟಳು. ಆದೆ ಈ ರೀತಿ ಹಂಚಿಕೊಳ್ಳುವ ಮುಖಾಂತರ ತನಗೆ ಸರಿಯಾದ ನ್ಯಾಯ ಸಿಗಲಿಲ್ಲವೆಂದು ವಿನೀ ಅಂದುಕೊಂಡಳು. ಭಾವಿಕ ತನಗೆ ಕಡಿಮೆ ಗೋಲಿಗಳನ್ನು ಕೊಟ್ಟಿದ್ದಾಳೆ ಎಂದು ವಿನೀ ಅಂದುಕೊಂಡಳು.

ನಿಮ್ಮ ಅಭಿಪ್ರಾಯವೇನು ?

ವಿನೀ ಆಲೋಚನೆ ಸರಿಯಾಗಿದೆಯೇ ? ವಿನಿ ಮತ್ತು ಭಾವಿಕಳೂ ಪರಿಷ್ಕಾರಕೋಸ್ಕರ ವಿನೀಯ ಅಮ್ಮ ಪೂಜಾಳನ್ನು ಕೇಳಿದರು.



Downloaded from https:// www.studiestoday.com

Downloaded from https:// www.studiestoday.com

ಪೂಜ ಈ ರೀತಿ ವಿವರಿಸಿದಳು

ಭಾವಿಕ ತನ್ನ ಬಳಿ ಇದ್ದ 28 ಗೋಲಿಗಳಲ್ಲಿ 14 ಗೋಲಿಗಳನ್ನು ವಿನೀಗೆ ಕೊಟ್ಟಳು.

ಆದ್ದರಿಂದ ಗೋಲಿಗಳ ನಿಷ್ಪತ್ತಿ 14 : 28 = 1 : 2

ಮತ್ತು ವಿನೀ ತನ್ನ ಬಳಿ ಇರುವ 180 ಹೂಗಳಲ್ಲಿ 90 ಹೂಗಳನ್ನು ಭಾವಿಕಳಿಗೆ ಕೊಟ್ಟರು. ಆದ್ದರಿಂದ ಹೂಗಳ ಅನುಪಾತ 90 : 180 = 1 : 2.

ಎರಡು ಅನುಪಾತಗಳು ಸಮನಾಗಿವೆ ಆದ್ದರಿಂದ ಹಂಚಿಕೊಳ್ಳುವುದರಲ್ಲಿ ಅನ್ಯಾಯವೇನು ಇಲ್ಲ. ನೀವು ಪೂಜ ಚರ್ಚಿಸಿದ ವಿವರಗಳನ್ನು ಒಪ್ಪಿಕೊಳ್ಳುವಿರಾ ? ಆಲೋಚಿಸಿ.

**ಉದಾಹರಣೆ7:** ರಾಜುವಿನಬಳಿ ₹12 ಮತ್ತು ಭರತನ ಬಳಿ ₹18 ಇದೇ ಅವರಿಬ್ಬರು ಸೇರಿ ಒಟ್ಟು ಹಣದಿಂದ 20ಪೆನ್ಸಿಲ್‌ಗಳನ್ನು ಕೊಂಡುತಂದರು.

(i) ಭರತ್ ಇಬ್ಬರಿಗೂ 10 ಪೆನ್ಸಿಲ್‌ಗಳು ಎಂದನು.

(ii) ರಾಜು ತನಗೆ 8 ಭರತ್‌ಗೆ 12 ಪೆನ್ಸಿಲ್‌ಗಳು ಎಂದರು.

ಯಾರು ಲೆಕ್ಕ ಸರಿಯಾಗಿದೆ ? ವಿವರಿಸಿ.

**ಪರಿಹಾರ :** ರಾಜು ಮತ್ತು ಭರತ್‌ರ ಹಣದ ಅನುಪಾತ = 12:18

= 12 ÷ 6 : 18 ÷ 6

= 2 : 3

ಎ)ಭರತ್ ಪ್ರಕಾರದಂತೆ ಪೆನ್ಸಿಲ್‌ಗಳ ಅನುಪಾತ = 10 : 10

= 10 ÷ 10 : 10 ÷ 10

= 1 : 1

ಪೆನ್ಸಿಲ್‌ಗಳನ್ನು ಸಮಾನ ಅನುಪಾತದಲ್ಲಿ ಹಂಚಿಕೊಂಡರೆ ಅದು ಹಣದ ಅನುಪಾತಕ್ಕೆ ಅನುಪಾತದಲ್ಲಿಲ್ಲ.

ಬಿ)ರಾಜು ಪ್ರಕಾರ ಪೆನ್ಸಿಲ್‌ಗಳ ಅನುಪಾತ = 8 : 12

= 8 ÷ 4 : 12 ÷ 4 [ಮ.ಸಾ.ಅ = 4]

= 2 : 3

ಸರಿಯಾಗಿ ಹಂಚಿಕೆ ಆಗಬೇಕಾದರೆ ಹಣದ ಅನುಪಾತ, ಪೆನ್ಸಿಲ್‌ಗಳ ಅನುಪಾತ ಸಮವಾಗಬೇಕು. ಅಂದರೆ ರಾಜು ವಿವರಣೆ ಸರಿಯಾಗಿದೆ. ರಾಜುವಿಗೆ 8 ಪೆನ್ಸಿಲ್, ಭರತ್‌ಗೆ 12 ಪೆನ್ಸಿಲ್ ಸಿಗುವುದು ಸರಿ.

**ಪ್ರಯತ್ನಿಸಿರಿ**

5 ಚೌಕಗಳು ಇರುವ ಚೌಕಳಿಕಾಗದ ತೆಗೆದುಕೊಳ್ಳಿರಿ.

3 ಚೌಕಗಳಿಗೆ ಕೆಂಪು ಬಣ್ಣ, 2 ಚೌಕಗಳಿಗೆ ಹಸಿರು ಬಣ್ಣ ಹಾಕಿರಿ.

ಇದಕ್ಕೆ ಅನುಪಾತದಲ್ಲಿರುವಂತೆ 10 ಚೌಕ, 15 ಚೌಕಗಳಲ್ಲಿ ಕೆಂಪು, ಹಸಿರು ಬಣ್ಣದಿಂದ ತುಂಬಿರಿ.



## 11.7 ಏಕಾಂಶ ಪದ್ಧತಿ

ರವಿ 3 ಕೆ.ಜಿ. ಟಮೋಟೋ ಕೊಂಡುಕೊಳ್ಳ ಬೇಕೆಂದುಕೊಂಡನು. ಒಬ್ಬ ವ್ಯಾಪಾರಿ ₹ 40ಕ್ಕೆ 5 ಕೆ.ಜಿ. ಎಂದು ಹೇಳಿದಾಗ ಮತ್ತೊಬ್ಬ ವ್ಯಾಪಾರಿ 6 ಕೆ.ಜಿ. ₹ 42 ಎಂದು ಹೇಳಿದನು.

ರವಿ ಯಾರ ಬಳಿ ಕೊಂಡುಕೊಳ್ಳಬೇಕು? ಮೊದಲನೆಯವನ ಹತ್ತಿರವೇ ? ಎರಡನೆಯವನ ಹತ್ತಿರವೇ

SCERT TELANGANA



Downloaded from https:// www.studiestoday.com

Downloaded from https:// www.studiestoday.com

3 ಕೆ.ಜಿಗೆ ಕೊಡಬೇಕಾದ ಮೊತ್ತ ಎಷ್ಟು ? .

ಶ್ರೀದೇವಿ ರವಿ ಸಮಸ್ಯೆಗೆ ಈ ರೀತಿ ಸಲಹೆ ಕೊಟ್ಟಳು. ಒಂದು ಕೆ.ಜಿ. ಬೆಲೆಗೆ ಹೋಲಿಸು ಎಂದಳು

